
# ಆಫ್ರಿಕದ ಧರ್ಮ ಮತ್ತು ಸಂಸ್ಕೃತಿ


## ಒಂದು ಅವಲೋಕನ

ಅಮಚವಾಡಿ ಅರಸು









ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

ಸುವರ್ಣ ಕರ್ನಾಟಕ - ೨೦೦೬

# ಆಫ್ರಿಕದ ಧರ್ಮ ಮತ್ತು ಸಂಸ್ಕೃತಿ ಒಂದು ಅವಲೋಕನ

ಅಮಚವಾಡಿ ಅರಸು

**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨
ದೂರವಾಣಿ : ೨೨೪೮ ೪೫೧೬

**AFRICADA DHARMA MATTU SAMSKRUTI ONDU AVALOKANA :** A book on African Religion by Amachavadi Arasu.

Published by : **Ashoka N. Chalavadi,** The Administrative officer, Kannada Pustaka Pradhikara, Kannada Bhavana, J.C. Road, Bangalore - 560 002.

© ಕನ್ನಡ ಪುಸ್ತಕ ಪ್ರಾಧಿಕಾರ

Pages : 22 + 114

Price : **Rs. 50/-**

First Print : 2007

Copies : 1000

ಮೊದಲನೇ ಮುದ್ರಣ : ೨೦೦೭

ಪ್ರತಿಗಳು : ೧೦೦೦

ಪುಟಗಳು : ೨೨ + ೧೧೪

ಬೆಲೆ : ರೂ. ೫೦/-

ಪ್ರಕಾಶಕರು :

**ಅಶೋಕ ಎನ್. ಚಲವಾದಿ**

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ಲಕ್ಷ್ಮೀ ಮುದ್ರಣಾಲಯ

LAKSHMI MUDRANALAYA

ISO 9001-2000

ಚಾಮರಾಜಪೇಟೆ, ಬೆಂಗಳೂರು-೧೮

ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ 2x2=4ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇಂದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು

ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂಡು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

> ಹಿಂದಣ ಅನಂತವನು ಮುಂದಣ ಅನಂತವನು
> ಒಂದು ದಿನ ಒಳಕೊಂಡಿತ್ತು ನೋಡಾ
> ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
> ಕಂಡು ಬಲ್ಲವರಾರಯ್ಯ
> ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
> ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯು ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ

ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಆಫ್ರಿಕದ ಧರ್ಮ ಮತ್ತು ಸಂಸ್ಕೃತಿ–ಕೃತಿಯನ್ನು ಶ್ರೀ ಅಮಚವಾಡಿ ಅರಸು ಅವರು ಬರೆದಿದ್ದಾರೆ. ವಸಾಹತುಶಾಹಿ ರೂಪಿಸಿದ ಇತಿಹಾಸ ಇಂದಿಗೂ ಆಫ್ರಿಕ ಭಾರತ ಮುಂತಾದ ರಾಷ್ಟ್ರಗಳ ಬಗ್ಗೆ ತಪ್ಪು ಭಾವನೆಗಳನ್ನು ಬಿತ್ತಿದಂತೆ ನಿರೂಪಿತವಾಗಿದೆ. ಆಫ್ರಿಕವನ್ನು ಕಗ್ಗತ್ತಲೆಯ ಖಂಡವೆಂದು ನರಭಕ್ಷಕರ ದೇಶವೆಂದು ಕರೆದದ್ದು, ಇತಿಹಾಸ ಬೋಧನೆಯಲ್ಲಿ ಈ ತಪ್ಪು ಅಭಿಪ್ರಾಯವನ್ನು ಸ್ಥಾಪಿತ ನಂಬಿಕೆಗಳಂತೆ ಪ್ರಚುತಪಡಿಸಿದ್ದು, ಜಾಗತಿಕ ಶಕ್ತಿ ರಾಜಕಾರಣದ

ಕುತಂತ್ರವಲ್ಲದೆ, ಬೇರೆ ಅಲ್ಲ. ವರ್ಣಭೇದ ಕಾರಣವಾದಂತೆ ಅವಮಾನ ದಾಸ್ಯಗಳ ಸಂಕಷ್ಟಗಳಲ್ಲಿ ಸಹಸ್ರಾರು ವರ್ಷ ದಬ್ಬಾಳಿಕೆಗೆ ಗುರಿಯಾದ ಈ ಸಮುದಾಗಳ ಸಾಂಸ್ಕೃತಿಕ ಬದುಕು ಪುರಾಣ ಐತಿಹ್ಯಗಳ ಶ್ರೀಮಂತ ಪರಂಪರೆಯನ್ನು ಒಳಗೊಂಡಿರುವುದು.

ಆಚಾರ ವಿಚಾರ ನಂಬಿಕೆ ನಡಾವಳಿಗಳ ಈ ತೋಂಡೀ ಜಗತ್ತನ್ನು ಕಾಣುವುದಕ್ಕೆ ಪೂರ್ವಾಗ್ರಹಪೀಡನೆಯಿಂದ ಮುಕ್ತವಾದ ಹೃದಯವಂತಿಕೆ ಬೇಕು. ರೂಪಕಾಕೃತಿಯ ಆ ಮೌಖಿಕ ಸಂಪತ್ತನ್ನು ಅರ್ಥಮಾಡಿಕೊಳ್ಳಲು ವಿಶೇಷವಾದ ಪುರಾಣ ಪ್ರಜ್ಞೆ ಬೇಕು. ಭೂಗೋಳ ವಿಜ್ಞಾನವನ್ನು ಬೋಧನೆ ಮಾಡುವ ಅಧ್ಯಾಪಕರಾಗಿ ಆಫ್ರಿಕದ ಹಲವು ಸಮುದಾಯಗಳ ನಡುವೆ ತಮ್ಮ ಜೀವನದ ಹದಿನೈದು ವರ್ಷಗಳನ್ನು ಸಮರ್ಪಿಸಿಕೊಂಡ ಅಮಚವಾಡಿ ಅರಸು ಅವರು ಆ ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ಆಪ್ತಭಾವದಲ್ಲಿ ಗ್ರಹಿಸಿದ್ದಾರೆ. ಕಗ್ಗತ್ತಲು ಖಂಡವೆಂಬ ಹೇರಿಕೆಯ ವಸಾಹತು ಇತಿಹಾಸದ ಮಿಥ್ಯವನ್ನು ಅಲ್ಲಗಳೆದು ವಾಸ್ತವ ಸತ್ಯದ ಬೆಳಕಿನಲ್ಲಿ ಆಫ್ರಿಕದ ಧರ್ಮ ಮತ್ತು ಸಂಸ್ಕೃತಿಯ ಸ್ವರೂಪವನ್ನು ಮನಗಾಣಿಸಿದ್ದಾರೆ. ನೇರವಾದ ಜೀವನಾನುಭವದ ಜೊತೆಗೆ ಅಧ್ಯಯನ ಸಂಪನ್ನ ಆಕರ ಮೂಲಗಳ ಸಹಾಯದಿಂದ ಈ ಮೌಲಿಕ ಕೃತಿ ರಚನೆ ಮಾಡಿದ್ದಾರೆ. ನೆಲಮೂಲಕ್ಕೆ ನಿಷ್ಠವಾಗಿ ಬದುಕನ್ನು ಕಟ್ಟಿಕೊಂಡ ಇಂಥ ಸಮುದಾಯಗಳ ಸಾಂಸ್ಕೃತಿಕ ಶೋಧವೇ ನಿಜವಾದ ಇತಿಹಾಸ ರಚನೆ. ವರ್ಣನೀತಿಯ ಇತಿಹಾಸ ಕಾಣಿಸಲಾರದ ಮಾನವೀಯ ಜೀವನ ಮೌಲ್ಯಗಳು ಇಂಥ ಶೋಧದಲ್ಲಿ ಅರಿವಿಗೆ ಬರುತ್ತವೆ.

ಕುತೂಹಲದಿಂದ ಓದಿಸಿಕೊಳ್ಳುವ ಈ ಪುಸ್ತಕ ಆಫ್ರಿಕದ ಬಗ್ಗೆ ಹೊಸ ತಿಳಿವಳಿಕೆಯನ್ನು ನೀಡುತ್ತದೆ. ಇಂಥ ಕೃತಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆಗೆ ನೀಡಿದ ಅಮಚವಾಡಿ ಅರಸು ಅವರಿಗೆ ಕೃತಜ್ಞತೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಕೃತಜ್ಞತೆ

ಈ ಗ್ರಂಥ ರಚನೆಗೆ ಮೊದಲ ಪ್ರೇರಣೆ ದೊರೆತದ್ದು ನಮ್ಮ ಹಳೆಯ ವಿದ್ಯಾರ್ಥಿ ವೃಂದದಿಂದ. ಅವರಲ್ಲನೇಕರು ಶಿಕ್ಷಕರೂ, ಉಪನ್ಯಾಸಕರೂ ಮುಖ್ಯೋಪಾಧ್ಯಾಯರುಗಳೂ ಆಗಿರುತ್ತಾರೆ. ನನ್ನ ಪ್ರವಾಸ ಕಥನಗಳನ್ನು ಕೇಳಿದ ಕೆಲವರು ಮೆಚ್ಚಿಗೆಯನ್ನು ಸೂಚಿಸಿ ಅದರ ಬಗ್ಗೆ ಒಂದು ಪುಸ್ತಕವನ್ನೇಕೆ ಬರೆಯಬಾರದು ಎಂಬ ಪ್ರಶ್ನೆಯನ್ನು ಮುಂದಿಟ್ಟರು. ತಡವಾಗಿಯಾದರೂ ಅದೊಂದು ರೂಪ ತಾಳಿದ್ದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಪ್ರವಾಸ ಕಥನಕ್ಕಿಂತಲೂ ಅದನ್ನೊಮದು ಪರಿಚಯ ಗ್ರಂಥವನ್ನಾಗಿ ರೂಪಿಸಬೇಕೆಂಬ ಅಭಿಲಾಷೆಯಿಂದ ಅದು ಈ ರೂಪ ತಾಳಿದೆ. ಪ್ರವಾಸ ಕಥನಗಳು ಸಾಮಾನ್ಯವಾಗಿ ಪ್ರವಾಸೋದ್ಯಮ ವಕ್ತಾರರು ಬರೆದಂತಿರುತ್ತವೆ. ಆಯಾ ದೇಶದ ಜನರ ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದ ಬಗ್ಗೆ ವಿವರಣೆ ಇರುವುದು ಅತಿ ವಿರಳ. ಆಫ್ರಿಕದ ನಾಗರಿಕರು ಇಂದು ಎಷ್ಟೇ ಆಧುನಿಕರಾಗಿರಲಿ ತಮ್ಮ ತಮ್ಮ ಧಾರ್ಮಿಕ ಮನೋಭಾವ, ದೇಶೀಯ ಉಡುಪು, ಆಹಾರ ಮತ್ತು ಸಾಮಾಜಿಕ ಪರಂಪರೆಗಳಿಗೆ ಪ್ರಾಮುಖ್ಯತೆ ಕೊಡುವ ಜನ. ಅವರ ಆಳವಾದ ಪರಿಚಯವು ಒಂದೆರಡು ದಿನಗಳ ಯಾ ವಾರದ ಪ್ರವಾಸದಿಂದ ದೊರೆಯುವಂಥದ್ದಲ್ಲ.

ಕಂತುಗಳ ಪ್ರಕಾರ ಬರೆದಂತೆಲ್ಲಾ ಅದನ್ನು ಓದಿ ವಿಷಯ ವಾಸ್ತವತೆಯ ಬಗ್ಗೆ ಚರ್ಚಿಸಿ, ಆಗಾಗ್ಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಮಾರ್ಗದರ್ಶನ ನೀಡಿದ ಶ್ರೀ ಬಿ.ಎಲ್. ಮನೋಹರ್ "ಅರಸು" ಅವರಿಗೆ ಹೃದಯಪೂರ್ಣ ಕೃತಜ್ಞತೆಗಳು. ಹತ್ತಿರದ ಬಂಧುಗಳಾದ ಇವರು ಭಾರತೀಯ ರೇಲ್ವೆಯ "ಅನುಸಂಧಾನ, ಅಭಿಕಲ್ಪ ಮತ್ತು ಮಾನಕ ಸಂಘಟನ್-ಲಖನವ್ರೂ"ದಲ್ಲಿ ಉನ್ನತ ಅಧಿಕಾರಿಯಾಗಿದ್ದು, ಭಾರತದ ಉದ್ದಗಲಗಳಲ್ಲಿ ಕಾರ್ಯಭಾರ ನಿರ್ವಹಿಸಿದ್ದಾರೆ. ಇವರ ಹವ್ಯಾಸ ಅಮೆಚೂರ್ ರೇಡಿಯೋ ಆಗಿದ್ದು ಅನೇಕ ಪಾರಿತೋಷಕಗಳನ್ನು ಗಳಿಸಿ, ಇತ್ತೀಚೆಗೆ ಅಂತರರಾಷ್ಟ್ರೀಯ ಅಮೆಚೂರ್ ರೇಡಿಯೋ ಯೂನಿಯನ್ನಿನ ಆಡಳಿತ ವರ್ಗಕ್ಕೆ ಪ್ರಪ್ರಥಮ ಏಷಿಯದವರಾಗಿ ಚುನಾಯಿಸಲ್ಪಟ್ಟಿರುವುದು ಕನ್ನಡಿಗರ ಹೆಮ್ಮೆಯ ವಿಷಯವಾಗಿದೆ. ಕಾರ್ಯಗೌರವ ನಿಮಿತ್ತ ಅನೇಕ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಅಪಾರ ಜ್ಞಾನಾನುಭವಗಳನ್ನು ಪಡೆದುಕೊಂಡಿರುತ್ತಾರೆ. ಇವರ ಸೂಕ್ಷ್ಮಗ್ರಹಿಕೆ, ವಿಮರ್ಶೆ, ದೃಷ್ಟಿಕೋನಗಳು

ಇಲ್ಲಿ ಬರುವ ಅನೇಕ ವಿಷಯಗಳ ಮೇಲೆ ತಮ್ಮ ಪ್ರಭಾವ ಬೀರಿವೆ. ಇಂಟರ್‌ನೆಟ್ ಮೂಲಕ ಹೆಚ್ಚಿನ ಮಾಹಿತಿಗಳನ್ನು ದೊರಕಿಸಿಕೊಟ್ಟ ಇವರ ಋಣಭಾರ ಮಹತ್ತರವಾದುದು.

ನನ್ನ ಕರುಡು ಪ್ರತಿಯನ್ನು ಆಮೂಲಾಗ್ರ ಓದಿ, ಪ್ರತಿಯೊಂದು ವಾಕ್ಯದಲ್ಲೂ ಇದ್ದಿರಬಹುದಾದ ಶಬ್ದ, ವ್ಯಾಕರಣ ಮತ್ತು ರಚನಾದೋಶಗಳನ್ನು ಅಲ್ಲಲ್ಲೇ ಸರಿಪಡಿಸಿ, ನನ್ನ ಕನ್ನಡವನ್ನು ಓದಲರ್ಹವಾದ ಕನ್ನಡವನ್ನಾಗಿ ಪರಿವರ್ತಿಸಿಕೊಟ್ಟವರು ಶ್ರೀಯುತ ಆರ್. ರಾಘವೇಂದ್ರಭಟ್ಟರು. ಇವರು ಕೇಂದ್ರ ಸರ್ಕಾರದ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ಮೈಸೂರು (ಈಗ ರೀಜನಲ್ ಇನ್‌ಸ್ಟಿಟ್ಯೂಟ್) ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾಗ ಅವರ ಕೈಕೆಳಗೆ ಶಿಕ್ಷಣ ಉಪನ್ಯಾಸಕನಾಗಿ ಕೆಲವು ವರ್ಷ ಸೇವೆ ಮಾಡುವ ಸುಯೋಗ ನನ್ನದಾಗಿತ್ತು. ಒಂದೇ ವಿಧವಾದ ತಪ್ಪುಗಳನ್ನು ಹತ್ತಾರು ಕಡೆ ತಿದ್ದಿಕೊಟ್ಟ ಇವರ ತಾಳ್ಮೆ ಹಾಗೂ ಮೂಲಾಂಶಕ್ಕೆ ಸರಿಹೊಂದದ ಇಲ್ಲವೇ ಸೂಕ್ತವಲ್ಲದ ಭಾಗಗಳನ್ನು ಎತ್ತಿತೋರಿಸಿದ ಇವರ ಶಿಷ್ಯವಾತ್ಸಲ್ಯಕ್ಕೆ ಪಾತ್ರನಾದ ನಾನು ಧನ್ಯ.

"ಗ್ರಂಥ ಪರಿಚಯ" ಬರೆದುಕೊಟ್ಟ ಪ್ರಸಿದ್ಧ ಕಾದಂಬರಿಕಾರ ಹಾಗೂ ಲೇಖಕರಾದ ಶ್ರೀಮಾನ್ ಕೆ.ಟಿ. ಗಟ್ಟಿಯವರ ಅಭಿಮಾನ ಹಾಗೂ ಕೃಪೆಗೆ ಚಿರಋಣಿಯಾಗಿದ್ದೇನೆ. ನಾವಿಬ್ಬರೂ ಇಥಿಯೋಪಿಯದ ಶಿಕ್ಷಣ ಇಲಾಖೆಯಲ್ಲಿ ಸಮಕಾಲೀನರು. ಪರಸ್ಪರ ಭೆಟ್ಟಿಯಾಗುತ್ತಿದ್ದೆವು. ಅವರು ಅದಾಗಲೇ ಅನೇಕ ಕಾದಂಬರಿ–ಲೇಖನಗಳ ಕರ್ತೃಗಳಾಗಿದ್ದರು. ಅನೇಕ ವರ್ಷ ಕಾಲ ಅವರೂ ಸಹ ಇಥಿಯೋಪಿಯದಲ್ಲಿದ್ದವರಾದ್ದರಿಂದ ಅಲ್ಲಿನ ಜನರ ಭಾಷೆ, ಸಂಸ್ಕೃತಿ, ನಾಗರಿಕತೆಗಳ ಬಗ್ಗೆ ಜ್ಞಾನ ಅನುಭವಗಳನ್ನು ಪಡೆದುಕೊಂಡವರಾಗಿದ್ದಾರೆ. ಎಂತಲೇ ಅವರ ಮುಂಬರಹಕ್ಕೆ ವಿಶೇಷ ಬೆಲೆ.

ಇದನ್ನು ಅಂದವಾಗಿ ಚಿತ್ರಸಹಿತ ಮುದ್ರಿಸಿ ಪ್ರಕಟಿಸಿದ ಪ್ರಾಧಿಕಾರಕ್ಕೆ ನನ್ನ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೈಸೂರು **ಅಮಚವಾಡಿ ಅರಸು**

ದಿನಾಂಕ : 2–10–2006

# ಪುಸ್ತಕ ಪರಿಚಯ

ಭೂಗೋಳ ಅಧ್ಯಾಪಕನಾಗಿ ಆಫ್ರಿಕದ ಬೇರೆ ಬೇರೆ ದೇಶಗಳಲ್ಲಿ ಹದಿನೈದು ವರ್ಷಗಳ ಕಾಲ ಅಧ್ಯಾಪನ. ಅಧ್ಯಯನ ಮತ್ತು ಸಂಶೋಧನೆಯನ್ನು ಮಾಡಿದ ಶ್ರೀ ಸಿದ್ಧರಾಜ್ ಅರಸ್ ಬರೆದಿರುವ "ಆಫ್ರಿಕದ ಧರ್ಮ ಮತ್ತು ಸಂಸ್ಕೃತಿ-ಒಂದು ಅವಲೋಕನ" ಎಂಬ ಕೃತಿಯು ಹೊಂದಿರುವ ಆಶಯವು ಗಮನೀಯವಾಗಿದೆ. ಇದು ಒಂದು ಧರ್ಮಗ್ರಂಥವೂ ಅಲ್ಲ, ಭೂಗೋಳ ವಿಜ್ಞಾನ ಪುಸ್ತಕವೂ ಅಲ್ಲ ಲೇಖಕರೇ ತಿಳಿಸಿರುವಂತೆ ಇದು ಆಫ್ರಿಕದ ಕುರಿತು ಹೆಚ್ಚು ತಿಳಿದು ಕೊಳ್ಳಬೇಕೆಂಬ ಬಯಕೆಯುಳ್ಳವರಿಗೆ. ಅಧ್ಯಯನ ಮಾಡಬಯಸುವವರಿಗೆ, ಆಫ್ರಿಕಾ ಖಂಡಕ್ಕೆ ಹೋಗಬಯಸುವವರಿಗೆ ಒಂದು "ಪರಿಚಯ ಗ್ರಂಥ". ಇವತ್ತು ಕೂಡ ಆಫ್ರಿಕ ಖಂಡವನ್ನು ಯಾರಾದರೂ ಕತ್ತಲೆಯ ಖಂಡ ಎಂದು ಉಲ್ಲೇಖಿಸುವುದಿದ್ದರೆ, ಹಾಗೆ ಹೇಳುವವರೇ ಕತ್ತಲಿನಲ್ಲಿದ್ದಾರೆ ಎಂದು ತಿಳಿಯಬೇಕಾಗುತ್ತದೆ. ದೃಶ್ಯ ಮಾಧ್ಯಮಗಳು ನಮಗೆ ಭೂಗೋಲವನ್ನು ಅಂಗೈ ನೆಲ್ಲಿಯಂತೆ ತೋರಿಸುತ್ತಿರುವ ಈ ದಿನಗಳಲ್ಲಿ, ಒಂದು ಕಾಲದಲ್ಲಿ ಯುರೋಪಿನ ದೃಷ್ಟಿಗೆ ಕತ್ತಲಲ್ಲಿದ್ದಂತೆ ತೋರಿದ ಭೂಭಾಗಗಳಲ್ಲಿ ವಾಸ್ತವದಲ್ಲಿ ಕತ್ತಲೆ ಇರಲಿಲ್ಲ ಮತ್ತು ಈಗಲೂ ಇಲ್ಲ ಎಂಬುದನ್ನು ನಾವು ಕಂಡುಕೊಳ್ಳಬಹುದಾಗಿದೆ. ಇವತ್ತು ಯುರೋಪು. ಅಮೆರಿಕೆಗೆ ಹೋಗಿಬರುವಂತೆ ಜನ ಆಫ್ರಿಕದ ದೇಶಗಳಿಗೂ ಹೋಗಿಬರುತ್ತಾ ಇದ್ದಾರೆ. ಕಪ್ಪು ಬಿಳಿ ಎಂಬ ವರ್ಗೀಕರಣ ಕೊನೆಗೊಂಡಿದೆ. ಆಫ್ರಿಕದ ವಿದ್ಯಾರ್ಥಿಗಳು ಎಲ್ಲಾ ಮುಂದುವರಿದ ದೇಶಗಳಲ್ಲಿಯೂ ಅಧ್ಯಯನ ಮಾಡುತ್ತಿದ್ದಾರೆ. ಭಾರತದಲ್ಲಿ ಕರ್ನಾಟಕದಲ್ಲಿ ನಾವು ಅವರನ್ನು ದಿನಾ ಕಾಣುತ್ತಿದ್ದೇವೆ.

ಆದರೆ ಅಮೆರಿಕೆಯ ಅಥವಾ ಇಂಗ್ಲೆಂಡಿನ ಬಗ್ಗೆ ನಾವು ಎಷ್ಟು ತಿಳಿದುಕೊಂಡಿರುವೆವೋ ಅಷ್ಟು ಆಫ್ರಿಕದ ಬಗ್ಗೆ ಯಾಕೆ ತಿಳಿದು ಕೊಂಡಿಲ್ಲ? ಅಮೆರಿಕನರನ್ನು ಯುರೋಪಿಯನರನ್ನು ನಾವು ಹತ್ತಿರ ಮಾಡಿಕೊಂಡಿರುವಂತೆ ಅಥವಾ ಅವರಿಗೆ ನಮ್ಮನ್ನೇ ನಾವು ಹತ್ತಿರ ಮಾಡಿಕೊಂಡಿರುವಂತೆ ನಮ್ಮ ನಡುವೆ ಇರುವ ಆಫ್ರಿಕದ ಪ್ರಜೆಗಳ ಬಳಿ ಸಾರಿ ಅವರ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಯಾಕೆ ಮಾಡಿಲ್ಲ? ಭಾರತ ಮತ್ತಿತರ ಪೌರ್ವಾತ್ಯ ದೇಶಗಳ ಸಂಸ್ಕೃತಿ ಮತ್ತು ಸಾಮಾಜಿಕ ರೀತಿನೀತಿಗಳೊಂದಿಗೆ ಸಾಮ್ಯತೆಯಿರುವ ಆಫ್ರಿಕದ ದೇಶಗಳ ಸಂಸ್ಕೃತಿ ಮತ್ತು ಸಾಮಾಜಿಕ ರೀತಿನೀತಿಗಳ ಪರಿಚಯವನ್ನು

ಮಾಡಿಕೊಳ್ಳಲು ಯಾಕೆ ಪ್ರಯತ್ನಿಸಿಲ್ಲ? ವಿಶ್ವಸಂಸ್ಕೃತಿಯೆಂದರೆ ಅಮೆರಿಕ ಮತ್ತು ಯುರೋಪಿನ ಸಂಗೀತ, ನೃತ್ಯ ಮತ್ತು ಕಲೆ ಮಾತ್ರವೇ ಎಂಬ ತಪ್ಪು ಕಲ್ಪನೆಯನ್ನು ಮುಂದರಿಸಿಕೊಂಡು ಬರುತ್ತಿರುವ ಬಗ್ಗೆ ನಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯ ಇದೆ. ಸಿದ್ಧರಾಜ ಅರಸರ ಅಧ್ಯಯನದ ಶಿಸ್ತು ಮತ್ತು ಅನುಭವದ ಹರಹಿನಿಂದಾಗಿ ಈ ಗ್ರಂಥ ಒಂದು ಅಧ್ಯಯನ ಯೋಗ್ಯ ಗ್ರಂಥವೆನಿಸಿಕೊಳ್ಳುತ್ತದೆ. ಇದು ಆಫ್ರಿಕ ರಾಷ್ಟ್ರೀಯರ ಮೂಲ ಧರ್ಮ ಮತ್ತು ಸಂಸ್ಕೃತಿಯ ಕುರಿತು ತಿಳಿಸುತ್ತದೆ. ಅವರ ಸಾಹಿತ್ಯ, ಸಂಗೀತ, ನೃತ್ಯ, ಆಹಾರ ಪಾನೀಯ, ಜೀವನ ದೃಷ್ಟಿ ಸಾಮಾಜಿಕ ನಡವಳಿಕೆಗಳ ಕುರಿತು ವಿವರಗಳನ್ನು ಒದಗಿಸುತ್ತದೆ. ನಮ್ಮ ನಡುವೆ ಇರುವ ಆಫ್ರಿಕ ರಾಷ್ಟ್ರೀಯರನ್ನು ಅರ್ಥಮಾಡಿಕೊಂಡು ಅವರ ಜೊತೆ ಸಾಂಸ್ಕೃತಿಕ ಭಾವ ಸಾಮರಸ್ಯವನ್ನು ಹೊಂದಲು ಅಗತ್ಯವಾದ ಅರಿವನ್ನು ನೀಡುತ್ತದೆ. ಅರಸ್ ಅವರ ಗ್ರಂಥದಲ್ಲಿರುವುದು ಇಷ್ಟೇ ಅಲ್ಲ. ಆಫ್ರಿಕದ ಕುರಿತು ಸಮಗ್ರ ಮಾಹಿತಿ ಈ ಪುಸ್ತಕದಲ್ಲಿದೆ. ಅದರ ಭೌಗೋಳಿಕ ಸ್ವರೂಪ, ಹಲವು ದೇಶಗಳ ಇತಿಹಾಸ ಮತ್ತು ಪುರಾಣಗಳು, ಸಾಮಾಜಿಕ ವೈಶಿಷ್ಟ್ಯಗಳು ಮತ್ತು ಆಧುನಿಕ ಜೀವನ ಶೈಲಿ ಎಲ್ಲದರ ಬಗ್ಗೆಯೂ ಸವಿವರ ಮಾಹಿತಿ ಇದರೊಳಗಿದೆ. ಇದನ್ನು ಲೇಖಕರು ಪರಿಚಯಗ್ರಂಥವೆಂದು ಕರೆದಿರುವುದಾದರೂ ಇದು ಒಂದು ಆಕರಗ್ರಂಥವಾಗಿಯೂ ಉಪಯುಕ್ತ. ಆಫ್ರಿಕದ ದೇಶಗಳ ಕುರಿತು ಹೊಸ ಆಸಕ್ತಿಯನ್ನು ಹುಟ್ಟಿಸುವಲ್ಲಿ, ಆಫ್ರಿಕದ ಧರ್ಮ ಮತ್ತು ಸಂಸ್ಕೃತಿಯ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸುವಲ್ಲಿ ಈ ಪುಸ್ತಕ ಸಾರ್ಥಕ್ಯವನ್ನು ಪಡೆಯುತ್ತದೆ.

**–ಕೆ.ಟಿ. ಗಟ್ಟಿ**

# ಪ್ರಸ್ತಾವನೆ

ಕನ್ನಡಿಗರಲ್ಲಿ ಆಫ್ರಿಕ ಮತ್ತು ಆಫ್ರಿಕದ ಜನತೆಯ ಬಗ್ಗೆ ಆಳವಾದ ಅರಿವುಳ್ಳವರ ಸಂಖ್ಯೆ ಅತ್ಯಂತ ವಿರಳವೆಂದೇ ಹೇಳಬಹುದು. ನಮ್ಮ ಜನರಲ್ಲಿರುವ ಆಫ್ರಿಕದ ಸಾಮಾನ್ಯ ಜ್ಞಾನವೂ ಸಹ ಅತ್ಯಲ್ಪ. ಅದೂ ಶಾಲಾ ಪುಸ್ತಕದ ಜ್ಞಾನಕ್ಕೆ ಅಥವಾ ಪತ್ರಿಕೆಗಳ ಸುದ್ಧಿಗೆ ಸೀಮಿತ. ಪಠ್ಯಪುಸ್ತಕಗಳಲ್ಲಿ ದೊರೆಯುವ ಮಾಹಿತಿಯಾದರೋ ಕೇವಲ ಪ್ರಾಕೃತಿಕ ಭೂಗೋಳಕ್ಕೆ ಪರಿಮಿತ. ಅದು ಮಾನವನಿಲ್ಲದ ಭೂಮಿಯ ವರ್ಣನೆ. ಸಪ್ಪೆ, ನೀರಸ, ನಿಜ ಜೀವನದಲ್ಲಿ ಕೆಲಸಕ್ಕೆ ಬಾರದು. ಶಾಲೆ ಬಿಟ್ಟ ಮೇಲೆ ಅದು ತ್ಯಾಜ್ಯ ವಸ್ತುವೇ ಸರಿ. ಇಂತಹ ಅರೆಬೆಂದ ಜ್ಞಾನವು ತಪ್ಪು ಗ್ರಹಿಕೆಗೆ ಅವಕಾಶ ನೀಡುವುದರಲ್ಲಿ ಸಂಶಯವಿಲ್ಲ.

ನಾನು ಇಥಿಯೋಪಿಯದಿಂದ ರಜೆಯ ಮೇಲೆ ಬಂದಾಗಲೆಲ್ಲಾ ಪರಿಚಿತರು ಕೇಳುತ್ತಿದ್ದುದೇನೆಂದರೆ "ಸಾರ್, ಆಫ್ರಿಕವು ಅನಾಗರಿಕರ, ಕಾಡುಮನುಷ್ಯರ ದೇಶವಲ್ಲವೇ? ನೀವು ಅಲ್ಲಿಗೇಕೆ ಹೋಗಿದ್ದೀರಿ? ಎಂದು, ಸಲಿಗೆಯುಳ್ಳ ಕೆಲವರು "ಸಾರ್, ಫಾರಿನ್ ಎಂದರೆ ಎಲ್ಲರೂ ಅಮೆರಿಕವೋ, ಬ್ರಿಟನ್ನಿಗೋ ಹೋಗುತ್ತಾರೆ. ನೀವು ಆಫ್ರಿಕವನ್ನೇಕೆ ಆರಿಸಿಕೊಂಡಿರಿ? ಸಂಬಳವೆಷ್ಟು, ನಮ್ಮ ಆಹಾರ ದೊರೆಯುತ್ತದೆಯೇ, ಆಫ್ರಿಕದ ಜನರು ಕ್ಷಾಮ ಪೀಡಿತರು, ಆಹಾರವಿಲ್ಲದೆ ಸಾಯುತ್ತಿದ್ದಾರೆ- ಎಂಬ ಸುದ್ಧಿ ಟಿ.ವಿ. ನ್ಯೂಸ್‌ನಲ್ಲಿ ಆಗಾಗ ಬರುತ್ತದೆ." ಹೀಗೆ ಕೇಳುತ್ತಾ ಅವರಲ್ಲೊಬ್ಬರು "ಆಫ್ರಿಕದಲ್ಲಿ ಈಗಲೂ ಕ್ಯಾನಿಬಾಲ್ಸ್ (ನರಭಕ್ಷಕರು) ಇದಾರೆಯೋ?" ಎಂದು ಕೇಳಿದ ಪ್ರಶ್ನೆಯಂತೂ ನಾನು ಬೆಚ್ಚಿ ಬೀಳುವಂತೆ ಮಾಡಿತು.

ಇಂತಹ ಪ್ರಶ್ನೆಗಳು ನನ್ನನ್ನು ಗೊಂದಲಕ್ಕೀಡುಮಾಡುತ್ತಿದ್ದುವು. ಅವರು ಕೇಳುವ ಪ್ರಶ್ನೆಗಳಿಗೆ ನಾನು ಸಮಜಾಯಿಷಿ ಕೊಡಲು ಪ್ರಯತ್ನಿಸುತ್ತಿರುವಾಗ ಬೇರೇನೋ ಪ್ರಶ್ನೆ ಕೇಳುತ್ತಾರೆ; ಅಥವಾ ಅದೇ ಸಮಯಕ್ಕೆ ಬೇರೊಬ್ಬ ಪರಿಚಿತರು ಆಗಮಿಸುತ್ತಾರೆ. ಹೀಗಾಗಿ ನನ್ನ ಪ್ರತಿ ಸಾರಿಯ ಪ್ರಯತ್ನವೂ ಅರ್ಧಕ್ಕೇ ನಿಂತು ಹೋಗುತ್ತಿತ್ತು. ಸೋಮಾಲಿಯದಲ್ಲಿನ ರಾಜಕೀಯ ಕ್ಷೋಬೆ ಮತ್ತು ಇಥಿಯೋಪಿಯದ ಕ್ಷಾಮ ಕುರಿತು ಬರುತ್ತಿದ್ದ ಸುದ್ಧಿಗಳನ್ನು ಓದಿ, ನೋಡಿ ಅವರು ಈ ಪ್ರಶ್ನೆಗಳನ್ನು ಕೇಳುತ್ತಿದ್ದಾರೆಂದು ಊಹಿಸಲು ಕಷ್ಟವಾಗಲಿಲ್ಲ. ಪರಿಹಾರಕೊಂದು ವಿಶ್ವಸಂಸ್ಥೆಯು ಕೊಡುತ್ತಿದ್ದ ಆಹಾರದ ವಿತರಣೆಯಲ್ಲಿ ಈ

ಎರಡೂ ರಾಷ್ಟ್ರಗಳು ನಡೆಸುತ್ತಿದ್ದ ಹಸ್ತಕ್ಷೇಪ; ಮೂಳೆ ಬಿಟ್ಟುಕೊಂಡು ಸಾಯುವ ಸ್ಥಿತಿಯಲ್ಲಿರುವ ಮಕ್ಕಳ ಚಿತ್ರಗಳು ಸುದ್ದಿಮಾಧ್ಯಮಗಳಲ್ಲಿ ಬರುತ್ತಿದ್ದುದು ನಿಜ. ಆದರೆ ನಿಜವಾಗಿ ಆಫ್ರಿಕವೆಲ್ಲಾ ಹಾಗೆಯೇ ಇದೆಯೆಂದು ಹೇಳಲು ಬರುವುದಿಲ್ಲ. (ಆಫ್ರಿಕ ಖಂಡದಲ್ಲಿ ಈಗ 52 ರಾಷ್ಟ್ರಗಳಿವೆ. ಅವುಗಳ ಹೆಸರು ಮತ್ತು ಸನ್ನಿವೇಶಗಳನ್ನು ನಕ್ಷೆಯಲ್ಲಿ ನೋಡಿ). ಕ್ಯಾನಿಬಾಲ್ಸ್ ಇದ್ದಾರೆಯೇ, ಊರು ಕೇರಿಗಳಿಲ್ಲವೇ, ಜನರು ಅನಾಗರಿಕ ಅರಣ್ಯವಾಸಿಗಳೇ ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು, ನನ್ನ ಸ್ವಂತ ಕೆಲವು ಅನುಭವಗಳನ್ನು ಹೇಳಬೇಕಾಗಿದೆ. ನಾನು ಸೌಥಾಂಪ್ಟನ್‌ನ ರಾಯಲ್ ಹ್ಯಾಂಟ್ಸ್ ಆಸ್ಪತ್ರೆಯಲ್ಲಿ ಹರ್ನಿಯ ಆಪರೇಷನ್ ಆದ ತರುವಾಯ ಚೇತರಿಸಿ ಕೊಳ್ಳುತ್ತಿದ್ದ ಕಾಲದಲ್ಲಿ (1964) ಪಕ್ಕದ ಹಾಸಿಗೆಯಲ್ಲಿದ್ದ ಒಬ್ಬ ಬ್ರಿಟಿಷ್ ಪ್ರಜೆ ಭಾರತವು ಈಗಲೂ ಹಾವು ಹುಲಿಗಳ ನಾಡಾಗಿದೆಯೇ ಎಂದು ಕೇಳಿದ್ದ. ಅನಂತರ 1968ರಲ್ಲಿ ಒಬ್ಬ ಇಥಿಯೋಪಿಯ ವಿದ್ಯಾರ್ಥಿಯು ತನ್ನ ಪಠ್ಯ ಪುಸ್ತಕದಲ್ಲಿದ್ದ ಭಾರತೀಯ ಮುದುಕನೊಬ್ಬ ಭಿಕ್ಷೆ ಬೇಡುತ್ತಿರುವ ಚಿತ್ರವನ್ನು ತೋರಿಸಿ– ಇದು ನಿಮ್ಮ ದೇಶ ಎಂದು ಹೇಳಿ, 'ಭಾರತೀಯರು ಬಡವರು, ನಮ್ಮ ಹೈಲಿಸೆಲಾಸಿಯು ನಿಮ್ಮಗೆಲ್ಲಾ ಕೆಲಸ ಕೊಡುತ್ತಿದ್ದಾನೆ, ಇಲ್ಲದಿದ್ದರೆ ನಿಮಗೂ ಇದೇ ಗತಿ" ಎಂದು ತುಂಬಿದ ತರಗತಿಯಲ್ಲಿ ಹೇಳಿದಾಗ ನನ್ನ ಸ್ಥಿತಿ ಹೇಗಿತ್ತೆಂದು ಊಹಿಸಿಕೊಳ್ಳಿ. ನಿಜಸ್ಥಿತಿಯನ್ನು ತರಗತಿಗೆ ವಿವರಿಸಿ ಹೇಳಿದೆ. ಇದಕ್ಕೆ ಕಾರಣ ಅಪಪ್ರಚಾರ. ನಾವು ಇಥಿಯೋಪಿಯಕ್ಕೆ ಹೋಗುವ ಮುನ್ನ ನೂರಾರು ಜನ ಅಮೆರಿಕನ್ ಪೀಸ್–ಕೋರ್ ಸ್ವಯಂಸೇವಕರು ಇಥಿಯೋಪಿಯದ ಶಾಲೆಗಳಲ್ಲಿ ಪಾಠಹೇಳುತ್ತಿದ್ದರು. ಇದು ಅವರು ಮಾಡಿದ ಅಪಪ್ರಚಾರದ ಪರಿಣಾಮವೆಂದು ಹಿರಿಯ ಸಹೋದ್ಯೋಗಿಗಳಿಂದ ತಿಳಿದು ಕೊಂಡೆ, ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ನಮಗೆ ಆಹಾರದ ಅಭಾವ ಬಂದೊದಗಿ, PL 480 ಒಪ್ಪಂದದ ಕಾಲದಲ್ಲಿ ಭಾರತದಲ್ಲಿದ್ದ ಅನೇಕ ಪೀಸ್–ಕೋರುಗಳು ಇಥಿಯೋಪಿಯದಲ್ಲಿ ಕೆಲಸ ಮಾಡಿ ಹೋಗಿದ್ದರು. ನಾನು ಬಂದ ಮೇಲೂ ಕೆಲವರಿದ್ದರು. ಅಲ್ಲಿನ ಪಠ್ಯಪುಸ್ತಕಗಳಿಗೆ ವಿಷಯ ಮತ್ತು ಚಿತ್ರಗಳನ್ನು ಅವರೇ ಒದಗಿಸುತ್ತಿದ್ದರು. ಅಲ್ಲದೆ "ಮದರ್ ಇಂಡಿಯಾ" ಚಲನಚಿತ್ರವು ಭಾರತೀಯರೆಲ್ಲರೂ ಬಡವರೆಂಬ ನಂಬಿಕೆಯನ್ನು ಮೂಡಿಸಿತ್ತು. ಈ ಅಪಪ್ರಚಾರಗಳು ಎಷ್ಟು ಪರಿಣಾಮ ಬೀರಿತ್ತೆಂದರೆ–ನಾವು ಸಂಸಾರ ಸಮೇತ ಅಡಿಸ್ ಅಬಾಬದಲ್ಲಿ ಬಂದಿಳಿದಾಗ (1967) ನಮ್ಮಲ್ಲನೇಕರನ್ನು ಎರಿಟ್ರಿಯ ಪ್ರಾಂತಕ್ಕೆ ಪೋಸ್ಟ್ ಮಾಡಿದರು (ಎರಿಟ್ರಿಯ ಈಗ ಸ್ವತಂತ್ರ ರಾಷ್ಟ್ರವಾಗಿದೆ). ಎರಿಟ್ರಿಯದ ರಾಜಧಾನಿಯಾದ ಅಸ್ಮಾರಾ ಎಂಬುದು ಇಟಾಲಿಯನ್ ವಸಾಹತು ಕಾಲದಲ್ಲಿ ಕಟ್ಟಿದ ಸುಂದರನಗರ. ಇಲ್ಲಿ ಸಂಜೆಯ ತಂಪು ಹವೆಯಲ್ಲಿ ಅಡ್ಡಾಡಲು ರಸ್ತೆಗೆ ಇಳಿದ ಕೂಡಲೇ ಕೆಲವು ಪಡ್ಡೆ ಹುಡುಗರು "ಪೂರ್ ಇಂಡಿಯಾನೊ, ಪೂರ್ ಇಂಡಿಯಾನೊ" ಎಂದು

ಗಟ್ಟಿಯಾಗಿ ಕೂಗುತ್ತಾ ನಮ್ಮ ಹಿಂದೆಯೇ ಬರುತ್ತಿದ್ದರು. ನಾವು ಕಿವಿಗೊಡದೆ ನಡೆದು ಹೋಗುತ್ತಿದ್ದರೆ "ಏಯ್-ಯು-ಪೂರ್ ಇಂಡಿಯಾನ್" ಎಂದು ನಮಗೆ ಅಡ್ಡವಾಗಿ ಬಂದು ಮುಖದ ಮೇಲೆ ಹೇಳಿ ಹೋಗುತ್ತಿದ್ದರು. ಈ ಅವಹೇಳನವನ್ನು ಬಹಳಕಾಲ ಸಹಿಸಿಕೊಂಡಿದ್ದ ನನಗೆ ಒಮ್ಮೆ ಕೋಪ ನೆತ್ತಿಗೇರುವ ಪ್ರಸಂಗವೊಂದು ನಡೆಯಿತು. ಒಂದು ಭಾನುವಾರ ಇಂಡಿಯನ್ ಅಸೋಸಿಯೇಷನ್ ಮೀಟಿಂಗ್ ಮುಗಿಸಿಕೊಂಡು, ಒಬ್ಬ ಉಪಾಧ್ಯಾಯರ ಮನೆಯಿಂದ ನಾವು ಏಳೆಂಟು ಜನ ಭಾರತೀಯರು ಮುಖ್ಯ ಬೀದಿಯಲ್ಲಿ ನಡೆದು ಬರುತ್ತಿದ್ದೆವು. ಆಗಲೂ ಅದೇ ರೀತಿ ಕೂಗುತ್ತಾ ಕೆಲವು ಕಿಡಿಗೇಡಿ ಹುಡುಗರು ನಮ್ಮ ಬೆನ್ನ ಹಿಂದೆಯೇ ಬರ ಹತ್ತಿದರು. ಕೋಪವನ್ನು ಸಹಿಸಲಾಗದೆ ನಾನು ಅವರನ್ನು ಓಡಿಸಿ, ಮತ್ತೆ ಬಂದು ಗುಂಪು ಸೇರಿಕೊಂಡೆ. ಆಗ ಏನದು ಗಲಾಟೆ ಎಂದು ಒಬ್ಬರು ಕೇಳಿದರು. "ಅವರಷ್ಟಕ್ಕೆ ಅವರು ಕೂಗಿಕೊಳ್ಳಲಿ, ಕಿವಿಗೊಡದಿದ್ದರೆ ಆಯಿತು" ಎಂದು ಹಿರಿಯರೊಬ್ಬರು ಹೇಳಿದರು. ಈ ಮಾತುಗಳನ್ನು ಕೇಳಿದ ನಾನು ಸ್ವಲ್ಪ ಏರಿದ ಧ್ವನಿಯಲ್ಲಿ ಹೇಳಿದೆ "ಈ ಅವಹೇಳನವನ್ನು ಎಲ್ಲರೂ ಕೇಳಿಸಿಕೊಂಡೇ ಹೋಗುತ್ತಿದ್ದೀರಿ. ಇದು ನಮ್ಮ ದೇಶಕ್ಕೆ ಆದ ಅವಮಾನವಲ್ಲವೇ, ನಾವು ಪ್ರತಿಭಟಿಸಬೇಡವೇ?" ಎಂದು ಹೇಳಿದಾಗ, ಒಬ್ಬರು "ಕಾರು ಕೊಂಡುಕೊ, ಎಲ್ಲವೂ ಸರಿಹೋಗುತ್ತೆ" ಎಂದರು. ನಿಜ. ಐವತ್ತು ಜನರ ಪೈಕಿ ನಾನು ಸೇರಿದಂತೆ ಮೂವರು ಮಾತ್ರ ಕಾರು ಕೊಂಡಿರಲಿಲ್ಲ. ಉಳಿದವರೆಲ್ಲಾ ಬಂದಕೂಡಲೇ ಕಾರೊಂದನ್ನು ಖರೀದಿಸಿ ಯಾವಾಗಲೂ ಕಾರಿನಲ್ಲೇ ಓಡಾಡುತ್ತಿದ್ದರು. ಮತ್ತೊಬ್ಬರು ಹೇಳಿದರು "ಬಂದ ಕೆಲಸ ನೋಡಿಕೊಂಡು ಹೋಗಯ್ಯ, ಅದೆಲ್ಲಾ ಏಕೆ" ಎಂದು ಮೂದಲಿಸಿದರು. ಇಂತಹ ಇಬ್ಬಗೆಯ ಅವಮಾನವನ್ನು ಸಹಿಸಿಕೊಂಡು ಸಮಯಕ್ಕಾಗಿ ಕಾಯುತ್ತಿದ್ದೆ. ಸಿಕ್ಕಿತು.

1965 ರಿಂದ 68 ರವರೆಗೆ ಇಥಿಯೋಪಿಯದ ಚಕ್ರವರ್ತಿ ಹೈಲಿ ಸೆಲಾಸಿಯ ಸರ್ಕಾರದ ವಿದ್ಯಾಮಂತ್ರಿ ಮತ್ತು ಕೆಲವು ಉನ್ನತಾಧಿಕಾರಿಗಳು ಭಾರತಕ್ಕೆ ಬಂದು ದೆಹಲಿ, ಮದರಾಸು, ಕೊಚಿನ್‌ಗಳಲ್ಲಿ ಸಂದರ್ಶನ ನಡೆಸಿ, ನುರಿತ ಶಿಕ್ಷಕರನ್ನು ಆರಿಸಿಕೊಂಡು ಗುತ್ತಿಗೆ ಆಧಾರದ ಮೇಲೆ ಕರೆದುಕೊಂಡು ಹೋಗುತ್ತಿದ್ದರು. ನಾನು 1967ರ ಬ್ಯಾಚಿಗೆ ಸೇರಿದವನು. ನಮ್ಮಿಂದ ಮೂರು ವರ್ಷದ ಒಪ್ಪಂದಕ್ಕೆ ಸಹಿಹಾಕಿಸಿಕೊಂಡು, ಗಂಡ, ಹೆಂಡತಿ ಮತ್ತು 12 ವರ್ಷದೊಳಗಿನ ಮೂರು ಮಕ್ಕಳಿಗೆ ಹೋಗಿಬರುವ ಏರ್ ಟಿಕೆಟ್ ಕೊಡುವ ವ್ಯವಸ್ಥೆ ಮಾಡಿದ್ದರು. 1965-68ರ ಅವಧಿಯಲ್ಲಿ ಸುಮಾರು 1000, ಏಷಿಯನ್ ಹೊಸ ಉಪಾಧ್ಯಾಯರುಗಳ (ಭಾರತ, ಫಿಲಿಪೈನ್ಸ್, ಶ್ರೀಲಂಕಗಳಿಂದ) ಆಯ್ಕೆಯಾಯಿತು. ಎರಿಟ್ರಿಯ ಪ್ರಾಂತದ ರಾಜಧಾನಿ ಅಸ್ಮಾರಾ ಒಂದರಲ್ಲೇ 50 ಕ್ಕೂ ಹೆಚ್ಚು ಮಂದಿ ಭಾರತೀಯ ಶಿಕ್ಷಕರಿದ್ದರು. ನಾವೆಲ್ಲಾ ಸೇರಿ ಭಾರತೀಯ

ಸಂಘವೊಂದನ್ನು ಸ್ಥಾಪಿಸಬೇಕೆಂದು ಹೊರಟಾಗ ಗುಜರಾತಿನ ವರ್ತಕರಿಂದ ವಿರೋಧವನ್ನು ಎದುರಿಸಬೇಕಾಯಿತು. ನಮಗಿಂತ 50 ವರ್ಷ ಹಿಂದೆಯೇ ಇಲ್ಲಿಗೆ ಬಂದು ನೆಲಸಿದ್ದ ಗುಜರಾತೀ ವರ್ತಕರು, ಉದ್ಯಮಿಗಳು ಇದನ್ನು ವಿರೋಧಿಸಿದರು. ಆದರೆ ಗುಜರಾತೀ ವರ್ತಕರಲ್ಲೇ ಎರಡು ಪಂಗಡ ವಿದ್ದುದರಿಂದ ಶಿಕ್ಷಕ ವರ್ಗವೂ ಸಹ ಇಬ್ಭಾಗವಾಯಿತು. ಎರಡು ವರ್ಗಗಳಿಂದಲೂ ದೂರುಗಳು ಅಡ್ಡಿಸ್ ಅಬಾಬದಲ್ಲಿರುವ ಭಾರತ ರಾಯಭಾರಿ ಕಛೇರಿಗೆ ಹೋದುವು. ಇದನ್ನು ವಿಚಾರಣೆ ನಡೆಸಿ ಸರಿಪಡಿಸಲು ಅಂದಿನ ರಾಯಭಾರಿ ಸೇನ್ ಗುಪ್ತರವರೇ ಬರಬೇಕಾಯಿತು. ಅವರು ಹಿಂದೆ ಚೀನಾದಲ್ಲಿದ್ದವರು. ಅವರ ಕಾರ್ಯಕ್ರಮಗಳ ಸಹಾಯಕರಾಗಿ ನಾನು ಮತ್ತು ಚಾಚಾ ನಾಯರ್‌ರನ್ನು ನಮ್ಮ ಸಂಘದವರು ನೇಮಿಸಿದರು.

ವಿಚಾರಣೆ ಮುಗಿದು ಅವರು ಹೋಟಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಬೀದಿಯಲ್ಲಿ ನಮಗಾಗುತ್ತಿರುವ ಅವಮಾನ ಪ್ರಸಂಗಗಳನ್ನು ನಾನು ವಿನಮ್ರವಾಗಿ ಅವರ ಮುಂದಿಟ್ಟೆ. ಚಾಚಾನಾಯರ್ ಸಹ ದನಿಗೂಡಿಸಿದರು. "ಹಾಗಾದರೆ, ನೀವು ಒಂದು ಛಾಯಾಚಿತ್ರ ಪ್ರದರ್ಶನ ಏರ್ಪಾಡು ಮಾಡಿ. ನಮ್ಮ ಎಂಬೆಸಿಯಿಂದ ಫೋಟೋಗಳು, ಡಾಕ್ಯುಮೆಂಟರಿ ಫಿಲಂಗಳು, ಪುಸ್ತಕ ಇತ್ಯಾದಿಗಳನ್ನು ಕಳುಹಿಸುತ್ತೇನೆ ಎಂದು ಸೇನ್ ಗುಪ್ತರವರು ನಮಗೆ ಹೇಳಿದ್ದಲ್ಲದೆ, ಅದರ ವಿವರಗಳನ್ನೂ ಅವರೇ ನೀಡಿದರು. ಸ್ಥಳಕ್ಕಾಗಿ ಅವರೇ ಅಸ್ಮಾರಾ ಮುನಿಸಿಪಲ್ ಹಾಲನ್ನು ಒಂದು ಭಾನುವಾರಕ್ಕೆ ಗೊತ್ತುಪಡಿಸಿದರು. ಅವರು ಹೇಳಿದಂತೆಯೇ ನಾವು ಅವರ ಹೆಸರಿನಲ್ಲಿ ಆಹ್ವಾನ ಪತ್ರಿಕೆಗಳನ್ನು ಸಿದ್ಧಪಡಿಸಿ, ಊರ ಪ್ರಮುಖರಿಗೆ, ಎಲ್ಲಾ ಶಾಲಾ ಕಾಲೇಜುಗಳ ಪ್ರಾಂಶುಪಾಲರಿಗೆ, ಇಟಲಿ, ಸುಡಾನ್, ಈಜಿಪ್ಟ್ ಮುಂತಾದ ದೂತಾವಾಸಗಳಿಗೆ ಹಂಚಿದೆವು. ನಾವು ಕೆಲವು ಶಿಕ್ಷಕರು ಹಗಲು ರಾತ್ರಿ ದುಡಿದು ಚಿತ್ರ ಪಟಗಳ ವ್ಯವಸ್ಥೆ ಮಾಡಿದೆವು. ಗೊತ್ತಾದ ದಿನ ಸೇನ್ ಗುಪ್ತರವರು ಬಂದು ಅಸ್ಮಾರಾ ವಿ.ವಿ. ನಿಲಯ ಮತ್ತು ಮುನಿಸಿಪಾಲಿಟಿಗೆ ಒಂದೊಂದು ಸೆಟ್ ಗಾಂಧೀ-ನೆಹರು ಗ್ರಂಥಗಳನ್ನು ಹಂಚಿದರು. ಮಧ್ಯಾಹ್ನ ಪ್ರದರ್ಶನವನ್ನು ಉದ್ಘಾಟಿಸಿ, ಹರಿಯಾಣ, ದೆಹಲಿ, H.A.L, H.M.T, ಬಗ್ಗೆ ಡಾಕ್ಯುಮೆಂಟರಿ ಫಿಲಂಗಳನ್ನು ಚಾಲೂ ಮಾಡಿದರು. ಮುನಿಸಿಪಲ್ ಆವರಣವು ಆಹ್ವಾನಿತರಿಂದ ಗಿಜಿಗುಡುತ್ತಿತ್ತು. ಇದರ ಯಶಸ್ಸು ಮಾರನೇ ದಿನವೇ ವ್ಯಕ್ತಪಟ್ಟಿತ್ತು. ಅನೇಕ ಇಥಿಯೋಪಿಯನ್ ಸಹೋದ್ಯೋಗಿಗಳು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಚಲನಚಿತ್ರ ವ್ಯವಸ್ಥೆಗಾಗಿ ನಮ್ಮನ್ನು ಅಭಿನಂದಿಸುತ್ತಾ-"ಭಾರತವು ಇಷ್ಟು ಮುಂದುವರಿದಿದೆ ಎಂದು ನಮಗೆ ಗೊತ್ತಿರಲಿಲ್ಲ. ಟ್ರಾಕ್ಟರು, ಕಾರು, ರೈಲ್ವೆ ಎಂಜಿನ್‌ಗಳಲ್ಲದೆ ಏರೋಪ್ಲೇನುಗಳನ್ನು ಸಹ ಸ್ವತಃ ತಯಾರಿಸಿಕೊಳ್ಳುತ್ತಾರೆ, ಇಷ್ಟು ಜಾಗ್ರತೆ ಭಾರತವು ಮುಂದೆ ಬಂದಿರುವುದು ಶ್ಲಾಘನೀಯ" ಎಂದು

ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಪ್ರಶಂಸೆ ಮಾಡಿದರು. ಕ್ರಮೇಣ ಬೀದಿಯ ಅವಹೇಳನ ಕಡಿಮೆಯಾದದ್ದನ್ನು ನಾವಿದ್ದಾಗಲೇ ಗಮನಿಸಿದೆವು.

ಇಂತಹ ಅಪಾರ್ಥಗಳಿಗೆ ಹಿಂದಿರುವ ಕಾರಣಗಳು ಅನೇಕ. ನಮ್ಮಲ್ಲಿರುವ ಗ್ರಂಥ ಸಾಹಿತ್ಯಗಳ ಅಭಾವ, ಸುದ್ದಿ ಮಾಧ್ಯಮಗಳ ತಾತ್ಸಾರ, ಶಿಕ್ಷಣ ಕ್ರಮದಲ್ಲಿರುವ ನ್ಯೂನತೆಗಳು, ಆಫ್ರಿಕಾದವರ ಬಗ್ಗೆ ನಮ್ಮಲ್ಲಿರುವ ಮನೋಭಾವ ಇವುಗಳೇ ಮುಖ್ಯ ಕಾರಣವೆಂದು ಹೇಳಬಹುದು.

ಆಫ್ರಿಕದ ಅನೇಕ ರಾಷ್ಟ್ರಗಳ ಬಗ್ಗೆ ಹೊರಗೆ ದೊರೆಯುವ ಸಾಹಿತ್ಯಗಳೆಂದರೆ ಪ್ರವಾಸ ಸಾಹಿತ್ಯಗಳು, ಅಂತರ ರಾಷ್ಟ್ರೀಯ ಪ್ರವಾಸಿಗಳನ್ನಾಕರ್ಷಿಸುವ ರಾಷ್ಟ್ರೀಯ ಉದ್ಯಾನಗಳು, ಅಲ್ಲಿರುವ ಪ್ರಾಣಿಪಕ್ಷಿಗಳು, ಹಾಗೂ ಪ್ರವಾಸಿ ಸೌಲಭ್ಯಗಳ ಬಗ್ಗೆ ಆಕರ್ಷಕವಾದ ಕೈಪಿಡಿಗಳನ್ನು ಪ್ರವಾಸಿ ಸಂಸ್ಥೆಗಳು, ವಿಮಾನ ಕಂಪನಿಗಳು ಹೊರಡಿಸುತ್ತವೆ. ಒಂದೆರಡು ದೇಶಗಳನ್ನು ಹೊರತು ಪಡಿಸಿದರೆ ಉಳಿದೆಲ್ಲಾ ರಾಷ್ಟ್ರಗಳಿಂದ ಹೊರಬೀಳುವ ಕೈಪಿಡಿಗಳಲ್ಲಿ ತಮ್ಮ ಸಂಸ್ಕೃತಿ, ನಾಗರೀಕತೆಗಳ ಬಗ್ಗೆಯಾಗಲೀ, ತಮ್ಮ ಸಮಾಜಗಳ ಬಗ್ಗೆಯಾಗಲೀ ಏನೊಂದೂ ಇರುವುದಿಲ್ಲ.

ನಮ್ಮ ಸುದ್ದಿ ಮಾಧ್ಯಮಗಳೇನಿದ್ದರೂ ಆಫ್ರಿಕದ ಯಾವುದೊ ಪ್ರಾಂತ್ಯದ ಕ್ಷಾಮ, ದುರಂತ, ಭೂಕಂಪ ಅಥವಾ ವಿಚಿತ್ರ ಸುದ್ದಿಗಳಿಗೇ ಪ್ರಾಮುಖ್ಯತೆ- ಕೊಡುತ್ತವೆ. ಶಾಂತಿ ಕಾಲದ ಜನಜೀವನ, ಸಂಸ್ಕೃತಿ, ಧರ್ಮಾಚರಣೆ, ಭಾಷೆ, ಸಾಹಿತ್ಯಗಳ ಬಗ್ಗೆ ಬೆಳಕು ಚಲ್ಲುವ ಬರಹಗಳ ಅಭಾವ ಎದ್ದು ಕಾಣುತ್ತದೆ.

ಮೂಲ ಜ್ಞಾನ ಪ್ರಸಾರಕ್ಕೆ ಹೆಚ್ಚು ವ್ಯಾಪ್ತ ಹಾಗೂ ಪರಿಣಾಮಕಾರೀ ಮಾಧ್ಯಮ ಮತ್ತು ಮಟ್ಟ ಯಾವುದೆಂದರೆ ಪ್ರೈಮರಿ ಹಾಗೂ ಪ್ರೌಢಶಾಲೆಗಳು. ನಮ್ಮ "ಸಮಾಜ ವಿಜ್ಞಾನ" ಪಾಠಗಳಲ್ಲಿ **ಆಫ್ರಿಕದ ಅಥವಾ ಇನ್ನಾವುದೇ ಪ್ರದೇಶದ ಸಮಾಜ ವ್ಯವಸ್ಥೆ, ಜೀವನ ಕ್ರಮಗಳ ಬಗ್ಗೆ ಒಂದು ಮಾತಾದರೂ ಇದೆಯೇ!** ಇತಿಹಾಸ ಪಾಠಗಳೇನಿದ್ದರೂ ಈಜಿಪ್ಟ, ಬೆಬಲೋನಿಯ, ಗ್ರೀಕ್, ರೋಮ್ ಇತ್ಯಾದಿ ಪುರಾತನ ನಾಗರಿಕತೆಗಳ ವಿವರಣೆಗಳಿಗೇ ಮೀಸಲು. ಮುಂದೆ ಏನಾಯಿತು; ಅವರು ಈಗ ಹೇಗಿದ್ದಾರೆ; ಅವರ ಆಧುನಿಕ ಸಂಸ್ಕೃತಿ- ನಾಗರಿಕತೆಗಳು ಹೇಗಿವೆ ಎಂಬುದರ ಬಗ್ಗೆ ಯಾವ ಇತಿಹಾಸ/ಸಮಾಜಶಾಸ್ತ್ರಗಳು ಹೇಳುವುದಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದಕ್ಕೆ ಪ್ರಾಥಮಿಕ ಮಟ್ಟದಲ್ಲೇ ಪ್ರಾಮುಖ್ಯತೆ ಕೊಡಲಾಗಿದೆ. ಪ್ರಥಮ ಸಮಾಜ ಪಾಠಗಳಲ್ಲಿ ಪ್ರಪಂಚದ ಆರಿಸಿದ ಕೆಲವು ಸಮಾಜಗಳಲ್ಲಿ ಉದಾ: ಅರಬ್, ಎಸ್ಕಿಮೋ, ಮಂಗೋಲಿಯ, ರೆಡ್ ಇಂಡಿಯನ್ ಇತ್ಯಾದಿ-ಅದೇ ವಯಸ್ಸಿನ ಮಕ್ಕಳ ನಿತ್ಯಜೀವನದ ಎಲ್ಲಾ ಅಂಶಗಳನ್ನೂ ಚಿತ್ರ ಸಹಿತ ವಿಶದೀಕರಿಸುತ್ತವೆ. ಪ್ರೌಢಶಾಲಾ ಮಟ್ಟದಲ್ಲಿ ವಯಸ್ಕರ ಜೀವನ, ಉದ್ಯೋಗ, ಉತ್ಪನ್ನ, ಉತ್ಸವ, ಮೇಳಗಳು ಇತ್ಯಾದಿ ಮುಂದುವರಿದ ವಿವರಣೆಗಳಿರುತ್ತವೆ.

ಇಷ್ಟೇ ಅಲ್ಲದೆ ನಿಮ್ಮನ್ನು ಪರಿಚಯ ಮಾಡಿಸುವ ಜನಕ್ಕೆ ನಿಮ್ಮ ಬಗ್ಗೆ ಇರುವ ಮನೋಭಾವ, ಉದ್ದೇಶಗಳೂ ಸಹ ಮುಖ್ಯ ಪಾತ್ರ ವಹಿಸುತ್ತವೆ. ಬ್ರಿಟಿಷರು 18–19 ನೇ ಶತಮಾನಗಳಲ್ಲಿ ಭಾರತವನ್ನು **ಹಾವಾಡಿಗರ ಮತ್ತು ಹುಲಿಗಳ** ನಾಡೆಂದು ತಮ್ಮ ನಾಡಿನಲ್ಲಿ ವರ್ಣಿಸಿ, ಚಿತ್ರಿಸಿ ಬರೆದರು. ಅಂತೆಯೇ ಆಫ್ರಿಕಾಖಂಡವನ್ನು ಮೃಗಬೇಟೆಯ ಬೀಡೆಂದೂ, ಜನರನ್ನು, ಅನಾಗರಿಕರು, ಕ್ರೂರಿಗಳು ಮತ್ತು ಪೇಗನ್ಸ್ (ಪ್ರಕೃತಿ ಆರಾಧಕರು) ಎಂದು ಟೀಕಿಸಿದರು. ಪ್ರಥಮ ಪ್ರವಾಸಿಗರು ಅವರನ್ನು ಕ್ಯಾನಿಬಾಲ್ಸ್ (ಮನುಷ್ಯನನ್ನು ತಿನ್ನುವವರು) ಎಂದು ತಮ್ಮ ಪ್ರವಾಸ ಕಥನಗಳಲ್ಲಿ ಚಿತ್ರಿಸಿದರು. ಇಪ್ಪತ್ತನೆಯ ಶತಮಾನದಲ್ಲಿ ಅಮೆರಿಕದವರು ಭಾರತವನ್ನು ಭಿಕ್ಷುಕರ ನಾಡೆಂದೂ, ಜನರನ್ನು ಬೀದಿ–ವಾಸಿಗಳೆಂದೂ ಮೂದಲಿಸಲಿಲ್ಲವೇ! ಇಲ್ಲಿ ನಾವು ರಾಜಕೀಯ ಮಾಡುವುದು ಬೇಡ. ಮಾನವ–ಮಾನವ ಸಂಬಂಧವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳೋಣ. ಭಾರತದ ಬಗ್ಗೆ ಇಂತಹ ಚಿತ್ರಣಗಳನ್ನು ಆಫ್ರಿಕದಲ್ಲಿ ಕೊಟ್ಟಮೇಲೆ ಆಫ್ರಿಕನರು ಭಾರತೀಯರನ್ನು ಭಿಕ್ಷುಕರೆಂದೂ ಭಾರತೀಯರು ಆಫ್ರಿಕದವರನ್ನು "ಕ್ಯಾನಿಬಾಲ್ಸ್" ಎಂದೂ ಅರ್ಥೈಸಿಕೊಳ್ಳುವುದರಲ್ಲಿ ಆಶ್ಚರ್ಯವೇನಿದೆ!

ಈ ನನ್ನ ಬರಹವು ನಡೆದುಹೋದ ಅನ್ಯಾಯಗಳನ್ನು ಸರಿಪಡಿಸುವುದಕ್ಕಾಗಿ ಉದ್ದೇಶಿಸಿದ್ದಲ್ಲ. ಬದಲಾಗಿ ನಾನು ಆಫ್ರಿಕದ ಪೂರ್ವ–ಪಶ್ಚಿಮದ ರಾಷ್ಟ್ರಗಳಿಗೆ ಪದೇ ಪದೇ ಭೇಟಿಯಿತ್ತು, ವಾಸ–ಪ್ರವಾಸಗಳನ್ನು ಮಾಡಿ, ಸ್ವತಃ ನೋಡಿ ಭಾಗವಹಿಸಿ, ದೊರೆತ ಅನುಭವಗಳನ್ನು ಕನ್ನಡಿಗರಿಗೆ ತಿಳಿಸಿ, ಅದರ ಮೂಲಕ ನಮ್ಮಲ್ಲಿರುವ ಅಪಾರ್ಥ, ಪೂರ್ವಾಗ್ರಹಗಳನ್ನು ಹೋಗಲಾಡಿಸಿ ದೃಷ್ಟಿ ವೈಶಾಲ್ಯವನ್ನು ಬೆಳೆಸಿಕೊಳ್ಳುವಲ್ಲಿ ಸಹಾಯಕವಾದರೆ ಈ ನನ್ನ ಪ್ರಯತ್ನ ಸಾರ್ಥಕವಾದೀತು. ಸುಮಾರು ಹತ್ತು ವರ್ಷಗಳ ಕಾಲ ಅಬಿಸೀನಿಯ (ಇಥಿಯೋಪಿಯ) ಒಂದರಲ್ಲೇ ಇದ್ದುದರಿಂದ ಬೇರೆ ಬೇರೆ ಪ್ರಾಂತಗಳಿಗೆ ವರ್ಗಾವಣೆಗೊಂಡು, ಅಲ್ಲಿನ ಸ್ಥಳೀಯರೊಡನೆ ಬೆರೆತು, ಅವರನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಲು ಹಾಗೂ ಇಲ್ಲಿ **ಯಥಾವತ್ತಾಗಿ** ಚಿತ್ರಿಸಲು ದೊರೆತ ಅವಕಾಶಗಳಿಗಾಗಿ, ಆಫ್ರಿಕದ ಪರದೈವ **ಮುಲುಂಗು**ವಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯ.

ಬೆಂಗಳೂರು **ಅಮಚವಾಡಿ ಅರಸು**

# ಪರಿವಿಡಿ


| | |
|---|---|
| ಒಂದು ದಿನ ಒಳಕೊಂಡಿತ್ತು ನೋಡಾ | v |
| ಕೃತಜ್ಞತೆ | xi |
| ಪುಸ್ತಕ ಪರಿಚಯ | xiii |
| ಪ್ರಸ್ತಾವನೆ | xv |
| ದೇಶ ಪರಿಚಯ | 1 |
| ತಳಹದಿಗಳು | 18 |
| ಮೂಲ ಧರ್ಮ ಮತ್ತು ಅಧ್ಯಯನ | 43 |
| ದೇವರು ಮತ್ತು ಮಾನವ | 58 |
| ದೈವಗಣ (ಸ್ಪಿರಿಟ್‌ಗಳು) | 83 |
| ಕಪ್ಪು ಸಂಸ್ಕೃತಿ | 93 |
| ಪಕ್ಷಿನೋಟ | 107 |

# ಯು 1 ದೇಶ ಪರಿಚಯ

## ನಾಡು-ಬೀಡು

ಆಫ್ರಿಕಾದ ನೆಲ ಹಾಗೂ ಜನರ ವಿಚಾರಗಳನ್ನು ಸಮಗ್ರತೆಯ ದೃಷ್ಟಿಯಿಂದ ಇಡೀ ಖಂಡಕ್ಕೆ ಅನ್ವಯಿಸಿ ಪರಿಚಯ ಮಾಡಿಸಿ ಕೊಡುವುದು ಉತ್ತಮವೆಂದು ನನಗೆ ತೋರುತ್ತದೆ. ವಾಚಕರ ಅಭಿರುಚಿಗೆ ಅನುಗುಣವಾಗಿ ಅವರಿಗೆ ಬೇಕಾದ ವಸ್ತು ವಿಶಯಗಳನ್ನೇ ಆರಿಸಿಕೊಂಡು ಸಂಕ್ಷೇಪವಾಗಿ ಶೀಘ್ರಗತಿಯಲ್ಲಿ ಪರಿಚಯಿಸುವುದೇ ಇದರ ಉದ್ದೇಶ. ತಪ್ಪು ಗ್ರಹಿಕೆಗೆ ಅವಕಾಶ ನೀಡದಂತೆ ಸ್ವಂತ ಜ್ಞಾನಾನುಭವಗಳಿಂದ ಹಾಗೂ ಆಧಾರ ಗ್ರಂಥಗಳ ಸಹಾಯದಿಂದ ಇದನ್ನು ರೂಪಿಸಲಾಗಿದೆ. ನಮ್ಮ ಹಳೆಯ ವಿದ್ಯಾರ್ಥಿಗಳು, ಸಹೋದ್ಯೋಗಿಗಳು ಹಾಗೂ ಮಿತ್ರರು ನಾನು ಇಥಿಯೋಪಿಯದಿಂದ ಬಂದಾಗಲೆಲ್ಲಾ ಕೇಳುತ್ತಿದ್ದ ಪ್ರಶ್ನೆಗಳೇ ಈ ಕೃತಿಗೆ ಪ್ರೇರಕವೆಂದು ಹೇಳಬಯಸುತ್ತೇನೆ.

ಈ ನನ್ನ ಪ್ರಯತ್ನವು ನಾನು ಪ್ರವಾಸ ಮಾಡಿದ ಹಲವಾರು ರಾಷ್ಟ್ರಗಳಲ್ಲಿ ಕಂಡು ಕೇಳಿದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಜೀವನದ ಒಂದು ವಿಶಾಲ ಮೇಲ್ನೋಟವೇ ಹೊರತು ಆಳವಾದ ಅಧ್ಯಯನವಲ್ಲ. ಹೆಚ್ಚಿನ ಮಾಹಿತಿಗಳು ಬೇಕೆನಿಸಿದರೆ ಒಂದೊಂದು ವಿಭಾಗವನ್ನೂ ಪ್ರತ್ಯೇಕವಾಗಿ ಆರಿಸಿ ಬರೆದಂತಹ ಗ್ರಂಥಗಳನ್ನು ವೀಕ್ಷಿಸಬೇಕಾಗುತ್ತದೆ ಅಥವಾ ಇಂಟರ್‌ನೆಟ್‌ನಲ್ಲಿ ನೋಡಬೇಕಾಗುತ್ತದೆ. ಅಂತೆಯೇ ಇಲ್ಲಿ ಅವರ ರಾಜಕೀಯ ಜೀವನ, ಆರ್ಥಿಕ ವ್ಯವಸ್ಥೆ, ಆಡಳಿತ ನೀತಿ, ಶಿಕ್ಷಣ, ವಿಜ್ಞಾನ ಪ್ರಗತಿ, ವ್ಯಾಪಾರ ಇವುಗಳ ಕಡೆ ಗಮನ ಹರಿಸಿಲ್ಲ. "ಧರ್ಮ ಮತ್ತು ಸಂಸ್ಕೃತಿ" ಎಂಬ ಶೀರ್ಷಿಕೆಯು ಇಂದಿನ ಅವರ ಧರ್ಮ ಮತ್ತು ಸಂಸ್ಕೃತಿಗಳನ್ನು ಪ್ರತಿನಿಧಿಸುವುದಿಲ್ಲ. ಆದರೆ ಇಂದಿನ ಸಂಸ್ಕೃತಿ, ಚಿಂತನ ಧಾರೆ ಮತ್ತು ಸಮೂಹ ಜೀವನಗಳಿಗೆ ಹಿನ್ನೆಲೆಯಾಗಿ ನಡೆದು ಬಂದಿರುವ ಪುರಾತನ ಹಾಗೂ ಪಾರಂಪರಿಕ ರೂಢಿಗಳು, ನೀತಿ ನಡತೆಗಳಿಗೆ ಅನ್ವಯಿಸುತ್ತದೆಂಬ ಅಂಶವನ್ನು ಮರೆಯಬಾರದು.

ಭೌತಿಕ ದೃಷ್ಟಿಯಿಂದ ಆಫ್ರಿಕಾಖಂಡವೆಲ್ಲಾ ಒಂದು ಎತ್ತರವಾದ ಪ್ರಸ್ಥಭೂಮಿ ಯಾಗಿದೆ. ಅದರಲ್ಲೂ ಪೂರ್ವ ಮತ್ತು ದಕ್ಷಿಣ ಭಾಗಗಳು ಹೆಚ್ಚು ಎತ್ತರವಾಗಿದ್ದು

ಸುಮಾರು 5000 ಅಡಿ ಎತ್ತರದಲ್ಲಿ ಮಟ್ಟಸವಾದ ಭೂಪ್ರದೇಶವಾಗಿದೆ. ಇಲ್ಲಿ ಮೌಂಟ್ ಕೀಲಿಮಂಜಾರೊ, ಮೌಂಟ್ ಕೆನ್ಯಾ, ರುವೆನ್‌ಸ್ಸೋರಿ (ಮೌಂಟನ್ಸ್ ಅಫ್‌ದಿ ಮೂನ್) ಮುಂತಾದ ಹಿಮಾಚ್ಛಾದಿತ ಪರ್ವತ ಪ್ರದೇಶಗಳಿವೆ. ನೈಲ್, ಜ಼ಾಂಬೆಸ್ಸಿ, ಮುಂತಾದ ದೊಡ್ಡ ನದಿಗಳ ಉಗಮ ಸ್ಥಾನವೂ ಆಗಿದೆ. ಇನ್ನುಳಿದ ಪ್ರದೇಶ ಅಂದರೆ ಉತ್ತರ, ಮಧ್ಯ ಮತ್ತು ಪಶ್ಚಿಮ ಆಫ್ರಿಕಾದ ಭೂಪ್ರದೇಶಗಳು ಸವೆದು ತಗ್ಗಾಗಿರುವ ಪ್ರಸ್ಥಭೂಮಿ ಎನಿಸುತ್ತವೆ. ಇಲ್ಲಿ ಕಾಂಗೋ, ನೈಜರ್, ವೋಲ್ಟ, ಗ್ಯಾಂಬಿಯ ಮುಂತಾದ ನದಿಗಳಿವೆ.

ನಮ್ಮಲ್ಲನೇಕರು ಆಫ್ರಿಕಾಖಂಡವನ್ನು ಒಂದು ರಾಷ್ಟ್ರದಂತೆ ಪರಿಗಣಿಸಿ ಮಾತನಾಡುತ್ತಾರೆ. ಅದು ಹಾಗಲ್ಲ. 1 ಕೋಟಿ 15 ಲಕ್ಷ ಚದರ ಮೈಲಿ (3,02,64,000 ಚ.ಕಿ.ಮೀ) ವಿಸ್ತಾರವುಳ್ಳ ಈ ಖಂಡವು ಪ್ರಪಂಚದ ಅತಿ ದೊಡ್ಡ ಖಂಡಗಳಲ್ಲಿ ಎರಡನೆಯದು. ಇಷ್ಟು ವಿಶಾಲವುಳ್ಳ ಭೂಪ್ರದೇಶದಲ್ಲಿ ಪ್ರಸ್ತುತ 52 ಸ್ವತಂತ್ರ ರಾಷ್ಟ್ರಗಳಿವೆ. ಅಂದ ಮೇಲೆ ಅಲ್ಲಿ ದೊಡ್ಡ ಪ್ರಮಾಣದ ನಗರಗಳೂ, ಸಾಮಾನ್ಯ ಪಟ್ಟಣಗಳೂ, ಚಿಕ್ಕ ಪುಟ್ಟ ಊರು ಕೇರಿಗಳೂ ಇರಬೇಕಷ್ಟೆ. ಪುರಾಣ ಪ್ರಸಿದ್ಧವಾದ ಕೈರೊ, ಅಲೆಗ್ಸಾಂಡ್ರಿಯ, ಮೊಂಬಾಸ಼ಾ ದರ್–ಎಸ್–ಸಲಾಂ ಮುಂತಾದ ಪುರಾತನ ನಗರಗಳಿವೆ. ಇವು ಸನಾತನ ಸಂಸ್ಕೃತಿ ನಾಗರಿಕತೆಗಳ ಆಗರ. ಇವು ನಮ್ಮ ದೇಶದ ಹಳೆಯ ದೆಹಲಿ, ಕಾಶೀ ಪಟ್ಟಣಗಳನ್ನು ಹೋಲುತ್ತವೆ. ಎರಡನೆಯದಾಗಿ, ವಸಾಹತು ಯುಗದಲ್ಲಿ ನಿರ್ಮಿತವಾದ ಆಧುನಿಕ ಶೈಲಿಯ ನೈರೋಬಿ, ಎಂಟಿಬ್ಬೆ, ಜೊಹಾನ್ಸ್ ಬರ್ಗ್ ಪ್ರಿಟೋರಿಯ, ಕೇಪ್‌ಟೌನ್ ಮುಂತಾದ ಹೊಸನಗರಗಳು ಅಲ್ಲಲ್ಲಿ ತಲೆಯತ್ತಿ ಶೋಭಿಸುತ್ತಿವೆ. ಶುಭ್ರವಾದ ಡಾಂಬರ್ ರಸ್ತೆಗಳು, ಬಹುಮಹಡಿ ಕಟ್ಟಡಗಳು, ಟಿ.ವಿ. ಟವರುಗಳು, ವಿಮಾನ ನಿಲ್ದಾಣ ಇತ್ಯಾದಿ ಸರ್ವ ಸೌಲಭ್ಯಗಳನ್ನೂ ಹೊಂದಿರುವ, ಥಳಥಳಿಸುವ ಬೀದಿ ದೀಪಗಳಿಂದ ಕೂಡಿದ ಈ ನಗರಗಳು ಯಾವುದೇ ಮುಂದುವರಿದ ರಾಷ್ಟ್ರದ ಪಟ್ಟಣಗಳಿಗೆ ಸರಿಸಮವಾಗಿವೆ ಎಂದು ಹೇಳಬಹುದು. ಆಫ್ರಿಕದಲ್ಲಿ ಬೇರೆಲ್ಲೂ ಕಾಲಿಡದೆ ನೇರವಾಗಿ ನೀವು ನೈರೋಬಿ, ಕಂಪಾಲಾ, ಪ್ರಿಟೋರಿಯಾ ನಗರಗಳಲ್ಲಿ ಕಾಲಿಟ್ಟರೆ ಯಾವುದೋ ಐರೋಪ್ಯ ನಗರವೊಂದರಲ್ಲಿ ಬಂದಿಳಿದಂತೆ ಭಾಸವಾಗುತ್ತದೆ ಇಂತಹ ನಗರಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬಿಳಿಯರು ಹಾಗೂ ಭಾರತೀಯ ಮೂಲದ ಜನರು ನೆಲೆ ನಿಂತಿರುವುದು ಅನೇಕರಿಗೆ ತಿಳಿದಿಲ್ಲ.

ಹೆದ್ದಾರಿಯ ಮಾರ್ಗದಲ್ಲಿ ಕಟ್ಟಿದ ಮಧ್ಯಮಗಾತ್ರದ ಊರುಗಳನ್ನು ಮೂರನೇ ವರ್ಗಕ್ಕೆ ಸೇರಿಸಬಹುದು. ತಗಡು ಹೊದಿಸಿದ ಇಂತಹ ಊರುಗಳು ವಿಮಾನದಿಂದ ನೋಡುವಾಗ ಥಳಥಳ ಹೊಳೆಯುತ್ತವೆ. ಇಥಿಯೋಪಿಯದಲ್ಲಿ ಇದೊಂದು ವಿಶೇಷ, ದೃಶ್ಯ, ನಾಲ್ಕನೆಯದಾಗಿ ಬರಡು ಬೆಟ್ಟಗಳ ನಡುವೆ ಅಥವಾ ಬಯಲು ಹುಲ್ಲುಗಾವಲಿನಲ್ಲಿ ವೃತ್ತಾಕಾರವಾದ ಬೇಲಿಯ ಒಳಗೆ ಸುರಕ್ಷಿತವಾಗಿ ಕುಳಿತಿರುವ ಕೋನಾಕೃತಿಯ ಗುಡಿಸಲುಗಳು. ಇವನ್ನು ರೊಂಡಾನಾ ಅಥವಾ ತುಕುಲ್ ಎನ್ನುತ್ತಾರೆ. ಟೇಬಲ್ ಮೇಲೆ ಜೋಡಿಸಿಟ್ಟ ಮಾಡಲ್‌ಗಳಂತೆ ಕಾಣುವ ಇಂತಹ ಹಳ್ಳಿಗಳನ್ನು ಆಕಾಶದಿಂದ

ನೋಡುವಾಗ ಕಾಳಿದಾಸನ ಮೇಘದೂತ ಕಾವ್ಯ ವರ್ಣನೆಯ ದೃಶ್ಯವನ್ನು ನಿಜವಾಗಿ ಕಾಣುವಂತಹ ರೋಮಾಂಚನಕಾರಿ ಅನುಭವ. ಇಂತಹ ಸಣ್ಣ ಪುಟ್ಟ ಬೇಲಿಯ ಕಾಂಪೌಂಡುಗಳು ಈಗಲೂ ಒಳನಾಡು ಪ್ರದೇಶಗಳಲ್ಲಿ ಕಂಡುಬರುತ್ತವೆ. ಕಾರಣ, ರಾತ್ರಿವೇಳ ಕಾಡುಪ್ರಾಣಿಗಳ ಉಪದ್ರವ ಮತ್ತು ದನಗಳನ್ನು ಕದಿಯಲು ಬರುವ ದಾಳಿಕೋರರ ಭಯ, ಒಂದುಮಾತು– ಇಂತಹ ದೃಶ್ಯಗಳು ಜೆಟ್ ಪ್ಲೇನಿನಲ್ಲಿ ಪ್ರಯಾಣಿಸುವಾಗ ಕಾಣಬರುವುದಿಲ್ಲ. ತಗ್ಗಾಗಿ ಹಾರುವ ಡಿ.ಸಿ.6, ಡಿ.ಸಿ.8, ಮುಂತಾದ ಸಣ್ಣ ವಿಮಾನದಲ್ಲಿ ಹಾರುವಾಗ ಮಾತ್ರ ಕಾಣಸಿಗುತ್ತವೆ. ಮುಂದೆ ಸಹರಾ ಮರುಭೂಮಿಯ ಸೆರಗಿನಲ್ಲಿರುವ ಊರುಗಳಿಗೆ ಹೋಗೋಣ. ಕಾನೋ, ಸೊಕೋಟೊ, ಮಾಯಿಡುಗ್ರಿ, ಜಿಂಡರ್ ಮುಂತಾದ ಊರುಗಳಿಗೆ ಹೋಗಿ ನೋಡಿ. ಎಲ್ಲೆಲ್ಲೂ ಮಣ್ಣಿನಿಂದ ಕಟ್ಟಿದ ಚೌಕಾಕಾರದ ಮೆತ್ತು ಮಾಳಿಗೆ ಮನೆಗಳು. ಮನೆ, ಮಸೀದಿ, ಅಂಗಡಿ ಎಲ್ಲವನ್ನೂ ಕಾಲಿಟ್ಟರೆ ಹೂತುಕೊಳ್ಳುವ ಉಸುಕಿನ ಮೇಲೆಯೇ ಕಟ್ಟಿದ್ದಾರೆ. ಊರೊಳಗೆ ಡಾಂಬರ್ ರಸ್ತೆಗಳಿಲ್ಲ; ಅಲ್ಲೊಂದು ಇಲ್ಲೊಂದು ಬೇವಿನ ಮರ; ನೀರಿಲ್ಲ, ನೆರಳಿಲ್ಲ. ಅನಂತರ ಲೇಕ್ ವಿಕ್ಟೋರಿಯ, ಲೇಕ್ ಚಾಡ್, ಲೇಕ್ ತಾಣಾ ಮುಂತಾದ ಸರೋವರಗಳ ದಡದಲ್ಲಿರುವ ಮೀನುಗಾರರ ಹಳ್ಳಿಗೆ ಹೋಗಿ ನೋಡಿ. ಅಲ್ಲಿ ಗುಡಿಸಲು, ಕಾಂಪೌಂಡು, ದೋಣಿ ಎಲ್ಲವನ್ನೂ ಪಾಪಿರಸ್ ಜೊಂಡಿನಿಂದ ನಿರ್ಮಿಸಿದ್ದಾರೆ. ಇಂತಹ ದೃಶ್ಯ ವೈವಿಧ್ಯಗಳು ನಿಮ್ಮನ್ನು ಬೇರಾವುದೋ ಲೋಕಕ್ಕೆ ಕೊಂಡೊಯ್ಯುತ್ತವೆ. ಗುಡಿಸಲುಗಳ ವಿನ್ಯಾಸವೋ ಕಲ್ಪನಾತೀತ. ಭಾರತದಲ್ಲಿರುವಂತೆಯೇ ಆಫ್ರಿಕಖಂಡದಲ್ಲಿ ಎಲ್ಲಿ ಹೋದರೂ ನಗರ ಮತ್ತು ಗ್ರಾಮ ಜೀವನದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಅಭಿವೃದ್ಧಿ ಕಾರ್ಯಗಳಲ್ಲಿ ತಾರತಮ್ಯ, ಸರ್ಕಾರದ ಆಲಸ್ಯ, ಉದಾಸೀನತೆಗಳಿಗೆ ಗುರಿಯಾಗಿ ಒಳ ಪ್ರದೇಶಗಳು ನಲುಗುತ್ತಿವೆ. ಆದರೂ ಗ್ರಾಮಾಂತರಗಳಲ್ಲಿ ಮಕ್ಕಳ ವಿದ್ಯೆಗೆ ಮಿಷನರಿಗಳು ಸಾಕಷ್ಟು ಗಮನ ಕೊಡುತ್ತಿವೆ.

**ಸಾರಿಗೆ–ಸಂಪರ್ಕ:**

ನಾವು ಇಥಿಯೋಪಿಯಕ್ಕೆ ಹೊರಡುವ ಮುನ್ನ ಕೆಲವು ಮಾಹಿತಿಗಾಗಿ ಡಡ್ಲಿ ಸ್ಟಾಂಪ್ ಭೂಗೋಳವನ್ನು ತೆಗೆದು ನೋಡಿದಾಗ ದೊರೆತ ಮೂರು ಸಾಲಿನ ಮಾಹಿತಿ ಈ ರೀತಿ ಇತ್ತು "ಅಬಿಸೀನಿಯ ಒಂದು ಬೆಟ್ಟ ಸೀಮೆ; ಆರ್ಥಿಕವಾಗಿ ಹಿಂದುಳಿದ ದೇಶ; ಜಿಬೂತಿಯಿಂದ ಅಡಿಸ್ ಅಬಾಬದವರೆಗೆ ಇರುವ ಏಕೈಕ ರೈಲು ಮಾರ್ಗವೇ ಹೊರ ಸಂಪರ್ಕಸಾಧನ", ಇಂತಹ ಹಳೆಯ ಮಾಹಿತಿಗಳು ಪಠ್ಯ ಪುಸ್ತಕದಲ್ಲಿ ಹಾಗೇ ಉಳಿದು ಕೊಂಡಿವೆ. ಬದಲಾವಣೆಗಳನ್ನು ಕಂಡು ಮುಂದುವರೆದಿದ್ದರೂ ಸಹ ಪಠ್ಯ ಪುಸ್ತಕಗಳಲ್ಲಿರುವ ಮಾಹಿತಿ ಸಮರ್ಪಕವಾಗಿಲ್ಲ. ಈಗ ಇಂಟರ್‌ನೆಟ್‌ನಲ್ಲಿ ಎಲ್ಲಾ ವಿಧವಾದ ಮಾಹಿತಿಗಳೂ ಲಭ್ಯವಾಗುತ್ತಿವೆ.

ರೈಲು, ಬಸ್ಸು, ಕಾರು, ವಿಮಾನ ಸಂಚಾರಗಳು ಆಫ್ರಿಕಾಖಂಡದ ಎಲ್ಲಾ ದೇಶಗಳಲ್ಲೂ ಉಂಟು. ಆದರೆ ರೈಲು ಮಾರ್ಗಗಳು ಮಾತ್ರ ತೀರಾ ಕಡಿಮೆ. ಭಾರತಕ್ಕೆ ಹೋಲಿಸಿದರೆ

ಏನೇನೂ ಇಲ್ಲ. ಬ್ರಿಟಿಷ್, ಫ್ರೆಂಚ್, ಇಟಲಿ, ಜರ್ಮನಿ, ಪೋರ್ಚುಗೀಸ್ ಮುಂತಾದ ವಸಾಹತು ಶಾಹಿಗಳು ಮೊದಮೊದಲು ಖಂಡದ ಹೊರಸುತ್ತಿನಲ್ಲಿ ವಸಾಹತುಗಳನ್ನು ಸ್ಥಾಪಿಸಿದರು. ಕ್ರಮೇಣ ವ್ಯಾಪಾರದ ಹಿತಾಸಕ್ತಿಯಿಂದ ಸಮುದ್ರತೀರದ ಮುಖ್ಯ ಪಟ್ಟಣಗಳಿಂದ ಕೊಂಚದೂರ ಒಳಗೆ ಹೋಗುವಂತೆ ತುಂಡು ತುಂಡು ರೈಲು ಮಾರ್ಗಗಳನ್ನೂ 19, 20ನೇ ಶತಮಾನಗಳಲ್ಲಿ ನಿರ್ಮಿಸಿಕೊಂಡರು. ಅವು ಈಗಲೂ ಹಾಗೆಯೇ ಇವೆ. ದಾರಿಯುದ್ದಕ್ಕೂ ಬರುವ ನೈಸರ್ಗಿಕ ಅಡಚಣೆಗಳು ಮತ್ತು ಅದರಿಂದಾಗುವ ಖರ್ಚೇ ಇದಕ್ಕೆ ಕಾರಣ. ಆದರೆ ದಕ್ಷಿಣ ಹಾಗೂ ಪೂರ್ವ ಆಫ್ರಿಕವನ್ನೆಲ್ಲಾ ಆಕ್ರಮಿಸಿಕೊಂಡಿದ್ದ ಬ್ರಿಟಿಷರು ಮಾತ್ರ ಖಂಡದ ಒಳಪ್ರದೇಶಗಳಿಗೆ ರೈಲು ಜಾಲಗಳನ್ನು ಏರ್ಪಡಿಸುವ ಸಾಹಸ ಮಾಡಿದ್ದಾರೆ. ಈ ಕೆಲಸಕ್ಕಾಗಿ ಭಾರತದಿಂದ ಸಹಸ್ರಾರು ಸಂಖ್ಯೆಯಲ್ಲಿ ಕಾರ್ಮಿಕರನ್ನು ಬರಮಾಡಿಕೊಂಡಿದ್ದರು. ಕೆಲಸವಾದ ಮೇಲೆ ಅವರೆಲ್ಲರೂ ಅಲ್ಲೇ ನೆಲೆಗೊಂಡರು. ಕೇಪ್‌ಟೌನಿನಿಂದ ಕೈರೋವರೆಗೆ ರೈಲು ಸಂಪರ್ಕವನ್ನು ಏರ್ಪಡಿಸಬೇಕೆಂಬ ಕನಸುಕಂಡಿದ್ದರು. ಆದರೆ ಜಾಗತಿಕ ಯುದ್ಧಗಳು ಹಾಗೂ ಭಾರತದಲ್ಲಿ ಸ್ವಾತಂತ್ರ ಚಳುವಳಿಗಳಿಂದಾಗಿ ಈ ಕನಸು ನನಸಾಗಲಿಲ್ಲ. ಅಷ್ಟರಲ್ಲಿ ಆಫ್ರಿಕದ ಅನೇಕ ರಾಷ್ಟ್ರಗಳು ಸ್ವತಂತ್ರ ಪಡೆದುಕೊಂಡುವು.

ಸ್ವತಂತ್ರ ಬಂದಮೇಲೆ ಒಳಜಗಳ, ಆರ್ಥಿಕ ದುರ್ಬಲತೆ ಹಾಗೂ ನೈಸರ್ಗಿಕ ಅಡಚಣೆಗಳಿಂದಾಗಿ ರೈಲು ದಾರಿಗಳ ವಿಸ್ತರಣೆಯ ಕಡೆಗೆ ಯಾರೂ ಗಮನ ಹರಿಸಲಿಲ್ಲ. ರೈಲಿಗೆ ಬದಲಾಗಿ ರಸ್ತೆ ಸಂಚಾರಗಳಿಗೆ ಹೆಚ್ಚಿನ ಗಮನ ಹರಿಸುತ್ತಾ ಬಂದಿದ್ದಾರೆ. ತತ್ಪರಿಣಾಮವಾಗಿ ಎಲ್ಲಾ ಹೆದ್ದಾರಿಗಳಲ್ಲೂ ಟ್ರೈಲರ್ ಉಳ್ಳ ಭೂತಾಕಾರದ ಟ್ರಕ್ಕುಗಳು ರೈಲಿನಂತೆಯೇ ಒಂದರ ಹಿಂದೆ ಒಂದು ಹೋಗುವುದನ್ನು ಕಾಣಬಹುದು. ಇತ್ತೀಚೆಗೆ, ಭೂವಿಸ್ತಾರವುಳ್ಳ ಎಲ್ಲಾ ರಾಷ್ಟ್ರಗಳೂ ವಿಮಾನ ಸಂಪರ್ಕಗಳನ್ನು ಹೆಚ್ಚಿಸಿ ಜಾಗತಿಕ ಹಾಗೂ ದೇಶೀಯ ಜಾಲಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದು ಹೆಚ್ಚು ಜನಪ್ರಿಯವಾಗುತ್ತಿದೆ. ಎರಿಟ್ರಿಯದಿಂದ ಅರಬ್ ರಾಷ್ಟ್ರಗಳಿಗೆ ತರಕಾರಿ, ಹಣ್ಣು ಹಾಲುಗಳನ್ನು ಸಾಗಿಸಲು ಅದಕ್ಕೆಂದೇ ತಯಾರಿಸಿದ ವಿಶೇಷ ವಿಮಾನಗಳನ್ನೂ ಕಂಡಿದ್ದೇವೆ. ಅರ್ಧಕ್ಕೆ ಸರಿಯಾಗಿ ಹೋಳಾಗುವ ಬಾಡಿಗಳುಳ್ಳ ಈ ವಿಮಾನಗಳು ಲೋಡ್ ಮಾಡುವಾಗ ಮೀನನ್ನು ಅರ್ಧಕ್ಕೆ ಕತ್ತರಿಸಿದಂತೆ ಕಾಣುತ್ತವೆ. ಇಥಿಯೋಪಿಯದಲ್ಲಿ ದೂರದ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳಿಗೆ ಅವರ ಹಳ್ಳಿಯ ಹತ್ತಿರದ ನಿಲ್ದಾಣದಿಂದ ಕಾಲೇಜುಗಳಿಗೆ ಹೋಗಿ ಬರಲು ಉಚಿತ ಏರ್ ಟಿಕೆಟ್ ಮತ್ತು ಭತ್ಯಗಳನ್ನು ಸರ್ಕಾರವು ಕೊಡುತ್ತಿತ್ತು. ದೇಶವೆಲ್ಲಾ ಬೆಟ್ಟದ ಗಂಟುಗಳೇ ಆಗಿರುವ ಈ ರಾಜ್ಯದಲ್ಲಿ ರಸ್ತೆ-ರೈಲು ನಿರ್ಮಾಣಕ್ಕಿಂತ ಮಕ್ಕಳ ವಿದ್ಯೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟ ಹೈಲಿ ಸೆಲಾಸೀ ರಾಜನ ವಿವೇಚನೆ ಹಾಗೂ ದೂರದರ್ಶಿತ್ವವನ್ನು ಮೆಚ್ಚ ತಕ್ಕದ್ದೆಂದು ಪಕ್ಷಪಾತವಿಲ್ಲದೆ ಹೇಳಬಹುದು.

**ಆಹಾರ:**

ಆಫ್ರಿಕದವರ ದೇಶೀಯ ಆಹಾರವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಒಂದು ವಿಶಾಲವಾದ ಸ್ವಾಭಾವಿಕ ಪ್ರದೇಶದಲ್ಲಿ ವಾಸಿಸುವ ಜನ ಅಲ್ಲಿ ಬೆಳೆಯುವ ಅಥವಾ ದೊರೆಯುವ ಆಹಾರವನ್ನೇ ಉಪಯೋಗಿಸುತ್ತಾರೆಂಬುದು ಸಾಮಾನ್ಯ. ವ್ಯಾಪಾರ ವಿನಿಮಯವಿಲ್ಲದ ಆ ಕಾಲದಲ್ಲಿ ಏನು ತಿನ್ನುತ್ತಿದ್ದರೋ ಅದೇ ಅವರ ಮುಖ್ಯ ಆಹಾರವಾಯಿತು. ಇಥಿಯೋಪಿಯದಲ್ಲಿ 'ಇಂಜೆರಾ' ಎಂಬ ದೊಡ್ಡ ದೋಸೆಯು ಮುಖ್ಯ ಆಹಾರ. ಇದನ್ನು 'ತಫ್' ಎಂಬ ಸಣ್ಣ ಬಿಳಿಧಾನ್ಯದಿಂದ ಮಾಡುತ್ತಾರೆ. ಅದರ ಹಿಟ್ಟನ್ನು ನೀರಿನಲ್ಲಿ ದೋಸೆಯ ಹದಕ್ಕೆ ಕಲಸಿ, ಹೆಪ್ಪು ಸೇರಿಸಿ, 24 ಗಂಟೆಗಳ ಕಾಲ ಬಿಡುತ್ತಾರೆ. ಹುಳಿ ಬಂದಮೇಲೆ ದೊಡ್ಡ ದೋಸೆ ಕಲ್ಲಿನ ಮೇಲೆ ದೋಸೆ ಹುಯ್ಯುತ್ತಾರೆ. ದೋಸೆಯಾದರೋ ಒಂದೂವರೆ ಅಡಿಯಷ್ಟು ಅಗಲವಾಗಿದ್ದು ಮಂದವೂ ಆಗಿರುತ್ತದೆ. ಮೂರು ದಿವಸಕ್ಕಾಗುವಷ್ಟು ಅಂದರೆ 15 ರಿಂದ 20 ದೋಸೆಗಳನ್ನು ಮಾಡಿ, ಅಷ್ಟೇ ಅಗಲದ ಬುಟ್ಟಿಯಲ್ಲಿ ಕಾಪಿಡುತ್ತಾರೆ. ಟೇಬಲ್ ಮೇಲೆ ದೊಡ್ಡ ಥಾಲಿ (ತಟ್ಟೆ) ಯಲ್ಲಿ ಎರಡು ಮೂರು ಇಂಜೆರಾ ಮತ್ತು ವ್ಯಂಜನ (ವತ್, ಜಿಗನಿ, ಶಿರೋ, ಆಲಿಚಾ) ಗಳನ್ನಿಟ್ಟು, ಸುತ್ತಲೂ ಮನೆಯವರೆಲ್ಲಾ ಕುಳಿತು, ತಮಗೆ ಬೇಕಾದಷ್ಟು ತಿಂದು, ಎದ್ದು ಹೋಗುತ್ತಾರೆ. ಬಿಡಿ ಬಿಡಿಯಾಗಿ ಬಡಿಸುವ ಪದ್ಧತಿಯಿಲ್ಲ. ಇದಲ್ಲದೆ ಇಟಾಲಿಯನ್ ಆಹಾರಗಳಾದ ಬ್ರೆಡ್, ಬನ್, ಮಕರೋನಿ, ಸ್ಪಗೆಟಿ, ಲಾಸಾನ್ಯ ಮುಂತಾದವು ಬಹಳ ಜನಪ್ರಿಯವಾಗಿವೆ. ದೇಶಾದ್ಯಂತ ಇಟಾಲಿಯನ್ ಮಾದರಿಯ ಹೋಟೆಲುಗಳು ಅಂಗಡಿಗಳು ಹರಡಿಕೊಂಡಿವೆ. ಒಂದು ಅಡಿ ಎತ್ತರ ಬೆಳೆಯುವ ತಫ್ ಧಾನ್ಯದ ಬೆಳೆಯು ಇಥಿಯೋಪಿಯ, ಎರಿಟ್ರಿಯಗಳ ಬೆಟ್ಟ ಸೀಮೆಗೆ ಮಾತ್ರ ಸೀಮಿತ. ಬೇರೆಲ್ಲೂ ಇಲ್ಲ.

ಪಶ್ಚಿಮ ಆಫ್ರಿಕದಲ್ಲಿ ಅಂದರೆ ಗಿನಿ ಕಡಲ ತೀರದ 8–10 ರಾಷ್ಟ್ರಗಳಲ್ಲಿ "ಯಾಮ್" ಎಂಬ ಗೆಣಸು ಮುಖ್ಯ ಆಹಾರ. ಇದು ಮರಗೆಣಸಿಗಿಂತಲೂ ದಪ್ಪನಾಗಿದ್ದು ಒಂದು ಅಥವಾ ಒಂದೂವರೆ ಅಡಿ ಉದ್ದವಾಗಿರುತ್ತದೆ. ಇದನ್ನು ಸಿಪ್ಪೆಹೆರೆದು ತುಂಡು ಮಾಡಿ ಬೇಯಿಸುತ್ತಾರೆ. ಬೇಯಿಸಿದ ತುಂಡುಗಳನ್ನು ಮರದ ಒರಳಲ್ಲಿ ಹಾಕಿ ಕೊಂಚ ಎಣ್ಣೆ ಸೇರಿಸಿ ಒನಕೆಯಿಂದ ಕುಟ್ಟುತ್ತಾರೆ. ಕುಟ್ಟಿದ ಹಿಟ್ಟನ್ನು ರಾಗಿ ಮುದ್ದೆಯ ಗಾತ್ರಕ್ಕೆ ಮುದ್ದೆ ಕಟ್ಟಿಡುತ್ತಾರೆ. ನೋಡಲು ಅಂದವಾದ ಬಿಳಿ ಮುದ್ದೆಗಳನ್ನು ತಟ್ಟೆಯಲ್ಲಿಟ್ಟು ತರಕಾರಿ ಅಥವಾ ಮಾಂಸದ ಸಾರಿನೊಂದಿಗೆ ಕೊಡುತ್ತಾರೆ. ಊಟ ಮಾಡುವ ವಿಧಾನವೂ ಸಹ, ಅವನು ರಾಜನಾಗಿರಲಿ, ಪ್ರೆಸಿಡೆಂಟೇ ಆಗಿರಲಿ, ರಾಗಿ ಮುದ್ದೆ ನುಂಗಿದಂತೆಯೇ ನುಂಗಬೇಕು. ಪಂಚತಾರಾ ಹೋಟೆಲುಗಳಲ್ಲೂ ಈ ದೇಶೀ ಆಹಾರ ದೊರೆಯುತ್ತದೆ. ಪ್ರತಿಯೊಂದು ಮನೆಯವರೂ ನೂರಾರು ಯಾಮ್ ಗೆಣಸುಗಳನ್ನು ಪ್ರತ್ಯೇಕ ಉಗ್ರಾಣದಲ್ಲಿ ಶೇಖರಿಸಿಟ್ಟುಕೊಳ್ಳುತ್ತಾರೆ. ವರ್ಷಕ್ಕೊಮ್ಮೆ ಸುಗ್ಗಿಯ ಕಾಲದಲ್ಲಿ "ಯಾಮ್ ಹಬ್ಬ" ವನ್ನು ಎಲ್ಲರೂ ಆಚರಿಸುತ್ತಾರೆ. ಯಾಮ್ ಮುಗಿದಾಗ ಮರಗೆಣಸನ್ನು

ಉಪಯೋಗಿಸುತ್ತಾರೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷರು ಈ ರಾಷ್ಟ್ರಗಳಲ್ಲಿ ಭತ್ತದ ಬೆಳೆಯನ್ನು ಪರಿಚಯಿಸಿದ್ದಾರೆ.

ಇನ್ನು ಪೂರ್ವ ಆಫ್ರಿಕದ ಕೆನ್ಯಾ, ಉಗಾಂಡ, ತಾಂಜಾನಿಯ, ಸೋಮಾಲಿಯ ಮುಂತಾದ ರಾಷ್ಟ್ರಗಳಲ್ಲಿ ಅರಬ್ಬರ ಆಹಾರ ಅಂದರೆ ಅನ್ನ, ಮಸಾಲೆ ಹಾಕಿದ ಕರ್ರಿ ಜನಪ್ರಿಯವಾಗಿದೆ. ಇವರು ಭಾರತೀಯ ಅಡಿಗೆಗಳನ್ನು ಕಲಿತಿದ್ದಾರೆ. ದೇಶೀಹೊಟೆಲುಗಳಲ್ಲೂ ಸಹ ಪೂರಿ, ಚಪಾತಿ, ಸಬ್ಜಿ, ಸಮೋಸಗಳು ದೊರೆಯುತ್ತವೆ. ದಕ್ಷಿಣ ಆಫ್ರಿಕದ ರಾಜ್ಯಗಳಲ್ಲಿ ಮುಸುಕಿನ ಜೋಳದ ಬ್ರೆಡ್, ರೊಟ್ಟಿಗಳು ಜನಪ್ರಿಯ ಆಹಾರ.

**ಬಡತನ–ಕ್ಷಾಮ:**

ಆಫ್ರಿಕಾ ಖಂಡದ ಅನೇಕ ದೇಶಗಳಲ್ಲಿ ಜನರು ಬಡತನ, ಕ್ಷಾಮ, ಅಭಾವಗಳಿಂದ ಪೀಡಿತರಾಗಿದ್ದಾರೆಂಬ ಆಕ್ಷೇಪಣೆಗಳು ಆಗಾಗ್ಗೆ ಕೇಳಿಬರುತ್ತವೆ ಮತ್ತು ಪತ್ರಿಕೆಗಳಲ್ಲೂ ಅದನ್ನು ಓದಿದ್ದೇವೆ. ಆದರೆ ಬಡತನ ಎಲ್ಲಿಲ್ಲ? ಮುಂದುವರೆದ ರಾಷ್ಟ್ರಗಳಲ್ಲೂ ಬಡತನವನ್ನು ಕಾಣಬಹುದು. ದೇಶದ ಸಾಮಾನ್ಯ ಆರ್ಥಿಕ ಮಟ್ಟಕ್ಕೆ ಹೋಲಿಸಿದಾಗ ಅವರು ಬಡವರೆಂದು ಕಾಣುತ್ತಾರೆ. ಈ ದೃಷ್ಟಿಯಲ್ಲಿ ಏಷಿಯಾ ಹಾಗೂ ಆಫ್ರಿಕದ ಬಹುರಾಷ್ಟ್ರಗಳಲ್ಲಿ ಬಡತನವು ಎದ್ದು ಕಾಣುತ್ತದೆ. ಅದರ ಜಿಜ್ಞಾಸೆ ಇಲ್ಲಿ ಅಪ್ರಸ್ತುತ. ಬಡತನ, ಅಭಾವಗಳ ಬಗ್ಗೆ ಸತ್ಯವನ್ನು ಮುಚ್ಚಿಡುವ ಅಗತ್ಯವಿಲ್ಲ. ಆದರೆ ಜನಾಂಗಗಳ ಹೆಸರು ಹೇಳುವುದು ಉಚಿತವಲ್ಲ. ಬಡವನಾದರೂ ಅವನಿಗೆ ಸ್ವಾಭಿಮಾನವಿಲ್ಲವೇ! ನಾವು ನೋಡುವ ದೃಷ್ಟಿಕೋಣದ ದೋಷದಿಂದಾಗಿ ಅಥವಾ ಅವರ ಬಟ್ಟೆ ಬರೆಗಳನ್ನು ನೋಡಿ, ಕೆಲವರನ್ನು ಬಡವರೆಂದು ಹೇಳಿ ಬಿಡುತ್ತೇವೆ. ಹಿಮಾಲಯದ ಪ್ರದೇಶಗಳಲ್ಲಿ ಅಲೆದಾಡುವ ಭೈರಾಗಿಗಳನ್ನು, ಬರಿಗಾಲ ಸಾಧು ಸನ್ಯಾಸಿಗಳನ್ನು ಕಂಡು ಅವರೆಲ್ಲರೂ ನಿರ್ಗತಿಕರು, ಬಿಕ್ಷುಕರು ಎಂದು ಹೇಳಿದಂತಾಗುತ್ತದೆ ನಾವು ಆಫ್ರಿಕದ ಕೆಲವು ಜನರನ್ನು ಕಂಡು ಅವರೆಲ್ಲರೂ ಬಡವರು, ನಿರ್ಗತಿಕರು ಎಂದು ತೀರ್ಮಾನಿಸುವುದು. ಕೆಲವು ಪ್ರದೇಶದ ಜನರು ಬದಲಾವಣೆಗೆ ಇಚ್ಛೆ ಪಡಬಹುದು, ಮತ್ತೆ ಕೆಲವರು ಇಚ್ಛೆ ಪಡದೇ ಇರಬಹುದು. ಉದಾಹರಣೆಗೆ–ಪಿಗ್ಮಿ ಮಸಾಯಿ ಮತ್ತು ಫುಲಾನಿ ಪಂಗಡದವರು ಬದಲಾವಣೆಯನ್ನು ವಿರೋಧಿಸುತ್ತಾರೆ. ಅಂತಹವರು ತಮ್ಮದೇ ಆದ ವೃತ್ತಿ (ಪಶು ಪಾಲನೆ) ಜೀವನ ಶೈಲಿ, ಮನರಂಜನೆಗಳಲ್ಲಿ ನಿರತರಾಗಿ ತಮ್ಮ ಭೂಮಿ, ಆಹಾರ, ಗೋಸಂಪತ್ತುಗಳಲ್ಲಿ ತೃಪ್ತಿಯನ್ನು ಕಂಡಾಗ ಅವರನ್ನು ಬಡವರು ಎಂದು ಹೇಗೆ ಹೇಳುತ್ತೀರಿ! ಬಡತನವನ್ನು ಅಳೆಯುವ ಅಳತೆಗೋಲಾದರೂ ಯಾವುದು? "ಮನಸಿ ಚ ಪರಿತುಷ್ಟೇ। ಕೋ ಅರ್ಥವಾನ್। ಕೋದರಿದ್ರಃ।" ಎಂದು ಭರ್ತೃಹರಿ ಹೇಳಿರುವಂತೆ ಮನಸ್ಸು ತೃಪ್ತಿಯಿಂದ ಇದ್ದರೆ ಬಡವನಾರು, ಸಿರಿವಂತನಾರು?

ಇನ್ನು ಕ್ಷಾಮ–ಅಭಾವಗಳು: ಇವು ಎಲ್ಲಾ ಕಡೆಯಲ್ಲೂ ಎಲ್ಲಾ ಕಾಲದಲ್ಲೂ ಇರುವುದಿಲ್ಲ. ಅಂತರ್ಯುದ್ಧ, ಮಿಲಿಟರಿ ಕಾರ್ಯಾಚರಣೆ, ಅಥವಾ ಮಳೆಯಿಲ್ಲದ

ಸಂದರ್ಭಗಳಲ್ಲಿ ಕೊಂಚಕಾಲ ಕ್ಷಾಮ-ಅಭಾವಗಳು ತಲೆದೋರುತ್ತವೆಯೇ ವಿನಾ ಸದಾಕಾಲ ಇರುವುದಿಲ್ಲ. ಉದಾಹರಣೆಗೆ 1972-73-74 ರಲ್ಲಿ "ಸಾಹೆಲ್ ಸೀಮೆಗಳು" ಅಂದರೆ ಸಹರಾ ಮರುಭೂಮಿಯ ದಕ್ಷಿಣ ಸೆರಗಿನ ರಾಷ್ಟ್ರಗಳಲ್ಲಿ ಅರ್ಥಾತ್ ಪೂರ್ವದ ಸೋಮಾಲಿಯದಿಂದ ಹಿಡಿದು ಪಶ್ಚಿಮದ ಮಾರಿಟೇನಿಯದವರೆಗೂ ಒಟ್ಟು ಹನ್ನೆರಡು ರಾಷ್ಟ್ರಗಳಲ್ಲಿ ಮೂರು ವರ್ಷಕಾಲ ಮಳೆ ಬೀಳದೆ ಭೀಕರ ಕ್ಷಾಮ ತಲೆದೋರಿತು-ಆಗ ನಾವು ಅಲ್ಲೇ ಇದ್ದೆವು-ಇದು ಇಪ್ಪತ್ತನೇ ಶತಮಾನದ ಅತಿಭೀಕರ ಪ್ರಕೃತಿ ವಿಕೋಪಗಳಲ್ಲೊಂದು ಎಂದು ಹೇಳಿದ್ದಾರೆ. ಆಗ ಸಾವಿರಾರು ಜನರೂ, ಪ್ರಾಣಿಗಳೂ ಸಾವಿಗೀಡಾದರು. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ, ಯುನೆಸ್ಕೊ, ಒ.ಎ.ಯು (ಆರ್ಗನೈಸೇಷನ್ ಆಫ್ ಆಫ್ರಿಕನ್ ಯೂನಿಟಿ) ಮತ್ತು ಅನೇಕ ಮಿತ್ರ ರಾಷ್ಟ್ರಗಳು ನೆರವಿಗೆ ಬಂದು ಹೆಚ್ಚಿನ ಅನಾಹುತಗಳನ್ನು ತಪ್ಪಿಸಿದುವು. ಇದೇ ರೀತಿ ಪ್ರತಿ ಬರಗಾಲದಲ್ಲೂ ಸಹರಾ ಮರುಭೂಮಿಯ ದಕ್ಷಿಣ ರಾಜ್ಯಗಳಲ್ಲಿ ಹತ್ತಿಪ್ಪತ್ತು ಮೈಲಿಗಳಷ್ಟು ದೂರ ಹುಲ್ಲುಗಾವಲು ನಾಶವಾಗಿ ಮರುಭೂಮಿಗೆ ಆಹುತಿಯಾಗುತ್ತವೆ. ಅರ್ಥಾತ್ ಸಹರಾ ಮರುಭೂಮಿಯು ದಕ್ಷಿಣದ ಕಡೆಗೆ ವೇಗವಾಗಿ ವಿಸ್ತಾರಗೊಳ್ಳುತ್ತಿದೆ.

ಇಥಿಯೋಪಿಯದ ವೊಲ್ಲೊ ಪ್ರಾಂತ್ಯದಲ್ಲಿ-ಅದೊಂದು ಮಳೆನೆರಳಿನ ಪ್ರದೇಶ- ಆಗಾಗ್ಗೆ ಮಳೆ ಬೀಳದೆ ಕ್ಷಾಮ ತಲೆದೋರುತ್ತಿತ್ತು. ಆದರೆ 1972-74ರಲ್ಲಿ ಅದರ ಪ್ರಕೋಪವು ಹೆಚ್ಚಾದ್ದರಿಂದ ಕೊಬ್ಬೊ ಜಿಲ್ಲೆಯ ಜನರು ಹಾಗೂ ದನಕರುಗಳು ವಲಸೆ ಹೊರಟವು. 'ಅಲಮಾತಾ' ಕಣಿವೆಯಲ್ಲಿ ರಸ್ತೆಯುದ್ದಕ್ಕೂ ಜನರು ಹಾಗೂ ಪ್ರಾಣಿಗಳು ಬಿದ್ದು ಸಾಯುತ್ತಿದ್ದವು. ಹೈಲಿ ಸೆಲಾಸೀ ಸರ್ಕಾರದವರು ವಲಸೆಯನ್ನು ತಡೆಗಟ್ಟಿದ್ದಲ್ಲದೆ, ಕ್ಷಾಮವಿಲ್ಲವೆಂದು ಅದನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರು. ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯವರಿಂದ ಇದು ಹೊರಬಿತ್ತು. ಗುಲ್ಲು ಹರಡಿತು. 1974ರ ಸೆಪ್ಟೆಂಬರ್ 12ರಂದು ಹೈಲಿ ಸೆಲಾಸಿಯನ್ನು ಪದಚ್ಯುತಗೊಳಿಸಿ ಮಿಲಿಟರಿ ಸರ್ಕಾರ ಅಧಿಕಾರಕ್ಕೆ ಬಂದಿತು.

### ಕಪ್ಪು ಬಣ್ಣ- ಸುರಳಿ ಕೂದಲು:

ಆಫ್ರಿಕ ಎಂದ ಕೂಡಲೇ ನಮ್ಮ ಮನಸ್ಸಿನಲ್ಲಿ ಮೂಡುವ ಚಿತ್ರ ಕಪ್ಪು ಮೈ ಬಣ್ಣ, ಸುರಳಿ ತಲೆಗೂದಲು, ದಪ್ಪ ತುಟಿ ಉಳ್ಳ ಜನರ ಬಿಂಬ. ನಾವು ಅಡಿಸ್ ಅಬಾಬಕ್ಕೆ ಬಂದಿಳಿದ ಕೂಡಲೇ ಕೆಲವರನ್ನು ಎರಿಟ್ರಿಯ ಪ್ರಾಂತ್ಯದ ಅಸ್ಮಾರಾ ಎಂಬ ಊರಿಗೆ ಪೋಸ್ಟ್ ಮಾಡಿದರು. ಎರಡು ತಿಂಗಳ ಅಡ್ವಾನ್ಸ್ ಸಂಬಳ ಪಡೆದು ಹೊರಟೆವು. ದೂರ 1076 ಕಿ.ಮಿ. ಎಲ್ಲರೂ ವಿಮಾನ ಹಿಡಿದರು. ನಾನು ಮಾತ್ರ ಸಂಸಾರದೊಡನೆ ಬಸ್ಸಿನಲ್ಲಿ ಹೊರಟೆ. ಮೂರು ದಿನಗಳ ಪ್ರಯಾಣ. ದಾರಿಯಲ್ಲಿ ಎರಡು ರಾತ್ರಿ ತಂಗಬೇಕು. ಸೀಮೆ ಎಣ್ಣೆ ಸ್ಟೌವ್, ಅಕ್ಕಿ, ಬೇಳೆಯನ್ನು ಜೊತೆಯಲ್ಲಿಟ್ಟುಕೊಂಡು, ಇಳಿದ ಕಡೆ ಅಡಿಗೆ ಮಾಡಿಕೊಳ್ಳುತ್ತಿದ್ದೆವು. ನಮ್ಮ ಬಸ್ಸು ಬರಡು ಬೆಟ್ಟಗಳ ಮೇಲೆಯೇ ಪ್ರಯಾಣಿಸುತ್ತಿತ್ತು. ಕೆಲವು ಕಡೆ ಹತ್ತು ಸಾವಿರ ಅಡಿ ಎತ್ತರದಲ್ಲಿ ಬೆಟ್ಟದ ಬೆನ್ನೇಣುಗಳನ್ನು ದಾಟಿ ಸಾಗುವಾಗ,

ಕಿಟಕಿ ಬಾಗಿಲುಗಳನ್ನು ಮುಚ್ಚಿದ್ದರೂ ನಡುಗಿಸುವಂತಹ ಚಳಿ. ಬಸ್ಸಿನ ಒಳಗೆ, ಹೊರಗೆ ಎಲ್ಲೆಲ್ಲೂ ಸುರಳಿ ಕೂದಲಿನ ಕಪ್ಪು ಜನರೇ ಹೊರತು ಬೇರೆಯವರಿಲ್ಲ. ಯಾವ ಊರಿನಲ್ಲಿ ನಿಂತಾಗ ಇಳಿದು ನೋಡಿದರೂ ಅವರೇ. ಕಪ್ಪು ಜನರನ್ನ ಇಷ್ಟು ಸಂಖ್ಯೆಯಲ್ಲಿ ಒಮ್ಮೆಲೇ ಕಂಡರಿಯದ ನನಗೆ, ಎರಡು ಹಗಲಿನ ಪಯಣ ಮುಗಿಸುವ ವೇಳೆಗೆ ದೊಡ್ಡ ಸಂಶಯವೊಂದು ಹುಟ್ಟಿತು. ಅದೇನೆಂದರೆ, ಇಷ್ಟು ತಂಪಾದ ಹವಾಮಾನವಿದ್ದರೂ ಇಲ್ಲಿನ ಜನರ ಚರ್ಮದ ಬಣ್ಣ ಕಪ್ಪಾದುದೇಕೆ? ಆಫ್ರಿಕ ಖಂಡವೇ ಒಂದು ಎತ್ತರವಾದ ಭೂಮಿಯಾಗಿರುವಾಗ ಇಲ್ಲಿನ ಜನರೇಕೆ ಇಷ್ಟು ಕಪ್ಪಾದರು? ಅವರ ಕೂದಲೇಕೆ ಸುರುಳಿಯಾಯಿತು?. ನಾನು ಸೌಥಾಂಪ್ಟನ್ ವಿಶ್ವ ವಿದ್ಯಾನಿಲಯದಲ್ಲಿ ಆಫ್ರಿಕದ ಬೇರೆ ಬೇರೆ ದೇಶಗಳಿಂದ ಬಂದ ಸುಮಾರು ಇಪ್ಪತ್ತು ಕಪ್ಪು ಜನರ ಸಂಗಡವೇ ಓದಿದ್ದು. ಆಗ ಇಂತಹ ಪ್ರಶ್ನೆಗಳಿಗೆ ಭಾಗಶಃ ಉತ್ತರ ದೊರೆತಿತ್ತು. ಈ ಗುಣಗಳು ಅವರಿಗೆ ಬುಡಕಟ್ಟಿನಿಂದ ಬಂದದ್ದು ಎಂಬ ಅರೆಸತ್ಯ. ಅವರ ಚರ್ಮದ ಕಪ್ಪು ಬಣ್ಣವು ವಿಜ್ಞಾನದ ಪ್ರಕಾರ ಕಪ್ಪು ಪಿಗ್ಮೆಂಟ್‌ಗಳ ಅಧಿಕ ದಟ್ಟಣೆಯಿಂದ ಆದದ್ದು. ಲಕ್ಷಾಂತರ ವರ್ಷಗಳ ಹಿಂದೆ ಅವರ ಮೂಲ ಪುರುಷರು–ಮೂಲ ಮಾನವರು–ಮೈಮೇಲೆ ಬಟ್ಟೆಯಿಲ್ಲದೆ, ವಾಸಕ್ಕೆ ಮನೆಯಿಲ್ಲದೆ, ಬಿಸಿಲಲ್ಲಿ ಅಲೆದಾಡುವಾಗ ಸೂರ್ಯ ಕಿರಣದಲ್ಲಿರುವ ರಕ್ತ ವರ್ಣಾತೀತ (ಇನ್ ಫ್ರಾರೆಡ್) ಎಂಬ ಅಪಾಯ ಕಾರೀ ಅಗೋಚರ ಕಿರಣಗಳ ಪ್ರಭಾವದಿಂದ ಚರ್ಮವನ್ನು ರಕ್ಷಿಸಿಕೊಳ್ಳಲು ಅವರಿಗೆ ಸ್ವಾಭಾವಿಕವಾಗಿ ಒದಗಿಬಂದ ಒಂದು ರಕ್ಷಣಾ ಸಾಮರ್ಥ್ಯವೇ ಪಿಗ್ಮೆಂಟ್. ಇನ್‌ಫ್ರಾರೆಡ್ ಕಿರಣಗಳು ಶಾಖವನ್ನು ಚರ್ಮದಾಳಕ್ಕೆ ಮೂಳೆಯವರೆಗೂ ಕೊಂಡೊಯ್ಯಬಲ್ಲವು. ಉಷ್ಣವಲಯದಿಂದ ಶೀತವಲಯದ ಕಡೆ ಹೋದಂತೆಲ್ಲಾ ಕರಿಯ ಪಿಗ್ಮೆಂಟುಗಳು ಕೆಂಪು ವರ್ಣಕ್ಕೆ ತಿರುಗಿ, ಕಡೆಗೆ ಇಲ್ಲವಾಗುತ್ತವೆ. ಈ ಅಂಶವು ಆಫ್ರಿಕದವರು ಕಪ್ಪಾಗಿಯೂ, ಅರಬ್ಬರು ಕೆಂಪಾಗಿಯೂ, ಬ್ರಿಟಿಷರು ಬೆಳ್ಳಗೂ ಇರುವ ಕಾರಣವನ್ನು ವಿವರಿಸಬಲ್ಲದು. ಮೂರು ಲಕ್ಷ ವರ್ಷಗಳ ಕಾಲ ರಕ್ತದ ಬೆರಕೆಯಾಗದೆ, ಒಂದೇ ರೀತಿಯ ಪ್ರಕೃತಿ ಸನ್ನಿವೇಶದಲ್ಲಿ ಹುಟ್ಟಿ ಬೆಳೆದದ್ದರಿಂದ ಈ ಗುಣವು ಅವರ ಅಂಡಾಣುಗಳಲ್ಲಿ ಸೇರಿ ಮುಂದುವರಿಯುತ್ತಾ ಹೋಗುತ್ತಿವೆ.

ಅವರ ತಲೆಗೂದಾಲದರೋ ನಮ್ಮ ಕೂದಲಿನಂತೆ ದುಂಡಗಿಲ್ಲ. ಚಪ್ಪಟೆಯಾಗಿರುವ ಅವರ ತಲೆಗೂದಲು ಬೆಳೆಯುತ್ತಾ ಸ್ಪ್ರಿಂಗಿನ ಮಾದರಿಯಲ್ಲಿ ಸುರುಟಿಕೊಂಡೇ ಬೆಳೆಯುತ್ತದೆ. ಶಾಲಾ ಮಕ್ಕಳ ತಲೆಗೂದಲನ್ನು ಮುಟ್ಟಿ ನೋಡಿದ್ದೇನೆ. ಅದುಮಿದರೆ ನಿಮ್ಮ ಕೈಯನ್ನು ರಬ್ಬರಿನಂತೆ ಮೇಲಕ್ಕೆತ್ತುತ್ತವೆ. ಅವರ ಕೂದಲಿಗೆ ಬಾಚಣಿಗೆಯಿಲ್ಲ. – (ಸಿಕ್ಕಟ್ಟಿಗೆ, ತಂತಿ, ಮರದ ಸರಳು) ಇವೇ ಅವರ ಬಾಚಣಿಗೆ. ಅವರ ಕೂದಲೇಕೆ ಸುರುಳಿ ಸುರುಳಿಯಾಯಿತು ಎಂಬ ಪ್ರಶ್ನೆಗೆ ಭಾಗಶಃ ಉತ್ತರವು ನಾನು ಮಸ್ಸಾವಾದಲ್ಲಿ ಕೆಲಸಮಾಡುತ್ತಿದ್ದಾಗ ದೊರೆಯಿತು. ಮೇ ತಿಂಗಳಲ್ಲಿ ಶಾಲಾ ಪರೀಕ್ಷೆಯ ಸಂಬಂಧವಾಗಿ ಸ್ಟಾಫ್ ಮೀಟಿಂಗ್ ನಡೆಯುತ್ತಿತ್ತು. ಹಠಾತ್ತನೆ ಕೆಲವರು ಎದ್ದು ಧಢಬಡ ಎಲ್ಲಾ ಕಿಟಕಿ ಬಾಗಿಲುಗಳನ್ನು ಮುಚ್ಚಿದರು. ಏಕೆ ಎಂದು ಕೇಳಿದ್ದಕ್ಕೆ ಸಹೋದ್ಯೋಗಿಯೊಬ್ಬರು

ಖಮ್ಸೀನ್, ಖಮ್ಸೀನ್, ಎಂದು ಕಿರುಚಿದರು. ವಿವರಣೆಯನ್ನು ಕೇಳಿದಾಗ "ಅದು ಬಿಸಿಯಾದ ಬಿರುಗಾಳಿಯ ಸಿಡಿತ ನೀವು ರಕ್ಷಿಸಿಕೊಳ್ಳದಿದ್ದರೆ ನಿಮ್ಮ ಹುಬ್ಬು, ಮೀಸೆ ಎಲ್ಲವೂ ಸುಟ್ಟು ಹೋಗುತ್ತವೆ- ಅರ್ಥಾತ್ ಸುರುಟಿಕೊಳ್ಳುತ್ತವೆ ಎಂಬ ಉತ್ತರ ಬಂತು. ಕೆಂಪು ಸಮುದ್ರ ತೀರದಲ್ಲಿರುವ ಮಸ್ಸಾವಾ ಎಂಬ ಊರು ಪ್ರಪಂಚದ ಅತಿಹೆಚ್ಚು ಶಾಖವುಳ್ಳ ಬಂದರುಗಳಲ್ಲೊಂದು. ಮರುಭೂಮಿಯ ಅಂಚಿನಲ್ಲಿರುವ ಅಂತಹ ಪ್ರದೇಶಗಳಲ್ಲಿ ಬೇಸಗೆಯಲ್ಲಿ ಆಗಾಗ್ಗೆ ಖಮೀನ್-ಬಿಸಿ ಗಾಳಿ ಬೀಸುತ್ತದೆ. ಆಗ ಬಯಲಿನಲ್ಲಿ ಸಿಕ್ಕಿಕೊಂಡವರ ಗತಿ ಏನೆಂದು ನೀವೇ ಯೋಚಿಸಿ ನೋಡಿ. ಆದ್ದರಿಂದಲೇ ಮರುಭೂಮಿಯ ಗಾದೆಯೊಂದು ಹೇಳುತ್ತದೆ "ಹಗಲಲ್ಲಿ ಹೊರಗೆ ತಲೆ ಹಾಕಲು ಒಂದು ನರಿಯೂ ಕೂಡ ಎರಡು ಮೂರು ಸಲ ನೋಡುತ್ತದೆ." ಮರುಭೂಮಿಯ ಮಾತಿರಲಿ, ಮಸ್ಸಾವಾದಲ್ಲಿ ಬೇಸಗೆಯ ಉಷ್ಣಾಂಶವು 50$^0$ C ಗೆ ತಲಪುತ್ತದೆ. ಆಗ ಅನೇಕ ವರ್ತಕರು, ಧನಿಕರು ಊರುಬಿಟ್ಟು ಮೇಲುನಾಡಿಗೆ ಹೋಗುತ್ತಾರೆ. ಮಸಾವದಲ್ಲೇ ಇರಬೇಕಾದವರು, ಗಂಡು ಹೆಣ್ಣಾದಿ ಎಲ್ಲರೂ ತಲೆ ಬೋಳಿಸಿ ಬರ್ಫದ ಚೂರುಗಳನ್ನು ಬಟ್ಟೆಯಲ್ಲಿ ಸುತ್ತಿ ತಲೆಯ ಮೇಲಿಟ್ಟು ಕೊಳ್ಳುತ್ತಾರೆ. ಒಂದು ಮಧ್ಯಾಹ್ನ ಐದು ವರ್ಷದ ನಮ್ಮ ಮಗನಿಗೆ ವಿಪರೀತ ಜ್ವರ ಬಂದಿದೆಯೆಂದು ನನ್ನ ಹೆಂಡತಿ ಹೌಹಾರಿದಳು. ಜ್ವರವೆಷ್ಟಿದೆ ನೋಡೋಣವೆಂದು ಥರ್ಮೊಮೀಟರನ್ನು ಹೊರಕ್ಕೆ ತೆಗೆದರೆ, ಪಾದರಸವು ಮೀಟರಿನ ತುದಿಗೆ ಚಾಚಿ ಕೊಂಡಿತ್ತು. (ಅದರಲ್ಲಿದ್ದುದು ಗರಿಷ್ಠ 46$^0$ C /114$^0$ F) ಹೊರಗಿನ ಉಷ್ಣಾಂಶವೇ 50 ಡಿಗ್ರಿ ಇರುವಾಗ ಜ್ವರವನ್ನು ಅಳೆಯುವುದೆಂತು ಎಂದು ಸಮಾಧಾನ ಹೇಳಿದರೂ ಕೇಳದೆ ಮಗುವನ್ನು ಕರೆದುಕೊಂಡು ವೈದ್ಯರ ಬಳಿಗೆ ಓಡಿದಳು. ನಾನು ಹೇಳಿದ ಮಾತನ್ನೇ ಅವರೂ ಹೇಳಿ, ತಲೆಯ ಮೇಲೆ ಐಸ್ ಚೀಲವನ್ನಿಡಿ ಎಂದು ಹೇಳಿದರು. ಅದೇ ತಿಂಗಳು ಪರೀಕ್ಷೆ ಮುಗಿಸಿ ಅಸ್ಮಾರಕ್ಕೆ ಹಾರಿ ಬಂದೆವು ಅಲ್ಲಿ ಮತ್ತೊಂದು ವಿಸ್ಮಯ ಕಾದಿತ್ತು. ಅಸ್ಮಾರವು ಊಟಿಯಷ್ಟೇ ತಣ್ಣಗಿರುವ ಊರಾದರೂ, ಎಷ್ಟುಸಾರಿ ತಣ್ಣೀರು ಸ್ನಾನ ಮಾಡಿದರೂ ಪುನಃ ಪುನಃ ನನ್ನ ಮೈಶಾಖ ಉಗ್ಗುತ್ತಿತ್ತು. ಏನೆಂದು ಗೊತ್ತಾಗದೇ ಡಾಕ್ಟರನ್ನು ಕೇಳಿದಾಗ ಅವರು ಹೇಳಿದರು "ಮಸ್ಸಾವದ ಶಾಖ ನಿಮ್ಮ ಮೂಳೆಯೊಳಗೆ ಸೇರಿದೆ. ನಿಧಾನವಾಗಿ ಆರಲು ಬಿಡಿ, ತಣ್ಣೀರು ಸ್ನಾನ ನಿಲ್ಲಿಸಿ ಎಂದು. ಮಸ್ಸಾವದಿಂದ ಅಸ್ಮಾರಕ್ಕೆ ವಿಮಾನ ಪ್ರಯಾಣ ಕೇವಲ 15 ನಿಮಿಷ ಬೆಂಕಿಯಿಂದೆದ್ದು ನೀರಿಗೆ ಬಿದ್ದಂತಾಗಿತ್ತು.

**ಅಂತರ್ದೇಶೀ ವಿವಾಹ:**

ಭಾರತೀಯ ಯುವಕರು ಆಫ್ರಿಕದ ಯುವತಿಯರನ್ನು ಮದುವೆಯಾದ ನಿದರ್ಶನಗಳು ವಿರಳವಾಗಿ ಅಲ್ಲಲ್ಲಿ ದೊರೆಯುತ್ತವೆ. ನಾನು ನೋಡಿದ ಕೆಲವು ನಿದರ್ಶನಗಳನ್ನು **ಕೊಡ**ಬಲ್ಲೆ. ಇಥಿಯೋಪಿಯದಲ್ಲಿ ಮನೆಗೆಲಸಕ್ಕಾಗಿ ಹೆಂಗಸರು (ಮದುವೆ ಆದವರು, ಆಗಿಲ್ಲದವರು) ವಿಫುಲವಾಗಿ ದೊರೆಯುತ್ತಾರೆ. ಇದಕ್ಕೆ ಅವರ ಬಡತನವೇ ಏಕೈಕ ಕಾರಣವಲ್ಲ. ಅವರಲ್ಲಿ ಬೇರೂರಿರುವ ಕೆಲವು ಸಾಮಜಿಕ ಪಿಡುಗುಗಳು.

ಆದಿರಲಿ. ಹೊಸದಾಗಿ ಹೋದ ಭಾರತೀಯ ಕುಟುಂಬಗಳೂ, ಬ್ರಹ್ಮಚಾರಿಗಳೂ ಮನೆಗೆಲಸಕ್ಕಾಗಿ ಹುಡುಗಿಯರನ್ನು ನೇಮಿಸಿಕೊಳ್ಳುವುದು ಅಭ್ಯಾಸ. ನನಗೆ ಗೊತ್ತಿರುವ ಬ್ರಹ್ಮಚಾರೀ ಸಹೋದ್ಯೋಗಿಯೊಬ್ಬರು ಮದುವೆ ಆಗಿರದ ಹೆಂಗಸೊಬ್ಬಳನ್ನು ಮನೆಗೆಲಸಕ್ಕಾಗಿ ನೇಮಿಸಿಕೊಂಡರು. ನಿಕಟ ವರ್ತಿಯಾದ ಮೇಲೆ ಆಕೆಯು ಗರ್ಭಿಣಿಯಾದಳು. ಗೊತ್ತಾದ ಕೂಡಲೇ ಅವಳ ಕಡೆಯ ಜನರು ಬಂದು, ಅವಳನ್ನೇ ಮದುವೆಯಾಗಬೇಕೆಂದು ಬಲಾತ್ಕರಿಸಿ ಲಗ್ನ ಮಾಡಿಸಿದರು. ಮಗು ಹುಟ್ಟಿದ ಮೇಲೆ ಅವರು ಸಂಸಾರ ಸಮೇತ ಇಂಗ್ಲೆಂಡಿಗೆ ಹೋದರು. ಅದಕ್ಕಿಂತಲೂ ಹಿಂದೆ, ಕೊಡಗಿನವರೊಬ್ಬರು (ಹೆಸರುಬೇಡ) –ಮೈಸೂರಿನ ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದವರು– ಇಥಿಯೋಪಿಯಕ್ಕೆ ಅಧ್ಯಾಪಕರಾಗಿ ಹೋಗಿದ್ದರು. ಮದುವೆ ಆಗಿರಲಿಲ್ಲ. ಅವರ ಕಥೆಯೂ ಇದೇ ರೀತಿ. ನಾನು ಒಮ್ಮೆ ಸಮ್ಮರ್ ಕೋರ್ಸಿಗೆ ಸಂಪನ್ಮೂಲ ವ್ಯಕ್ತಿಯಾಗಿ ಡಬ್ರೆ–ಬಿರಹಾನ್ ಎಂಬ ಊರಿಗೆ ಹೋಗಿದ್ದಾಗ ಅವರ ಮನೆಗೆ ಹೋಗಿ ಅವರ ಕುಟುಂಬದವರನ್ನು ನೋಡಿ ಬಂದೆ.

ನಮ್ಮ ಗುಜರಾತೀ ವರ್ತಕರು 20ನೇ ಶತಮಾನದ ಪ್ರಾರಂಭದಲ್ಲಿ ಪೂರ್ವ ಆಫ್ರಿಕದ ಅನೇಕ ದೇಶಗಳಿಗೆ ವಲಸೆ ಹೋದದ್ದುಂಟು. ಅವರ ಕುಟುಂಬಗಳು ಅನೇಕ ಊರುಗಳಲ್ಲಿ ನೆಲಸಿದ್ದಾರೆ. ಅವರ ಭಾಷೆಗಳನ್ನು ಕಲಿತಿದ್ದಾರೆ. ನಾಜರೆತ್ ಎಂಬ ಸಣ್ಣ ಊರಿನಲ್ಲಿ ಒಂದು ಗುಜರಾತೀ ಹುಡುಗಿ ಇಥಿಯೋಪಿಯದ ಹುಡುಗನನ್ನು, ಶಾಲೆಯಲ್ಲಿ ಪ್ರೀತಿಸಿ, ತಾನು ಅವನನ್ನೇ ಮದುವೆಯಾಗಬೇಕೆಂದು ಹಟ ಹಿಡಿದಳಂತೆ, ತಂದೆ ತಾಯಿಗಳು ಒಪ್ಪಿ ಮದುವೆ ಮಾಡಿ ಕೊಟ್ಟರು. ಅವಳನ್ನೂ ಅವಳ ಮಗುವನ್ನು ಯಾರೋ ತೋರಿಸಿದರು. ಬಣ್ಣದಲ್ಲಿ ವ್ಯತ್ಯಾಸವಿಲ್ಲದಿದ್ದರೂ ಕೂದಲಿನಲ್ಲಿ ವ್ಯತ್ಯಾಸವಿತ್ತು. ಅಡ್ಡಿಸ್ ಅಬಾಬ ಮತ್ತು ಹತ್ತಿರದ ಊರುಗಳಲ್ಲಿ ನೆಲಸಿದ್ದ ಕೆಲವು ಗುಜರಾತೀ ಕುಟುಂಬಗಳು ಇಥಿಯೋಪಿಯದಲ್ಲಿ ಕ್ರಾಂತಿ ನಡೆಯುತ್ತಿದ್ದಾಗ ಭಾರತಕ್ಕೆ ಬಂದು ಮರು ವಲಸೆಗಾಗಿ ಪ್ರಯತ್ನಿಸಿ ಮನಸ್ಸಾಗದೇ, ಹಿಂತಿರುಗಿ ಹೋಗಿ ಅಲ್ಲೇ ನೆಲಸಿದ್ದಾರೆ. ನಾಜರೆತ್‌ನಲ್ಲಿ ಕೆಲಸ ಮಾಡುತ್ತಿದ್ದ ಉಪಾಧ್ಯಾಯ ಮೂಲಗಳಿಂದ ತಿಳಿದು ಬಂದ ಪ್ರಕಾರ ಗುಜರಾತೀ ಗಂಡು ಮಕ್ಕಳು ಇಥಿಯೋಪಿಯದ ಹುಡುಗಿಯರನ್ನು ಮದುವೆಯಾದ ಅನೇಕ ನಿದರ್ಶನಗಳಿವೆಯಂತೆ. ಇಲ್ಲಿ ಗಮನಾರ್ಹವಾದ ಮುಖ್ಯ ಅಂಶವೆಂದರೆ ಮದುವೆಯಾದವರು ಎದುರಿಸಬೇಕಾದ ಪರಸ್ಪರ ಸಾಮಾಜಿಕ ಹಾಗೂ ವೈಯಕ್ತಿಕ ಸಮಸ್ಯೆಗಳು. ಏಕಪತ್ನಿತ್ವಕ್ಕೆ ರೂಢಿಗತವಾದ ಹಿಂದೂ ಗಂಡಸರಿಗೆ ಆಫ್ರಿಕದ ಒಬ್ಬಳೇ ಹೆಂಡತಿ ಸಮಸ್ಯೆಯಾಗುವುದಿಲ್ಲ. ಆದರೆ ಬಹುಪತ್ನಿತ್ವ ರೂಢಿಯಲ್ಲಿರುವ ಆಫ್ರಿಕದ ಗಂಡನನ್ನು ಏಕಪತ್ನಿತ್ವಕ್ಕೆ ಅಥವಾ ಕುಟುಂಬ ನಿಯಂತ್ರಣಕ್ಕೆ ಪರಿವರ್ತಿಸಲು ಹಿಂದೂ ಹೆಂಗಸು ಹೆಣಗಾಡಬೇಕಾಗುತ್ತದೆ. ಉದಾ: ಮೈಸರಿನ ಹುಡುಗಿಯೊಬ್ಬಳು ನೈಜೀರಿಯದ ಹುಡುಗನನ್ನು ಮದುವೆಯಾಗಿ ಅತಿ ಶೀಘ್ರದಲ್ಲೇ ನಾಲ್ಕು ಮಕ್ಕಳಾದವು. ಅವಳ ಅಣ್ಣಂದಿರು ಅವಳನ್ನು ಕರೆಸಿಕೊಂಡು ಆಪರೇಷನ್ ಮಾಡಿಸಿ ಕಳುಹಿಸಿಕೊಟ್ಟರು.

ಮಿಶ್ರ ಸಂತತಿ ವಿಚಾರದಲ್ಲಿ ಬಿಳಿ+ಬಿಳಿ ಅಥವಾ ಕಪ್ಪು+ಕಪ್ಪು ಮಿಶ್ರಣವಾದಾಗ ಅದು ಸಮಸ್ಯೆಯೇ ಆಗುವುದಿಲ್ಲ. ಆದರೆ ಕಪ್ಪು+ಬಿಳಿ ಬಣ್ಣಗಳು ಮಿಶ್ರಿತವಾದಾಗ ಅದರ ಪರಿಣಾಮವು ದೃಷ್ಟಿ ಗೋಚರವಾಗುತ್ತದೆ. ಭಾರತಕ್ಕೆ ಬಂದ ಬ್ರಿಟಿಷರು ಇಲ್ಲಿನ ಹೆಂಗಸರನ್ನು ಪತ್ನಿಯಾಗಿಯೋ, ಉಪಪತ್ನಿಯಾಗಿಯೋ ಸ್ವೀಕರಿಸಿ ಆಂಗ್ಲೋ-ಇಂಡಿಯನ್ ಎಂಬ ಮಿಶ್ರ ಸಂತತಿಯನ್ನು ಸೃಷ್ಟಿಸಿ ಹೋಗಲಿಲ್ಲವೇ. ಅಂತೆಯೇ ಫ್ರೆಂಚರು ಐವೊರಿ ಕೋಸ್ಟ್‌ನಲ್ಲಿಯೂ, ಇಟಾಲಿಯನ್ನರು ಇಥಿಯೋಪಿಯದಲ್ಲೂ, ಡಚ್ ಮತ್ತು ಬ್ರಿಟಿಷರು ದಕ್ಷಿಣ ಆಫ್ರಿಕಾದಲ್ಲೂ ಮಿಶ್ರಸಂತತಿಗಳನ್ನು ನಿರ್ಮಿಸಿ ಹೋಗಿದ್ದಾರೆ. ಅಂಥವರಿಗೆ ಇಥಿಯೋಪಿಯದಲ್ಲಿ "ಹಾಫ್ ಕಾಸ್ಟ್" ಅಥವಾ "ಕಾಫಿ-ಲಾತ್ತೆ" (ಕಾಫಿ-ಹಾಲು) ಎಂದು ವ್ಯಂಗ್ಯವಾಡುತ್ತಾರೆ. ಅಂತೆಯೇ ವೆಸ್ಟ್ ಇಂಡೀಸ್, ಸೇಷೆಲ್ಸ್, ಮಾರಿಷಸ್, ಫೀಜಿ ಮುಂತಾದ ದ್ವೀಪರಾಷ್ಟ್ರಗಳಿಗೆ 18, 19, ನೇ ಶತಮಾನಗಳಲ್ಲಿ ವಲಸೆ ಹೋದ ಭಾರತೀಯ ಕಾರ್ಮಿಕರು ತಮ್ಮದೇ ಆದ ಮಿಶ್ರ ಸಂತತಿಯನ್ನು ಸೃಷ್ಟಿಸಿರುವುದು ಸಹಜವಾಗಿಯೇ ಇರುತ್ತದೆ. ಅವರ ಸಂತತಿಯವರು ದೂರದಲ್ಲಿ ಸ್ಥಳೀಯರ ಸಂಗಡ ಸಂಪೂರ್ಣವಾಗಿ ಬೆರಸಿಕೊಂಡಿದ್ದರೂ ತಮ್ಮ ಭಾರತೀಯತೆಯ ಗುರುತನ್ನು (ಹೆಸರಿನಲ್ಲಿ) ಮಾತ್ರ ಉಳಿಸಿಕೊಂಡು ಬಂದಿರುವುದು ಒಂದು ಗುಣ ವಿಶೇಷ. ನನ್ನ ಸಂಗಡ ತರಬೇತಿ ಪಡೆದ ಮಿಸ್ಟರ್ ದೂಚಂದ್ (ಧರ್ಮಚಂದ್) ಲಚ್‌ಮನ್ (ಲಕ್ಷಣ್) ಮುಂತಾದವರು ವೆಸ್ಟ್ ಇಂಡೀಸ್‌ನಲ್ಲಿ ಭಾರತೀಯತೆಯ ಗುರುತನ್ನು ಉಳಿಸಿಕೊಂಡಿದ್ದಾರೆ. ಆದರೂ ಹೋದ ಕಡೆ ಹಿಂದೂಗಳು ಹಿಂದೂಗಳಾಗಿಯೇ ಉಳಿದುಕೊಂಡವರಿಲ್ಲ ಎಂದು ನಾನು ಹೇಳಬಯಸುವುದಿಲ್ಲ. ಪೂರ್ವ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ಶತಮಾನಗಳಿಂದ ನೆಲಸಿರುವ ಗುಜರಾತೀ ಕುಟುಂಬಗಳೇ ಸಾಕ್ಷಿ. ಅವರು ತಮ್ಮ ಆಹಾರ, ಉಡುಪು, ಭಾಷೆ, ಸಂಸ್ಕೃತಿ (ಹಬ್ಬ ಹರಿದಿನ) -ಅಂತ್ಯ ಸಂಸ್ಕಾರಗಳನ್ನು ಉಳಿಸಿಕೊಂಡು ಬಾಳುತ್ತಿದ್ದಾರೆ- ಹಜಾಮರು, ಪೂರೋಹಿತರು, ಅಡಿಗೆಯರನ್ನು ಗುಜರಾತಿನಿಂದಲೇ ಕರೆಸಿಕೊಂಡಿದ್ದಾರೆ- ಹಪ್ಪಳ, ಸಂಡಿಗೆ, ಉಪ್ಪಿನಕಾಯಿಗಳು ಗುಜರಾತಿನಿಂದಲೇ ಬರುತ್ತವೆ.

## ಕ್ಯಾನಿಬಾಲಿಸಂ:

"ಅನಾಗರಿಕರು", "ಹಿಂದುಳಿದವರು" ಎಂಬ ಶಬ್ದಗಳು ಸಾಪೇಕ್ಷ ವಾಚ್ಯಗಳು- ಅಂದರೆ ಸಂಬಂಧ ಸೂಚೀ ಪದಗಳೇ ಹೊರತು ನಿರ್ದಿಷ್ಟ ವಾಚ್ಯಗಳಲ್ಲ. ಎಷ್ಟು ಅನಾಗರಿಕರು, ಎಷ್ಟು ಹಿಂದುಳಿದವರು ಎಂಬುದನ್ನು ನಿಖರವಾಗಿ ಹೇಳಬಹುದಾದ ಸೂಚ್ಯಂಕಗಳಿಲ್ಲ. ಇತರರ ಸಂಸ್ಕೃತಿಗೆ ಹೋಲಿಸಿದಾಗ ಅವರು ಅನಾಗರಿಕರಂತೆ ಕಾಣಬಹುದು. ಆದರೆ ಅವರಷ್ಟಕ್ಕೇ ಹೇಳುವುದಾದರೆ ಅವರು ಒಂದು ದೃಷ್ಟಿಯಲ್ಲಿ ನಾಗರಿಕರು ಮತ್ತು ಸುಸಂಸ್ಕೃತರೇ ಆಗಿದ್ದಾರೆ ಎಂಬುದನ್ನು ಒಪ್ಪಬೇಕಾಗುತ್ತದೆ.

ಯಾವುದೇ ಒಂದು ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಅನೇಕ ಸಣ್ಣ ಬುಡಕಟ್ಟು ಅಥವಾ ಸಮುದಾಯಗಳು ತಮ್ಮ ನೈಸರ್ಗಿಕ ಪರಿಸರಕ್ಕೆ ಹೊಂದಿಕೊಂಡಂತೆ ತಮ್ಮ

ತಮ್ಮ ಸಂಸ್ಕೃತಿಗಳನ್ನು ಬೆಳೆಸಿಕೊಂಡಿರುತ್ತವೆ. ಕಾಲಕ್ರಮದಲ್ಲಿ ಪರಸ್ಪರ ಸಂಪರ್ಕ ಅಥವಾ ಅತಿಕ್ರಮಣದಿಂದಾಗಿ ಸಾಂಸ್ಕೃತಿಕ ಐಕ್ಯತೆಯನ್ನು ಕಂಡುಕೊಳ್ಳುತ್ತವೆ. ಅನೇಕ ವಿಷಯಗಳಲ್ಲಿ ಸಾಮ್ಯತೆಗಳಿದ್ದಾಗ್ಯೂ ತಮ್ಮ ತಮ್ಮ ಪ್ರತ್ಯೇಕ ಧಾರ್ಮಿಕ ಆಚರಣೆ, ನಂಬಿಕೆಗಳನ್ನು ಉಳಿಸಿಕೊಂಡು ಬಂದಿರುತ್ತಾರೆ. ಅಂತಿಮವಾಗಿ ಆ ಪ್ರದೇಶದ ಬುಡಕಟ್ಟುಗಳೆಲ್ಲಾ ಒಂದು ನಾಗರಿಕತೆಯ ಚೌಕಟ್ಟಿನೊಳಗೆ ಬರುವುದನ್ನು ನಾವು ಕಾಣಬಹುದು. ಅವರಿಗೊಂದು ಸಂಸ್ಕೃತಿ ಇದೆಯೆಂದು ಒಪ್ಪುವುದಾದರೆ ಅವರು ಅಸಂಸ್ಕೃತರಲ್ಲ. ಇಪ್ಪತ್ತನೆಯ ಶತಮಾನದಲ್ಲಿ ಸ್ವತಂತ್ರ ಪಡೆದನಂತರ ಅನೇಕ ನೀಗ್ರೋ ಬುಡಕಟ್ಟಿನ (ಅವರ ಕ್ಷಮೆಯಾಚಿಸಿ) ನಾಯಕರುಗಳು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮ ಸಂಸ್ಕೃತಿಯನ್ನು "ಕಪ್ಪು ಸಂಸ್ಕೃತಿ" ಎಂದು ಉಲ್ಲೇಖಿಸುವುದಲ್ಲದೆ, ಇತರರಂತೆಯೇ ತಮಗೂ ಒಂದು "ನಾಗರೀಕತೆ" ಇದೆಯೆಂದು ಪ್ರತಿಪಾದಿಸ ಹೊರಟಿದ್ದಾರೆ. ಅದರ ಅಂಗವಾಗಿ ಆಗಾಗ್ಗೆ "ಕಪ್ಪು ಮತ್ತು ಆಫ್ರಿಕದ ಸಂಸ್ಕೃತಿ" ಯ ಉತ್ಸವಗಳನ್ನು ಏರ್ಪಡಿಸಿ ಪ್ರಚಾರ ಕೊಡುತ್ತಿದ್ದಾರೆ. "ಬ್ಲಾಕ್ ಕಲ್ಚರ್" ಮತ್ತು "ಬ್ಲಾಕ್ ಸಿವಿಲಿಸೇಷನ್" ಎಂಬ ಪದಗುಚ್ಛಗಳು ಇತ್ತೀಚೆಗೆ ಅವರ ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ, ಕೇಳಿಬರುತ್ತಿವೆ. ಆಫ್ರಿಕದ ಇತರ ರಾಷ್ಟ್ರಗಳಲ್ಲೂ ಇದರ ಜಾಗೃತಿ ಮೂಡಿಸುವ ಪ್ರಯತ್ನಗಳು ನಡೆಯುತ್ತಿವೆ.

ಶತಮಾನಗಳ ಕಾಲ ಐರೋಪ್ಯ ನಾಗರಿಕರು ಹೊರ ಪ್ರಪಂಚದ ಜನರನ್ನು ಕಂಡಿದ್ದಿಲ್ಲ. ಪ್ರವಾಸ ಕಥನ ಹಾಗೂ ಕಥೆ ಪುಸ್ತಕಗಳೇ ಅವರಿಗೆ ಆಧಾರ. ಸಾಹಸ ಕಥೆಗಳನ್ನು ಓದಬಯಸುತ್ತಿದ್ದ ಜನಸಾಮಾನ್ಯರಿಗೆ ಯೂಲಿಸಿಸ್, ಟಾರ್ಜಾನ್, ರಾಬಿನ್‌ಸನ್ ಕ್ರೂಸೋ, ಅರೇಬಿಯನ್ ನೈಟ್ಸ್ ಇತ್ಯಾದಿ ಕಥೆಗಳು ಬಹಳ ಪ್ರಿಯವಾಗಿದ್ದುವು. ಅವುಗಳಲ್ಲಿ "ಕ್ಯಾನಿಬಾಲ್ಸ್" ಅಂದರೆ ಸಜಾತಿ ಭಕ್ಷಕ ಅರ್ಥಾತ್ ನರಭಕ್ಷಕ ಪ್ರಸಂಗಗಳು ಬರುವುದುಂಟು. ಕಾಲ್ಪನಿಕವಾದ ಇಂತಹ ದೃಷ್ಟಾಂತಗಳು ದುರದೃಷ್ಟವಶಾತ್ ಆಫ್ರಿಕದ ಕಪ್ಪು ಜನರಿಗೆ ಅನ್ವಯವಾದುವು. ಬಿಳಿಯರಲ್ಲದ ಯಾರೇ ಆಗಲಿ, ಅವರು ಅನಾಗರಿಕರು, ಕ್ರೂರಿಗಳು, ಅರಣ್ಯವಾಸಿಗಳೆಂಬ ಭಾವನೆಗಳನ್ನು ಇಂತಹ ಕಥೆಗಳು ಮೂಡಿಸಿದುವು. ಅನಂತರ ಬಂದ ಡೇವಿಡ್ ಲಿವಿಂಗ್ ಸ್ಟನ್, ಸ್ಟಾನ್ಲಿ, ಇಬನ್ ಬತೂತ, ಜೇಮ್ಸ್ ಬ್ರೂಸ್‌ರಂತಹ ಅನ್ವೇಷಕರ ಕಥನಗಳಲ್ಲಿ ನರಭಕ್ಷಣದ ದೃಷ್ಟಾಂತಗಳಿಲ್ಲ. ಕ್ಯಾನಿಬಾಲಿಸಂ ಸಾಮಾನ್ಯವಾಗಿ ದೂರದ ದ್ವೀಪಾಂತರ ವಾಸಿಗಳಲ್ಲಿ ಪ್ರಚಲಿತವಿತ್ತೆಂದು ರಾಬಿನ್ ಸನ್ ಕ್ರೂಸೊ ಕಥೆಗಳಲ್ಲಿ ನಾವು ಓದಿದ್ದೇವೆ. ಆಫ್ರಿಕದ ಒಳನಾಡಿನಲ್ಲಿ ಅದು ರೂಢಿಯಲ್ಲಿತ್ತೆಂಬುದಕ್ಕೆ ದಾಖಲೆಗಳಿಲ್ಲ. ಆದರೆ ಟಾರ್ಜಾನ್ ಕಥೆಗಳಲ್ಲಿ ಒಂಟಿಯಾಗಿ ಸಿಕ್ಕಿದ ಬಿಳಿಯನೊಬ್ಬನನ್ನು ಕೈಕಾಲು ಕಟ್ಟಿ ಹಂಡೆಯೊಳಗೆ ನೀರಿನಲ್ಲಿ ನಿಲ್ಲಿಸಿ, ಅದಕ್ಕೆ ಬೆಂಕಿಹಚ್ಚಿ, ಸುತ್ತಲೂ ಭರ್ಜಿಗಳನ್ನು ಹಿಡಿದು ಕುಣಿಯುತ್ತಿರುವ ಕಪ್ಪು ಜನರ ಚಿತ್ರವನ್ನು ನೀವು ನೋಡಿರಬಹುದಲ್ಲವೇ! ಅವು ವ್ಯಂಗ್ಯಾರ್ಥ ಚಿತ್ರಗಳು, ಕಥೆಗಾಗಿ ಬರೆದದ್ದು.

ಮಂತ್ರವಾದಿಗಳ ಪ್ರಭಾವ ಹೆಚ್ಚಾಗಿದ್ದ ಆ ಕಾಲದಲ್ಲಿ ಅವರ ಆರಾಧ್ಯ ದೇವತೆಗಳಿಗೆ ಪ್ರಾಣಿಬಲಿ ಕೊಡುವ ಪದ್ಧತಿಯಿತ್ತು. ಈಗಲೂ ಅದು ಹೋಗಿಲ್ಲ. ಇಲ್ಲಿ ನೀವು ಗಮನಿಸಬೇಕಾದ ಮುಖ್ಯಾಂಶವೊಂದಿದೆ. ಭಾರತದಲ್ಲಿ ಹಿಂದೂಗಳು ಅವರ ದೇವರುಗಳಿಗೆ ಬಲಿಕೊಟ್ಟ ಮೇಲೆ ಅದರ ಮಾಂಸವನ್ನು ಅಡಿಗೆ ಮಾಡಿ ಭಕ್ತರಿಗೆ ಬಡಿಸುತ್ತಾರೆ. ಆದರೆ ಆಫ್ರಿಕದ ಯಾವುದೇ ಬುಡಕಟ್ಟಿನವರು ದೇವರಿಗೆ ಪ್ರಾಣಿಬಲಿ ಕೊಟ್ಟ ಮೇಲೆ, ಸತ್ತ ಪ್ರಾಣಿಯನ್ನು ಅಲ್ಲೇ ಬಿಟ್ಟು ಬರುತ್ತಾರೆ. ಮನುಷ್ಯರು ತಿನ್ನುವ ಹಾಗಿಲ್ಲ. ಇತರ ಪ್ರಾಣಿ ಪಕ್ಷಿಗಳು ಅದನ್ನು ತಿಂದಿದ್ದರೆ, ದೇವರೇ ತಿಂದನೆಂದು ಅರ್ಥವಂತೆ. ತಿಂದಿರದಿದ್ದರೆ ದೇವರು ಸಂಪ್ರೀತನಾಗಿಲ್ಲವೆಂಬ ಅರ್ಥ. ನೀಲಿ ನೈಲ್‌ನದಿಯ ಉಗಮಸ್ಥಾನದಲ್ಲಿ ನೈಲ್ ದೇವತೆಗೆ ಕೊಟ್ಟ ಕೋಳಿಬಲಿಯನ್ನು ಮರದ ಕೊಂಬೆಗೆ ಕಟ್ಟಿರುವುದನ್ನು ನಾನು ಕಂಡಿದ್ದೇನೆ. ಫೋಟೋ ಸಹ ಇದೆ. ಜಲ ದೇವತೆಗೆ ಕೊಟ್ಟ ಬಲಿಯನ್ನು ಮೊಸಳೆಗೆ ಕೊಟ್ಟು ಬರುವ ಪದ್ಧತಿಯೂ ಉಂಟು. ಕೋಪಗೊಂಡ ಜಲದೇವತೆಗಳು ಮನುಷ್ಯರನ್ನು ಕೊಲ್ಲುತ್ತವೆಂದು "ಜುಜು" ಅಥವಾ "ಬ್ಲಾಕ್ ಮ್ಯಾಜಿಕ್" (ಮೋಡಿ/ಮಾಟ) ಮಾಡುವವರು ಹೇಳುತ್ತಾರೆ. ಬುಡಕಟ್ಟು ಜನಾಂಗಗಳವರು ಅದನ್ನು ನಂಬುತ್ತಾರೆ. ಆಧುನಿಕ ಶಿಕ್ಷಣ ಕ್ರಮವು ಕಾಲಿಟ್ಟ ಮೇಲೆ ಮೂಢನಂಬಿಕೆಗಳು ನಿಧಾನವಾಗಿ ಮರೆಯಾಗುತ್ತಿವೆಯೆಂದು ಹೇಳಬಹುದು.

**ವರ್ಣಬೇಧ:**

ಸಾಮ್ರಾಜ್ಯ ಶಾಹಿಗಳು ತಮ್ಮ ಆಳ್ವಿಕೆಯ ಕಾಲದಲ್ಲಿ ದೇಶೀಯರಾದ ಕಪ್ಪು ಜನರನ್ನು ದೂರವಿಟ್ಟಿದ್ದರು. ಕಪ್ಪು ಜನರು ಬಿಳಿಯರ ಬಡಾವಣೆಗೆ ಬರುವಂತಿಲ್ಲ. ರೈಲು ಬಸ್ಸುಗಳಲ್ಲಿ ಅವರ ಜೊತೆಯಲ್ಲಿ ಕುಳಿತು ಪ್ರಯಾಣಿಸುವ ಹಾಗಿಲ್ಲ. ಬಿಳಿಯರ ಆಸ್ಪತ್ರೆ, ಕ್ಷೌರದ ಅಂಗಡಿ, ಹೊಟೆಲುಗಳಿಗೆ ಬರುವ ಹಾಗಿಲ್ಲ. ಪರ್ಮಿಟ್ ಇಲ್ಲದೆ ಬಿಳಿಯರ ಬೀದಿಯಲ್ಲಿ ಸುಳಿಯುವ ಹಾಗಿಲ್ಲ. ಇವರಿಗಾಗಿ ಪ್ರತ್ಯೇಕ ಕಾನೂನುಗಳನ್ನು ರಚಿಸಿದರು. ಉಲ್ಲಂಘಿಸಿದರೆ ಜೈಲುವಾಸ. ಇಂತಹ ಒಂದು ಆಡಳಿತ ನೀತಿಗೆ "ವರ್ಣಬೇಧ ನೀತಿ" ಎಂದು ಹೆಸರು. ಈ ನೀತಿಯ ಪರಿಣಾಮ ಭಾರತೀಯರ ಮೇಲೂ ಆಗಿತ್ತು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯವರು ಇದನ್ನು ಅನುಭವಿಸಿದ ಕಥೆಯನ್ನು ಕೇಳಿರುತ್ತೀರಿ.

ಆದರೆ ಕರಿಯರು ಭಾರತೀಯರನ್ನು ನೋಡುವ ರೀತಿಯಲ್ಲಿ ದ್ವೇಷಭಾವ ವಿಲ್ಲವೆಂದು ಹೇಳುವ ಹಾಗಿಲ್ಲ. ಒಂದು ವೇಳೆ ಅವರು ಭಾರತೀಯರನ್ನು ದ್ವೇಷಿಸಿದರೆ ಅದು ಆರ್ಥಿಕ ವಿಷಯಕ್ಕೆ ಸಂಬಂಧಿಸಿದ್ದು. ಅವರ ದೇಶಕ್ಕೆ ಬಂದ ಭಾರತೀಯರು ತಮ್ಮ ಸರ್ಕಾರದ ಹಣವನ್ನು ದೋಚಿಕೊಂಡು ಹೋಗಲು ಬಂದಿದ್ದಾರೆಂಬ ತಪ್ಪು ಗ್ರಹಿಕೆಯಿಂದ ಕೆಲವರು ದ್ವೇಷಿಸುತ್ತಾರೆ. ಒಂದೇ ಸಂಸ್ಥೆಯಲ್ಲಿ ಒಂದೇ ವಿಧವಾದ ಉದ್ಯೋಗವನ್ನು ಮಾಡಿಕೊಂಡಿರುವ ಸ್ಥಳೀಯರಿಗೂ, ಪರಕೀಯರಿಗೂ ಸಂಬಳ

ಸಾರಿಗೆಯಲ್ಲಿ ಬಹಳ ವ್ಯತ್ಯಾಸವುಂಟು. ಅದರಿಂದ ಅವರು ಕೋಪಿಸಿಕೊಳ್ಳುವುದು ಸಹಜ.

ಉಗಾಂಡ ಮತ್ತು ದಕ್ಷಿಣ ಆಫ್ರಿಕಗಳಲ್ಲಿ ನೆಲಸಿರುವ ಧನಿಕ ಭಾರತೀಯರು ಅಲ್ಲಿನ ಕಪ್ಪು ಜನರ ಕಡೆಗೆ "ವರ್ಣಬೇಧ ನೀತಿ"ಯನ್ನು ಅನುಸರಿಸುತ್ತಿದ್ದಾರೆಂಬ ಆರೋಪ ಹುಟ್ಟಿತ್ತು. ಅದೇ ಆರೋಪವನ್ನು ಹೊರಿಸಿ ಉಗಾಂಡದ ಮಿಲಿಟರಿ ಅಧ್ಯಕ್ಷ ಐಡಿ-ಅಮಿನಿ ಎಂಬವನು ಅಲ್ಲಿದ್ದ ಭಾರತೀಯರನ್ನೆಲ್ಲಾ ಉಚ್ಚಾಟಿಸಿದನು. ಅಲ್ಲದೆ ಭಾರತೀಯ ಸ್ತ್ರೀಯರು ಉಗಾಂಡೀಯರನ್ನು ಕಡ್ಡಾಯವಾಗಿ ಮದುವೆ ಆಗಬೇಕೆಂಬ ಮಸೂದೆಯನ್ನು ತರುತ್ತಿದ್ದಾನೆಂಬ ವಿಷಯ ತಿಳಿದು, ಸಾವಿರಾರು ಸಂಖ್ಯೆಯಲ್ಲಿ ಭಾರತೀಯರು ಬ್ರಿಟನ್, ಕೆನಡಾ, ಸ್ವಿಟ್ಜರ್ಲೆಂಡ್ ಇತ್ಯಾದಿ ದೇಶಗಳಿಗೆ ವಲಸೆ ಹೋದರು. ಕೆಲವೇ ದಿವಸಗಳಲ್ಲಿ ಉಗಾಂಡದ ವ್ಯಾಪಾರ ವಹಿವಾಟು ಹಾಗೂ ಅರ್ಥವ್ಯವಸ್ಥೆ ಕುಸಿದು ಬಿತ್ತು. ಅನಂತರ ಮುಂದಿನ ಸರ್ಕಾರದವರು ಅವರಿಗೆ ಆಹ್ವಾನ ನೀಡಿದರು. ಎಷ್ಟೋ ಜನ ಬರಲಿಲ್ಲ.

ಉಳಿದಂತೆ ಸಾಮಾನ್ಯ ಮಟ್ಟದಲ್ಲಿ ಸ್ಥಳೀಯ ವರ್ತಕರು, ತರಕಾರೀ ಅಂಗಡಿ, ಹೊಟೆಲು ಮತ್ತು ಕಾಫಿಗೃಹಗಳ ಮಾಲೀಕರು, ಪಾನಗೃಹಗಳ ಮಾಲೀಕರು, ಆಸ್ಪತ್ರೆ, ಮನೆ ಮಾಲೀಕರು, ಹಾಗೂ ಕಛೇರಿಗಳಲ್ಲಿ ನಮ್ಮನ್ನು ಗೌರವದಿಂದಲೇ ಮಾತನಾಡಿಸುತ್ತಾರೆ. ವಿದ್ಯಾರ್ಥಿಗಳು ಭಕ್ತಿ ಗೌರವದಿಂದ ನಡೆದುಕೊಳ್ಳುವುದಲ್ಲದೆ ತುಂಬಾ ಸಹಾಯ ಮಾಡುತ್ತಾರೆ. ಆದರೂ ಕೆಲಸಮಯ ವರ್ಣಪಕ್ಷಪಾತ್ರಗಳು ಕರಿಯರಿಂದಲೇ ಘಟಿಸುವ ಸಂದರ್ಭಗಳುಂಟು. ಇದು ಮುಖ್ಯವಾಗಿ ಇಮಿಗ್ರೇಷನ್ ಕಛೇರಿಗಳು ಹಾಗೂ ಇಲಾಖೆಯ ಮೇಲಧಿಕಾರಿಗಳ ಕಛೇರಿಯಲ್ಲೇ ನಡೆಯುತ್ತದೆ. ಇಮಿಗ್ರೇಷನ್, ಶಿಕ್ಷಣ, ತೆರಿಗೆ ಇಲಾಖೆಯ ಅಧಿಕಾರಗಳು ಬಿಳಿಯರಿಗೆ ಹೆಚ್ಚಿನ ಗೌರವ ಆದರಗಳನ್ನು ತೋರಿಸಿ, ಅದಕ್ಕಾಗಿಯೇ ಕಾದಿರುವ ಭಾರತೀಯರು ಅಥವಾ ಏಷಿಯನರನ್ನು ಕಡೆಗಣಿಸಿದ ಸಂದರ್ಭಗಳುಂಟು. ನಮ್ಮ ಇಲಾಖೆಯ ಮೇಲಧಿಕಾರಿಗಳೇ ವರ್ಣತಾರತಮ್ಯ ತೋರಿಸುವುದನ್ನು ಎರಡು, ಮೂರು ಸಂದರ್ಭಗಳಲ್ಲಿ ನಾನು ಗಮನಿಸಿದ್ದೇನೆ.

**ಉಡುಪು:**

ಐವತ್ತೆರಡು ರಾಷ್ಟ್ರಗಳಿರುವ ಕಡೆ ನೂರಾರು ಮಾದರಿಯ ಉಡುಪುಗಳಿರುವುದು ಆಶ್ಚರ್ಯವಲ್ಲ. ಆಯಾ ವಾಯುಗುಣ, ಸಂಸ್ಕೃತಿಗಳಿಗೆ ಅನುಗುಣವಾಗಿ ಸ್ಥಳೀಯ ಸಮುದಾಯಗಳು ಧರಿಸುವ ಉಡುಪಿನ ಜೊತೆಜೊತೆಗೇ ಆಯಾ ಪ್ರಾಂತ್ಯಗಳನ್ನು ಆಕ್ರಮಿಸಿ ಆಳುತ್ತಿದ್ದ ಐರೋಪ್ಯರ ಉಡುಪುಗಳೂ ಇದ್ದೇ ಇರುತ್ತವೆ. ಆಫ್ರಿಕದವರು ಗಾಢ ವರ್ಣಪ್ರಿಯರು ಎಂಬುದನ್ನು ಅವರ ರಾಷ್ಟ್ರ ಧ್ವಜಗಳು ಹೇಳುತ್ತವೆ. ಅವರ ಉಡಿಗೆಗಳೂ ಸಹ ಅಷ್ಟೇ ವರ್ಣವೈವಿಧ್ಯ, ವಿನ್ಯಾಸ ವೈವಿಧ್ಯಗಳಿಂದ ಕೂಡಿರುತ್ತವೆ. ಅದರ ಬಗ್ಗೆ ತಿಳಿಸಲು ಹತ್ತಾರು ವಾಕ್ಯಗಳಿಗಿಂತ ಒಂದು ಫೋಟೋ ಉತ್ತಮ. ಆದರೆ


ಎಲ್ಲಾ ಉಡುಪುಗಳನ್ನೂ ಫೋಟೋ ಮೂಲಕ ವ್ಯಕ್ತಪಡಿಸಲು ಹೋಗುವುದು ದುಸ್ಸಾಹಸ. ಪ್ರತಿಯೊಂದು ದೇಶದವರೂ ತಮ್ಮ ಜನರ ಪೋಷಾಕು, ಕೇಶವಿನ್ಯಾಸ ಇತ್ಯಾದಿಗಳನ್ನು ಪೋಸ್ಟೇಜು ಸ್ಟಾಂಪ್ ಮಾಧ್ಯಮದಲ್ಲಿ ಪ್ರಕಟಿಸಿರುತ್ತಾರೆ. ಸ್ಟಾಂಪ್ ಸಂಗ್ರಹಕಾರರ ಬಳಿಯಲ್ಲಿ ಅನೇಕ ದೇಶಗಳ ಉಡುಪುಗಳ ಚಿತ್ರವನ್ನು ನೋಡಬಹುದು. ಕೆಲಸಮಯ ಕರೆನ್ಸಿ ನೋಟುಗಳ ಮೇಲೆಯೂ ಇರುವುದುಂಟು. ಆಕ್ಸ್‌ಫರ್ಡ್ ಸ್ಕೂಲು ಅಟ್ಲಾಸಿನಲ್ಲಿ ಪ್ರಪಂಚದ ಎಲ್ಲಾ ದೇಶಗಳ ಧ್ವಜಗಳನ್ನು ಅಚ್ಚು ಹಾಕಿರುತ್ತಾರೆ. ಅದರಲ್ಲಿ ಆಫ್ರಿಕಾ ರಾಷ್ಟ್ರ ಧ್ವಜಗಳ ವರ್ಣ ವಿನ್ಯಾಸಗಳನ್ನು ವೀಕ್ಷಿಸಿ. ಆಸಕ್ತಿ ಉಳ್ಳವರು ಈ ಮಾರ್ಗ ಅನುಸರಿಸುವುದು ಒಳ್ಳೆಯದು. ನೌಕರರು, ಸರ್ಕಾರೀ ಅಧಿಕಾರಿಗಳು, ಬ್ಯಾಂಕ್ ಉದ್ಯಮಿಗಳು ಕೆಲಸದ ವೇಳೆಯಲ್ಲಿ ಐರೋಪ್ಯದಿರಿಸನ್ನೂ ಉಳಿದ ವೇಳೆಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಅವರ ಸ್ಥಳೀಯ (ರಾಷ್ಟ್ರೀಯ) ಉಡುಪನ್ನು ಧರಿಸುವುದು ಸಾಮಾನ್ಯ..

ನೀವು ಯಾವುದೇ ದೇಶದ ಒಳನಾಡಿನಲ್ಲಿ ಸಂಚರಿಸುವಾಗ ನಿಮಗೆ ಇದಿರಾಗುವ ಜನರನ್ನೂ ನೋಡಿದಾಗ, ಇವರು ನಗರವಾಸಿಗರು, ಅವರು ಹಳ್ಳಿಯ ಕಡೆಯಿಂದ ಬಂದವರು ಎಂದು ಕೂಡಲೇ ಪತ್ತೆ ಹಚ್ಚಬಹುದು. ನಗರವಾಸಿಗರಲ್ಲಿ ತತ್ರಾಪಿ ಸ್ತ್ರೀಯರ ಉಡುಪಿನಲ್ಲಿ ಸೊಗಸುಗಾರಿಕೆ ಮತ್ತು ಸೆಂಟಿನ ಸುರಿಮಳೆ ಇರುತ್ತದೆ. ಬೆಲೆ ಬಾಳುವ ಪಾದರಕ್ಷೆಗಳು, ಒಡವೆ, ಕೈಚೀಲಗಳು, ಕಾರುಗಳು ಅವರ ಸಾಮಾಜಿಕ ಅಂತಸ್ತು ಐಶ್ವರ್ಯಗಳನ್ನು ಪ್ರತಿಬಿಂಬಿಸುತ್ತವೆ. ಭಾರತೀಯ ಸ್ತ್ರೀಯರು ಬಣ್ಣದ ರೇಶ್ಮೆ ಸೀರೆಗಳನ್ನುಟ್ಟು ಹಳ್ಳಿಯ ಕಡೆ ಹೋದರಂತೂ, ನಿಮ್ಮ ಸುತ್ತಲೂ ದೊಡ್ಡವರು ಚಿಕ್ಕವರೆನ್ನದೆ ಜಾತ್ರೆಯಂತೆ ಸೇರಿಬಿಡುತ್ತಾರೆ. ನಮ್ಮವರ ಸೀರೆ ಮತ್ತು ಉದ್ದವಾದ ಕೂದಲನ್ನು ಎಷ್ಟು ಹೊತ್ತಾದರೂ ನೋಡುತ್ತಾ ನಿಲ್ಲುತ್ತಾರೆ. ಒಮ್ಮೆ ಒಂದು ಸ್ವಾರಸ್ಯ ಘಟನೆ ನಡೆಯಿತು. ನಾವು, ಕೆಲವು ಸ್ನೇಹಿತರೊಡನೆ ಇರ್ಗಾಲಂ ಎಂಬ ಊರಿನ ಕಡೆಗೆ ಬಸ್ಸಿನಲ್ಲಿ ಪ್ರಯಾಣಿಸುವಾಗ ನಮ್ಮ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಹೆಂಗಸೊಬ್ಬಳು ನನ್ನ ಹೆಂಡತಿಯ ತಲೆಗೂದಲನ್ನು ಹಿಸುಕಿ ನೋಡಿದಳು. ಅವಳು ಏನು ಹೇಳಿದಳೋ ಗೊತ್ತಿಲ್ಲ. ಆ ಸಾಲಿನಲ್ಲಿ ಕುಳಿತಿದ್ದವರೆಲ್ಲರೂ ಇವಳ ತಲೆಗೂದಲನ್ನು ಹಿಸುಗುವುದು, ನೇವರಿಸುವುದಲ್ಲದೆ, ಕೂದಲನ್ನು ಎಳೆದೂ ಕೂಡ ಪರೀಕ್ಷಿಸಿದರು. ಅವರ ಉದ್ದೇಶ ಇದು ನಿಜವಾದ ಕೂದಲೋ ಅಥವಾ ಕೃತಕವಾದದ್ದೋ ಎಂದು ಪರೀಕ್ಷಿಸುವುದೇ ಆಗಿತ್ತು. ಅವರ ಕುತೂಹಲದ ವರ್ತನೆಯನ್ನು ಕಂಡು ನಾವೂ ಸಹ ಆನಂದ ಪಟ್ಟೆವು. ಎರಿಟ್ರಿಯದ ಅಸ್ಮಾರದಲ್ಲಿ ಶಾಲೆಗೆ ಹೋಗುವ ಗಂಡು ಮಕ್ಕಳು ನಮ್ಮ ಹೆಣ್ಣು ಮಕ್ಕಳ ಉದ್ದವಾದ ಜಡೆಯನ್ನು ಹಿಂದಿನಿಂದ ಜಗ್ಗಿಸಿ ಎಳೆಯುತ್ತಿದ್ದರು. ಇದನ್ನು ಕೇಳಿದ ನಮ್ಮ ಮನೆಯೊಡತಿ ಕೆಲವು ಬೈಗುಳನ್ನು ಹೇಳಿಕೊಟ್ಟರು. ನಮ್ಮ ಮಕ್ಕಳು ಶಾಲೆಗೆ ನಡೆದುಕೊಂಡು ಹೋಗುತ್ತಿದ್ದರು. ಕಾರಿನಲ್ಲಿ ಹೋಗುತ್ತಿದ್ದ ಹೆಣ್ಣು ಮಕ್ಕಳಿಗೆ ಇಂತಹ ಉಪದ್ರವ ಇರುತ್ತಿರಲಿಲ್ಲ. ನಾವು ಮಕ್ಕಳಿಗೆ ಸಮಾಧಾನ ಹೇಳಿ, ಬಸ್ಸಿನಲ್ಲಿ ಹೋಗುವಂತೆ ಹೇಳಿದೆವು. ಮನೆಗೆಲಸದ ಹೆಂಗಸರು–ನೀವು ತಲೆಗೆ ಯಾವ ಎಣ್ಣೆ ಹಚ್ಚುತ್ತೀರಿ; ಅದನ್ನು ನಾವೂ

ಹಚ್ಚಿ ನೋಡುತ್ತೇವೆ; ಅದರ ಹೆಸರೇನು ಎಂದು ಕೇಳಿ ಚೀಟಿಯಲ್ಲಿ ಬರೆಸಿಕೊಂಡು ಹೋದದ್ದುಂಟು. ಆದರೂ ಅವರ ತಲೆಗೂದಲು ನೆಟ್ಟಗಾದದ್ದಂತೂ ಇಲ್ಲ. ಒಬ್ಬ ಸಹೋದ್ಯೋಗಿಯಂತೂ ಕುತೂಹಲ ತಡೆಯಲಾರದೆ ಕೇಳಿಯೇ ಬಿಟ್ಟ– ಏನೆಂದರೆ ಇಂಡಿಯಾದಲ್ಲಿ ಚಳಿ ಹೆಚ್ಚಾಗಿದೆಯೇ ಎಂದು. ನಾನು ಇಲ್ಲವೆಂದು ಹೇಳಿದಾಗ, ಹಾಗಾದರೆ ನಿಮ್ಮ ಮೈಮೇಲೆಲ್ಲಾ ಇಷ್ಟು ಉದ್ದವಾದ ಕೂದಲುಗಳಿರಲು ಕಾರಣವೇನು ಎಂದು ಕೇಳಿದ. ಅದು ನಮ್ಮ ಬುಡಕಟ್ಟಿನಲ್ಲಿ (ರೇಸ್) ಇರುವಂತಾದ್ದು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಎಲ್ಲರ ತಲೆ, ತೋಳು, ಕಾಲುಗಳ ಮೇಲೆ ಕೂದಲು ನೇರ ಮತ್ತು ಉದ್ದವಾಗಿರುತ್ತವೆ. ಗುಂಗುರಾಗಿರುವುದಿಲ್ಲ" ಎಂದು ಹೇಳಿದಮೇಲೆ ಸಮಾಧಾನಗೊಂಡ.

ಪಶ್ಚಿಮ ಆಫ್ರಿಕದ ನೈಜೀರಿಯ, ಘಾನಾ, ಐವೊರಿ ಕೋಸ್ಟ್, ಬೆನಿನ್, ಟೋಗೋ ಮುಂತಾದ ಕಡೆಗಳಲ್ಲಿ ಭಾರತೀಯ ಸ್ತ್ರೀಯರ ಉಡುಪನ್ನು ಬಹಳ ಕುತೂಹಲ ದಿಂದೇನೂ ನೋಡುವುದಿಲ್ಲ. ಭಾರತೀಯರೇ ಅವರನ್ನು ಕುತೂಹಲದಿಂದ ನೋಡಬೇಕಷ್ಟೆ ಏಕೆಂದರೆ, ಅಲ್ಲಿನ ಅನೇಕ ನಾಗರಿಕ ಹೆಂಗಸರು ಉಡುವ ಲುಂಗಿಯಂತಹ ಬಟ್ಟೆಯು ದಕ್ಷಿಣ ಭಾರತದ ಕೈ ಮಗ್ಗಗಳಲ್ಲೇ ತಯಾರಿಸಿರುವಂತೆ ಕಾಣುತ್ತವೆ. ಸುಮಾರು ಎರಡು ಮೀಟರ್ ಉದ್ದದ ತುಣಿಯಂತಿರುವ ಸೀರೆಯ ತುಂಡುಗಳು ನಮ್ಮ ಕಾಂಚಿ, ಧರ್ಮಾವರಂ, ಬೆಂಗಳೂರಿನಲ್ಲಿ ತಯಾರಿಸಿದ ಸೀರೆಗಳನ್ನು ತುಂಡು ಮಾಡಿ ಕಳುಹಿಸಿದ್ದಾರೇನೋ ಅನ್ನುವ ಹಾಗಿರುತ್ತವೆ. ಎರಡರಲ್ಲೂ ಅಷ್ಟು ಹತ್ತಿರದ ಸಾಮ್ಯತೆ ಇರುತ್ತದೆ. ವಾಸ್ತವಾಂಶವೆಂದರೆ ಭಾರತ ಮತ್ತು ಮಲೇಶಿಯದಿಂದ ತರಿಸಿಕೊಳ್ಳುವ ಈ ತುಣಿಗಳಿಗೆ ಹಾಗೂ ಕಾಟನ್ ಚೀಟೀ ಬಟ್ಟೆಗಳಿಗೆ 'ಮದರಾಸ್"ಎಂದು ಕರೆಯುತ್ತಾರೆ. ಆದರೆ ಹೆಂಗಸರು ತಲೆಗೆ ಸುತ್ತುವ ಬೆಲೆಬಾಳುವ ಬ್ರಾಕೇಡ್‌ಗಳು ಇಸ್ರೇಲ್, ಸಿಂಗಪೂರ್, ಥಾಯ್‌ಲ್ಯಾಂಡ್‌ಗಳಿಂದ ಬರುತ್ತವೆ. ಐಶ್ವರ್ಯವಂತ ಸ್ತ್ರೀಯರು ಧರಿಸುವ ಬ್ರಾಕೇಡ್ ರವಿಕೆಗಳು ರೆಕ್ಕೆ, ಬೀಸಣಿಗೆಗಳನ್ನು ಹೋಲುವ ಬಣ್ಣದ ಶಿರಸ್ತ್ರಾಣಗಳು, ಬಂಗಾರದ ಕೈಪಟ್ಟಿಗೆಗಳು, ಬಳೆಗಳು ಪ್ರಥಮ ವೀಕ್ಷಕರನ್ನು ಬೆರಗುಗೊಳಿಸುತ್ತವೆ. ಅವರ ಸೆಂಟುಗಳು ಗರ ಬಡಿಸುತ್ತವೆ. ಉತ್ತರದ ಸಹರಾ ಸಮೀಪ ವಾಸಿಸುವ ಗಂಡಸರು ಬಿಳಿಯ ಅರಬ್ಬೀ ನಿಲುವಂಗಿ ಮತ್ತು ಬಿಳಿಯ ರುಮಾಲುಗಳನ್ನು ಧರಿಸಿರುತ್ತಾರೆ. ಘಾನಾದ ಗಂಡಸರು ಪ್ಯಾಂಟ್ ಮತ್ತು ಅರೆ ತೋಳಿನ ಬಿಳಿ ಷರಟಿನ ಮೇಲೆ ಅಗಲವಾದ ಬೆಡ್‌ಷೀಟಿನಂತಹ ರಂಗು ರಂಗಿನ ದುಪ್ಪಟಗಳು ಬಲತೋಳಿನ ಕೆಳಗಡೆಯಿಂದ ಹಾದು ಎಡಭುಜದ ಮೇಲಕ್ಕೆ ಹೋಗಿ, ಬ್ಲಾಂಕೆಟ್ ಹೊದ್ದುಕೊಂಡಂತೆ ಕಾಣುತ್ತವೆ. ಲಂಡನ್ನಿನಲ್ಲಿ ಜರುಗುವ ಕಾಮನ್‌ವೆಲ್ತ್ ಒಕ್ಕೂಟ ಅಥವಾ ಅಡಿಸ್ ಅಬಾಬದಲ್ಲಿ ನಡೆಯುವ ಒ.ಎ.ಯು. (ಆಫ್ರಿಕದ ಒಕ್ಕೂಟ ಸಂಸ್ಥೆ) ಮತ್ತು ಎಕನಾಮಿಕ್ ಕಮಿಷನ್ ಸಮ್ಮೇಳನಗಳಲ್ಲಿ ಆಫ್ರಿಕದ ನಾಯಕ ನಾಯಕಿಯರು ಧರಿಸಿಕೊಂಡು, ಕಾರಿಳಿದು ನಡೆದು ಬರುವ ಠೀವಿಯನ್ನು ನೋಡಿಯೇ ಆನಂದಿಸಬೇಕು. ಇದೇನು ಸಮ್ಮೇಳನವೋ

ಅಥವಾ ವಸ್ತ್ರಾಲಂಕಾರ ಸ್ಪರ್ಧೆಯೋ ಎಂಬಂತೆ, ರಸಿಕನ ಕಣ್ಣಿಗೆ ಒಂದು ರಸದೌತಣವನ್ನೇ ಒದಗಿಸುತ್ತವೆ. ಇದುವರೆಗೆ ನಾನು ಹೇಳಿದ್ದೆಲ್ಲಾ ಐಶ್ವರ್ಯವಂತರ ಧೀಕು ದಿಮಾಕು. ಹೊರಗೆ ಕಾಣಿಸಿಕೊಳ್ಳುವ ವೈಭವದ ಪಕ್ಷಿ ನೋಟ, ನಾಡಿನ ಒಳಹೊಕ್ಕು ನೋಡಿದರೆ ಕಾಣುವ ದೃಶ್ಯಗಳೇ ಬೇರೆ.



ಅ
ಧ್ಯಾ
ಯ
2

# ತಳಹದಿಗಳು

## ಭೂಗೋಳಿಕ ತಳಹದಿ:

ಆಫ್ರಿಕದ ಭೂಗೋಳಿಕ ಮೂಲ ಮಾಹಿತಿಗಳನ್ನು ಶಾಲಾ ಪಠ್ಯಪುಸ್ತಕ ಮತ್ತು ಅಟ್ಲಾಸ್ ಪುಸ್ತಕದಿಂದ ಸಂಗ್ರಹಿಸಬಹುದು. ಆದರೂ ಕೆಲವಂಶಗಳನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಆಫ್ರಿಕವು ನಮ್ಮ ಭೂಗ್ರಹದ ಮೇಲಿನ ಅತಿ ದೊಡ್ಡ ಖಂಡಗಳಲ್ಲೊಂದು. ಇಷ್ಟು ವಿಶಾಲ ಭೂಭಾಗದಲ್ಲಿ ಸುಮಾರು ಅರ್ಧದಷ್ಟು ಪ್ರದೇಶವನ್ನು ಸಹರಾ ಮರುಭೂಮಿ ಆವರಿಸಿಕೊಂಡಿದೆ. ಇದು ಖಂಡವನ್ನು ನೈಸರ್ಗಿಕವಾಗಿ ಎರಡು ಭಾಗ ಮಾಡುತ್ತದೆ-(ಅ) ಸಹರಾ ಮರುಭೂಮಿಯಿಂದ ಕೂಡಿದ ಉತ್ತರ ಆಫ್ರಿಕ, (ಆ) ಅರಣ್ಯ ಮತ್ತು ಹುಲ್ಲುಗಾವಲಿನಿಂದ ಕೂಡಿದ ದಕ್ಷಿಣ ಭಾಗ. ಹೊರಗಡೆಯವರಿಗೆ ಮುಖ್ಯವಾಗಿ ಐರೋಪ್ಯರಿಗೆ ಭೇದಿಸಲಾಗದ ತಡೆಯನ್ನೊಡ್ಡಿತ್ತು ಈ ಮರುಭೂಮಿ. ಅವರ ಪಾಲಿಗೆ ಆಫ್ರಿಕವು "ಕತ್ತಲೆಯ ಖಂಡ"ವೇ ಆಗಿತ್ತು. ಈಗ ಆ ಭಾವನೆ ಹೋಗಿದೆ. ಸಹರಾ ಮರುಭೂಮಿಯ ರಾಷ್ಟ್ರಗಳಲ್ಲಿ ಹೆಚ್ಚಿನ ನಿವಾಸಿಗಳು ಅರಬ್ ಮೂಲದವರು.

ಸಹರಾದಿಂದ ದಕ್ಷಿಣಕ್ಕಿರುವ ಆಫ್ರಿಕವನ್ನೇ ಅರಬ್ ಪ್ರವಾಸಿಗಳು "ಬಿಲಾದ್-ಅಸ್-ಸುದಾನ್" (ಕಪ್ಪು ಜನರ ಭೂಭಾಗ) ಎಂದು ಕರೆಯುತ್ತಿದ್ದುದು.[1] ಈ ನಾಮಾಂಕಿತವು ಸಹರಾದಿಂದ ದಕ್ಷಿಣಕ್ಕೆ ಗುಡ್-ಹೋಪ್ ಭೂಶಿರದವರೆಗೂ ಚಾಚಿರುವ ಎಲ್ಲಾ ಭೂಭಾಗಗಳನ್ನು ಒಳಗೊಳ್ಳುತ್ತದೆ. ಇದನ್ನೇ "ಕಪ್ಪು ಆಫ್ರಿಕ"ವೆಂದು ನಾವು ಆಗಾಗ್ಗೆ ಸಂಬೋಧಿಸುವುದು. ಅವರ ಸಂಸ್ಕೃತಿಯನ್ನು 'ಕಪ್ಪು ಸಂಸ್ಕೃತಿ" ಎನ್ನುತ್ತೇವೆ.

## ಆಫ್ರಿಕದ ಬುಡಕಟ್ಟುಗಳು:

ಆಫ್ರಿಕದ ಮೂಲವಾಸಿಗಳಲ್ಲಿ ಅನೇಕ ಸಂಕುಲ ಅಥವಾ ಬುಡಕಟ್ಟುಗಳಿವೆ. ಅವುಗಳಲ್ಲಿ ನೀಗ್ರೋ ಬುಡಕಟ್ಟು ಅತಿದೊಡ್ಡದು. ನೀಗ್ರೋ ಬುಡಕಟ್ಟಿನಲ್ಲಿ ಎರಡು

---

1. ಜೊಫ್ರಿ ಪ್ಯಾರಿಂಡರ್- ಆಫ್ರಿಕನ್ ಮೈಥಾಲಜಿ- ದಿಹ್ಯಾಮ್ಲಿನ್ ಪಬ್ಲಿಷಿಂಗ್ ಗ್ರೂಪ್ (ಲಿ) ಲಂಡನ್-1975.

ಬಣಗಳನ್ನು ಗುರ್ತಿಸಬಹುದು; (ಅ) ಸೂಡಾನಿನಿಂದ ಪಶ್ಚಿಮದ ಸೆನೆಗಾಲ್‌ವರೆಗೂ ವ್ಯಾಪಿಸಿರುವ 'ಸೂಡಾನ್ ನೀಗ್ರೋ' ಬಣ (ಆ) ಉಗಾಂಡದಿಂದ ದಕ್ಷಿಣದ ತುದಿಯವರೆಗೂ ಹರಡಿರುವ ಬಾಂಟು ನೀಗ್ರೋ ಬಣ (ನೀಗ್ರೋ ಎಂಬ ಪದವನ್ನು ಈಗ ಅನೇಕ ಕಡೆ ನಿಷೇಧಿಸಲಾಗಿದೆ)

ಮನುಕುಲದಲ್ಲೇ ಅತ್ಯಂತ ಹಳಬರಾದ ಈ ನೀಗ್ರೋ ಜನಾಂಗ ಕಪ್ಪು ಚರ್ಮದವರಾಗಿದ್ದು, ತಲೆಗೂದಲು ಸುರುಳಿ, ಮತ್ತು ಮೂಗಿನ ಹೊಳ್ಳೆಗಳು ಅಗಲವಾಗಿಯೂ ಉಳ್ಳವರಾಗಿರುತ್ತಾರೆ. ಒಂದು ಸಾವಿರಕ್ಕೂ ಮಿಕ್ಕಿರುವ ಅವರ ಆಡು-ಭಾಷೆಗಳಿಗೆ ಲಿಪಿಯಿಲ್ಲ. ನೀಗ್ರೋ ಜನರು ದಷ್ಟಪುಷ್ಟರಾಗಿ ಸರಿಸುಮಾರು $5^{1/2}$ ಅಡಿ ಎತ್ತರವಿದ್ದರೂ, ಕೆಲವು ಪಶುಪಾಲಕ ಪಂಗಡದವರು ಆರರಿಂದ ಆರೂವರೆ ಅಡಿ ಎತ್ತರವಾಗಿರುತ್ತಾರೆ.

ಇವರಲ್ಲದೆ ಬುಷ್‌ಮೆನ್ ಮತ್ತು ಹೊಟೆಂಟಾಟ್ ಪಂಗಡಗಳಿಗೆ ಸೇರಿದ ಸಣ್ಣ ಪುಟ್ಟ ಬಣಗಳವರೂ ನೀಗ್ರೋ ಸಂಕುಲಕ್ಕೆ ಸೇರಿದವರು. ಇವು ಭಾಷೆಯ ಆಧಾರದ ಮೇಲೆ ಮಾಡಿದ ವಿಭಜನೆಗಳು. ಹಳದಿ ಮಿಶ್ರಿತ ಕಂದು ಬಣ್ಣವುಳ್ಳ ಬುಷ್‌ಮೆನ್ ಹಾಗೂ ಹೊಟೆಂಟಾಟ್ ಜನರು ಸಹಸ್ರಮಾನಗಳ ಹಿಂದೆ ಬೇಟೆಯಾಡುತ್ತಾ ದಕ್ಷಿಣ ದಿಕ್ಕಿಗೆ ಹೊರಟು, ಗುಹೆಯೊಳಗೆ ಕಲ್ಲು ಬಂಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿ ಮುಂದೆ ಹೋಗುತ್ತಾ ಐರೋಪ್ಯರು ಬರುವ ವೇಳೆಗೆ ಕೇಪ್ ಪ್ರಾಂತ್ಯದಲ್ಲಿ ನೆಲೆಗೊಂಡಿದ್ದರು. ಇವರ ಸಂಖ್ಯೆ ಬಹಳ ಕಡಿಮೆ. ಕೆಲವು ಬುಷ್ ಮೆನ್ ಪಂಗಡದವರು ಕಲಹರಿ ಮತ್ತು ನಾಮಿಬಿಯದಲ್ಲಿ ಈಗಲೂ ಬೇಟೆ-ಶೇಖರಣಾ ವೃತ್ತಿಯನ್ನು ಅನುಸರಿಸಿಕೊಂಡಿದ್ದಾರೆ. ಕಾಂಗೋ ಕಾಡುಗಳ ಪೂರ್ವಭಾಗದಲ್ಲಿ ವಾಸಿಸುವ "ಪಿಗ್ಮಿ" ಜನರು ನೆಗ್ರಿಟೋ ಬುಡಕಟ್ಟಿಗೆ ಸೇರಿದವರು. ಸುಮಾರು ನಾಲ್ಕು ಅಡಿ ಎತ್ತರ, ದಪ್ಪ ತಲೆ ಮತ್ತು ಅಗಲ ಮೂಗುಗಳುಳ್ಳ ಪಿಗ್ಮಿಗಳು ನೀಗ್ರೋ ಜನರಿಂದ ಬೇರೆಯಾದ ಮತ್ತು ಅವರಿಗಿಂತಲೂ ಮೊದಲು ಇಲ್ಲಿದ್ದ ಬಣಗಳೆಂದು ತಜ್ಞರು ಹೇಳುತ್ತಾರೆ. ಇವರ ಭಾಷೆ ಮತ್ತು ಸಮಾಜ ಸಂಘಟನೆಗಳು ಹೆಚ್ಚಾಗಿ ತಿಳಿದಿಲ್ಲ. ಏಕೆಂದರೆ ಅವರು ಯಾವಾಗಲೂ ಮರೆಯಾಗಿರಬಯಸುತ್ತಾರೆ. ಆಗಾಗ್ಗೆ ಬಾಂಟು ಜನರೊಡನೆ ವ್ಯಾಪಾರ ಸಂಪರ್ಕ ಮಾಡುತ್ತಾರೆ.

ಮಿಶ್ರ ಕುಲಕ್ಕೆ ಸೇರಿದ ಅನೇಕ ಪಂಗಡಗಳು ಆಫ್ರಿಕದಲ್ಲಿವೆ. ನೀಗ್ರೋ ರಕ್ತವನ್ನು ಬೆರಸಿಕೊಂಡ ಕಾಕೇಷಿಯನ್ ಮೂಲದ ಜನರಿಗೆ "ಹೆಮೈಟ್" ಜನರೆಂದು ಹೇಳುತ್ತಾರೆ. ತೆಳು ಬಣ್ಣದಿಂದ ಕೂಡಿ ತೆಳ್ಳಗೆ ಉದ್ದವಾಗಿರುವ ಇವರು ನೈಲ್ ಬಯಲು, ಸೂಡಾನ್ ಮತ್ತು ಪಶ್ಚಿಮ ಆಫ್ರಿಕದ ಕೆಲವು ಭಾಗಗಳಲ್ಲಿ ಕಾಣಸಿಗುತ್ತಾರೆ. ಉತ್ತರ ನೈಜೀರಿಯದ ಫುಲಾನೀ ಪಂಗಡದವರು ಈ ಬುಡಕಟ್ಟಿಗೆ ಸೇರಿದವರೆಂದು ಹೇಳುತ್ತಾರೆ. ಅರಬ್ಬೀ ರಕ್ತವು ನೀಗ್ರೋ ರಕ್ತಕ್ಕೆ ಬೆರಸಿಕೊಂಡ ಮಿಶ್ರಕುಲಕ್ಕೆ "ಸೆಮೈಟ್" ಪಂಗಡವೆಂದು ಹೆಸರು. ಇವರನ್ನು ಜಿಬೂತಿ, ಸೋಮಾಲಿಯ, ಎರಿಟ್ರಿಯ, ಇಥಿಯೋಪಿಯಗಳಲ್ಲಿ

ಕಾಣಬಹುದು. ದಕ್ಷಿಣ ಆಫ್ರಿಕದಲ್ಲಿ ಯುರೋಪಿನ ಡಚ್ ಸಂತತಿಗೆ ಸೇರಿದ ಲಕ್ಷಾಂತರ ಬಿಳಿಯ ಕುಲ ಸಂಜಾತರು ನೆಲಸಿದ್ದಾರೆ. ಕುಲ ಸಂಕರಗಳಿಂದ ಉದ್ಭವಿಸಿದ ಬಣ್ಣಾಂತರ ಜನರೂ, ಭಾರತೀಯ ಮೂಲದ ಹಿಂದೂ ಮುಸ್ಲಿಂ ಸಂತತಿಯವರು ದಕ್ಷಿಣ ಆಫ್ರಿಕದಲ್ಲಿದ್ದಾರೆ. ಮಡಗಾಸ್ಕರ್ ದ್ವೀಪ ನಿವಾಸಿಗಳು ಮುಖ್ಯವಾಗಿ ಮಲೇಷಿಯಾ ಮೂಲದವರು. ಆದರೆ ನೀಗ್ರೋ ಮತ್ತು ಭಾರತ ಮೂಲದವರೂ ಇದ್ದಾರೆ, ಅವರಾಡುವ ಭಾಷೆಗಳೂ ಅಷ್ಟೇ ಅಗಣಿತ. ಅವುಗಳಲ್ಲಿ ಮುಖ್ಯವಾದವು ಮಲೇಷಿಯನ್, ಪಾಲಿನೇಷಿಯನ್, ಭಾರತೀಯ, ಅರಬ್ಬೀ, ಬಾಂಟು, ಮತ್ತು ಸ್ವಾಹಿಲಿ ಮುಖ್ಯವಾದವು.[2]

ಒಟ್ಟಿನಲ್ಲಿ ಮೂರು ಸಾವಿರಕ್ಕೂ ಹೆಚ್ಚು ಉಪಪಂಗಡಗಳಿಂದ ಕೂಡಿದ ಕಪ್ಪು ಕುಲದ ಜನರು ವಸತಿ ಸಾಂದ್ರತೆಯ ದೃಷ್ಟಿಯಿಂದ ಕೆಲವು ವಿಶಿಷ್ಟ ಭಾಗಗಳಲ್ಲಿ ಮಾತ್ರ ಕೇಂದ್ರೀಕೃತರಾಗಿದ್ದಾರೆ. ಅವು ಯಾವುವೆಂದರೆ

1) ಗಿನಿ ಕಡಲ ತೀರದುದ್ದಕ್ಕೂ ವ್ಯಾಪಕವಾಗಿ ಹಬ್ಬಿರುವ "ಬುಷ್ ವುಡ್‌ಲ್ಯಾಂಡ್" ಅಥವಾ "ಗಿನಿ ಸವನ್ನಾ" ಎಂಬ ಹುಲ್ಲುಗಾಡು ಪ್ರದೇಶ

2) ನೈಲ್ ನದೀ ಬಯಲು–ಸುಡಾನ್ ಮತ್ತು ಈಜಿಪ್ಟಿನಲ್ಲಿರುವ ನೈಲ್ ನದಿಯ ಇಕ್ಕೆಲ ಪ್ರದೇಶಗಳು

ಇನ್ನುಳಿದ ವಿಶಾಲವಾದ ಸವನ್ನಾ ಎಂಬ ಒಣ ಹುಲ್ಲುಗಾವಲು ಮತ್ತು ಮರುಭೂಮಿ ಪ್ರದೇಶಗಳಲ್ಲಿ ತೆಳುವಾಗಿ ಹರಡಿಕೊಂಡಿದ್ದಾರೆ.

ಭೌಗೋಳಿಕ ದೃಷ್ಟಿಯಿಂದ ಮಾನವನ ವಾಸ್ತವ್ಯಕ್ಕೂ ಪ್ರಕೃತಿ ಪರಿಸರಕ್ಕೂ ನಡುವೆ ನಿಕಟವಾದ ಸಂಬಂಧವಿರುವುದನ್ನು ಕಾಣಬಹುದು. ಭೂಮಧ್ಯ ರೇಖೆಯ ಎರಡೂ ಕಡೆಗಳಲ್ಲಿ ಅಂದರೆ ಕಾಂಗೋ ನದಿಯ ಜಲಾನಯನ ಪ್ರದೇಶದಲ್ಲಿ ವರ್ಷವೆಲ್ಲಾ ಮಳೆ ಬೀಳುವುದರಿಂದ ಭಯಂಕರವಾದ ವರ್ಷಾರಣ್ಯಗಳಿಂದ ಆವರಿಸಲ್ಪಟ್ಟಿದೆ. ಸೂರ್ಯರಶ್ಮಿಯು ನೆಲದ ಮೇಲೆ ಬೀಳದಂತಹ ಈ ಕಾಡುಗಳು ಜಲಮಯವೂ, ಅನಾರೋಗ್ಯಕರವೂ ಆಗಿರುವುದರಿಂದ ಇಲ್ಲಿ ಜನವಸತಿ ಅತಿ ವಿರಳ. ಜನ ಜೀವನವಂತೂ ಅತೀವ ಕಷ್ಟ ಕಾರ್ಪಣ್ಯಗಳಿಂದ ಕೂಡಿದೆ.

ಈ ವರ್ಷಾರಣ್ಯದ ಮೂರೂ ಪಾರ್ಶ್ವಗಳಲ್ಲಿ ಒತ್ತಾಗಿ ಬೆಳೆದಂತಹ ಹುಲ್ಲಿನ ಕಾಡೊಂದು ಆವರಿಸಿಡೊಂಡಿದೆ. ಎತ್ತರವಾದ ಆನೆಹುಲ್ಲು ಮತ್ತು ದಪ್ಪನಾದ ಮರಗಳಿಂದ ಕೂಡಿದ ಈ ಕಾಡಿಗೆ "ಬುಷ್ ವುಡ್ ಲ್ಯಾಂಡ್" ಅಥವಾ "ಗಿನಿಸವನ್ನಾ" ಎಂದು ಹೆಸರು ಸೆನೆಗಾಲಿನಿಂದ ಪೂರ್ವಾಭಿಮುಖವಾಗಿ ಉಗಾಂಡದವರೆಗೂ ಹಬ್ಬಿರುವ ಈ ಹುಲ್ಲುಗ್ಗಾಡಿನ ಪ್ರದೇಶವೇ ನೀಗ್ರೊ ಜನರ ಆವಾಸಸ್ಥಾನ. ಈ ಕಾಡಿನ ಹೃದಯಭಾಗವಾದ ನೈಜರ್ ನದಿಯ ಕಣಿವೆಯನ್ನೂ ನೀಗ್ರೋ ಬುಡಕಟ್ಟಿನ ತೌರೂರು ಎಂದು ಹೇಳಬಹುದು.

---

2. ಜೊಫ್ರಿ ಪ್ಯಾರಿಂಡರ್– ಆಫ್ರಿಕನ್ ಮೈಥಾಲಜಿ–ಲಂಡನ್ 1975.

ಇಫೆ, ಬೆನಿನ್, ಯೊರುಬ, ಈಬೊ, ಬಾಂಗ್ವ ಜನರ ನಾಡೇ ಈ ಪ್ರದೇಶ. ನಿಜಕ್ಕೂ ನೀಗ್ರೊ ಎಂಬ ಶಬ್ದದ ವ್ಯುತ್ಪನ್ನವು- ನೈಜರ್, ನಿಜರ್, ನಿಗರ್, ನೀಗ್ರೊ- ಇದನ್ನು ಸಮರ್ಥಿಸುತ್ತದೆ. ಫಲವತ್ತಾದ ಈ ಪ್ರದೇಶವೇ ಕಪ್ಪು ಆಫ್ರಿಕದ ಧರ್ಮ ಸಂಸ್ಕೃತಿಗಳ ಉಗಮಸ್ಥಾನ. ಕಪ್ಪು ನಾಗರಿಕತೆಯೊಂದು ಜನಿಸಿ ಪ್ರಸರಣಗೊಂಡ ತೊಟ್ಟಿಲು ಪ್ರದೇಶ.

ಇಲ್ಲಿಂದ ಉತ್ತರಕ್ಕೆ ಹೋದಂತೆಲ್ಲಾ ಮಳೆಯ ಪ್ರಮಾಣವನ್ನವಲಂಬಿಸಿ ಒಣ ಸೂಡಾನ್ ಸವನ್ನಾ ಹಾಗೂ ಒಣ ಸಾಹೆಲ್ ಸವನ್ನಾ ಹುಲ್ಲುಗಾವಲುಗಳಿವೆ. ಮಳೆ ಕಡಿಮೆಯಾದಂತೆಲ್ಲಾ ಸಾಹೆಲ್ ಪ್ರದೇಶವು ಕ್ರಮೇಣ ಸಹರಾ ಮರುಭೂಮಿಯೊಂದಿಗೆ ಐಕ್ಯವಾಗುತ್ತದೆ. ಅದೇ ಪ್ರಕಾರ ಜನವಸತಿಯೂ ತೆಳುವಾಗುತ್ತಾ ಹೋಗುತ್ತದೆ. ನೈಲ್ ನದಿಯ "ಮೇಲಿನ ಪಾತ್ರ" ಅಂದರೆ ಅದರ ಪ್ರಾರಂಭಿಕ ಪಾತ್ರವು ಜೌಗು ಮತ್ತು ಕಾಡುಗಳಿಂದ ಕೂಡಿದ ಅನಾರೋಗ್ಯ ಪ್ರದೇಶವಾಗಿದೆ. ಮುಂದೆ ಮರುಭೂಮಿಯ ನಡುವೆ ಹರಿಯುವಾಗ, ಜನವಸತಿ ಹೆಚ್ಚುತ್ತಾ ಹೋಗಿ ನೂಬಿಯ ಮತ್ತು ಈಜಿಪ್ಟ್‌ಗಳಲ್ಲಿ ಎರಡು ನಾಗರಿಕತೆಗಳಿಗೆ ಜನ್ಮ ನೀಡಿದೆ.

## ಅಧ್ಯಯನಕ್ಕೆ ಆಧಾರಗಳು:

ಇತಿಹಾಸ ಮತ್ತು ನಾಗರಿಕತೆಗಳ ಅಧ್ಯಯನಕ್ಕೆ ಮೂಲಾಧಾರಗಳಲ್ಲಿ ಒಂದಾದ ಲಿಖಿತ ಸಾಹಿತ್ಯ ಅಥವಾ ಪುರಾತನ ಗ್ರಂಥಗಳು ಕಪ್ಪು ಆಫ್ರಿಕದಲ್ಲಿ ಎಲ್ಲಿಯೂ ಲಭ್ಯವಿಲ್ಲ. ಇಲ್ಲಿ ದೊರೆಯುವ ಏಕೈಕ ಲಿಖಿತ ಆಧಾರವೆಂದರೆ ಶೀಬಾರಾಣಿ ಮತ್ತು ಸಾಲೊಮನ್ ರಾಜನ ಭೇಟಿಯ ಬಗ್ಗೆ ದೊರೆಯುವ ಬೈಬಲಿನ ಹಳೆಯ ಒಡಂಬಡಿಕೆ ಹಾಗೂ ಕೊರಾನಿನಲ್ಲಿ ಲಭ್ಯವಿರುವ ಉಲ್ಲೇಖಗಳು ಮಾತ್ರ. ಇತರ ಆಧಾರಗಳಾದ ಶಿಲಾಶಾಸನಗಳು, ಕಲ್ಲು ಕಂಬಗಳು, ವಿಗ್ರಹಗಳು, ದೇವಾಲಯದ ಅವಶೇಷಗಳು ದೊರೆಯುವುದು ಆಗ್ಸುಮ್ ಸಾಮ್ರಾಜ್ಯದ ಹೊರತಾಗಿ ಕಪ್ಪು ಆಫ್ರಿಕದ ಮತ್ತೆಲ್ಲೂ ಕಾಣಸಿಗುತ್ತಿಲ್ಲ. ಜಿಂಬಾಬ್ವೆಯಲ್ಲಿ ಪಾಳುಬಿದ್ದ ಕಲ್ಲು ಕೋಟೆ ವಿನಹ ಶಾಸನ, ವಿಗ್ರಹ ಅರಮನೆಗಳಿಲ್ಲ. ಅಥವಾ ಅದಕ್ಕಾಗಿ ಪ್ರಾಚ್ಯ ಸಂಶೋಧನೆಗಳೂ ನಡೆದಿಲ್ಲ.

### 1) ಸಾಹಿತ್ಯ ಪರಂಪರೆ- ಮೌಖಿಕ ಸಾಹಿತ್ಯ:

ಆಫ್ರಿಕದ ಅರಣ್ಯ ಮತ್ತು ಹುಲ್ಲುಗಾವಲು ಪ್ರದೇಶಗಳಲ್ಲಿ ನೆಲಸಿದ್ದ ಕಪ್ಪು ಜನರಿಗೆ ಬಹಳ ಕಾಲ ಓದು ಬರಹಗಳು ತಿಳಿದಿರಲಿಲ್ಲ. ವಿಶಾಲ ಸಾಗರ, ಭಯಂಕರ ಮರುಭೂಮಿ, ಹಾಗೂ ದಟ್ಟಾರಣ್ಯಗಳಿಂದ ಸುತ್ತುವರಿಯಲ್ಪಟ್ಟು ಅಲ್ಲಿನ ಜನರು ಭೌಗೋಳಿಕ ಪ್ರತ್ಯೇಕತೆಗೆ ಒಳಗಾಗಿದ್ದರು. ನೈಸರ್ಗಿಕ ಅಡೆತಡೆ ಮತ್ತು ಹೊರಸಂಪರ್ಕದ ಕೊರತೆಯ ಕಾರಣ ಬರವಣಿಗೆಯ ಕಲೆ ಹುಟ್ಟಿ ಬೆಳೆಯಲಿಲ್ಲ. ಹನ್ನೊಂದನೇ ಶತಮಾನದಿಂದೀಚೆಗೆ ಮುಸ್ಲಿಂ ಮತ ಪ್ರಚಾರಕರು ನೈಲ್ ನದಿಯ ಮಾರ್ಗ ದಕ್ಷಿಣ ಸೂಡಾನ್‌ವರೆಗೂ ಮತಾಂತರಿಗಳಿಗೆ ಓದುಬರಹಗಳನ್ನು ಒಯ್ದರು. ಅದೇ ಪ್ರಕಾರ ಮೊರಾಕ್ಕೋದಿಂದ ಮಾಲಿ ಹಾಗೂ ಸೆನೆಗಾಲ್ ಪ್ರದೇಶಗಳಿಗೂ ಸಹ ಓದು ಬರಹಗಳನ್ನು ಒಯ್ದರು. ಆದರೆ ಅರಣ್ಯ

ಮತ್ತು ಹುಲ್ಲುಗಾವಲು ಪ್ರದೇಶಗಳಿಗೆ ಮಾತ್ರ ಹದಿನೆಂಟನೇ ಶತಮಾನದವರೆಗೂ ಓದು ಬರಹ ಪ್ರವೇಶಿಸಲಿಲ್ಲ[3]. ಅವರು ಅನಕ್ಷರಸ್ಥರಾಗಿದ್ದರೂ ತಮ್ಮ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ಮುಖತಃ ತಿಳಿಯಪಡಿಸುತ್ತಿದ್ದರು. ಸಂಮೃದ್ಧವಾದ ಈ ಸಾಹಿತ್ಯವನ್ನು ಮೌಖಿಕ ಸಾಹಿತ್ಯ ಅಥವಾ ಆಡುಮಾತಿನ ಸಾಹಿತ್ಯವೆಂದು ಕರೆಯುತ್ತೇವೆ. ಲಿಖಿತ ಸಾಹಿತ್ಯದ ಗೈರು ಹಾಜರಿಯಲ್ಲಿ ಅವರ ಆಡುಮಾತಿನ ಸಾಹಿತ್ಯ ಪರಂಪರೆಯು ನಮಗೆ ಆಧಾರ. ಇದು ಕಪ್ಪು ಜನರ ಪುರಾತನ ಧರ್ಮ, ಸಂಸ್ಕೃತಿ, ಇತಿಹಾಸ, ಸಾಮಾಜಿಕ ಪದ್ಧತಿ, ನೀತಿ ನಿಯಮಗಳು ಹಾಗೂ ಜೀವನ ಮೌಲ್ಯಗಳ ಬಗ್ಗೆ ಮಾಹಿತಿಗಳನ್ನು ಒದಗಿಸಬಲ್ಲ ಏಕೈಕ ಮಾಧ್ಯಮವಾಗಿತ್ತು. ಇಂತಹ ಒಂದು ಪರಂಪರೆಯು ಅನೇಕ ಶತಮಾನಗಳ ಕಾಲ ನಡೆದು ಬಂದಿದೆಯೆಂಬ ಅಂಶವು ಅವರ ಪುರಾಣ ಕಥೆಗಳಿಂದ ತಿಳಿದುಬರುತ್ತದೆ.

ನಾಲ್ಕನೇ ಶತಮಾನದಿಂದ ಹದಿನೆಂಟನೇ ಶತಮಾನದವರೆಗೂ ಅಂದರೆ ವಸಾಹತು ಶಾಹಿಗಳು ಕಾಲಿರಿಸುವವರೆಗೂ, ಘಾನಾ, ಮಾಲಿ, ಕಾನೆಮ್, ಶೊಂಘಾಯ್, ಇಫೆ, ಬೆನಿನ್, ಮುಂತಾದ ರಾಜ್ಯಗಳು ಪಶ್ಚಿಮ ಆಫ್ರಿಕದ ಹುಲ್ಲುಗಾವಲು ಪ್ರದೇಶಗಳಲ್ಲಿ, ಒಂದರ ನಂತರ ಒಂದು, ಉದ್ಭವಿಸುತ್ತಲೇ ಇದ್ದುವು. ಅಲ್ಲಿ ಅವರದೇ ಆದ ಮೂಲ ಸಂಸ್ಕೃತಿ, ಧರ್ಮ, ಆಡಳಿತ ಕ್ರಮ, ನಾಗರಿಕತೆಗಳು ಇವೆಯೆಂಬ ಕಲ್ಪನೆಯೂ ಸಹ ಇಲ್ಲಿಗೆ ಬಂದ ಬಿಳಿಯರಲ್ಲಿರಲಿಲ್ಲವೆಂಬುದು ವಿಶಾದನೀಯ. ವಸಾಹತು ನಿರ್ಮಾಣ ಭರದಲ್ಲಿ ಅನಕ್ಷರಸ್ಥರಾದ ಅವರನ್ನು ಅನಾಗರಿಕರು, ಅಸಂಸ್ಕೃತರು, ಕ್ರೂರಿಗಳೆಂದೂ ಪರಿಗಣಿಸಿದರು. ಮತ ಪ್ರಚಾರದ ಭರಾಟೆಯಲ್ಲಿ ಕರಿಯರ ಸಂಸ್ಕೃತಿಯ ಕುರುಹುಗಳನ್ನು ದಮನ ಮಾಡುತ್ತಾ ಬಂದರು. ಅದರ ಸ್ಥಳದಲ್ಲಿ ಪಾಶ್ಚಿಮಾತ್ಯ ಭಾಷೆ, ವಿದ್ಯೆ, ಮತ, ಸಂಸ್ಕೃತಿಗಳನ್ನು ಹರಡುತ್ತಾ ಬಂದರು.

ಆಡುಮಾತಿನ ಸಾಹಿತ್ಯ ಪರಂಪರೆಯು ಏನೆಲ್ಲಾ ವಸ್ತು ವಿಷಯಗಳನ್ನು ಒಳಗೊಂಡಿದೆಯೆಂದರೆ– ಹಾಡು, ಕಥೆ, ಪುರಾಣಗಳ ಕಾಲಕ್ಷೇಪ, ವಿಡಂಬನೆ, ಒಗಟು, ಗಾದೆ ಇತ್ಯಾದಿಗಳು, ಇಂತಹ ಸಾಹಿತ್ಯ ಪರಂಪರೆಯೇ ಅವರ ಮಕ್ಕಳು ಮತ್ತು ಯುವಕರಿಗೆ ಔಪಚಾರಿಕ ಶಿಕ್ಷಣಕ್ರಮವಾಗಿತ್ತು. "ಇಂತಹ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಯಾವ ಕವಿ ಕೋವಿದನ ಹೆಸರೂ ದೊರೆಯುವುದಿಲ್ಲ. ಅದನ್ನು ಅವರು ಸಂಭಾವನೆ ಅಥವಾ ಪ್ರತಿಷ್ಠೆಗಾಗಿಯೂ ಮಾಡುತ್ತಿರಲಿಲ್ಲ. ಯಾವ ಕಾಪಿರೈಟ್ ಸ್ವಾಮ್ಯವೂ ಇರಲಿಲ್ಲ. ಅದು ಇಡೀ ಬುಡಕಟ್ಟಿಗೆ ಸೇರಿದುದಾಗಿತ್ತು" ಎಂದು ರೆ||ಡಾ|| ಜಾನ್ ಮ್ಬೀತಿ(ನೈಜೀರಿಯ) ಹೇಳುತ್ತಾರೆ[4].

---

3. ಜೊಫ್ರಿ ಪ್ಯಾರಿಂಡರ್.
4. ಆಫ್ರಿಕನ್ ಓರಲ್ ಲಿಟರೇಚರ್–ರೆ.ಡಾ.ಜಾನ್ ಮ್ಬೀತಿ– ಬ್ಲ್ಯಾಕ್ ಅಂಡ್ ಆಫ್ರಿಕನ್ ಫೆಸ್ಟಿವಲ್ ಆಫ್ ಆರ್ಟ್ ಅಂಡ್ ಕಲ್ಚರ್– ಆಫ್ರಿಕನ್ ಜರ್ನಲ್ ಲಿ. ಲಂಡನ್ WI–1977

## 2) ಜನಪದ ಸಂಗೀತ:

ಸಂಪರ್ಕ ಸೌಕರ್ಯಗಳ ಕೊರತೆ, ನೂರಾರು ಆಡುಭಾಷೆಗಳು, ಅವುಗಳ ಅಲ್ಪ ಪರಿಮಿತಿ ಹಾಗೂ ಹೊರ ಸಂಪರ್ಕವನ್ನೆ ಕಾಣದ ಕಪ್ಪು ಸಮಾಜಗಳಲ್ಲಿ ಶಾಸ್ತ್ರೀಯ ಸಂಗೀತವು ಹುಟ್ಟಿ ಬೆಳೆಯುವುದಾದರೂ ಎಂತು! ಆದರೂ ಸಂದರ್ಭಾನುಸಾರ ಹಾಡುವ ಹಾಡುಗಳು ಎಲ್ಲಾ ಸಮಾಜಗಳಲ್ಲೂ ಕಂಡು ಬರುತ್ತವೆ. ಯೊರುಬಾ ಸಮಾಜದ ಹೆಣ್ಣು ಮಕ್ಕಳು ಹೇಳುವ ಸಾಂಪ್ರದಾಯಿಕ ಹಾಡುಗಳು ಲಯಬದ್ಧವಾಗಿಯೂ ಇಂಪಾಗಿಯೂ ಇರುತ್ತವೆ. ಹಾಡುತ್ತಿರುವ ಹೆಂಗಸಿನ ಸುತ್ತಲೂ ನಿಂತ ಹೆಣ್ಣುಮಕ್ಕಳು ಮಧ್ಯೆ ಮಧ್ಯೆ ಪಲ್ಲವಿಗಳನ್ನು ತಾಳಗೆಜ್ಜೆಗಳ ಮೂಲಕ ಸುಶ್ರಾವ್ಯವಾಗಿ ಹಾಡುತ್ತಾರೆ. ಕೆಲವು ಪಂಗಡಗಳಲ್ಲಿ ಹೆಂಗಸರು ತಮಗಾಗಿ ರಚಿಸಿಕೊಂಡಿರುವ ಅರೆಯುವ ಹಾಡು, ಕುಟ್ಟುವ ಹಾಡು, ಮದುವೆ ಹಾಡು ಇತ್ಯಾದಿಗಳನ್ನು ಕಾಣುತ್ತೇವೆ. ದಕ್ಷಿಣ ಆಫ್ರಿಕದ ಜ್ಹೂಲು, ಲಾಂಬ (ಜ಼ಾಂಬಿಯ) ಸಮಾಜಗಳಲ್ಲಿ ರೋಗಿಗಳ ಮುಂದೆ ಉಪಚಾರದ ಹಾಡುಗಳನ್ನು ಗೆಜ್ಜೆ ತಾಳಗಳೊಡನೆ ಹಾಡುತ್ತಾರಂತೆ. ಇದಲ್ಲದೆ ಗಂಡಸರು ಮಾತ್ರ ಹಾಡುವಂತಹ ಶ್ರಮಜೀವನದ ಹಾಡುಗಳೂ ಇವೆ. ಬೆನಿನ್ ದೇಶದ ಫಾನ್ ಜನರು, ನೈಜೀರಿಯದ ನೂಪೆ ಜನರು ಹಾಡುವ ಬೇಸಾಯದ ಹಾಡುಗಳು ನಮ್ಮ ರೈತ ಸಮಾಜದ 'ನಾಟಿಯ ಹಾಡು, ಕೊಯ್ಲಿನ ಹಾಡುಗಳಿಗೆ ತೀರ ಸಮೀಪವಾಗಿವೆ. ವೀರ ಗಾಥೆಗಳನ್ನು ಅಭಿನಯ ಪೂರ್ವಕ ಹಾಡುವ ಲಾವಣಿಗಳು ಇಥಿಯೋಪಿಯದ ಹಮಾಸಿಯೆನ್, ಕೆಮರೂನಿನ ಬಾಂಗ್ವ ಪಂಗಡಗಳಲ್ಲಿ ಕಾಣಬರುತ್ತವೆ. ಅಷ್ಟೇ ಅಲ್ಲದೆ ಮೃಗ ಬೇಟೆಗಾಗಿಯೂ ಒಂದು ಹಾಡಿನ ಪರಂಪರೆಯಿದೆ ಎಂದರೆ ನಂಬುತ್ತೀರಾ? ಅದಿರುವುದು ಘಾನಾದ "ಸ್ಟೂಲ್ ವರ್ಷಿಪ್" (ಸಿಂಹಾಸನ ಪೂಜೆ) ಸಂದರ್ಭದಲ್ಲಿ. ಇವು ಯಾವುವೂ ಮುದ್ರಣವನ್ನು ಕಂಡಿಲ್ಲ. ಕೆಲವು ಮಾತ್ರ ಧ್ವನಿ ಸುರುಳಿಯಲ್ಲಿ ಮುದ್ರಿತವಾಗಿವೆ.

## 3) ಜನಪದ ನೃತ್ಯ:

ಆಫ್ರಿಕದ ಜನರು ನೃತ್ಯ ಪ್ರಿಯರು. ನೃತ್ಯವೆಂದ ಮೇಲೆ ವಾದ್ಯಗಳಿರಬೇಕಲ್ಲವೇ. ಸಾಂಪ್ರದಾಯಿಕ ವಾದ್ಯ ಮೇಳಗಳು ಹಿಂದೆ ಆಯಾ ಪಂಗಡಗಳಿಗೆ ಸೀಮಿತವಾಗಿದ್ದವು. ಈಗ ಪ್ರತಿರಾಷ್ಟ್ರದಲ್ಲೂ ಆಧುನಿಕ ಗಾನವಾಧ್ಯವೃಂದಗಳು ಹುಟ್ಟಿಕೊಂಡಿವೆ. ಅವರ ಸಂಗೀತ ರಚನೆಗಳು ದೇಶಪ್ರೇಮ, ಪ್ರೇಮ, ಭಾವೈಕ್ಯತೆಗಳನ್ನು ವ್ಯಕ್ತ ಪಡಿಸುತ್ತಾ ಶ್ರೋತೃಗಳಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತವೆ. ಪ್ಯಾನ್– ಆಫ್ರಿಕನ್ ಚಳುವಳಿಯಲ್ಲಿ ಗಾನವೃಂದಗಳ ಕೊಡುಗೆ ಅಪಾರ. ಇಪ್ಪತ್ತನೇ ಶತಮಾನದ ಮಧ್ಯಂತರದಲ್ಲಿ ಅಂಗೋಲಾ, ಕಾಂಗೋ, ಉಗಾಂಡ, ಮೊಸಾಂಬಿಕ್, ರೊಡೇಷಿಯ, ದಕ್ಷಿಣ ಆಫ್ರಿಕ, ಬಯಾಫ್ರ ಮುಂತಾದ ಕಡೆ ರಾಜಕೀಯ ವಿಪ್ಲವಗಳು ತಲೆದೋರಿ, ಸ್ವಜನದ್ವೇಷ, ಹಿಂಸೆ, ರಕ್ತಪಾತಗಳು ನಿರಂತರವಾಗಿ ನಡೆಯುತ್ತಿದ್ದವು. ಅದನ್ನು ತಡೆಗಟ್ಟುವ ಉದ್ದೇಶದಿಂದ "ಮಾರಲ್ ರೀ– ಆರ್ಮಮೆಂಟ್" ಎಂಬ ಅಂತರರಾಷ್ಟ್ರೀಯ ಸಂಸ್ಥೆಯು ಸಂಗೀತದ ಮೂಲಕ

ಪರಿವರ್ತನಾ ಸಂದೇಶಗಳನ್ನು ಈ ಎಲ್ಲಾ ದೇಶಗಳಲ್ಲೂ ಪ್ರವಾಸಮಾಡಿ ಹರಡುತ್ತಾ ಬಂದವು.

"ಹರಾಂಬೀ ಆಫ್ರಿಕ" (ಎಚ್ಚೆತ್ತ ಆಫ್ರಿಕ) ಎಂಬ ಗಾನವೃಂದವು ಭಾವೈಕ್ಯ, ಭ್ರಾತೃತ್ವ ಸಂದೇಶಗಳನ್ನು ಸಾರುತ್ತಾ ಆಫ್ರಿಕದ ಒಕ್ಕೂಟಕ್ಕೆ ಬಹಳ ಸಹಾಯ ಮಾಡಿತು. ಆಗ ನಾವು ಎರಿಟ್ರಿಯದಲ್ಲಿದ್ದೆವು. ರಾಜಮೋಹನ ಗಾಂಧಿ ಒಮ್ಮೆ ಇದರಲ್ಲಿ ಭಾಗವಹಿಸಿದ್ದರು. ಹರಾಂಬೀ ಸಂದೇಶದ ಒಂದು ಹಾಡಿನ ಭಾವ ಕನ್ನಡದಲ್ಲಿ ಹೀಗೆ ಬರುತ್ತದೆ;

### ಹರಾಂಬೀ ಸಂದೇಶ

ನಿನ್ನಲ್ಲಿ ಭೂಗೋಳ ಪುಸ್ತಕವಿದ್ದರೆ ।
ಬಿಚ್ಚಿನೋಡು ಅದರೊಳಗೆ ।
ಪ್ರಶ್ನಸೂಚಿಯಂತಿಲ್ಲವೆ ಆಫ್ರಿಕ ।
ಉತ್ತರವಿರುವುದು ಅದರೊಳಗೆ ॥

ಕೋರಸ್: ಸವಾಲಿನಂತಿದ್ದರು ಆಫ್ರಿಕಾ ।
ಜವಾಬು ಅಡಗಿದೆ ಅದರೊಳಗೇ ॥

ನಡೆಸಿವೆ ಪಕ್ಷಗಳು ಹೊಡೆದಾಟ ।
ಹೇಳಿರಿ ಎಲ್ಲರು ಒಂದಾಗೋಣ ।
ಯಾರು ಸರಿ ಅನ್ನುವುದಲ್ಲ । ಯಾವುದು ಸರಿ ।
ಎಂಬುದೆ ಆಫ್ರಿಕದುತ್ತರ ವೀಗ ॥

ಕೋರಸ್: ಸವಾಲಿನಂತಿದ್ದರು ಆಫ್ರಿಕಾ ।
ಜವಾಬು ಅಡಗಿದೆ ಅದರೊಳಗೇ ॥

ಕನ್ನಡಕ್ಕೆ: ಅಮಚವಾಡಿ ಅರಸು.

### ಸಂಗೀತ ವಾದ್ಯಗಳು:

ಸಾಂಪ್ರದಾಯಿಕ ಸಂಗೀತ ವಾದ್ಯಗಳಲ್ಲಿ ಚರ್ಮವಾದ್ಯ, ತಂತೀವಾದ್ಯ, ಊದು ಕೊಳವೆಯಂತಹ ಕೊಳಲು ಇವುಗಳನ್ನು ಸ್ಥಳೀಯವಾಗಿ ತಯಾರಿಸುವುದರಿಂದ ಒರಟಾಗಿ ಕಾಣುತ್ತವೆ. ದೇಶೀಯ ಸಂಗೀತ ಕಚೇರಿಗಳಲ್ಲಿ ಚರ್ಮವಾದ್ಯವು ಅತಿ ಮುಖ್ಯ ಅದಿಲ್ಲದೆ ಯಾವ ನೃತ್ಯ ಮೇಳವೂ ಇಲ್ಲ. "ಡ್ರಮ್" ಎಂದು ಕರೆಯುವ ಅವರ ಚರ್ಮವಾದ್ಯಗಳಲ್ಲಿ ನಾನಾ ಬಗೆಯ ಶಬ್ದಗಳನ್ನು ಹೊರಡಿಸುವ ದಪ್ಪ-ಸಣ್ಣ ಮದ್ದಳೆಗಳುಂಟು. ಪಶ್ಚಿಮ ಆಫ್ರಿಕದ ಅನೇಕ ಬುಡಕಟ್ಟುಗಳಲ್ಲಿ ಹಿಂದೆ "ಟಾಕಿಂಗ್ ಡ್ರಮ್" (ಮಾತನಾಡುವ ಮದ್ದಲೆ) ಎಂಬುದು ಬಹಳ ಪ್ರಸಿದ್ಧವಾಗಿತ್ತು. ಮೂರು ನಾಲ್ಕು ಉದ್ದನೆಯ ಮದ್ದಳೆಗಳನ್ನು ಕಾಲುಗಳ ಮಧ್ಯೆ ಸಿಕ್ಕಿಸಿಕೊಂಡು ನೀವು ಆಡುವ ಮಾತಿನಂತೆಯೇ ಶಬ್ದೋಚ್ಚಾರಗಳನ್ನು ಹೊರಡಿಸುವ ಪರಿಣತರಿದ್ದರಂತೆ. ಈಗ ಈ ಕಲೆ ನಿರ್ನಾಮವಾಗಿದೆ. ಕಾರಣ-ವಸಾಹತು ಸರ್ಕಾರಗಳು ಅದರ ಬಳಕೆಯನ್ನು ನಿಷೇಧಿಸಿ ಕಟ್ಟಾಜ್ಞೆ ಹೊರಡಿಸಿದರಂತೆ. ಪರಿಣತರು

ಬಾರಿಸುವ ಈ ವಾದ್ಯಗಳು ತಮ್ಮ ಸರ್ಕಾರದ ವಿರುದ್ಧ ಸಂದೇಶ ಹಾಗೂ ವಿರೋಧೀ ಪ್ರಚಾರಗಳನ್ನು ರಾತ್ರಿವೇಳೆ ಬಹಳ ದೂರದವರೆಗೆ ಕಳುಹಿಸುತ್ತಿದ್ದುವಂತೆ ಬೆಳಗಾಗುವುದರೊಳಗೆ ಎಲ್ಲ ಕಡೆಯೂ ಏಕಕಾಲದಲ್ಲಿ ದಂಗೆ, ಚಳುವಳಿಗಳು ನಡೆಯುತ್ತಿದ್ದುವು. ಈ ಕಾರಣದಿಂದ ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತು ಸರ್ಕಾರಗಳು ಅಂತಹವರನ್ನು ಹುಡುಕಿ ಬಂಧನದಲ್ಲಿಟ್ಟು ಮಾನವನ ಒಂದು ಶ್ರೇಷ್ಠ ಕಲೆಯ ನಾಶಕ್ಕೆ ಕಾರಣರಾದರು.

**ಪ್ರವಾಸೀ ಮನರಂಜಕರು:**

ಸಾಮಾನ್ಯವಾಗಿ ಆಫ್ರಿಕದ ಎಲ್ಲ ಬುಡಕಟ್ಟಿನವರೂ ವಿನೋದ/ ಹಾಸ್ಯಪ್ರಿಯರು. ನಕ್ಕೂ ನಗಿಸುವುದು ಅವರ ಪ್ರಕೃತಿ. ಒಮ್ಮೆ ಎರಿಟ್ರಿಯದಲ್ಲಿ ಪ್ರವಾಸ ಮಾಡುತ್ತಿದ್ದಾಗ ಕೆರೆನ್ ಎಂಬ ಊರಿನಲ್ಲಿ ದುಂಡಾಗಿ ನಿಂತ ಜನರ ಗುಂಪೊಂದು ಗಳಿಗೆಗೊಮ್ಮೆ ಗೊಳ್ಳೆಂದು ನಗುತ್ತಿದ್ದರು. ಅದನ್ನು ಕಂಡ ನಾನು ಅದೇನೆಂದು ವಿಚಾರಿಸಿದಾಗ, ಮ್ಯಾಜಿಕ್ ಷೋ ಎಂದು ಜೊತೆಯಲ್ಲಿದ್ದ ಭಾರತೀಯರೊಬ್ಬರು ಹೇಳಿದ್ದಲ್ಲದೆ, ನಾನು ಆ ಗುಂಪಿನ ಹತ್ತಿರ ಹೋಗಲು ಬಿಡಲಿಲ್ಲ. ಆದರೆ ಅವರ ಕಣ್ತಪ್ಪಿಸಿ ಹೋಗಿ ನೋಡಿದಾಗ ನನಗೊಂದು ಆಶ್ಚರ್ಯ ಕಾದಿತ್ತು ಒಬ್ಬ ಹಾಸ್ಯಗಾರ ಸುತ್ತಲೂ ನಡೆದಾಡುತ್ತಾ ಚುಟಕಾ ಕಥೆಗಳನ್ನು ಹೇಳಿ ನೆರೆದಿದ್ದ ಜನರನ್ನು ನಗೆ-ಗಡಲಲ್ಲಿ ಮುಳುಗಿಸುತ್ತಿದ್ದ. ದೊಂಬರಂತೆ ಇವರು ಊರಿಂದೂರಿಗೆ ಹೋಗಿ ಮನರಂಜನೆ ನೀಡುತ್ತಾ ಮುಂದೆ ಸಾಗುತ್ತಾರೆ. ಅವರ ಜೀವನವೂ ಸಾಗುತ್ತದೆ.

**4) ಜನಪದ ಗಾದೆ-ಒಗಟುಗಳು:**

ಈಬೋ ಬುಡಕಟ್ಟಿನ ಜನರು ಅರ್ಥಪೂರ್ಣ ಸಂಭಾಷಣೆಗೆ ಬಹಳ ಮಹತ್ವ ಕೊಡುತ್ತಾರೆ. ಅದರ ಸ್ವಾದವನ್ನು ಸವಿಯಲಿಚ್ಚಿಸುವವರು ಚಿನುವಾ ಅಚೆಬೆಯವರ "ಥಿಂಗ್ಸ್ ಫಾಲ್ ಎಪಾರ್ಟ್" ಕಾದಂಬರಿಯನ್ನು ಓದಬೇಕು. ಗಾದೆಯ ಪ್ರಾಮುಖ್ಯತೆ ಬಗ್ಗೆ ಅವರ ಮಾತಿನಲ್ಲೇ ಹೇಳುವುದಾದರೆ "ಮಾತುಗಳನ್ನು ತಿನ್ನುವಾಗ ಗಾದೆಗಳು ಪಾಮ್ ಆಯಿಲ್ ಇದ್ದಂತೆ". ಅರ್ಥಾತ್ ಗಾದೆಗಳು ಸಂಭಾಷಣೆ ಎಂಬ ಊಟದಲ್ಲಿ ವ್ಯಂಜನವಿದ್ದಂತೆ. "ನಮ್ಮ ಹಿರಿಯರು ಹೇಳುವ ಪ್ರಕಾರ" ಎಂದು ಪ್ರಾರಂಭಿಸಿ ಅವರು ಹೇಳುತ್ತಾರೆ- (1) ಕಾಡು ಕಪ್ಪೆಯು ಹಗಲು ವೇಳೆ ಸುಮ್ಮನೆ ಹೊರಗೆ ಓಡಾಡುವುದಿಲ್ಲ (ಒಂದು ಕಾರಣವಿದ್ದೇ ಇರುತ್ತದೆ) (2) ಒಂದು ಬೆರಳಿಗೆ ಎಣ್ಣೆ ತಾಗಿದರೆ ಉಳಿದ ಬೆರಳುಗಳಿಗೂ ತಗಲುತ್ತದೆ (ಸಮಾಜದಲ್ಲಿ ಒಬ್ಬ ತಪ್ಪಿತಸ್ಥನನ್ನು ಶಿಕ್ಷಿಸದೇ ಬಿಟ್ಟರೆ ಅದು ಉಳಿದವರಿಗೂ ಹರಡುತ್ತದೆ) (3) ಸೂರ್ಯನ ಮೊದಲ ಕಿರಣ ನಿಂತವನ ತಲೆ ಮೇಲೆ (ನೀನು ಪ್ರಸಿದ್ಧಿ ಪಡೆದರೆ ಎಲ್ಲರಿಗೂ ಕಾಣಿಸುವೆ) (4) ಮಗುವು ಕೈತೊಳೆದಿದ್ದರೆ ರಾಜನ ಜೊತೆಯಲ್ಲಿ ಕೂಡ ಊಟ ಮಾಡಬಹುದು (ಕೈ ಶುದ್ಧಿ

ಮಗುವಿನಿಂದಲೇ ಬೆಳೆಯಬೇಕು) ಪೂರ್ವ ಆಫ್ರಿಕದಲ್ಲಿ ಬಳಕೆಯಲ್ಲಿರುವ ಕೆಲವು ಒಗಟುಗಳನ್ನು ಉದಾಹರಿಸುವುದಾದರೆ– (1) ಎರಡು ಆನೆಗಳು ಕಾಳಗ ಮಾಡುವಾಗ ನಷ್ಟ ಯಾರಿಗೆ? (ಹುಲ್ಲಿಗೆ) (2) ಚಿರತೆಯ ಕಣ್ಣು ಹೋತನ ಮೇಲೆ, ಹೋತನ ಕಣ್ಣು? (ಎಲೆಯ ಮೇಲೆ) (3) ಕ್ಯಾರವಾನಿನಲ್ಲಿ ಏಟು ತಿನ್ನುವುದು ಯಾವ ಒಂಟೆ? (ಕೊನೆಯ ಒಂಟೆ) ಇತ್ಯಾದಿ.

**5) ಜಾನಪದ ಕಥೆಗಳು:**

ಜೊ। ಪ್ಯಾರಿಂಡರ್ ಹೇಳುವ ಪ್ರಕಾರ ಆಫ್ರಿಕದ ಜಾನಪದ ಕಥೆಗಳು ಮಾನವನು ಪ್ರಕೃತಿಯೊಡನೆ ಇಟ್ಟುಕೊಂಡಿರುವ ಸಮೀಪ ಸಂಬಂಧವನ್ನು ಸೂಚಿಸುವುದಲ್ಲದೆ, ಪ್ರಾಣಿ ಪಕ್ಷಿಗಳೂ ಸಹ ಮಾನವನಂತೆಯೇ ಅಂತಃಕರಣವುಳ್ಳದ್ದಾಗಿವೆ ಎಂಬುದನ್ನು ತೋರಿಸುತ್ತವೆ. ಇದರಡಿ ಐತಿಹಾಸಿಕ, ಪುರಾಣ ಕಥನಗಳು, ಮಕ್ಕಳಿಗೆ ನೀತಿಬೋಧೆ ಇತ್ಯಾದಿ ಅನೇಕ ಬಗೆಯಿದ್ದರೂ, ಮಕ್ಕಳ ಮನರಂಜನೆಗಾಗಿ ಹೇಳುವ ಕಥೆಗಳು ಬಹಳ ಸ್ವಾರಸ್ಯವಾಗಿವೆ. ಈ ಕಥೆಗಳಲ್ಲಿ ಪ್ರಾಣಿ ಪಕ್ಷಿಗಳೇ ಕಥಾನಾಯಕರು. ಅವು ಮನುಷ್ಯರಂತೆಯೇ ಮಾತನಾಡಬಲ್ಲವು. ಇಲ್ಲಿ ಬರುವ ಪ್ರಸಂಗಗಳು ನಿಜವಾಗಿ ನಡೆದಂತೆ ತೋರಿಬಂದು ಮಕ್ಕಳ ಕಲ್ಪನಾಶಕ್ತಿಯ ಬೆಳವಣಿಗೆಗೆ ಸಹಾಯಕವಾಗಿವೆ. ಕೆಲವು ಕಥೆಗಳು ಹಿಂದೂ ಪಂಚತಂತ್ರ ಹಾಗೂ ಬೌದ್ಧರ ಜಾತಕ ಕಥೆಗಳಿಂದ ಸ್ಫೂರ್ತಿ ಪಡೆದಿರುವಂತೆ ತೋರುತ್ತವೆ. ಪೋರ್ಚುಗೀಸ್, ಬ್ರಿಟಿಷ್, ಫ್ರೆಂಚ್ ಕಥೆಗಳ ಪ್ರಭಾವಗಳನ್ನೂ ಕಡೆಗಣಿಸುವಂತಿಲ್ಲ. ಆದರೂ ಹೊರಗಿನ ಪ್ರಭಾವಗಳಿಂದ ದೂರವಾಗಿರುವ ಅಪ್ಪಟ ದೇಶೀ ಕಥೆಗಳನ್ನು ಗುರ್ತಿಸಬಹುದು. ಅವುಗಳನ್ನುಳಿಸಿ ಕಾಪಾಡಬೇಕಾದುದು ಅಲ್ಲಿನ ಸಾಹಿತಿಗಳ ಕರ್ತವ್ಯ.

ಇಲ್ಲಿ ಒಂದೆರಡು ಕಥೆಗಳನ್ನು ಉದಹರಿಸುವುದು ಸೂಕ್ತವೆನಿಸುತ್ತದೆ.

**ಚಿರತೆ ಮತ್ತು ಬೆಂಕಿ** : ಸಿರಾಲೊಯೋನಿನ ಈ ಕಥೆಯಲ್ಲಿ ಮೊದಲಿಗೆ ಚಿರತೆಯ ಮೈಮೇಲೆ ಬಟ್ಟುಗಳಿರಲಿಲ್ಲ. ಅದು ಬೆಂಕಿಯ ಜೊತೆ ಸ್ನೇಹ ಬೆಳೆಸಿತ್ತು. ಪ್ರತಿ ದಿನವೂ ಚಿರತೆಯು ಬೆಂಕಿಯ ಮನೆಗೆ ಹೋಗಿ ಬರುತ್ತಿತ್ತು. ಆದರೆ ಬೆಂಕಿ ಮಾತ್ರ ಚಿರತೆಯ ಮನೆಗೆ ಎಂದೂ ಬಂದಿದ್ದಿಲ್ಲ. ಹೀಗೆಯೇ ನಡೆಯುತ್ತಿರುವಾಗ ಒಂದು ದಿನ ಚಿರತೆಯ ಹೆಂಡತಿ ಸಿಟ್ಟುಗೊಂಡು "ಇದೆಂತಹ ಸ್ನೇಹ ನಿಮ್ಮದು! ಪ್ರತಿದಿನವೂ ನೀವೇ ಹೋಗುತ್ತೀರಿ. ಬೆಂಕಿಯು ಮಾತ್ರ ನಮ್ಮ ಮನೆಗೆ ಬರುವುದಿಲ್ಲ" ಎಂದು ಮೂದಲಿಸಿದಳು. ಮರುದಿನ ಚಿರತೆಯು ಬೆಂಕಿಯ ಮನೆಗೆ ಹೋದಾಗ ಬೆಂಕಿಯು ತನ್ನ ಮನೆಗೆ ಬರಬೇಕೆಂದು ಆಹ್ವಾನಿಸಿತು. ಬೆಂಕಿಯು ಬರುವುದಿಲ್ಲವೆಂದು ಹೇಳಿದರೂ, ಚಿರತೆಯ ಒತ್ತಾಯಕ್ಕೆ ಒಪ್ಪಿಕೊಂಡು ಒಂದು ಷರತ್ತು ಹಾಕಿತು. ನಾನು ಎಂದೂ ನಡೆದು ಬರುವವನಲ್ಲ. ನಿಮ್ಮ ಮನೆಯ ಬಾಗಿಲವರೆಗೂ ಒಣಹುಲ್ಲು ಕಡ್ಡಿಗಳನ್ನು ಹರಡಿ ದಾರಿ ಮಾಡಿದರೆ ಬರುತ್ತೇನೆಂದು ಒಪ್ಪಿಗೆ ಕೊಟ್ಟಿತು. ಅದೇ ಪ್ರಕಾರ ಗಂಡ ಹೆಂಡಿರಿಬ್ಬರೂ ಒಣಹುಲ್ಲು,

ಕಡ್ಡಿ, ತರಗೆಲೆಗಳನ್ನು ಶೇಖರಿಸಿ ರಸ್ತೆ ಮಾಡಿದರು. ಬೆಂಕಿಯ ಗೌರವಾರ್ಥವಾಗಿ ಮನೆಯನ್ನು ಸಿದ್ಧಗೊಳಿಸುತ್ತಾ ಇರುವಷ್ಟರಲ್ಲಿ ಹೊರಗೆ ಚಟಪಟ ಶಬ್ದವಾಯಿತು. ಬಿರುಗಾಳಿ ಬೀಸತೊಡಗಿತು. ಗಂಡು ಚಿರತೆಯು ಬಾಗಿಲಿಗೆ ಹೋಗಿ ಕಂಡದ್ದೇನೆಂದರೆ ಬೆಂಕಿಯು ಮನೆ ಬಾಗಿಲಿಗೆ ಬಂದಿತ್ತು. ಮನೆಗೂ ಬೆಂಕಿ ತಗಲಿತು. ಚಿರತೆ ದಂಪತಿಗಳು ಕಿಟಕಿಯಿಂದ ಹೊರಗೆ ಜಿಗಿಯುವುದರೊಳಗಾಗಿ ಬೆಂಕಿಯ ಬೆರಳುಗಳು ಅವರಿಬ್ಬರಿಗೂ ತಗುಲಿತು. ಮನೆಯು ಹತ್ತಿ ಉರಿದುಹೋಯಿತು. ಅಂದಿನಿಂದ ಚಿರತೆಗಳ ಮೈತುಂಬಾ ಸುಟ್ಟ ಕಪ್ಪು ಕಲೆಗಳು ನಿಂತುಬಿಟ್ಟವು.

**ಸೊಳ್ಳೆ ಮತ್ತು ಕಿವಿ :** ಬೇಸಗೆಯಲ್ಲಿ ಸೊಳ್ಳೆಯ ಕಾಟ ಬಹಳ. ಸಂಜೆಯಾಗುತ್ತಿದ್ದಂತೆ ಕಿವಿಯ ಹತ್ತಿರ ಬಂದು ರಾಗವಾಗಿ ಹಾಡುವುದುಂಟು. ಒಂದು ದಿನ ಸುಂದರವಾದ ಸೊಳ್ಳೆಯೊಂದು ಕಿವಿಯ ಹತ್ತಿರ ಬಂದು ಹಾಡತೊಡಗಿತು. (ಇಲ್ಲಿ "ಕಿವಿ" ಎಂದರೆ ಒಂದು ಸಣ್ಣ ಹುಡುಗಿ ಎಂದು ಭಾವಿಸಬೇಕು) ಆಗ ಕಿವಿಯು ನೀನೇಕೆ ಹೀಗೆ ಶಬ್ದ ಮಾಡುತ್ತೀಯೆಂದು ಕೇಳಿದಾಗ ಸೊಳ್ಳೆಯು ಹೇಳಿತು "ನಾನು ನಿನ್ನನ್ನು ಮದುವೆಯಾಗಬೇಕೆಂದಿದ್ದೇನೆ–ಅದಕ್ಕೋಸ್ಕರ ಹಾಡುತ್ತಿದ್ದೇನೆ" ಎಂದು ಹೇಳಿತು. ಕಿವಿಯು ಗಟ್ಟಿಯಾಗಿ ನಗುತ್ತಾ ಎಷ್ಟು ದಿವಸ ಬದುಕುವೆನೆಂದು ತಿಳಿದಿದ್ದೀಯಾ? ಕೈ ಬೀಸಿದರೆ ಸತ್ತುಹೋಗುವೆ, ನಿನ್ನನ್ನು ಮದುವೆಯಾಗಲು ಹೇಗೆ ಸಾಧ್ಯ? ಎಂದು ಹಾಸ್ಯ ಮಾಡುತ್ತಾ ಕೈ ಬೀಸಿದಳು. ಅವಳ ಕೈಗೆ ಅದು ತಗುಲಿದ್ದರಿಂದ ಅದು ಸತ್ತೇ ಹೋಯಿತೆಂದು ಭಾವಿಸಿದಳು. ಆದರೆ ಮತ್ತೆ ಕವಿಯ ಹತ್ತಿರ ಬಂದು "ನಾನು ಸತ್ತಿಲ್ಲ, ಈಗ ಮದುವೆಯಾಗುತ್ತೀಯಾ?" ಎಂದು ಕೇಳಿತು. ಈಗಲೂ ಹತ್ತಿರ ಬಂದಾಗಲೆಲ್ಲಾ ಅದೇ ರೀತಿ ಕೇಳುತ್ತದೆ.

## 6) ಶಿಕ್ಷಣ:

ಪಶ್ಚಿಮದ ಸೆನೆಗಾಲಿನಿಂದ ಪೂರ್ವದಲ್ಲಿ ಸೂಡಾನಿನ ಜೌಗಿನವರೆಗೂ ದಟ್ಟವಾದ ಹುಲ್ಲುಗಾಡಿನ (ಬುಷ್ ವುಡ್‌ಲ್ಯಾಂಡ್) ವಲಯವೊಂದಿದೆ. ಇದಕ್ಕೆ "ಗಿನಿ ಸವನ್ನಾ" ಎಂಬುದು ಭೌಗೋಳಿಕ ನಾಮಧೇಯ. ಒತ್ತಾಗಿ ಬೆಳೆದ ಮರಗಳು ಹಾಗೂ ಎಂಟು ಹತ್ತು ಅಡಿ ಎತ್ತರ ಬೆಳೆದ ಆನೆಹುಲ್ಲಿನ ನಡುವೆ ಹಳ್ಳಿಗಳ ಇರುವಿಕೆಯೇ ಗೋಚರವಾಗುವುದಿಲ್ಲ. ಈ ಹುಲ್ಲಿನ ಒಳಗೆ ಯಾರಾದರೂ ಅವಿತು ಕುಳಿತರೆ ಹಗಲು ವೇಳೆಯೇ ಕಾಣುವುದಿಲ್ಲ. ಇನ್ನು ರಾತ್ರಿವೇಳೆ ಕೇಳಬೇಕೆ? ಇಂತಹ ಸನ್ನಿವೇಶವೇ ಹಿಂದೆ ಅರಬ್ ವರ್ತಕರಿಗೆ ಇಲ್ಲಿನ ಜನರನ್ನು ಹಿಡಿದು ಗುಲಾಮರನ್ನಾಗಿ ಸಾಗಿಸಲು ಸಹಾಯಕವಾಗಿತ್ತೆಂಬ ಅಂಶವನ್ನು ಮನಗಾಣಬಹುದು. ಸಾರಿಗೆ ಸೌಕರ್ಯಗಳಿಲ್ಲದ, ಬೀದಿ ದೀಪಗಳಿಲ್ಲದ ಒಳನಾಡು ಪ್ರದೇಶದಲ್ಲಿ ಕತ್ತಲಾದ ಮೇಲೆ ಯಾರೂ ಹೊರಗೆ ಬರುವಂತಿರಲಿಲ್ಲ. ಆದರೆ ಹೊಳೆಯುವ ಬೆಳದಿಂಗಳು ಬಂತೆಂದರೆ ಎಲ್ಲರಿಗೂ ಸಂಭ್ರಮ, ಸ್ಫೂರ್ತಿ. ಸೆಕೆ ಸೊಳ್ಳೆಗಳ ಕಾಟದಿಂದ ಮನೆಯೊಳಗೆ ಯಾರೂ ಇರಬಯಸುವುದಿಲ್ಲ. ಹಾಡು, ಕಥೆ, ನೃತ್ಯ, ಆಟ ಪಾಠಗಳೇ ಮುಂತಾದ ಚಟುವಟಿಕೆಗಳ ಮಹಾಪೂರವೇ

ಅಂಗಳದಲ್ಲಿ ಉಕ್ಕಿ ಹರಿಯುತ್ತದೆ. "ಪೂರ್ಣ ಚಂದ್ರನು ಹೊಳೆಯುತ್ತಿರುವಾಗ ಕುಂಟನೂ ಓಡಲು ಬಯಸುತ್ತಾನೆ" ಎಂಬುದೊಂದು ಇಬೋ ಗಾದೆ.

ಪ್ರಾಯ ಸಮರ್ಥರು ಬೆವರು ಸುರಿಸುತ್ತಾ ನೃತ್ಯದಲ್ಲಿ ತಲ್ಲೀನರಾಗಿದ್ದಾಗ ಅಜ್ಜಿಯರು ತಾಯಿಯರು ಬಾಗಿಲಲ್ಲಿ ಸಣ್ಣಮಕ್ಕಳನ್ನು ಕೂರಿಸಿಕೊಂಡು ಕಥೆಗಳನ್ನು ಹೇಳುವುದು, ಹಾಡು ಕಲಿಸುವುದು, ಊಟ ಮಾಡಿಸುವುದು ಇತ್ಯಾದಿ ಚಟುವಟಿಕೆಗಳು ಇದುವರೆಗೂ ನಡೆದುಬಂದಿರುವ ವಾಡಿಕೆ. ಅವರ ಕಥಾ ವಸ್ತುಗಳಲ್ಲಿ ಇತಿಹಾಸ ಅಂದರೆ ಬುಡಕಟ್ಟಿನ ಅಥವಾ ಮನೆತನದ ಮೂಲ ಪುರುಷರು, ಅವರು ಎಸಗಿದ ಯುದ್ಧಗಳು ಸಾಹಸ ಕಥನಗಳು, ಅವರಲ್ಲಿದ್ದ ಗುಲಾಮರ ಸಂಖ್ಯೆ, ಇವಲ್ಲದೆ ಪುರಾಣ, ದೇವರು, ಹಬ್ಬಗಳು, ಉತ್ಸವ, ನೀತಿ ನಡತೆಗಳು ಮುಂತಾದ ಸಾಂಸ್ಕೃತಿಕ ವಿಚಾರಗಳೂ ಇರುತ್ತಿದ್ದುವು. ಇದೇ ಅವರು ಕೊಡುತ್ತಿದ್ದ ಸಾಂಪ್ರದಾಯಿಕ ಶಿಕ್ಷಣ. ಬಹಳ ಕಾಲದಿಂದ ನಡೆದು ಬಂದ ಆಡುಮಾತಿನ ಈ ಪರಂಪರೆಯ ಸಹಾಯದಿಂದಲೇ "ದಿ ರೂಟ್ಸ್" ಎಂಬ ನಿಜ ಜೀವನ ಕಥೆಯೊಂದರಲ್ಲಿ ಬರುವ ಅಮೇರಿಕದ ಗುಲಾಮಿ ಸಂತತಿಯವನಾದ ಕಿಂಟ ಕುಂಟೆ ಎಂಬುವನ ವಂಶಸ್ಥನೊಬ್ಬ ಮೂಲಸ್ಥಾನವನ್ನು ಅರಸುತ್ತಾ ಬಂದು; ಕಡೆಗೆ ಗ್ಯಾಂಬಿಯದಲ್ಲಿ ತನ್ನ ವಂಶದ ಕುಟುಂಬದವರನ್ನು ಗುರುತಿಸಲು ಸಾಧ್ಯವಾಯಿತು.

## 7) ಕಲಾಕೃತಿ ಮತ್ತು ಕಲೆಯ ಪಾತ್ರ:

ಪ್ರಾಚೀನ ಆಫ್ರಿಕದಲ್ಲಿ ಬರವಣಿಗೆ ಇಲ್ಲದಿದ್ದರೂ ಕಪ್ಪು ಜನರು ತಮ್ಮ ಚಿಂತನೆ ಮತ್ತು ಸಂವೇದನೆಗಳನ್ನು ಕೆಲವು ಮಾಧ್ಯಮಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಅವೇ ಮರದ ಪ್ರತಿಮೆಗಳು ಮತ್ತು ಮುಖವಾಡಗಳು. ಅವುಗಳನ್ನು ಅರ್ಥಮಾಡಿ ಕೊಳ್ಳುವುದು ಸುಲಭವೇನಲ್ಲ. ಸತ್ತವರ ಪ್ರತಿಮೆಗಳನ್ನು ಧಾರ್ಮಿಕ ಆಚರಣೆಗಳಲ್ಲಿ ಅಂದರೆ ವೈಯಕ್ತಿಕ ಅಥವಾ ಸಾಮೂಹಿಕ ಸಂಸ್ಕಾರಗಳನ್ನು ನಡೆಸಲು ಅಥವಾ ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಲು ಉಪಯೋಗಿಸುತ್ತಾರೆ. "ಸತ್ತವರ ಪ್ರತಿಬಿಂಬ" ವೆಂದು ಕರೆಯುವ ಇಂತಹ ವಿಗ್ರಹಗಳಲ್ಲಿ ಸತ್ತವರ ಮುಖದ ಅಥವಾ ಶರೀರದ ಯಾವ ಹೋಲಿಕೆಯೂ ಇರುವುದಿಲ್ಲ. ಆದರೆ ಅವರಲ್ಲಿದ್ದ ವಿಶೇಷಗುಣ ಅಥವಾ ನಿಗೂಢ ಶಕ್ತಿಗಳನ್ನು ಸೂಚಿಸುತ್ತವೆ ಎಂದು ಹೇಳುವುದುಂಟು. ಇಪ್ಪತ್ತನೇ ಶತಮಾನದ ಪ್ರಸಿದ್ಧ ಕಲಾವಿಮರ್ಶಕರಾದ ಜೇಕಬ್ ಎಪ್‌ಸ್ಟೀನ್ ಮತ್ತು ಹೆನ್ರಿ ಮೂರ್ ಎಂಬವರು ಆಫ್ರಿಕದ ಕಲೆಯ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಾ ಮರದ ಮುಖವಾಡ ಮತ್ತು ಪ್ರತಿಮೆಗಳು ಜೀವನದ ಎಲ್ಲ ಮುಖಗಳನ್ನು ಪ್ರತಿಬಿಂಬಿಸುತ್ತವೆಂದು ಹೇಳುತ್ತಾರೆ. ಪ್ರತಿಮೆಗಳ ಅರ್ಥ, ಧಾರ್ಮಿಕ ಆಚರಣೆಗಳಲ್ಲಿ ಅವುಗಳ ಪಾತ್ರ, ಅವು ತೋರುವ ನಿಷೇಧಗಳು, ಅವುಗಳ ಶಕ್ತಿ ಪ್ರಭಾವ ಎಲ್ಲವನ್ನು ಪೂಜಾರಿಗಳು ಹಾಗೂ ಹಿರಿಯರು ಹೇಳಬಲ್ಲರು. ಬರವಣಿಗೆಯಿಲ್ಲದ ಸಂಸ್ಕೃತಿಯಲ್ಲಿ ಇಂತಹ ಕಲಾ ವಸ್ತುಗಳು ಬರವಣಿಗೆಯ ಪಾತ್ರವನ್ನು ನಿರ್ವಹಿಸುತ್ತವೆ. ಆಫ್ರಿಕದ ಕಲಾಕೃತಿಗಳು ಮಾತನಾಡದಿದ್ದರೂ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಸ್ಥಳೀಯರು ಅರ್ಥಮಾಡಿಕೊಳ್ಳುವ ಭಾಷೆಯಲ್ಲಿ ಅವು ಮಾತನಾಡುತ್ತವೆ. ಜನರ

ಅಥವಾ ಸಮಾಜದ ರಾಗ, ಭಾವ ಸಂವೇಧನೆಗಳನ್ನು ಅವು ಸೂಚಿಸಬಲ್ಲವು. ಇದೇ ಕಲಾಕೃತಿಗಳ ಭಾಷೆ.[5]

ಮರದ ಪೂರ್ಣಾಕಾರದ ಮೂರ್ತಿಗಳು ಮುಖ್ಯವಾಗಿ ಪಶ್ಚಿಮ ಆಫ್ರಿಕದ ರಾಷ್ಟ್ರಗಳಲ್ಲಿ ಕಂಡುಬರುತ್ತವೆ. ಈ ಪ್ರದೇಶದ ಜನರು ಅನೇಕ ಶತಮಾನಗಳಿಂದ ನೆಲೆಯೂರಿದ ಬೇಸಾಯಗಾರರಾದುದರಿಂದ ಮರದ ಕೆತ್ತನೆಯ ಕಲೆ ಇಲ್ಲಿ ಬೆಳೆಯಿತು. ಅವರ ಪರಿಸರವು ಕಾಡು ಪ್ರದೇಶವಾದ್ದರಿಂದ ಕೆತ್ತನೆಗೆ ಯೋಗ್ಯವಾದ ಮರಗಳು ಅಲ್ಲಿ ದೊರೆಯುತ್ತವೆ. ಆದ್ದರಿಂದ ಕಾಷ್ಠವನ್ನು ಅವರು ಕಲೆಯ ಮಾಧ್ಯಮವಾಗಿ ಬಳಸಿಕೊಂಡರು. ಆದರೆ ಪಶುಪಾಲಕರು ಮತ್ತು ಅಲೆಮಾರೀ ಬೇಟೆಗಾರ ಬುಡಕಟ್ಟುಗಳು ಹೆಚ್ಚಾಗಿರುವ ಪೂರ್ವ ಮತ್ತು ದಕ್ಷಿಣ ಆಫ್ರಿಕದ ಸವನ್ನಾ ಹುಲ್ಲುಗಾವಲು ಪ್ರದೇಶಗಳಲ್ಲಿ ಮರದ ಕೆತ್ತನೆ ಕಲೆ ವಿಶೇಷವಾಗಿ ಬೆಳೆಯಲಿಲ್ಲ. ಪ್ರಾಣಿಯ ಕೊಂಬು, ಚರ್ಮ, ತುಪ್ಪಳ, ಬಣ್ಣದ ಮಣಿಗಳು, ಕವಡೆ ಇತ್ಯಾದಿ ಇಲ್ಲಿನ ಕಲಾ ಮಾಧ್ಯಮಗಳಾದವು. ಎರಡೂ ಬಗೆಯ ವಸ್ತುಗಳನ್ನು ಪ್ರವಾಸಿಗರು ನೆನಪಿಗಾಗಿ ಕೊಳ್ಳುತ್ತಾರೆ.

ಪಶ್ಚಿಮ ಆಫ್ರಿಕದ ಮರದ ಕಲಾಕೃತಿಗಳನ್ನು ಕೆಳಕಂಡಂತೆ ವಿಂಗಡಿಸಬಹುದು.

(1) ಮೃತಪಿತೃಗಳ ಪ್ರತಿಬಿಂಬವೆಂದು ಕರೆಯಲ್ಪಡುವ ವಿಕಾರ ಸ್ವರೂಪದ ಬೆತ್ತಲೆಯ ಮನುಷ್ಯಾಕೃತಿಗಳು– 2ರಿಂದ 3 ಅಡಿ ಎತ್ತರ.

(2) ಒಂದು ಅಡಿ ಪ್ರಮಾಣದ ಕಾವಲು ದೇವತೆಗಳು (ಫೆಟಿಷ್)– ಪೂರ್ಣಾಕೃತಿ ಇಲ್ಲವೇ ತಲೆ ಮಾತ್ರ

(3) ಮನುಷ್ಯನ ಮುಖ ಇಲ್ಲವೇ ಪ್ರಾಣಿಮುಖವುಳ್ಳ ಹೋಳು ಮುಖವಾಡಗಳು

(4) ಮಾಸ್ಕರೇಡ್‌ನಲ್ಲಿ ತಲೆಯ ಮೇಲಿರಿಸಿಕೊಂಡು ಮೆರವಣಿಗೆ ಹೋಗುವ ಭೂತವಿಗ್ರಹಗಳು (ಸ್ಪಿರಿಟ್ಸ್) 2 ರಿಂದ 3 ಅಡಿ ಎತ್ತರ

(5) ರಾಜನು ಕೂರುವ ಪೀಠ ಮತ್ತು ತಲೆದಿಂಬು

(6) ಮದ್ದಲೆ, ಎಣ್ಣೆ ಕೊಪ್ಪರಿಕೆ ಇತ್ಯಾದಿ.

ಆದರೆ ಕಲ್ಲಿನ ಕಲಾಕೃತಿಗಳಂತೆ ಇವು ಶಾಶ್ವತವಲ್ಲ. ಹಳತಾದಂತೆ ಗೆದ್ದಲು, ಇಲ್ಲವೇ ಬೆಂಕಿಗೆ ಸಿಕ್ಕಿ ನಾಶವಾಗುತ್ತವೆ. ಕೊರೆಯುವ ಪರಿಣತರು ಎಲ್ಲ ದೇಶಗಳಲ್ಲೂ ಇದ್ದಾರೆ. ಅವರ ಅಂಗಡಿಯ ಮುಂದೆ ಪ್ರವಾಸಿಗರ ದಂಡೇ ಇರುತ್ತದೆ. ಬೆನ್ ಎನ್ವೊನ್ವು ಅವರ ಪ್ರಕಾರ "ಆಫ್ರಿಕದ ಕಲೆ ಮತ್ತು ಕಲಾಕೃತಿಗಳೆಂದರೆ ಧಾರ್ಮಿಕ ಕಲೆ ಮತ್ತು ಕಲಾವಸ್ತುಗಳು. ಪಾಶ್ಚಿಮಾತ್ಯ ದೃಷ್ಟಿಯಿಂದ ನೋಡುವಂತಹ ಕಲೆಯಲ್ಲ. ಈಬೋ

5. ಜೊಫ್ರಿ ಪ್ಯಾರಿಂಡರ್ – ಪುಟ 12–13

ಭಾಷೆಯಲ್ಲಿ ಮರದ ಪ್ರತಿಮೆಗೆ 'ಓಮೇ–ನ್ಕ' ಎಂದರೆ 'ಅವರ ನಿರ್ಮಾಣ'– ಅರ್ಥಾತ್ ಯಾರ ಹೆಸರು ಹೇಳಬಾರದೋ ಅವರ ನಿರ್ಮಾಣ ಎಂಬರ್ಥ ಬರುತ್ತದೆ. ಸತ್ತವರ ಆತ್ಮಕ್ಕೆ ಒಂದು ಕಲ್ಪಿತ ಶರೀರವನ್ನು ಕೊಟ್ಟು ಅವರನ್ನು ನಾವಿರುವ ಪ್ರಪಂಚಕ್ಕೆ ಆಹ್ವಾನಿಸುವುದೇ ನಮ್ಮ ಕಲೆಯ ಉದ್ದೇಶ. ಹೀಗೆ ನಮ್ಮ ಪೂರ್ವಜರು ತಮ್ಮ ಪ್ರತಿಬಿಂಬದೊಳಗೆ ಆವಾಹಿತರಾಗಿ ನೆಲಸಿ, ನಮ್ಮ ಜೊತೆಯಲ್ಲೇ ವಾಸಿಸುತ್ತಾರೆ ಎಂಬುದು ಅವರ ನಂಬಿಕೆ.[6]

## ಐತಿಹಾಸಿಕ ತಳಹದಿ

### ಪ್ರಾಗೈತಿಹಾಸ:

"ಭೂಮಿಯ ಮೇಲೆ ಮಾನವನ ಮೊದಲ ನಿವಾಸವು ಈಡನ್ ಉದ್ಯಾನವಾಗಿದ್ದ ಪಕ್ಷದಲ್ಲಿ ಅದಿರುವುದು ಪೂರ್ವ ಆಫ್ರಿಕದಲ್ಲೇ" ಎಂದು ಹೋವರ್ಡ್ ವಿ.ವಿ. ನಿಲಯದ ಆಫ್ರಿಕ ಅಧ್ಯಯನ ವಿಭಾಗದ ಡಾ॥ ಮಿಸ್ ಮಲ್ಯಿಕ ಮುಟೀರೆ ಎಂಬ ಕೀನ್ಯದ ವಿದ್ವಾಂಸರೊಬ್ಬರು ಹೇಳುತ್ತಾರೆ. "ಅಲ್ಲಿ ನಿಸರ್ಗವೆಂಬ ತಾಯಿ ಕಾಲವೆಂಬ ಪುರುಷನ ಜೊತೆಗೂಡಿ ರಿಫ್ಟ್‌ವ್ಯಾಲಿ ಎಂಬ ಸೀಳು ಕಂದರಗಳನ್ನು ಮಾನವನ ಮೂಲ ನೆಲೆಯಾಗಿ ಸೃಷ್ಟಿಸಿ, ಮುಂದೆ ಅದರ ವಿಧಿ ವಿಧಾನಗಳು ಇಲ್ಲಿಂದಲೇ ಪ್ರಕಟಗೊಳ್ಳಲಿ ಎಂಬ ಉದ್ದೇಶದಿಂದ ನಮಗಾಗಿಯೇ ಅವುಗಳನ್ನು ನಿರ್ಮಿಸಿದರೋ ಎಂಬಂತೆ ಕಾಣುತ್ತವೆ. ಇತ್ತೀಚೆಗೆ ಸೀಳು ಕಂದರ ಹಾಗೂ ಅದರ ಆಸುಪಾಸಿನಲ್ಲಿ ದೊರೆತಿರುವ ಗತಕಾಲದ ಮಾನವ ಅವಶೇಷದ ಚೂರುಗಳನ್ನು ವಿಜ್ಞಾನಿಗಳು ತಮ್ಮ ಸತತ ಪ್ರಯತ್ನದಿಂದ ಹೊರತೆಗೆದು, ಜೋಡಿಸಿ, ಅವು ಹೇಳುವ ಇತಿಹಾಸ ಕಥನಗಳನ್ನು ನಮ್ಮ ಮುಂದೆ ಇರಿಸಿದ್ದಾರೆ. ಇದುವರೆಗೆ ದೊರೆತಿರುವ ಈ ಪಳೆಯುಳಿಕೆಗಳು ಸುಮಾರು 41 ಲಕ್ಷ ವರ್ಷಗಳಷ್ಟು ಹಿಂದಕ್ಕೆ ಹೋಗುವ ನಮ್ಮ ಪೂರ್ವೇತಿಹಾಸವನ್ನು ಬಹಿರಂಗ ಪಡಿಸುತ್ತವೆ" ಎಂದು ಮಲ್ಯಿಕ ವರ್ಣಿಸುತ್ತಾರೆ.

ಟಾಂಜಾನಿಯದ ಸೆರೆಂಗೆಟಿ ಮೈದಾನದಲ್ಲಿರುವ ಆಲ್ಡುವಾಯ್ ಕೊರಕಲು "ಮಾನವ ವಿಕಾಸ ಕೇಂದ್ರ" ವೆಂದೇ ಪ್ರಸಿದ್ಧಿ ಪಡೆದಿದೆ. ಇದು ಡಾ॥ ಲೂಯಿ ಮತ್ತು ಮೇರಿ ಲೀಕೀ ದಂಪತಿಗಳ ಪ್ರಥಮ ಕಾರ್ಯಕ್ಷೇತ್ರ. ಇಲ್ಲಿನ ಪದರ ಶಿಲೆಗಳಲ್ಲಿ ದೊರೆತ ಅಸ್ಥಿ ಅವಶೇಷಗಳಿಂದ– ನೆಟ್ಟಗೆ ನಿಂತು ಎರಡು ಕಾಲುಗಳಿಂದ ನಡೆಯಬಲ್ಲ– ಹೋಮೋ ಹೆಬಿಲಿಸ್ (19 ಲಕ್ಷ ವರ್ಷ) ಮತ್ತು ಹೋಮೋ ಎರೆಕ್ಟಸ್ (15 ಲ.ವ) ಎಂಬ ವಾನರ ವಂಶವೃಕ್ಷದ ಎರಡು ಶಾಖೆಗಳನ್ನು ಪತ್ತೆ ಹಚ್ಚಿದರು. ಅನಂತರ ಅವರ ಮಗ ರಿಚರ್ಡ್ ಲೀಕೀ ಎಂಬವರು ಕೆನ್ಯಾದ ತುರ್ಕಾನಾ ಸರೋವರದ ಪಶ್ಚಿಮ ತೀರದಲ್ಲಿ ದೊರೆತ

---

6. ಬೆನ್ ಎನ್ವೊನ್ವು– ಆಫ್ರಿಕನ್ ವ್ಯೂ ಅಫ್ ಆರ್ಟ್‌ಫೆಸ್ಟಾಕ್ 77. p52. www-Look and Live-Spirit Worship. html/

ಆಸ್ಟ್ರಲೋ ಪಿಥಿಸೈನ್ ಅವಶೇಷಗಳನ್ನೂ ಪೂರ್ವತೀರದ ಕೂಬಿಫೊರಾ ಎಂಬಲ್ಲಿ ದೊರೆತ ಹೋಮಿನಿಡ್‌ನ ಮೂರು ಕವಲುಗಳ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಹೋಮೋ ರುಡಾಲ್ಫೆನ್ಸಿಸ್ (19 ಲ. ವ.) ಹೋಮೋ ಎರ್ಗಾಸ್ಟರ್ (18 ಲಕ್ಷವರ್ಷ) ಹಾಗೂ ಹೋಮೋ ಹೆಬಿಲಿಸ್ ವಾಹಿನಿಗಳಿಗೆ ಸೇರಿದ ಈ ಮೂರು ತಲೆ ಬುರುಡೆಯ ಪಳೆಯುಳಿಕೆಗಳು ನೈರೋಬಿ ನ್ಯಾಷನಲ್ ಮ್ಯೂಸಿಯಂನಲ್ಲಿವೆ.[7]

ಇಥಿಯೋಪಿಯದ ಆವಾಷ್ ನದೀ ಬಯಲಿನ ಹಡರ್ ಮತ್ತು ಅರಾಮಿಸ್ ಪ್ರದೇಶದಲ್ಲಿ 31 ಲಕ್ಷದ 80 ಸಾವಿರ ವರ್ಷದ ಹಿಂದಿನ "ಲೂಸಿ" ಎಂದು

ವಿಜ್ಞಾನಿಗಳು ಹೆಸರಿಟ್ಟ ಹುಡುಗಿಯ ಅಸ್ಥಿ ಅವಶೇಷಗಳನ್ನು ಡಾನಲ್ಡ್ ಜಾನ್‌ಸನ್ ಎಂಬವರು 1974 ರಲ್ಲಿ ಹೊರ ತೆಗೆದಿದ್ದಾರೆ. ಈ "ಮಾನವ ಕುಲದ ಮಾತೆಯ" ಅವಶೇಷಗಳನ್ನು ನೋಡಲು ಅನೇಕ ವಿಜ್ಞಾನಿಗಳು ಬಂದು ಹೋಗಿದ್ದಾರೆ.

ಎರಡು ಕಾಲಿನ ಮೇಲೆ ನಡೆದಾಡುವ ಸಮತೂಕ ಭಂಗಿಯನ್ನು ಸಾಧಿಸಿದ ಮೇಲೆ ಹೋಮೋ ಎರೆಕ್ಟಸ್ ಶಾಖೆಯವರು ವೇಗವಾಗಿ ಚಲಿಸಬಲ್ಲವರಾದರು. ಮೆದುಳು ಗಾತ್ರವನ್ನು ಹೆಚ್ಚಿಸಿಕೊಂಡ ಹಳೆಯ ಹೋಮೋ ಸ್ಯಾಪಿಯನ್ ಶಾಖೆಯವರು (8 ಲಕ್ಷದಿಂದ 2 ಲಕ್ಷದವರೆಗೆ) ಇತರ ನೆಲೆಗಳನ್ನು ಅರಸುತ್ತಾ ಹೊರಟರು. ಅಂಗಶಾಸ್ತ್ರರೀತ್ಯಾ ಆಧುನಿಕ ಮಾನವನಿಗೆ ಹತ್ತಿರವಾದ ಹೊಸ ಹೋಮೋ ಸ್ಯಾಪಿಯನ್ ಶಾಖೆಯವರು (3 ಲಕ್ಷದಿಂದ 1 $^{1}/_{2}$ ಲಕ್ಷದ ವರೆಗೆ) ಸವನ್ನಾ ಹುಲ್ಲು ಮೈದಾನಗಳನ್ನು ಶೀಘ್ರವಾಗಿ ದಾಟಿ ಆಫ್ರಿಕದ ಇತರೆಡೆಗೆ ಹಾಗೂ ಯೂರೇಷಿಯದ ಕಡೆಗೆ ವಿಸ್ತೃತಗೊಂಡರು[8]. ಅವರು ಪ್ರಾರಂಭದಲ್ಲೇ ತಮ್ಮ ಪರಿಸರದಲ್ಲಿದ್ದ ಹಸು, ಕುರಿ, ಆಡು, ಕೋಳಿ ಇತ್ಯಾದಿ ಪ್ರಾಣಿ ಪಕ್ಷಿಗಳನ್ನೂ ಜೋಳ, ಗೆಣಸು, ಹತ್ತಿ ಮುಂತಾದ ಸಸ್ಯಗಳನ್ನೂ ಪಳಗಿಸಿ ಸುಧಾರಿಸಿಕೊಂಡರು.

## ಆದಿ ಸಂಸ್ಕೃತಿಗಳ ಉದಯ:

ಪ್ರಾರಂಭಿಕ ಕಾಲದಿಂದಲೂ ಆಫ್ರಿಕದ ಆದಿಮಾನವ ತನ್ನದೇ ಆದ ಮೂಲ ಸಂಸ್ಕೃತಿಯೊಂದನ್ನು ರೂಪಿಸುವ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾನೆ. ಈ ಪ್ರಯತ್ನದಲ್ಲಿ ಆತನು ಪ್ರಕೃತಿ ಸನ್ನಿವೇಶಗಳನ್ನು ಗೆದ್ದದ್ದು ಇಲ್ಲವೇ ಪ್ರಕೃತಿಯೊಡನೆ ಮಾಡಿಕೊಂಡ ಹೊಂದಾಣಿಕೆಗಳು ಪ್ರತಿಬಿಂಬಿತವಾಗುತ್ತವೆ. ಪ್ರಾರಂಭದಲ್ಲಿ ಆಹಾರ ಶೇಖರಣೆ ಮಾಡುವ ಸಸ್ಯಹಾರೀ ಸಮಾಜವೊಂದು ಕಾಣಿಸಿಕೊಂಡು ಅದು ಮಾಂಸಾಹಾರೀ ಸಮಾಜಕ್ಕೆ ಎಡೆಮಾಡಿಕೊಟ್ಟಿತು. ಕ್ರಮೇಣ "ಆಹಾರ ಶೇಖರಣೆ ಮತ್ತು ಬೇಟೆಗಾರ" ಸಮಾಜಗಳು ಸೃಷ್ಟಿಯಾದವು. ಅಂತಹ ಸಮಾಜಗಳು ಈಗಲೂ ಕಲಹರಿ ಮರುಭೂಮಿ ಪ್ರದೇಶದ ಕೊಹಿಸಾನ್ ಬುಡಕಟ್ಟು ಹಾಗೂ ಜ಼ಾಯಿರೆಯ

7. "ದಿ ಡಾನ್ ಅಫ್ ಹ್ಯೂಮನ್ಸ್"– ನ್ಯಾಷನಲ್ ಜೊಗ್ರಾಫಿಕ್ vol.191 No.2. Feb. 1997.
8. ಐಬಿದ್.

ಇಟೂರಿ ಕಾಡಿನ ಬಂಬೂತಿ ಬುಡಕಟ್ಟುಗಳಲ್ಲಿ ದಾಖಲಾಗಿವೆ. ಮುಂದೆ ಪಶುಪಾಲನೆಯ ಜೊತೆಗೇ ಬೇಟೆಯು ಬೆರಸಿಕೊಂಡು "ಬೇಟೆಗಾರ ಪಶುಪಾಲಕ" ಸಮಾಜಗಳು ರೂಪಿತವಾದವು. ಸಾವಿರಾರು ಚದರ ಮೈಲಿ ಹರಡಿರುವ ಸವನ್ನಾ ಹುಲ್ಲುಗಾವಲಿನಲ್ಲಿ ರೂಪು ತಾಳಿದ ಇಂತಹ ಸಮುದಾಯಗಳು ಅಲೆಮಾರೀ ಸಮುದಾಯಗಳಾಗ ಬೇಕಾಯಿತು. ತಮ್ಮ ಪಶುಗಳನ್ನು ಸಿಂಹ, ಚಿರತೆಗಳಿಂದ ರಕ್ಷಿಸಿಕೊಳ್ಳಲು ಬಿಲ್ಲು ಹಿಡಿಯಬೇಕಾಯಿತು. ಬೇಟೆಗೆ ಸಂಬಂಧಪಟ್ಟ ದೀಕ್ಷಾ ವಿಧಿಗಳು ಸಂಸ್ಕೃತಿಯ ಅಂಗವಾಗಿ ಬೆಳೆಯ ತೊಡಗಿದವು. ಇಂದಿನ ಮಾಸಾಯಿ, ಕಿಕೂಯು, ತುರ್ಕಾನಾ, ಕಾರ ಮೊಜಾಂಗ್, ಸಾಂಬುರು ಮುಂತಾದ ಪಂಗಡಗಳು ಬೇಟೆಗಾರ- ಪಶುಪಾಲಕ ಸಮಾಜಗಳಿಂದ ಉದ್ಭವಿಸಿದ ಸಮೂಹಗಳೇ ಆಗಿವೆ. ಇವರ ಜೀವನಶೈಲಿ, ಮನರಂಜನೆ, ಆಚರಣೆಗಳೆಲ್ಲವೂ ತಮ್ಮ ವೃತ್ತಿ ಜೀವನದ ಸುತ್ತಲೂ ಹೆಣೆಯಲ್ಪಟ್ಟಿವೆ. ನೆರೆಹೊರೆಯ ಸಮೂಹಗಳಿಂದ. ದನಕರುಗಳನ್ನು ಕೊಳ್ಳೆಹೊಡೆದು ಅಥವಾ ಯುದ್ಧಮಾಡಿ ಹಿಂದಿರುಗಿದ ಸಂದರ್ಭಗಳನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ವಸಾಹತು ಸರ್ಕಾರಗಳ ಸತತ ಪ್ರಯತ್ನದಿಂದಾಗಿ ಅವರ ಬೇಟೆಯಾಡುವ ಪ್ರವೃತ್ತಿ ನಿಯಂತ್ರಣಗೊಂಡರೂ ಅವರ ಕುಲಸಂಸ್ಕೃತಿಯಾದ ಕೊಳ್ಳೆ ಮತ್ತು ಅದರಿಂದಾಗುವ ದುಷ್ಪರಿಣಾಮಗಳು ನಿಯಂತ್ರಣಗೊಂಡಿಲ್ಲ.

ಒಣ ಹುಲ್ಲುಗಾವಲು ಆಧಾರಿತ ಪಶುಪಾಲಕ ಸಮಾಜಗಳಿಂದ ಬೇರೆಯಾದ ಬೇಸಾಯಗಾರ ಸಮಾಜಗಳು ನದೀ ಬಯಲುಗಳಲ್ಲಿ ಹುಟ್ಟಿಕೊಂಡವು. ಇಂತಹ ಸಮಾಜಗಳಲ್ಲಿ ಪ್ರತ್ಯೇಕ ನಾಗರೀಕತೆಯೊಂದು ಉದ್ಭವಿಸಿತು. ಮಣ್ಣು ಮತ್ತು ನೀರಿನ ಆಶ್ರಯದಲ್ಲಿ ಬೇರೂರಿದ ಬೇಸಾಯ ಸಮುದಾಯಗಳಲ್ಲಿ ಕೇಂದ್ರಾಡಳಿತ ಕ್ರಮ ಮತ್ತು ರಾಜಕೀಯ ವ್ಯವಸ್ಥೆಗಳು ಸೃಷ್ಟಿಗೊಂಡವು. ನದೀ ಬಯಲುಗಳಲ್ಲಿ ಸ್ಥಿತವಾದ ಹಳ್ಳಿಪಟ್ಟಣಗಳು, ಅನಂತರ ಸಾಮ್ರಾಜ್ಯಗಳು ಸ್ಥಾಪಿತಗೊಂಡವು. ನೈಲ್‌ನದೀ ಬಯಲಿನ ನೂಬಿಯ ಮತ್ತು ಈಜಿಪ್ಟ್ ಸಾಮ್ರಾಜ್ಯಗಳಂತೆಯೇ ಕಾಲಾಂತರದಲ್ಲಿ ನೈಜರ್ ನದೀ ವ್ಯಾಪ್ತಿಯಲ್ಲಿ ಘಾನಾ, ಮಾಲಿ, ಶೊಂಘಾಯ್, ಇಫೆ, ಬೆನಿನ್ ಮುಂತಾದ ಕೇಂದ್ರಾಡಳಿತ ರಾಜ್ಯಗಳು ಉದಯಿಸಿದುವು. ಇವಲ್ಲದೆ ಹಾವಸಾ ಜನಾಂಗದ ಏಳು ಸ್ವಾಯತ್ತ "ನಗರ ರಾಜ್ಯಗಳು" ಹುಟ್ಟಿಕೊಂಡವು. ಇವೆಲ್ಲವೂ ಐರೋಪ್ಯರು ಕಾಲಿಡುವ ಮೊದಲೇ ವಿಕಸನ ಗೊಂಡಿದ್ದುವೆಂಬುದು ಐತಿಹಾಸಿಕ ಸತ್ಯ.

ಮರುಭೂಮಿಯ ಸಮೀಪ ವಾಸವಾಗಿದ್ದ ವ್ಯಾಪಾರೀ ಸಮುದಾಯಗಳು ಒಂಟೆಯಾಧಾರಿತ ವರ್ತಕ ಸಮಾಜಗಳನ್ನು ಹುಟ್ಟಿಹಾಕಿದವು. ಇದಕ್ಕೆ ಎದುರಾಗಿ ದಕ್ಷಿಣ ಮತ್ತು ಪೂರ್ವ ಆಫ್ರಿಕದ ಪಶುಪಾಲಕ ಸಮಾಜಗಳಲ್ಲಿ ಜನತಂತ್ರ ಆಡಳಿತ ಕ್ರಮವೊಂದು ಉದ್ಭವಿಸಿತು. ಪಶುಪಾಲಕ ಸಮುದಾಯಗಳು ಪಶುಗಳ ಅಗತ್ಯಕ್ಕೆ ತಕ್ಕಂತೆ ಅಲೆದಾಡುವವರಾಗಿದ್ದುದರಿಂದ ತಮ್ಮ ಪ್ರಭುತ್ವಕ್ಕೆ ಒಂದು ಪ್ರಾದೇಶಿಕ ಗಡಿಯನ್ನು

ಕಲ್ಪಿಸಲು ಸಾಧ್ಯವಾಗಲಿಲ್ಲ. ಆದರೂ ಆಫ್ರಿಕದ ರಾಜಕೀಯ ವ್ಯವಸ್ಥೆಯಲ್ಲಿ ಒಂದು ಕಡೆ ಸಾಮಾಜಿಕ ವರ್ಗೀಕರಣವುಳ್ಳ ಕೇಂದ್ರಾಡಳಿತ ಸಮಾಜವನ್ನೂ ಮತ್ತೊಂದು ಕಡೆ ವರ್ಗರಹಿತ ಜನತಂತ್ರ ಆಡಳಿತ ಸಮಾಜವನ್ನು ಮೊದಲೇ ಸೃಷ್ಟಿಮಾಡಿದ್ದುವು. ಇಲ್ಲೇ ಆಫ್ರಿಕದ ಸಂಪ್ರದಾಯಬದ್ಧ ನಾಗರಿಕ ಸಮಾಜಗಳು ತಮ್ಮ ತಮ್ಮ ಭಾವುಕ ಪ್ರತಿಕ್ರಿಯೆಗಳನ್ನು ವ್ಯಕ್ತ ಪಡಿಸುವುದು ಅಥವಾ ಅತ್ಯಂತ ನಾಜೂಕಿನ ನಡತೆಯನ್ನು ಪ್ರಕಟಿಸುವುದು ಎನ್ನುತ್ತಾರೆ ಡಾ॥ ಮಲ್ಲೈಕಾ ಮುಟೀರೆ.

**ಪ್ರಾಚೀನ ಇತಿಹಾಸ:**

ಈಜಿಪ್ಟಿನಿಂದ ಹೊರಗೆ ಈಜಿಪ್ಟಿನಷ್ಟೇ ಹಳೆಯ ನಾಗರಿಕತೆಗಳು ಆಫ್ರಿಕದ ಇತರ ಕಡೆಗಳಲ್ಲಿ ಇದ್ದ ನಿದರ್ಶನಗಳಿವೆ. ನೂಬ್ಬಿಯ ಸಾಮ್ರಾಜ್ಯ ಅದರಲ್ಲೊಂದು. ನೂಬ್ಬಿಯವು ಉತ್ತರ ಸೂಡಾನಿನಲ್ಲಿದ್ದಿತಾದರೂ, ಸೂಡಾನಿನಿಂದ ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರದವರೆಗೂ ಹರಡಿತ್ತು. ಪ್ರಾಚೀನ ಈಜಿಪ್ಟ್ ರಾಜ ಮನೆತನದವರು ತಮ್ಮ ಮೂಲ ಪುರುಷರು ಮೌಂಟ್‌ರುವೆನ್ಸೋರಿ ಬೆಟ್ಟ ಪ್ರದೇಶದಿಂದ ಬಂದವರೆಂದು ಬೆರಳು ಮಾಡಿ ತೋರಿಸಿದ್ದಾರೆ. ಈಜಿಪ್ಟ್ ನಾಗರಿಕತೆಯು ಮಧ್ಯ ಆಫ್ರಿಕದ ಈ ತೊಟ್ಟಿಲಿನಿಂದ ಹುಟ್ಟಿ ಬಂದದ್ದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಈಜಿಪ್ಟಿನ ದಕ್ಷಿಣದ ನೆರೆರಾಜ್ಯವಾಗಿದ್ದ 'ನೂಬಿಯ' (ಚಿನ್ನದ ನಾಡು) ನಾಗರಿಕತೆಯು ಈಜಿಪ್ಟಿಗಿಂತಲೂ ಹಳೆಯದೆಂದು ಅವರು ಹೇಳುವುದುಂಟು.

ನೂಬಿಯ ನಿವಾಸಿಗಳು ಬೇಸಾಯಗಾರರೂ, ಪಶುಪಾಲಕರೂ, ಶಿಲ್ಪಿಗಳೂ, ಉತ್ತಮ ಬಿಲ್ಲುಗಾರರೂ ಆಗಿದ್ದರು. ನೂಬಿಯ ಮತ್ತು ಈಜಿಪ್ಟ್, ರಾಜ್ಯಗಳು ಕೆಲಕಾಲ ಪರಸ್ಪರರ ವಸಾಹತುಗಳಾಗಿದ್ದುದು ಇತಿಹಾಸ ಸ್ಪಷ್ಟ ನೂಬಿಯ ರಾಜರಲ್ಲಿ ಪ್ರಸಿದ್ಧನಾದ **ಪಿಯಾಂಕಿ** ಎಂಬದೊರೆಯೇ ಈಜಿಪ್ಟ್‌ನ್ನು ಗೆದ್ದು ಅಲ್ಲಿನ 25 ನೇ ರಾಜವಂಶವನ್ನು ಸ್ಥಾಪಿಸಿದವನು. ಮೆರೋ (ಇಂದಿನ ಖಾರ್ಟೂಮ್) ಎಂಬುದು ಅವನ ರಾಜಧಾನಿಯಾಗಿತ್ತು. ನೂಬಿಯ ಮತ್ತು ಈಜಿಪ್ಟ್ ಎರಡೂ ಪರಂಪರೆಯಲ್ಲಿ ದೇವರ ಮಕ್ಕಳೆಂದು ಅಂಕಿತವಾದ ಅಣ್ಣ ತಂಗಿಯರು ರಾಜ-ರಾಣಿಯರಾಗಿ ಅಧಿಕಾರಕ್ಕೆ ಬರುವುದು ರೂಢಿಯಲ್ಲಿತ್ತು. ಅವರ ಸ್ಥಾನ ಪವಿತ್ರವಾದುದು.

"ಕೆಮೆತ್" ಎಂದು ಕರೆಯಲ್ಪಟ್ಟ ಪ್ರಾಚೀನ ಈಜಿಪ್ಟ್ ನಿವಾಸಿಗಳು ಮುಂದೆ ಬರುವ ಈಜಿಪ್ಟ್ ನಾಗರಿಕತೆಗೆ ಅಸ್ತಿಭಾರ ಹಾಕಿದರು. ಅವರು ಮುಖ್ಯವಾಗಿ ಬೇಸಾಯಗಾರರು. ತಮ್ಮ ನೀರಾವರೀ ಕೌಶಲ್ಯ ಮತ್ತು ಪ್ರಾಣಿಸಾಕಾಣಿಕೆಯಿಂದ ನೈಲ್‌ನದೀ ಬಯಲನ್ನೂ ಆಹಾರೋತ್ಪನ್ನದ ಕೇಂದ್ರವಾಗಿ ಪರಿವರ್ತಿಸಿದರು. ಬುದ್ಧಿವಂತರಾದ ಇವರು ಕ್ರಮೇಣ ಜಗತ್ಪ್ರಸಿದ್ಧ ನಾಗರಿಕತೆಯೊಂದನ್ನು ಸೃಷ್ಟಿಸಿದರು. ಕ್ರಿ.ಶ. 4ನೇ ಶತಮಾನದಿಂದ 18ನೇ ಶತಮಾನದವರೆಗೂ, ಅಂದರೆ ಐರೋಪ್ಯರು ಕಾಲಿಟ್ಟಮೇಲೂ, ಪೂರ್ವ ಮತ್ತು ಪಶ್ಚಿಮ ಸೂಡಾನ್‌ಗಳಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳೂ, ಸಾಮ್ರಾಜ್ಯಗಳೂ ಅಸ್ತಿತ್ವದಲ್ಲಿದ್ದುವು. ಅವುಗಳ ಸೂಕ್ಷ್ಮ ಪರಿಚಯ ಇಲ್ಲಿದೆ.

ಪಶ್ಚಿಮ ಸೂಡಾನ್ ಹುಲ್ಲುಗಾವಲಿನಲ್ಲಿ ಬೆಳೆದ ಸಾಮ್ರಾಜ್ಯಗಳಲ್ಲಿ ಪ್ರಸಿದ್ಧವಾದವು ಮೂರು-ಪುರಾತನ ಘಾನಾ, ಮಾಲಿ ಮತ್ತು ಸೊಂಘಾಯ್, ಪುರಾತನ ಘಾನಾ ರಾಜ್ಯವಿದ್ದುದು ಈಗಿರುವ ಘಾನಾದೇಶದ ವಾಯುವ್ಯಕ್ಕೆ 400 ಮೈಲಿ ಆಚೆ, ಸನೇಗಾಲ್ ಮತ್ತು ನೈಜರ್ ನದಿಗಳ ನಡುವೆ. ಸೋನಿಂಕೆ ಬುಡಕಟ್ಟಿಗೆ ಸೇರಿದ ಡಿಂಗಸೆಸ್ಸೆ ಎಂಬವನಿಂದ ಕ್ರಿ.ಶ. 300 ರಲ್ಲಿ ಸ್ಥಾಪನೆಯಾಯಿತು. ಕುಂಬಿ ಸಾಲೆ ಎಂಬುದು ರಾಜಧಾನಿ. ಈಗಿನ ಸೆನೆಗಾಲ್, ಗ್ಯಾಂಬಿಯ, ಮಾರಿಟೇನಿಯ ಮತ್ತು ಮಾಲಿ ರಾಜ್ಯಗಳನ್ನೊಳಗೊಂಡಿದ್ದ ಈ ರಾಜ್ಯವು ಚಿನ್ನ ಮತ್ತು ಉಪ್ಪಿನ ವ್ಯಾಪಾರದಿಂದ ಬಹುಬೇಗ ಐಶ್ವರ್ಯ- ಪ್ರಾಮುಖ್ಯತೆಗಳಿಸಿತು. ಕ್ಯಾರವಾನ್ ಮಾರ್ಗಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿತ್ತು. ಬಹುಬೇಗ ಸಾಮ್ರಾಜ್ಯವಾಗಿ ಬೆಳೆಯಿತು. 40 ಸಾವಿರ ಬಿಲ್ಲುಗಾರರ ಸೈನ್ಯ ಬಲ, ಉತ್ತಮ ತೆರಿಗೆ ಮತ್ತು ಸುಂಕಗಳ ವ್ಯವಸ್ಥೆವುಳ್ಳ ಕೇಂದ್ರ ಆಡಳಿತಗಳಿಂದ ಪ್ರಸಿದ್ಧವಾಗಿತ್ತು. ಕ್ಯಾರವಾನ್ ವರ್ತಕರು ತಮ್ಮ ಜೊತೆಗೆ ಇಸ್ಲಾಂ ಧರ್ಮವನ್ನು, ಓದು ಬರಹಗಳನ್ನೂ ತಂದರು. ಅರಬ್ ಲೇಖಕರಾದ ಅಲ್ ಹಮ್ದಾನಿ ಮತ್ತು ಅಲ್‌ಬಾಕ್ರಿ ಎಂಬವರು ಪುರಾತನ ಘನಾ ಸಾಮ್ರಾಜ್ಯದ ಬಗ್ಗೆ ಬರೆಯುತ್ತಾ- ಅಂದಿನ ಜಗತ್ತಿನಲ್ಲಿ ಅತ್ಯಂತ ಹಿರಿದಾದ ಚಿನ್ನದ ಗಣಿಗಳು ಸೆನೆಗಾಲ್ ನದೀ ಪಾತ್ರದಲ್ಲಿದ್ದುವು. ಸೋನಿಂಕೆ ವ್ಯಾಪಾರಿಗಳು ಉಪ್ಪು, ಚಿನ್ನ ತಾಮ್ರ ಮತ್ತು ಗುಲಾಮರನ್ನು, ಬಟ್ಟೆಗಳು, ಮಣಿ ಹಾಗೂ ಸಿದ್ಧವಸ್ತುಗಳಿಗೆ ವಿನಿಮಯ ಮೂಲಕ ವ್ಯಾಪಾರ ಮಾಡುತ್ತಿದ್ದರು. ಮುಸ್ಲಿಂ ಕರಣಿಕರು ಮತ್ತು ವಿದ್ವಾಂಸರು ರಾಜ್ಯದ ವ್ಯವಸ್ಥಿತ ಆಡಳಿತಕ್ಕೆ ಕಾರಣರಾಗಿದ್ದರು ಎಂದು ಹೇಳುತ್ತಾರೆ.

**ಪುರಾತನ ಘಾನಾ ರಾಜ್ಯದ ಅವನತಿಗೆ ಅನೇಕ ಕಾರಣಗಳುಂಟು:**

ಮೊದಲನೆಯದಾಗಿ ಮೇಲಿಂದ ಮೇಲೆ ಒದಗಿ ಬಂದ ಬರಗಾಲ. ಮರುಭೂಮಿಯಂಚಿನ ಪರಿಸರವು ಅತಿ ಸೂಕ್ಷ್ಮವಾದ ಕಂಪ್ಯೂಟರ್ ತಕ್ಕಡಿಯಿದ್ದಂತೆ. ಅಲ್ಲಿ ಮಾನವ ಮತ್ತು ಪಶು ಪ್ರಾಣಿಗಳ ತೂಕವು ಮಳೆ, ಬೆಳೆ ಹುಲ್ಲಿನ ಪ್ರಮಾಣಕ್ಕಿಂತ ತೃಣ ಮಾತ್ರ ಹೆಚ್ಚಾದರೂ ಮರುಭೂಮಿಯ ಆಕ್ರಮಣ ಶತಸಿದ್ಧ. ಸಹರಾ ಮರುಭೂಮಿಯು ಇದೇ ಕಾರಣಕ್ಕೆ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ವಿಸ್ತರಿಸುತ್ತಾ ಹೋಗಿ ಸಮುದ್ರ ತೀರಗಳನ್ನು ಮುಟ್ಟಿ ಆಯಿತು. ಕಳೆದ 6000 ವರ್ಷಗಳಿಂದೀಚೆಗೆ ಇದು ಶೀಘ್ರ ಗತಿಯಲ್ಲಿ ನಡೆದಿದೆ. ಈಗ ದಕ್ಷಿಣದ ಕಡೆಗೆ ವಿಸ್ತರಿಸುತ್ತಾ ಇದೆ ಎರಡನೆಯದಾಗಿ ಉತ್ತರದ ಕಡೆಯಿಂದ ಬರುತ್ತಿದ್ದ ಆಲ್ಮೊರಾವಿದ್ ಮುಸ್ಲಿಮರ ಧಾಳಿಗಳಿಂದ ವ್ಯವಸಾಯ, ಗಣಿಗಾರಿಕೆ, ವ್ಯಾಪಾರ ಕ್ಷೇತ್ರಗಳು ತೀವ್ರ ನಷ್ಟಕ್ಕೊಳಗಾದುವು. ಪರಿಣಾಮವಾಗಿ ಘಾನಾ ಸಾಮ್ರಾಜ್ಯವು ಹೊಸದಾಗಿ ಬೆಳೆಯುತ್ತಿದ್ದ ಮಾಲಿ ಸಾಮ್ರಾಜ್ಯದ ಪ್ರಭಾವದಿಂದ ಕ್ರಿ.ಶ. 1235 ರಲ್ಲಿ ಸಂಪೂರ್ಣವಾಗಿ ಮರೆಯಾಯಿತು.

ಮಾಲಿ ಸಾಮ್ರಾಜ್ಯವು ಖೈತಾ ಬುಡಕಟ್ಟಿಗೆ ಸೇರಿದ ಸಾನ್‌ದಿಯಾತ ಎಂಬ ಮಹಾಪುರುಷನಿಂದ ಕ್ರಿ.ಶ. 1230ರಲ್ಲಿ ಸ್ಥಾಪಿಸಲ್ಪಟ್ಟಿತು. ಪುರಾತನ ಮಾಲಿ ದೊರೆಗಳ

ಸಾಹಸ ಕಥೆ ಮತ್ತು ಸಚ್ಚಾರಿತ್ರ್ಯಗಳ ಬಗೆಗೆ ಮಹಾ ಕಾವ್ಯವೊಂದನ್ನು ರಚಿಸಿ ಮಾಲಿಯ ಪರಂಪರೆಯಲ್ಲಿ ಅದನ್ನು ಮೌಖಿಕವಾಗಿ ಉಳಿಸಿಕೊಂಡು ಬಂದಿದ್ದಾರೆ. ಸ್ಥಾಪಕ ಪುರುಷ ಸಾನ್‌ದಿಯಾತನ ಸಾಹಸ ಕಥೆಗಳನ್ನು ಮಾಮಡೂ ಕೊಯಾಟಿಯೆಂಬ ವಾಗ್‌ಇತಿಹಾಸಕಾರ ಬಿ.ಬಿ.ಸಿ. ವಿಶ್ವಸೇವೆ ಬಾನುಲಿಯ ಮೇಲೆ 1960ರಲ್ಲಿ ಹರಿಕಥೆಯಂತೆ ಸ್ವಾರಸ್ಯವಾಗಿ ವಾಚನಮಾಡಿ ಜನಮೆಚ್ಚಿಗೆ ಪಡೆದಿದ್ದಾನೆ. ಖೈತಾ ವಂಶದ ದೊರೆಗಳಲ್ಲಿ ಪ್ರಸಿದ್ಧರಾದವರು ಮೂರುಜನ: ಸಾನ್‌ದಿಯಾತ, ಇಮ್ಮಡಿ ಅಬುಬಾಕರ್ ಮತ್ತು ಮಾನ್ಸಾ ಮೂಸಾ.

ಸ್ಥಾಪಕ ಸಾನ್‌ದಿಯಾತನು ರಾಜ್ಯವನ್ನು ವಿಸ್ತರಿಸಿ "ಮಾನ್ಸಾ" (ಚಕ್ರವರ್ತಿ) ಎಂಬ ಬಿರುದನ್ನು ಸಂಪಾದಿಸಿದ. ತವಾರಿಕ್ (ಟ್ವಾರೆಗ್) ದಾಳಿಕೋರರಿಂದ ಟಿಂಬಕ್ಟು ಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ವ್ಯಾಪಾರ ಮತ್ತು ವಿದ್ಯಾಕೇಂದ್ರವನ್ನಾಗಿ ಪರಿವರ್ತಿಸಿದ. ಚಿನ್ನದ ಗಣಿ ಮತ್ತು ಸಹರಾ ಒಂಟೆ ಮಾರ್ಗಗಳನ್ನು ಮರುಸ್ಥಾಪಿಸಿದ. ತೆರಿಗೆ ಮತ್ತು ವ್ಯಾಪಾರಕ್ಕೆ ಚಿನ್ನದ ನಾಣ್ಯ ಮತ್ತು ಕವಡೆಗಳನ್ನು ಉಪಯೋಗಿಸುತ್ತಿದ್ದರು. ಇವನು ಸಾಧಿಸಿದ ಮಹತ್ಕಾರ್ಯವೆಂದರೆ ತನ್ನ ಎಲ್ಲಾ ಸೈನಿಕರ ಗಮನವನ್ನು ವ್ಯವಸಾಯಕ್ಕೆ ತಿರುಗಿಸಿ ಮಾಲಿ ರಾಜ್ಯವನ್ನು ಸಮೃದ್ಧ ಬೇಸಾಯಗಾರ ದೇಶವನ್ನಾಗಿ ಪರಿವರ್ತಿಸಿದುದು.

ಇಮ್ಮಡಿ ಅಬುಬಾಕರನ ಕಾಲದಲ್ಲಿ ಸಾಮ್ರಾಜ್ಯವು ಅತ್ಯುನ್ನತ ಮಟ್ಟವನ್ನು ಮುಟ್ಟಿತು. ಇವನು ಸ್ವತಃ ನಾವಿಕ. ಒಂದು ನೌಕಾ ಪಡೆಯನ್ನು ಹೊಂದಿದ್ದ ಈತ ಅಟ್ಲಾಂಟಿಕ್ ಸಾಗರದಾಚೆ ಇರುವ ಭೂಮಿಯನ್ನು (ಅಮೇರಿಕವನ್ನು) ಕಂಡು ಹಿಡಿಯಲು ತವಕ ಪಡುತ್ತಿದ್ದ ಮೊದಲಿಗೆ 200 ಹಡಗುಗಳನ್ನು ಸಿದ್ಧಪಡಿಸಿ ಮೂರು ವರ್ಷಕ್ಕೆ ಬೇಕಾದ ಸಾಮಗ್ರಿಗಳನ್ನು ಶೇಖರಿಸಿ ನೂರಾರು ಸೈನಿಕರು, ಮತ್ತು ನಾವಿಕರನ್ನು ಕಳುಹಿಸಿದನು. ಅವುಗಳ ಪೈಕಿ ಒಂದು ಹಡಗು ಮಾತ್ರ ಹಿಂತಿರುಗಿ ಬಂದು ನಡೆದ ಸಂಗತಿಯನ್ನು ತಿಳಿಸಿತು. "ಎಲ್ಲಾ ಹಡಗುಗಳೂ ಸಮುದ್ರದ ನೀರಿನ ಮೇಲೆಯೇ ನದಿಯಂತೆ ಹರಿಯುವ ಪ್ರವಾಹವೊಂದಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋದವು. ದೂರದಲ್ಲಿದ್ದ ನಾನು ನನ್ನ ಹಡಗನ್ನು ಹಿಂದಕ್ಕೆ ತಿರುಗಿಸಿಕೊಂಡು ಬಂದಿದ್ದೇನೆ" ಎಂದು ಕಪ್ತಾನನು ಹೇಳಿದ ಮಾತನ್ನು ಕೇಳಿ ಅಬು ಬಾಕರನ ಕುತೂಹಲವು ಮತ್ತಷ್ಟು ಕೆರಳಿತು. ಸುಮಾರು 2000 ಹಡಗು-ದೋಣಿಗಳನ್ನು ಸಿದ್ಧಪಡಿಸಿಕೊಂಡು, ಸಾವಿರಾರು ಜನ ಸಿಬ್ಬಂದಿ ಯೊಡನೆ ಹೊರಟ. ಮತ್ತೆ ಬರಲಿಲ್ಲ. ತನ್ನ ಪರವಾಗಿ ನೇಮಿಸಿ ಹೋಗಿದ್ದ ಮಾನ್ಸಾ ಮೂಸನು ರಾಜನಾದ. (ಮೇಲೆ ಹೇಳಿದ ಸಾಗರ ಪ್ರವಾಹಗಳ ವಿಚಾರ ಮುಂದೆ ನೂರು ವರ್ಷಗಳವರೆಗೂ ಐರೋಪ್ಯರಿಗೆ ತಿಳಿದಿರಲಿಲ್ಲವೆಂದೇ ಹೇಳಬಹುದು)

ಕ್ರಿ.ಶ. 1324 ರಲ್ಲಿ ಮಾನ್ಸ ಮೂಸನು ಕೈಗೊಂಡ ಮಕ್ಕಾಯಾತ್ರೆಯು ಚಿರಸ್ಮರಣೀಯವಾಗಿದೆ. ತೊಂಬತ್ತು ಒಂಟೆಗಳ ಭರ್ತಿ ಚಿನ್ನದ ಪುಡಿಯನ್ನು ತನ್ನ ಜೊತೆ ಒಯ್ದು (ನದೀ ಪಾತ್ರಗಳಲ್ಲಿ ದೊರೆಯುವ ಚಿನ್ನದ ಕಣಗಳನ್ನು ಮಣ್ಣಿನ ಸಮೇತ ಹೊರತೆಗೆದು, ಪುಡಿಯ ರೂಪದಲ್ಲೇ ಮಾರುತ್ತಿದ್ದರು- ಕರಗಿಸುತ್ತಿರಲಿಲ್ಲ)

ಧಾರಾಳವಾಗಿ ಅದನ್ನು ಈಜಿಪ್ಟಿನಲ್ಲಿ ಹಂಚಿದ ಕಾರಣ ಅಲ್ಲಿನ ಆರ್ಥಿಕ ಸ್ಥಿತಿಯು ದಿಢೀರನೆ ಕುಸಿದು ಹೋಯಿತಂತೆ. ಅದನ್ನು ಸರಿಪಡಿಸಿಕೊಳ್ಳಲು ಅವರಿಗೆ ಹತ್ತು ವರ್ಷ ಹಿಡಿಯಿತಂತೆ. ಯಾತ್ರೆಯಿಂದ ಹಿಂತಿರುಗುವಾಗ ಮಾನ್ಸಾ ಮೂಸನು ತನ್ನೊಡನೆ ಅನೇಕ ಅರಬ್ ವಿದ್ವಾಂಸರನ್ನೂ, ಶಿಲ್ಪಿಗಳು ಹಾಗೂ ಕುಶಲ ಕರ್ಮಿಗಳನ್ನು ಕರೆತಂದನು. ಅವರಲ್ಲೊಬ್ಬ ಅಸ್-ಸಹೇಲಿ ಎಂಬ ವಿದ್ವಾಂಸನು ಸಂಕೋರೆ ವಿಶ್ವವಿದ್ಯಾನಿಲಯವನ್ನು ಟಿಂಬುಕ್ಟು ಎಂಬಲ್ಲಿ ಸ್ಥಾಪಿಸಿದನು. ಈ ವಿದ್ಯಾಕೇಂದ್ರವು ಮುಸ್ಲಿಂ ಪ್ರಪಂಚದ ಎಲ್ಲಾ ಕಡೆಯಿಂದಲೂ ವಿದ್ಯಾರ್ಥಿಗಳು ಮತ್ತು ವಿದ್ವಾಂಸರನ್ನು ಆಕರ್ಶಿಸಿ ಮಾಲಿ ಸಾಮ್ರಾಜ್ಯವು ಹೆಚ್ಚಿನ ಗೌರವ ಪ್ರಸಿದ್ಧಿ ಪಡೆಯುವಂತಾಯಿತು.

ಕ್ರಿ.ಶ. 1400 ರ ನಂತರ– ತವಾರಿಕ್ (ಟ್ವಾರೆಗ್) ಬರ್‌ಬರಿಗಳ ಧಾಳಿಯಿಂದ ಮಾಲಿಸಾಮ್ರಾಜ್ಯವು ಒಡೆದು, ಮಾಲಿಯ ಸಾಮಂತನಾಗಿದ್ದ ಸುನ್ನಿ ಆಲಿಬರ್ ಎಂಬವನು 1468 ರಲ್ಲಿ **ಸೊಂಘಾಯ್** ಸಾಮ್ರಾಜ್ಯ ಸ್ಥಾಪಕನಾದನು. ಇವನ ಸೈನ್ಯವು ತವಾರಿಕ್ ತುಕಡಿಯನ್ನು ಸುಲಭವಾಗಿ ಸೋಲಿಸಿ ಟಿಂಬುಕ್ಟು ಪಟ್ಟಣವನ್ನು ವಶಪಡಿಸಿಕೊಂಡಿತು. ಇವನ ನೌಕಾದಳವು ನೈಜರ್ ನದಿಯ ಮೇಲೆ ಸ್ವಾಮ್ಯ ಸಾಧಿಸಿತು. ಈತನು ಇಸ್ಲಾಮ್ ಧರ್ಮಕ್ಕೆ ಬದಲಾಗಿ ಆಫ್ರಿಕದ ಸಂಪ್ರದಾಯ ಧರ್ಮವನ್ನು ಹರಡುತ್ತಲಿದ್ದ. ಇವನ ನಂತರ ಬಂದ ಆಸ್ಕಿಯಾ ಮೊಹಮ್ಮದ್ (1492) ಸೊಂಘಾಯ್ ರಾಜ್ಯವನ್ನು ಪಶ್ಚಿಮ ಆಫ್ರಿಕದ ಅತ್ಯಂತ ದೊಡ್ಡ ಸಾಮ್ರಾಜ್ಯವನ್ನಾಗಿ ಮಾಡಿದ್ದಲ್ಲದೆ ಸಂಕೇರೆ ವಿಶ್ವವಿದ್ಯಾನಿಲಯವನ್ನು ಪುನರುಜ್ಜೀವಗೊಳಿಸಿದ. ಇವನ ವೈಭವೋಪೇತ ಮಕ್ಕಾ ಯಾತ್ರೆಯಿಂದ ಸುಪ್ರೀತನಾದ ಅರೇಬಿಯದ ದೊರೆ ಈತನನ್ನು ಪಶ್ಚಿಮ ಸೂಡಾನ್ ಪ್ರಾಂತ್ಯದ ಕಲೀಫನನ್ನಾಗಿ ನೇಮಿಸಿದನಂತೆ. ಸಾಮ್ರಾಜ್ಯವು ಕ್ರಿ.ಶ. 1528 ರ ನಂತರ ಕ್ಷೀಣಿಸತೊಡಗಿತು. ಹೀಗೆ ಒಂದು ಸಾವಿರ ವರ್ಷಗಳ ಕಾಲ ವೈಭವದಿಂದ ಮೆರೆದ ಪಶ್ಚಿಮ ಆಫ್ರಿಕದ "ಸುವರ್ಣಯುಗ" ವು 1530 ರ ವೇಳೆಗೆ ಮರೆಯಾಗಿ ಐರೋಪ್ಯರ ಆಗಮನಕ್ಕೆ ದಾರಿಮಾಡಿಕೊಟ್ಟಿತು.

## ಗುಲಾಮಗಿರಿ ಮತ್ತು ವಸಾಹತು

ಸೊಂಘಾಯ್ ಸಾಮ್ರಾಜ್ಯವು ಅಸ್ತಮಯವಾಗುತ್ತಿದ್ದಂತೆ ಗುಲಾಮರ ವ್ಯಾಪಾರವು ಚುರುಕುಗೊಳ್ಳತೊಡಗಿತು. ವಸಾಹತುಗಳಿಂದ ಬೇಡಿಕೆ ಹೆಚ್ಚಾಗಿತ್ತು. ಗುಲಾಮರ ವ್ಯಾಪಾರಕ್ಕಾಗಿ ಮೊಟ್ಟಮೊದಲು ಸನ್ನದು ಪಡೆದ ಪೋರ್ಚುಗೀಸ್ ವ್ಯಾಪಾರಿಗಳು ವರ್ಷಕ್ಕೆ 4000 ಗುಲಾಮರನ್ನು ಸ್ಪೇನಿನ ದಕ್ಷಿಣ ಅಮೆರಿಕ ವಸಾಹತುಗಳಿಗೆ ಸಾಗಿಸುತ್ತಿದ್ದರು. ವಸಾಹತುಗಳು ಹೆಚ್ಚಾದಂತೆಲ್ಲಾ ಒಂದೊಂದಾಗಿ ಅನೇಕ ಐರೋಪ್ಯ ರಾಷ್ಟ್ರಗಳು ಇದರಲ್ಲಿ ಕೈಹಚ್ಚಿದುವು– ಸ್ಪೇನ್ (ಕ್ರಿ.ಶ. 1479), ಇಂಗ್ಲೆಂಡ್ (1562) ಅಮೆರಿಕದ ಕಾಲೊನಿಗಳು (1619) ಹಾಲೆಂಡ್ (1625) ಫ್ರಾನ್ಸ್ (1642) ಸ್ವೀಡನ್ (1647) ಮತ್ತು ಡೆನ್ಮಾರ್ಕ್ (1697). ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಸೆರೆಯಾಳುಗಳನ್ನು ಎರಡು ಭಾಗವಾಗಿ ವಿಂಗಡಿಸುತ್ತಿದ್ದರು. ಅನೇಕರು ಇದನ್ನು ಪ್ರತಿಭಟಿಸಿ ತಪ್ಪಿಸಿಕೊಂಡು ಹೋದರೆ,

ಕೆಲವರು ಮಧ್ಯ ಮಾರ್ಗದಲ್ಲಿ ಹಡಗಿನಿಂದ ಸಮುದ್ರಕ್ಕೆ ಹಾರಿಕೊಳ್ಳುತ್ತಿದ್ದರು; ಉಳಿದವರು ಹಡಗಿನೊಳಗೆ ದಂಗೆಯೆದ್ದು ಶಿಕ್ಷೆಗೆ ಒಳಗಾಗುತ್ತಿದ್ದರು. ಸೆರೆಯಾಳುಗಳಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಇರುತ್ತಿದ್ದರು. ಅಂಗೋಲದ ರಾಣಿ ಝಿಂಗ ಮತ್ತು ಕಾಂಗೋದ ರಾಜ ಮರೆಂಬಾ ಇವರುಗಳು ಗುಲಾಮಿ ವರ್ತಕರ ಹಡಗಿನ ಮೇಲೆ ಹೋರಾಡಿ ಕೆಲವು ಸಲ ಸೆರೆಯಾಳುಗಳನ್ನು ಬಿಡಿಸುತ್ತಿದ್ದರು.

ಇಲ್ಲಿಂದ ಮುಂದೆ ಇನ್ನೂರು ವರ್ಷಕ್ಕೂ ಹೆಚ್ಚು ಕಾಲ ಯುರೋಪ್ ರಾಷ್ಟ್ರಗಳು ಆಫ್ರಿಕದ ಅನೇಕ ಭಾಗಗಳನ್ನು ಗೆದ್ದು ಹೊಸ ವಸಾಹತುಗಳನ್ನು ಸ್ಥಾಪಿಸಿಕೊಂಡರು. ವ್ಯಾಪಾರಿಗಳು, ಮಿಷನರಿಗಳು, ಅಧಿಕಾರಿಗಳು ಹಿಂಬಾಲಿಸಿದರು. ಕಡೆಗೆ ಕ್ರಿ.ಶ. 1885 ರಲ್ಲಿ ನಡೆದ ಬರ್ಲಿನ್ ಸಮ್ಮೇಳನದಲ್ಲಿ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಸ್ಪೇನ್, ಪೋರ್ಚುಗಲ್, ಜರ್ಮನಿ, ಮತ್ತು ಬೆಲ್ಜಿಯಂ ರಾಷ್ಟ್ರಗಳು ಆಫ್ರಿಕಾ ಖಂಡದ ನಕ್ಷೆಯನ್ನು ಮೇಜಿನ ಮೇಲಿಟ್ಟು ಇಡೀ ಖಂಡವನ್ನು ಹಣ್ಣಿನಂತೆ ಹಂಚಿಕೊಂಡರು. ಆದ್ದರಿಂದಲೇ ಆಫ್ರಿಕದೊಳಗಿನ ಅಂತರ ರಾಜ್ಯ ಗಡಿರೇಖೆಗಳು ಅನೇಕ ಕಡೆ ಸರಳ ರೇಖೆಗಳಿಂದ ಕೂಡಿವೆ. ಕ್ರಿ.ಶ. 1914 ರ ವೇಳೆಗೆ ಲೈಬೀರಿಯಾ ಮತ್ತು ಇಥಿಯೋಪಿಯ ಹೊರತು ಪಡಿಸಿ, ಇಡೀ ಖಂಡವು ಐರೋಪ್ಯ ಒಡೆತನದಲ್ಲಿತ್ತು. ಅವುಗಳಲ್ಲಿ ಮೊಟ್ಟ ಮೊದಲು ಸ್ವತಂತ್ರಗಳಿಸಿದ ರಾಷ್ಟ್ರವೆಂದರೆ ಇಂದಿನ ಘಾನಾ; ಕೊನೆಯದು ದಕ್ಷಿಣ ಆಫ್ರಿಕ. ಶತಮಾನಗಳ ಕಾಲ ಗುಲಾಮಗಿರಿ, ದಾಸ್ಯ ಮತ್ತು ವರ್ಣ ದ್ವೇಷಗಳಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ತತ್ತರಿಸಿ ಹೋಗಿದ್ದ ಕಪ್ಪು ಆಫ್ರಿಕ ರಾಷ್ಟ್ರಗಳನೇಕವು ವಿಶ್ವಸಂಸ್ಥೆಯ ಮುಂದೆ ಯೂರೋಪ್ ರಾಷ್ಟ್ರಗಳ ವಿರುದ್ಧ ನಷ್ಟಕ್ಕೆ ದಾವೆ ಹೂಡಿದ್ದಾರೆ.

ಡಾ॥ ಮಲ್ಯೆಕಾ ಮುಟೀರೆ.

## ಆಗ್ಸುಮ್– ಇಥಿಯೋಪಿಯ

ಪಶ್ಚಿಮದಲ್ಲಿ ಘಾನಾ, ಮಾಲಿ, ಸೊಂಘಾಯ್ ಸಾಮ್ರಾಜ್ಯಗಳು ಹುಟ್ಟಿ ಬೆಳೆಯುತ್ತಿದ್ದ ಕಾಲದಲ್ಲಿ ಪೂರ್ವಭಾಗದ ಆಫ್ರಿಕದ ಕೊಂಬಿನಂತಹ ಪ್ರದೇಶದಲ್ಲಿ, ಎತ್ತರವಾದ ಬೆಟ್ಟ ಸೀಮೆಯಲ್ಲೊಂದು ಸಾಮ್ರಾಜ್ಯ ಹುಟ್ಟಿ ಬೆಳೆಯಿತು. ಅದೇ ಆಗ್ಸುಮ್ ಚಕ್ರಾಧಿಪತ್ಯ– ಇಂದಿನ ಎರಿಟ್ರಿಯ ಇಥಿಯೋಪಿಯಗಳ ತೌರು ರಾಷ್ಟ್ರ. ಇತರ ಸಾಮ್ರಾಜ್ಯಗಳು ಉದಯಿಸುವ ಮೊದಲೇ ಉದಯಿಸಿ ಅವುಗಳು ಅಸ್ತಂಗತವಾದ ಮೇಲೂ ಬದುಕಿ ಉಳಿದಿದ್ದ (ಕ್ರಿ.ಶ. 100 ರಿಂದ 1974) ಏಕೈಕ ಸಾಮ್ರಾಜ್ಯ. ಇಂತಹ ಸಾಮ್ರಾಜ್ಯ ಸ್ಥಾಪನೆಯ ಹಿನ್ನೆಲೆಯಲ್ಲಿ ಒಂದು ಸ್ವಾರಸ್ಯವಾದ ಕಥೆಯಿದೆ. ಅದರಲ್ಲಿನ ಘಟನೆಗಳು ಇಥಿಯೋಪಿಯದ ರಾಜವಂಶಗಳ ಇತಿಹಾಸ, ಜನರ ಧರ್ಮ ಮತ್ತು ಸಂಸ್ಕೃತಿಗಳ ಮೇಲೆ ಮಹತ್ವದ ಪ್ರಭಾವ ಬೀರಿವೆ.

ಜಗತ್ಪ್ರಸಿದ್ಧ "ಕಿಂಗ್ ಸಾಲೊಮನ್ ಮತ್ತು ಕ್ವೀನ್ ಶೀಬಾ" ಕಥೆಯನ್ನು ಕೇಳದವರಿಲ್ಲ, ಆದರೂ ಅದರ ನೆನಪು ಹೊಸ ಬೆಳಕನ್ನು ಚೆಲ್ಲಬಹುದು. ಒಂದಾನೊಂದು ಕಾಲದಲ್ಲಿ

ಆಫ್ರಿಕದಲ್ಲೊಬ್ಬ ರಾಜನಿದ್ದ (ಹೆಸರು ಗೊತ್ತಿಲ್ಲ) ಅವನ ರಾಜ್ಯವು ಪೂರ್ವ ಆಫ್ರಿಕ ಮತ್ತು ದಕ್ಷಿಣ ಅರೇಬಿಯಗಳಲ್ಲಿ ಹರಡಿತ್ತು. ಆಗ್ಸುಮ್ ಅದರ ರಾಜಧಾನಿ. ಅದೇ ಹೆಸರಿನ ಈ ರಾಜ್ಯವು ಸಮುದ್ರ ವ್ಯಾಪಾರದಿಂದ ಸಿರಿವಂತ ದೇಶವಾಗಿತ್ತು. ಅವನಿಗೆ ಒಬ್ಬಳೇ ಮಗಳು. ಹೆಸರು ಮೆಕೇಡ. ದಕ್ಷಿಣ ಅರೇಬಿಯದ ಶೀಬಾ ಪ್ರಾಂತ್ಯಕ್ಕೂ ಇವಳು ರಾಣಿಯಾಗಿದ್ದುದರಿಂದ ಇವಳಿಗೆ "ಶೀಬಾರಾಣಿ" ಎಂಬ ಹೆಸರು ಬಂತು. ಸುಂದರಿಯೂ, ಸದ್ಗುಣಿಯೂ, ಚತುರೆಯೂ ಆದ ಈ ಕನ್ಯೆಯು ಜೆರುಸಲೇಮಿನ ದೊರೆ ಸಾಲೊಮನನ ಹೆಸರನ್ನೂ ಅವನ ಕೀರ್ತಿಯನ್ನೂ ತಂದೆಯ ಮೂಲಕ ಕೇಳಿ ತಿಳಿದಿದ್ದಳು. ಅಲ್ಲದೆ ಹಡಗಿನ ವ್ಯಾಪಾರಿ **ತಮಾರಿನ್** ಎಂಬವನಿಂದ ಅವನ ಜಾಣತನ, ಬುದ್ಧಿಶಕ್ತಿ, ವಿವೇಚನೆಗಳ ಕಥೆಗಳನ್ನೂ ಕೇಳಿ ತಿಳಿದಿದ್ದಳು. ಅವನನ್ನು ಒಮ್ಮೆಯಾದರೂ ಭೇಟಿ ಮಾಡಬೇಕೆಂಬ ಆಸೆ ಅಂಕುರಿಸಿತು. ತಂದೆ ಸತ್ತ ಮೇಲೆ ಸಾಮ್ರಾಜ್ಯದ ಒಡತಿಯಾದಳು. ಕೂಡಲೇ ಸಾಲೊಮನ್ ದೊರೆಗೆ ವರ್ತಮಾನ ಕಳುಹಿಸಿ, ಪ್ರಯಾಣಕ್ಕೆ ಸಿದ್ಧಳಾದಳು. ಪ್ರಥಮ ಭೇಟಿಯಲ್ಲೇ ಪ್ರೇಮಾಂಕುರವಾಗಿದ್ದರೂ, ಪರಸ್ಪರರು ಪರೀಕ್ಷೆಗಳನ್ನೊಡ್ಡಿದರು– ಇವಳ ಅಪ್ಪಣೆಯಿಲ್ಲದೆ ರಾಜನು ಇವಳ ಕೊಠಡಿಗೆ ಬರಬಾರದೆಂದೂ, ರಾಜನ ಅಪ್ಪಣೆಯಿಲ್ಲದೆ ಅರಮನೆಯ ಯಾವ ವಸ್ತುವನ್ನೂ ಉಪಯೋಗಿಸಬಾರದೆಂದೂ ಷರತ್ತುಗಳಾದುವು. ಅದರಲ್ಲಿ ಮಕೇಡ ಸೋತು ಸಾಲೊಮನ್ನನ ವಶವಾದಳು. ರಾತ್ರಿಯ ಊಟದಲ್ಲಿ ಉಪ್ಪು ಹೆಚ್ಚಾಗಿದ್ದುದರಿಂದ ಮಧ್ಯ ರಾತ್ರಿಯಲ್ಲಿ ನೀರು ಕುಡಿಯಬೇಕಾಯಿತು. ಕೆಲವು ತಿಂಗಳ ನಂತರ ಮಕೇಡ ಮತ್ತು ಅವಳ ಪರಿವಾರ ಹೊರಟು ನಿಂತಾಗ ಸಾಲೊಮನ್– "ಗಂಡು ಮಗುವಾದರೆ ಅವನನ್ನು ನನ್ನ ಬಳಿಗೆ ಕಳುಹಿಸು" ಎಂದು ಹೇಳಿ ಒಂದು ಉಂಗುರವನ್ನು ಕೊಟ್ಟನಂತೆ. ತನ್ನ ನಾಡಿಗೆ ಬಂದ ಕೆಲವು ತಿಂಗಳಲ್ಲಿ ಗಂಡು ಮಗುವಾಯಿತು. ಮೆನೆಲಿಕ್ ಎಂಬ ನಾಮಕರಣದ ನಂತರ ಮಗನನ್ನು ಜೆರುಸಲೇಮಿಗೆ ಕಳುಹಿಸಿದಳು. ಅಲ್ಲಿ ವಿದ್ಯಾಭ್ಯಾಸ ಮುಗಿಸಿ ಹಿಂತಿರುಗುವಾಗ "ಮೋಸೆಸ್ಸನ ನ್ಯಾಯ ಫಲಕ" ಗಳನ್ನು ಸಾಲೊಮನ್ ಕೊಟ್ಟು ಕಳುಹಿಸಿದನು. ಫಲಕಗಳನ್ನು ತುಂಬಿಟ್ಟ "ಆರ್ಕ್ ಅಫ್ ದಿ ಕವೆನೆಂಟ್ಸ್" ಎಂಬ ಮರದ ಪೆಟ್ಟಿಗೆಯು ಈಗಲೂ ಆಗ್ಸುಮ್ ಪಟ್ಟಣದ ಚರ್ಚೊಂದರಲ್ಲಿದೆ. ಇವರಿಬ್ಬರ ಭೇಟಿಯ ಪ್ರಸಂಗವು ಹಳೆಯ ಟೆಸ್ಟಮೆಂಟ್ ಮತ್ತು ಕೊರಾನುಗಳಲ್ಲಿ ಉಲ್ಲೇಖಿತವಾಗಿದೆ. ಅರಬ್ಬೀ ಜನಪದ ಸಾಹಿತ್ಯ ಮತ್ತು ಯೆಹೂದಿಗಳ ಪುರಾಣದಲ್ಲೂ ಬರುತ್ತದೆ.

ಆಗ್ಸುಮೈಟ್ ರಾಜ್ಯವು ಸಂಪದ್ಭರಿತ ಸಾಮ್ರಾಜ್ಯವಾಗಿ ಏಳು ನೂರು ವರ್ಷಕಾಲ ಮೆರೆಯಿತು. ಈ ಅವಧಿಯಲ್ಲಿ ಜನರು ಮತ್ತು ರಾಜರು ಬಹುದೇವತಾ ಪೂಜಕರಾಗಿದ್ದರು. ಈಜಿಪ್ಟ್, ಪರ್ಶಿಯಾ, ಬ್ಯಾಬಿಲೋನ್ ಸಂಸ್ಕೃತಿಗಳು ಇಲ್ಲಿಯೂ ಹರಡಿದ್ದುವು. ಸೂರ್ಯ ಚಂದ್ರರು ರಾಜರ ಲಾಂಛನ. ರಾಜರ ಗೋರಿಯ ಮೇಲೆ ನೆಟ್ಟಿರುವ "ಓಬೆಲಿಸ್ಕ್" ಎಂದು ಕರೆಯಲ್ಪಡುವ ಕಲ್ಲಿನ ನಿಲುಗಂಬಗಳು ಈಗಲೂ ಇವೆ. ಗ್ರೀಕ್, ಸಾಬಿಯನ್ ಮತ್ತು ಗೀಇಜ್ ಭಾಷೆಗಳಲ್ಲಿ ಅನೇಕ ಶಾಸನಗಳು ದೊರೆತಿವೆ. ಗೀ–ಇಜ್ ಅವರ

ಬೈಬಲ್ ಭಾಷೆ. ಅದು ಈಗಲೂ ಚರ್ಚುಗಳಲ್ಲಿ ಬಳಕೆಯಲ್ಲಿದೆ. ಅದರಿಂದ ಹುಟ್ಟಿದ ಅಮ್ಹಾರಾ ಭಾಷೆಯು ಇಂದಿನ ರಾಷ್ಟ್ರಭಾಷೆ.

## ಇಥಿಯೋಪಿಯ

ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ಆಗ್ಸುಮ್ ಚಕ್ರವರ್ತಿ ಎಜ್ಹಾನಾ ದೊರೆಯು ಕ್ರೈಸ್ತಮತಕ್ಕೆ ಪರಿವರ್ತನಗೊಂಡನು. ಆದರೆ ಹೊಸಮತವು ಏಳನೇ ಶತಮಾನದಿಂದೀಚೆಗೆ ವ್ಯಾಪಕವಾಗಿ ಹರಡಿ ಭದ್ರವಾಗಿ ನೆಲೆ ನಿಂತಿದೆ. ಜ್ಹಾಗ್ವೆ ಮನೆತನಕ್ಕೆ ಸೇರಿದ ಜಾನ್ ಸಿಯೂಮ್ ಎಂಬ ವ್ಯಕ್ತಿ ತಾನು ಸಾಲೊಮನ್ ವಂಶಕ್ಕೆ ಸೇರಿದವನೆಂದು ಹೇಳಿಕೊಂಡು ರಾಜನಾದ. ಆದರೆ ಇವನು ಶೀಬಾರಾಣಿಯ ಜೊತೆಯಲ್ಲಿ ಹೋಗಿದ್ದ ಸೇವಕಿಯ ಮಗನ ವಂಶದವನೆಂದು ಗುರುತಿಸಲಾಗಿ, ಧರ್ಮಗುರುವಿನ ಆದೇಶದ ಮೇಲೆ, ನಿಜವಾದ ಸಾಲೊಮನ್-ಶೀಬಾ ವಂಶದ ಯಾಕುನೋ-ಅಮ್ಲಕ್ ಎಂಬವನಿಗೆ ಅಧಿಕಾರವನ್ನು ಬಿಟ್ಟುಕೊಡಬೇಕಾಯಿತು. ವಂಶವಾಹಿನಿಯಲ್ಲಿ ಕಡಿಮೆ ಎಂಬ ಆರೋಪವನ್ನು ಹೊತ್ತಿದ್ದರೂ ಈ ವಂಶದ ಏಳು ಜನ ರಾಜರೆಲ್ಲರೂ ಕ್ರೈಸ್ತಮತ ಪ್ರಚಾರಕ್ಕೆ ನಿಷ್ಠೆಯಿಂದ ದುಡಿದರು. ಇವರಲ್ಲೊಬ್ಬ ಗೆಬ್ರೆ ಮಸ್ಕಲ್ ಎಂಬವನು 13 ನೇ ಶತಮಾನದಲ್ಲಿ ಲಾಲಿ ಬೆಲ್ಲ ಎಂಬ ಊರಿನ ಬಳಿ ಬೆಟ್ಟದ ಇಳಿಜಾರಿನ ಕಲ್ಲುಗುಹೆಗಳೊಳಗೆ ಅನೇಕ ಚರ್ಚುಗಳನ್ನು ಕೊರೆಯಿಸಿದ್ದಾನೆ. ನಮ್ಮ ಅಜಂತ, ಎಲ್ಲೋರ, ಬಾದಾಮಿ ಗುಹೆಗಳನ್ನು ಹೋಲುವ ಈ ಹನ್ನೆರಡು ಚರ್ಚುಗಳು ಜಗತ್ಪ್ರಸಿದ್ಧಿ ಪಡೆದಿವೆ. ಮುಂದೆ ಏಳು ನೂರು ವರ್ಷಗಳ ಕಾಲ ಸಾಲೊಮನ್ ವಂಶಕ್ಕೆ ಸೇರಿದ ನೂರಾರು ರಾಜ ಮಹಾರಾಜರುಗಳು ರಾಜ್ಯವಾಳಿದ್ದರೂ ಅವರಲ್ಲಿ ಅತಿ ಪ್ರಮುಖರಾದ ಇಬ್ಬರ ಹೆಸರನ್ನು ಹೇಳಬಹುದು- (1) ಇಮ್ಮಡಿ ಮೆನೆಲಿಕ್ ಮತ್ತು (2) ಹೈಲಿ ಸೆಲಾಸೀ.

## ಇಮ್ಮಡಿ ಮೆನೆಲಿಕ್:

ಹತ್ತೊಂಬತ್ತನೇ ಶತಮಾನದಲ್ಲಿ ಯೂರೋಪಿನ ರಾಷ್ಟ್ರಗಳೆಲ್ಲವೂ ಆಫ್ರಿಕದಲ್ಲಿ ವಸಾಹತುಗಳನ್ನು ನಿರ್ಮಿಸಲು ಮುನ್ನುಗ್ಗುತ್ತಿದ್ದರು. ಇಟಲಿ ದೇಶವು ಇಥಿಯೋಪಿಯದೊಡನೆ ಹಿಂದೆ ಮಾಡಿಕೊಂಡಿದ್ದ ಕರಾರುಗಳನ್ನು ಮುರಿದು ಯುದ್ಧ ಘೋಷಿಸಿತು. ಆದರೆ 'ಅಡುವ' ಎಂಬಲ್ಲಿ 1896 ರಲ್ಲಿ ನಡೆದ ಯುದ್ಧದಲ್ಲಿ ತಾನೇ ಸಂಪೂರ್ಣವಾಗಿ ಸೋತು, ಮೆನೆಲಿಕನ ಸಾರ್ವಭೌಮತ್ವವನ್ನು ಒಪ್ಪಿಕೊಂಡಿತು. ಅನಂತರ ಈತನು ರಾಷ್ಟ್ರ ನಿರ್ಮಾಣ ಕಾರ್ಯಕ್ಕಾಗಿ ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಮುಡಿಪಾಗಿಟ್ಟನು. ಅಡ್ಡಿಸ್ ಅಬಾಬ-ಹೊಸ ಹೂವು- ಎಂಬ ಊರನ್ನು ಸ್ಥಾಪಿಸಿ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಜಿಬೂತಿಯಿಂದ ಅಡಿಸ್ ಅಬಾಬದವರೆಗೆ ರೈಲು ಮಾರ್ಗ, ರಸ್ತೆಗಳು, ಸೇತುವೆಗಳು, ಆಸ್ಪತ್ರೆಗಳು, ಅಂಚೆ ಮತ್ತು ಟೆಲಿಫೋನ್, ಬ್ಯಾಂಕುಗಳು, ನಾಣ್ಯ, ಮಂತ್ರಿಮಂಡಲ ರಚನೆ, ದೇವಿ ಹಾಕಿಸುವುದು, ಪ್ರಿಂಟಿಂಗ್ ಪ್ರೆಸ್, ಶಾಲೆಗಳು, ಹೊಟೆಲು ಸಿನಿಮಾಗಳು, ಕೈಗಾರಿಕೆ ಇತ್ಯಾದಿಗಳನ್ನು ಪ್ರಾರಂಭಿಸಿ, ದೇಶವನ್ನು ಪ್ರಗತಿ

ಹಾದಿಯಲ್ಲಿ ಮುಂದುವರಿಸಿದ್ದಲ್ಲದೆ, ವಸಾಹತು ಪೈಪೋಟಿಗಳ ಕಾಲದಲ್ಲಿ ದೇಶದ ಗಡಿಗಳನ್ನು ನಿಗದಿಪಡಿಸಿಕೊಂಡನು.

## ಹೈಲಿ ಸೆಲಾಸೀ:

ಇಮ್ಮಡಿ ಮೆನೆಲಿಕನ ಮಗಳು ಜೇವ್ದೀತು ರಾಣಿಗೆ ರೀಜೆಂಟ್ ಆಗಿದ್ದ ರಾಸ್ ತೆಫರಿ ಮಕೊನೆನ್ 1930 ರಲ್ಲಿ ಹೈಲಿ ಸೆಲಾಸೀ ಎಂಬ ಹೆಸರಿನಿಂದ ಸಿಂಹಾಸನ ವನ್ನೇರಿದನು. ಕೂಡಲೇ ಲೀಗ್ ಆಫ್ ನೇಷನ್ಸ್ ಕೂಟಕ್ಕೆ ಇಥಿಯೋಪಿಯವನ್ನು ಸೇರಿಸಿಕೊಳ್ಳಲು ಅರ್ಜಿಸಲ್ಲಿಸಿದನು. 1932 ರಲ್ಲಿ ಗುಲಾಮಗಿರಿಯನ್ನು ರದ್ದು ಪಡಿಸಿ, ರೈತರು ಭೂಮಾಲೀಕರಾಗುವಂತೆ ರಾಜ್ಯಾದ್ಯಂತ ಸುಧಾರಣೆಗಳನ್ನು ತಂದನು. ಅಡುವ ಯುದ್ಧದಲ್ಲಿ ಉಂಟಾದ ಸೋಲಿನ ಸೇಡು ತೀರಿಸಿಕೊಳ್ಳಲು ಇಟಲಿ ಸರ್ಕಾರವು 1936ರಲ್ಲಿ ಯುದ್ಧ ಸಾರಿತು. ಮಾಯ್ ಚೇವ್ ಯುದ್ಧದಲ್ಲಿ ಇಥಿಯೋಪಿಯವು ಪರಾಭವಗೊಂಡಿತು. ಕೂಡಲೇ ಹೈಲಿಸೆಲಾಸಿಯು ದೇಶ ಬಿಟ್ಟು ಹೋಗಿ, ಬ್ರಿಟನ್ನಿನಲ್ಲಿ ನೆಲಸಿ, ಅವರ ಸಹಾಯವನ್ನು ಕೋರಿದನು ಮತ್ತು ಲೀಗ್ ಆಫ್ ನೇಷನ್ಸ್ ಮುಂದೆ ತೀವ್ರವಾದ ಪ್ರತಿಭಟನೆ ಆರಂಭಿಸಿದನು. ಇತ್ತ ರಾಜನ ಗೈರುಹಾಜರಿಯಲ್ಲಿ ಇಟಾಲಿಯನ್ ಅಧಿಕಾರಿಗಳು ಜನರ ಮೇಲೆ ಹಿಂಸಾಕೃತ್ಯ, ಭಯೋತ್ಪಾದನೆಗಳನ್ನು ನಡೆಸುತ್ತಿದ್ದರು. ಸಾವಿರಾರು ಮಂದಿ ನಿರಪರಾಧಿ ಪ್ರಜೆಗಳು ಪ್ರಾಣತೆತ್ತರು. ಅಷ್ಟರಲ್ಲಿ ಅಂದರೆ 1941ರಲ್ಲಿ ಯುರೋಪಿನ ಯುದ್ಧ ಪರಿಸ್ಥಿತಿಯು ದಿಢೀರನೆ ಬದಲಾಯಿಸಿತು. ಇಟಲಿಯ ಫ್ಯಾಸಿಸ್ಟ್ ಮುಸೋಲಿನಿಯು ಜರ್ಮನಿಯ ನಾಜಿ ಪರ ಸೇರಿಕೊಂಡು ಬ್ರಿಟನ್ ಮತ್ತು ಫ್ರಾನ್ಸ್‌ಗಳ ಮೇಲೆ ಯುದ್ಧ ಘೋಷಿಸಿದನು. ಕೂಡಲೇ ಬ್ರಿಟಿಷ್ ಸರ್ಕಾರವು ಇಥಿಯೋಪಿಯಕ್ಕೆ ಸಹಾಯ ಹಸ್ತ ನೀಡಲು ಮುಂದಾಯಿತು. ಸೂಡಾನ್ ಮತ್ತು ಕೆನ್ಯಾದಲ್ಲಿದ್ದ ಭಾರತೀಯ ಪಡೆಗಳು ಇಥಿಯೋಪಿಯದ ದೇಶಪ್ರೇಮಿ ಪಡೆಗಳ ಜೊತೆ ಸೇರಿ, ಮೂರುಕಡೆಯಿಂದ ಆಕ್ರಮಣ ನಡೆಸಿದರು. ಕೆರೆನ್, ಅಂಬಾ ಅಲಾಜಿ, ಜಿಮ್ಮ, ಗೊಂಡಾರ್‌ಗಳಲ್ಲಿ ಇಟಲಿ ಸೈನ್ಯವು ಸೋತು ಶರಣಾಗತವಾಯಿತು. ಈ ಯುದ್ಧಗಳಲ್ಲಿ ಮಡಿದ ಭಾರತೀಯ ಯೋಧರ ನೆನಪಿಗಾಗಿ ಕೆರೆನ್‌ನಲ್ಲಿ (ಭಾರತೀಯ) ಯುದ್ಧ ಸಮಾಧಿಯನ್ನು ನಿರ್ಮಿಸಿದ್ದಾರೆ. ಮಡಿದ ಪ್ರತಿಯೊಬ್ಬನ ಹೆಸರನ್ನೂ, ತುಕುಡಿಯ ಹೆಸರಿನ ಸಮೇತ ಸ್ಮಾರಕ ಶಿಲಾಸ್ತಂಭಗಳ ಮೇಲೆ ಕೆತ್ತಲಾಗಿದೆ. ಎರಿಟ್ರಿಯಕ್ಕೆ ಭೇಟಿಕೊಟ್ಟ ಅಥವಾ ಕೊಡುವ ಭಾರತೀಯರಿಗೆ ಇದು ಯಾತ್ರಾಸ್ಥಳವಾಗಿದೆ.

ವಿಜಯಶಾಲಿಯಾಗಿ ಹಿಂತಿರುಗಿದ ಹೈಲಿ ಸೆಲಾಸಿಯು ಅಂದಿನಿಂದ ಅಂತರ ರಾಷ್ಟ್ರೀಯ ಖ್ಯಾತಿಗಳಿಸಿದ. ಆಫ್ರಿಕದ ಒಕ್ಕೂಟ ಸಂಸ್ಥೆಯನ್ನು ಅಡಿಸ್ ಅಬಾಬದಲ್ಲಿ ಸ್ಥಾಪಿಸಿ, ಆಫ್ರಿಕದ ಪೂರ್ಣ ಬಿಡುಗಡೆಗಾಗಿ ನೈತಿಕ ಬೆಂಬಲ ಕೊಟ್ಟು ಸಹಾಯ ಹಸ್ತ ನೀಡುತ್ತಿದ್ದ, 1967ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಪ್ರಧಾನಮಂತ್ರಿಗೆ ಹೆಚ್ಚಿನ ಅಧಿಕಾರಗಳನ್ನು ವಹಿಸಿ ವಿಶ್ರಾಂತಿಗಾಗಿ ಹಂಬಲಿಸುತ್ತಿದ್ದ ಹೈಲಿ ಸೆಲಾಸಿಗೆ ವಿಧಿ ಬೇರೆ ರೀತಿಯಲ್ಲಿ ಕಾಡಹತ್ತಿತು. ಎರಿಟ್ರಿಯ ಪ್ರಾಂತದಲ್ಲಿ ಎರಿಟ್ರಿಯನ್ ಲಿಬರೇಷನ್ ಫ್ರಂಟ್

ಮತ್ತು ಎರಿಟ್ರಿಯನ್ ಪೀಪಲ್ಸ್ ಲಿಬರೇಷನ್ ಫ್ರಂಟ್ ಎಂಬ ಎರಡು ಉಗ್ರಗಾಮಿ ತಂಡಗಳು ಸ್ವತಂತ್ರಕ್ಕಾಗಿ ಹೋರಾಟವನ್ನು ತೀವ್ರಗೊಳಿಸಿದುವು. ಎರಿಟ್ರಿಯಾದ ಗ್ರಾಂಮಾಂತರ ಪ್ರದೇಶಗಳೆಲ್ಲಾ ಈ ತಂಡಗಳ ಕೈವಶವಾಯಿತು. ಹೆದ್ದಾರಿಗಳಲ್ಲಿ, ಪಟ್ಟಣದ ಬೀದಿಗಳಲ್ಲಿ ಗುಂಡಿನ ಕಾಳಗ ನಡೆಯುತ್ತಿತ್ತು. ಬೆಂಕಿ, ಲೂಟಿ, ಕೊಲೆಗಳು ವ್ಯಾಪಕವಾಗಿ ಹರಡಿತು. ರಾಜನ ಸರ್ಕಾರದ ಬಿಗಿತಪ್ಪಿ ಆಡಳಿತ ಕುಸಿಯಿತು. ಇದು ಸಾಲದೆಂಬಂತೆ ಕೆಲವು ಪ್ರಾಂತಗಳಲ್ಲಿ ಭೀಕರ ಕ್ಷಾಮ ತಲೆದೋರಿ ಸಾವಿರಾರು ದನಕರುಗಳು, ಮನುಷ್ಯರೂ ಸಾವಿಗೀಡಾದರು. ಕ್ಷಾಮವಿಲ್ಲವೆಂದು ಮುಚ್ಚಿ ಹಾಕಲು ಪ್ರಧಾನ ಮಂತ್ರಿ ಮಾಡಿದ ಪ್ರಯತ್ನ ಹೊರಬಿತ್ತು. ಸರ್ಕಾರದವರೇ ತಿರುಗಿ ಬಿದ್ದರು. 1974ರಲ್ಲಿ ಭೂಸೇನೆ, ವಾಯುಪಡೆ, ನೌಕೆ, ಪೊಲಿಸ್, ಅಂಗರಕ್ಷಕ ದಳಗಳನ್ನು ಕೂಡಿದ ಮಿಲಿಟರಿ ಸರ್ಕಾರವನ್ನು ರಚಿಸಿಕೊಂಡು ಸೆಪ್ಟೆಂಬರ್ 12 ರಂದು ರಾಜನನ್ನು ಪದಚ್ಯುತಿಗೊಳಿಸಿದರು. ಹೀಗೆ 1800 ವರ್ಷಕಾಲ ಆಳಿದ ಸಾಲೊಮನ್ ಶೀಬಾ ವಂಶದ ರಾಜಪ್ರಭುತ್ವ ಪರಂಪರೆಯಲ್ಲಿ 255ನೆಯವನೆಂದು ಹೇಳಲಾದ ಹೈಲಿಸೆಲಾಸಿಯ ಆಳ್ವಿಕೆ ಆ ದಿನ ಕೊನೆಗೊಂಡಿತು.

ಅಂದು ಸೆಪ್ಟೆಂಬರ್ 12 ಇಥಿಯೋಪಿಯದಲ್ಲಿ ಹೊಸ ವರ್ಷದ ದಿನ. ನಾವು ಅಸ್ಮಾರಾದಲ್ಲಿದ್ದೆವು. ನಮ್ಮ ಮಗನ 6ನೇ ವರ್ಷ ವರ್ದಂತಿ. ಸ್ನೇಹಿತರನ್ನು ಮಧ್ಯಾಹ್ನದ ಊಟಕ್ಕೆ ಆಹ್ವಾನಿಸಿ, ಅಡಿಗೆ ಮಾಡಿಕೊಂಡು ಕಾದಿದ್ದೆವು. ಯಾರೂ ಬರಲಿಲ್ಲ. ರೇಡಿಯೋದಲ್ಲಿ ಮಿಲಿಟರಿ ಬ್ಯಾಂಡ್ ಪ್ರಸಾರವಾಗುತ್ತಿತ್ತು. ನಮ್ಮ ಪುತ್ರನು ಬ್ಯಾಂಡಿಗೆ ತಕ್ಕಂತೆ ಹಾಸಿಗೆಯ ಮೇಲೆ ಕವಾಯಿತು ಮಾಡುತ್ತಿದ್ದನು. ಇದ್ದಕ್ಕಿದ್ದಂತೆ ಬ್ಯಾಂಡ್ ಶಬ್ದ ನಿಂತು "ಇದು ರೇಡಿಯೋ ಇಥಿಯೋಪಿಯ-ಇಥಿಯೋಪಿಯದ ಮಾಜಿ ಚಕ್ರವರ್ತಿ ಹೈಲಿ ಸಲಾಸಿಯವರನ್ನು ಸಿಂಹಾಸನದಿಂದ ಇಳಿಸಲಾಗಿದೆ-ಅದನ್ನು ಅವರು ಒಪ್ಪಿಕೊಂಡಿದ್ದಾರೆ" ಎಂಬ ಘೋಷಣೆಯನ್ನು ಬಿತ್ತರಿಸಿ ನಂತರ ಬ್ಯಾಂಡ್ ವಾದ್ಯ ಮುಂದುವರೆಯಿತು. ಇದೇ ರೀತಿ ಬೆಳಗಿನ 6 ಗಂಟೆಯಿಂದಲೂ ನಡೆಯುತ್ತಿತ್ತು. ನಮಗೆ ಗೊತ್ತಿರಲಿಲ್ಲ. ಪಕ್ಕದ ಬೀದಿಯಲ್ಲಿದ್ದ ಸಹೋದ್ಯೋಗಿಯೊಬ್ಬರ ಮನೆಗೆ ಹೊರಟೆ. ಬೀದಿಯಲ್ಲಿ ನಿಶ್ಶಬ್ದ. ಒಂಧು ನರಪಿಳ್ಳೆಯಾಗಲೀ, ನಾಯಿಯ ಸುಳಿವಾಗಲೀ ಇರಲಿಲ್ಲ. ಬಿಸಿಲು. ನೀರವತೆ. ಸ್ನೇಹಿತರು "ಈಗೇಕೆ ಬಂದೆ, ಹೊರಟು ಹೋಗು, ಯಾರೂ ಹೊರಗೆ ಬರಬೇಡಿ, ಇ.ಎಲ್.ಎಫ್. ಸೈನ್ಯವು ಯಾವ ಘಳಿಗೆಯಲ್ಲಾದರೂ ಅಸ್ಮಾರದ ಮೇಲೆ ಧಾಳಿ ಮಾಡಬಹುದು. ಬೀದಿಯ ಕಾಳಗ ನಡೆಯುವುದರಲ್ಲಿದೆ, ಹೊರಡು"- ಎಂದು ನನ್ನನ್ನು ಓಡಿಸಿದರು. ಅದೃಷ್ಟವಶಾತ್ ಅಂದು ಅಸ್ಮಾರದಲ್ಲಿ ಬೀದಿಯ ಕಾಳಗ ನಡೆಯಲಿಲ್ಲ.

ನಾವು ತಂಗಿದ್ದುದು ಮಹೆತೆಮಾ (ಮಹಾತ್ಮ) ಗಾಂಧಿ ರಸ್ತೆಯ 10ನೇ ನಂ. ಮನೆಯ ಮಹಡಿಯಲ್ಲಿ. ಒಂದು ತಿಂಗಳ ಹಿಂದೆ ಇ.ಎಲ್.ಎಫ್. ಉಗ್ರಗಾಮಿಗಳು ಅದೇ ಮನೆಯೊಳಗೆ ಅಡಗಿದ್ದಾರೆಂಬ ಸಂಶಯದ ಮೇಲೆ ಸರ್ಕಾರೀ ಸೈನಿಕರು ಆ ಮನೆಯ ಮೇಲೆ ಮಾರ್ಟರ್ ದಾಳಿ ನಡೆಸಿದರಂತೆ. ಆಗ ಅಲ್ಲಿ ಬೆಂಗಳೂರಿನ ಕುಟುಂಬವೊಂದು ವಾಸವಾಗಿತ್ತು. ಅವರು ಭಯಗೊಂಡು ಮಂಚದ ಕೆಳಗೆ ಅವಿತು

ಮಲಗಿದ್ದರಂತೆ. ಅಷ್ಟರಲ್ಲಿ ಕೆಳಗಿನ ಮನೆಯ ಹೆಂಗಸೊಬ್ಬಳು "ಹಿಂದ್ ಸೌ ನೌ–ಹಿಂದ್ ಸೌ" (ಅವರು ಹಿಂದೀ ಜನರು) ಎಂದು ಸೈನಿಕರಿಗೆ ಕೂಗಿ ಹೇಳಿದ ಮೇಲೆ, ದಾಳಿ ನಿಂತು ಸೈನ್ಯ ಮುಂದಕ್ಕೆ ಹೋಯಿತು.

ನಾನು ಆಡಿ–ಉಗ್ರಿಯಿಂದ ಅಡಿಸ್ ಅಬಾಬಕ್ಕೆ ವರ್ಗಗೊಂಡು, ಮಾರ್ಗ ಮಧ್ಯೆ ಅಸ್ಮಾರಕ್ಕೆ ಬಂದು ಖಾಲಿಯಿದ್ದ ಆ ಮನೆಯೊಳಗೆ ಪ್ರವೇಶಿಸಿದ್ದೆ. ದೆವ್ವದ ಮನೆಯಂತಿದ್ದ ಆ ಮನೆಯ ಗೋಡೆಗಳ ಮೇಲೆಲ್ಲಾ ದೊಡ್ಡ ರಂಧ್ರಗಳಿದ್ದುವು. 3 ಇಂಚು ಉದ್ದದ ಷೆಲ್ ಗುಂಡುಗಳು ಹೊರಗೋಡೆಯನ್ನು ತೂತು ಮಾಡಿಕೊಂಡು ಎದುರಿನ ಇನ್ನೊಂದು ಗೋಡೆಯೊಳಗೆ ಸೇರಿದ್ದುವು. ನಾನು ಒಂದು ಗುಂಡನ್ನು ಹೆಕ್ಕಿ ಹೊರಗೆ ತೆಗೆದು ತೋರಿದ ಕೂಡಲೇ ಎಲ್ಲರೂ ಗಾಬರಿಗೊಂಡು–ಅಲ್ಲೇ ಇಟ್ಟು ಬಿಡಿ, ಸಿಡಿಯುತ್ತದೆ– ಎಂದು ಕೂಗಾಡಿದರು. ಅಸ್ಮಾರದಲ್ಲಿ ಯುದ್ಧ ಸಂತಪ್ತ ಮನೆಯೊಂದರೊಳಗೆ ಮಗನ ಹುಟ್ಟು ಹಬ್ಬವನ್ನು ಆಚರಿಸಲು ಹೊರಟಾಗ ಅಡಿಸ್ ಅಬಾಬದಲ್ಲಿ ಐತಿಹಾಸಿಕ ಕ್ರಾಂತಿಯೊಂದು ನಡೆಯುತ್ತಿತ್ತು. ಆಗ ಹೈಲಿ ಸೆಲಾಸಿಗೆ 82 ವರ್ಷ ವಯಸ್ಸು. ಹಣ್ಣೆಲೆಯೊಂದು ಉದುರುತ್ತಿದ್ದಾಗ ಚಿಗುರೆಲೆಯೊಂದು ಸಂತೋಷದಿಂದ ಕುಣಿಯುತ್ತಿತ್ತು.

ಅಧ್ಯಾಯ 3

# ಮೂಲ ಧರ್ಮ ಮತ್ತು ಅಧ್ಯಾತ್ಮ

ಕಪ್ಪು ಆಫ್ರಿಕದ ಮೂಲಧರ್ಮ ಮತ್ತು ಸಂಸ್ಕೃತಿಗಳೇನಿದ್ದುವೋ ಅವು ಇಂದು ಆಮೂಲಾಗ್ರ ಹರಡಿರುವ ಕ್ರಿಶ್ಚಿಯನ್ ಮತ್ತು ಇಸ್ಲಾಮ್ ಧರ್ಮಗಳಲ್ಲಿ ಮುಳುಗಿ ಮರೆಯಾಗುತ್ತಿವೆ. 16ನೇ ಶತಮಾನದಲ್ಲಿ ಕಾಲಿಟ್ಟ ಐರೋಪ್ಯ ಮತ ಪ್ರಚಾರಕರು "ಕಪ್ಪು ಆಫ್ರಿಕದಲ್ಲಿ ಶಾಸ್ತ್ರವಿದಿತ ಧರ್ಮವಿಲ್ಲ; ಇವರ ಧರ್ಮವು ಹಳೆಯ ಬುಡಕಟ್ಟು ಪದ್ಧತಿಗಳಾದ ಜಡವಸ್ತು ಪೂಜೆ, ಪ್ರೇತಾತ್ಮಗಳ ಆರಾಧನೆ, ಪ್ರಾಣಿಬಲಿ, ಯಕ್ಷಿಣಿ ಹಾಗೂ ಮಂತ್ರವಾದಿಗಳಿಂದ ತುಂಬಿಹೋಗಿದೆ" ಎಂದು ಹೇಳಿದರು. ಈ ಜನರನ್ನು "ಪೇಗನ್ಸ್" (ವಿಧರ್ಮಿಗಳು) ಎಂತಲೂ ಇವರ ಧರ್ಮವನ್ನು "ಪೇಗನಿಸಂ" ಎಂದರೆ ಬೈಬಲಿನ ದೇವರನ್ನು ನಂಬದ ಅನಾಗರಿಕ ಧರ್ಮವೆಂದೂ ಪ್ರಚಾರ ಮಾಡುತ್ತಾ ಧರ್ಮ ಪರಿವರ್ತನೆಗೆ ಅಡಿಪಾಯ ಹಾಕಿದರು. ಇಸ್ಲಾಂ ಮತ ಪ್ರಚಾರಕರು ಉತ್ತರದ ಮರುಭೂಮಿ ಕಡೆಯಿಂದ ದಕ್ಷಿಣ ದಿಕ್ಕಿಗೆ ತಮ್ಮ ಮತವನ್ನು ಕ್ರಿ.ಶ. ಏಳರಿಂದ ಹದಿನಾರನೇ ಶತಮಾನದವರೆಗೂ ಹರಡುತ್ತಾ ಬಂದರು. ಹದಿನಾರನೇ ಶತಮಾನದಲ್ಲಿ ಗಿನಿ ಕರಾವಳಿಯಿಂದ ಉತ್ತರ ದಿಕ್ಕಿಗೆ, ಸಮುದ್ರ ಮಾರ್ಗವಾಗಿ ಬಂದ ಕ್ರೈಸ್ತ ಮತ ಪ್ರಚಾರಕರು ತಮ್ಮ ಧರ್ಮಗಳನ್ನು ಪ್ರಚಾರ ಮಾಡ ಹತ್ತಿದರು. ಇವೆರಡರ ನಡುವೆ ಸಿಕ್ಕಿಕೊಂಡ ಸ್ಥಳೀಯರಿಗೆ ಧರ್ಮದ ಬಗ್ಗೆ ಒಂದು ದೊಡ್ಡ ಗೊಂದಲವೇ ಉಂಟಾಯಿತು. ಸಂದರ್ಭಕ್ಕೆ ತಕ್ಕಂತೆ ಅಥವಾ ಒತ್ತಾಯ– ಆಮಿಷಗಳಿಗೆ ಬಲಿಯಾಗಿ ಆಗಾಗ್ಗೆ ತಮ್ಮ ಧರ್ಮಗಳನ್ನು ಬದಲಾಯಿಸಲು ಪ್ರಾರಂಭಿಸಿದರು. ಮತ ಪ್ರಚಾರಕರ ಬೋಧನೆಯನ್ನು ಅನುಮಾನ ದಿಂದಲೇ ಸ್ವೀಕರಿಸುತ್ತಾ ಬಂದರು. ಅಂತಿಮವಾಗಿ ಕಾಂಗೋದ ದಟ್ಟವಾದ ಕಾಡು ಮತ್ತು ಅದನ್ನು ಸುತ್ತುವರಿದ ಸವನ್ನಾ ಹುಲ್ಲುಗಾವಲಿನ ಒಳಪ್ರದೇಶಗಳಲ್ಲಿ ಹಳೆಯ ಧರ್ಮ ಮತ್ತು ನಂಬಿಕೆ, ಆಚರಣೆಗಳು ಉಳಿದುಕೊಂಡಿವೆ. ಆಧುನೀಕರಣದ ಪ್ರವಾಹವು ಅಲ್ಲಿಗೆ ನುಗ್ಗಿದ ಮೇಲೆ ಊರು–ಪಟ್ಟಣಗಳು ಮೇಲೇಳುತ್ತಿದ್ದಹಾಗೆ ಮತ ಪ್ರಚಾರದ ಸೋಂಕು ಅಲ್ಲಿಗೂ ಹರಡುವುದರಲ್ಲಿ ಸಂಶಯವಿಲ್ಲ.

ಇತ್ತೀಚಿನ ದಿನಗಳಲ್ಲಿ ಆಧುನಿಕ ವಿದ್ಯೆ ಕಲಿತ ನೌಕರರು, ಸಮಾಜ ಸೇವಕರು, ರಾಜಕೀಯ ಮುಖಂಡರಲ್ಲಿ ಅನೇಕರು ತಮ್ಮ ಮೂಲ ಸಂಸ್ಕೃತಿ ಮತ್ತು ನಾಗರಿಕತೆಯ

ಪುನರುಜ್ಜೀವನದ ಬಗ್ಗೆ ಅಲ್ಲಲ್ಲಿ ವ್ಯಕ್ತ ಪಡಿಸುತ್ತಿದ್ದಾರೆ. ಗುಪ್ತ ಸಂಘಗಳನ್ನು ಕಟ್ಟುತ್ತಿದ್ದಾರೆ. ಕಪ್ಪು ಆಫ್ರಿಕದಲ್ಲಿ ಕ್ರೈಸ್ತ ಮತಕ್ಕೆ ಸೇರಿದ ಅನೇಕ ಯುವಕ ಯುವತಿಯರು ತಮ್ಮ ಪೂರ್ವ ಮತಾಚರಣೆಗಳನ್ನು ಬಿಡಲು ಇಷ್ಟವಿಲ್ಲದೆ, ಊರ ಹೊರಗೆ ಕಾಡಿನಲ್ಲಿ ಮರೆಯಾಗಿರುವ ಗುಡಿಸಲಲ್ಲಿ ಸೇರಿ, ಅದರ ಸದಸ್ಯತ್ವ ಪಡೆದು, ರಾತ್ರಿವೇಳೆ ಗುಟ್ಟಾಗಿ ಪೂಜಾವಿಧಿಗಳನ್ನು ಆಚರಿಸುತ್ತಾರೆ. ಬಹಿರಂಗವಾಗಿ ಆಚರಿಸಿದರೆ ಕ್ರೈಸ್ತ ಪಾದ್ರಿಗಳ ಕೋಪಕ್ಕೆ ತುತ್ತಾಗಿ ಭ್ರಷ್ಟರೆನಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಗುಟ್ಟಾಗಿ ನಡೆಸುವ ಇಂತಹ ಸಂಘಗಳಿಗೆ "ಸೀಕ್ರೆಟ್ ಸೊಸೈಟಿ" ಅಥವಾ "ನೈಟ್ ಸೊಸೈಟಿ" ಗಳೆಂದು ಹೆಸರು ಬಂದಿತು. ಇವು ಗಿನಿ ಕಡಲ ತೀರದ ರಾಷ್ಟ್ರಗಳಲ್ಲಿ ಹೆಚ್ಚಾಗಿವೆ.

ನೂರಾರು ವರ್ಷಗಳ ಕಾಲ ತಮ್ಮ ಪರಂಪರೆಯನ್ನು ಕಾಪಾಡಿಕೊಂಡು ಬಂದ ಮೂಲವಾಸಿಗಳು ತಮ್ಮ ಸಂಸ್ಕೃತಿ, ನಾಗರಿಕತೆ, ಧರ್ಮಪ್ರಜ್ಞೆ ಮತ್ತು ನೀತಿನಿಯಮಗಳನ್ನು ಪೀಳಿಗೆಯಿಂದ ಪೀಳಿಗೆಗೆ ಮೌಖಿಕವಾಗಿ ವರ್ಗಾಯಿಸುತ್ತಾ ಬಂದಿದ್ದಾರೆ. ಆದ ಕಾರಣ ಆಫ್ರಿಕದ ಮೂಲಧರ್ಮದ ಬೆಳವಣಿಗೆಯನ್ನು ಇತಿಹಾಸ ರೂಪದಲ್ಲಿ ನಿರೂಪಿಸುವುದು ಕಷ್ಟದ ಕೆಲಸವೇ ಸರಿ. ಆದರೂ ಕೆಲವು ಇತಿಹಾಸಕಾರರು, ಧರ್ಮಗುರುಗಳು ಸಾಂಪ್ರದಾಯಿಕವಾಗಿ ನಡೆದು ಬಂದ ಅವರ ಧಾರ್ಮಿಕ ನಂಬಿಕೆಗಳನ್ನು ವಿಶ್ಲೇಷಣೆ ಮಾಡಿ ಬರೆದಿದ್ದಾರೆ. ಅದರ ಪ್ರಕಾರ ರೂಢಿಗತವಾಗಿ ಬಂದ ಅವರ ಧಾರ್ಮಿಕ ನಂಬಿಕೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು:

1) ಪ್ರಕೃತಿ ಶಕ್ತಿಗಳನ್ನು ದೇವರೆಂದು ನಂಬಿ ಅವುಗಳಿಗೆ ಪ್ರಾರ್ಥನೆ ಸಲ್ಲಿಸುವುದು
2) ಮೃತಾತ್ಮಗಳು ದೇವತಾ ಸಮಾನವೆಂದು ಪೂಜಿಸುವುದು
3) ಮಾಂತ್ರಿಕ ಶಕ್ತಿ ಇದೆಯೆಂದು ನಿರ್ಜೀವ ವಸ್ತುಗಳಿಗೆ (ಫೆಟಿಷ್) ಬಲಿಪೂಜೆ ಕೊಡುವುದು.

ಕಾಲ ಗತಿಯಲ್ಲಿ ಈ ಮೂರು ವಿಧವಾದ ನಂಬಿಕೆಗಳು ಪ್ರತ್ಯೇಕವಾದ ಸಾಂಪ್ರದಾಯಿಕ ಧರ್ಮಗಳಾಗಿ ಬೆಳೆದುವು:


1) ಪ್ರಕೃತಿ ದೇವತೆಗಳು ಹಾಗೂ ಅವುಗಳ ಉಪಾಸನೆಯು ಪಶ್ಚಿಮ ಆಫ್ರಿಕದ ಬಣಗಳಲ್ಲಿ ಬೆಳೆಯಿತು
2) ಪೂರ್ವ ಮತ್ತು ದಕ್ಷಿಣ ಆಫ್ರಿಕದ ಬುಡಕಟ್ಟುಗಳಲ್ಲಿ ಪ್ರೇತಾತ್ಮ ಪೂಜೆಗೆ ಪ್ರಾಮುಖ್ಯತೆ ದೊರೆಯಿತು.
3) ಮಂತ್ರಶಕ್ತಿ ಉಳ್ಳ ಮರದ ಪ್ರತಿಮೆಗಳನ್ನು ಪೂಜಿಸುವ ಪದ್ಧತಿಯು ಕೆಮರೂನ್, ಮಧ್ಯ ಆಫ್ರಿಕ ಮತ್ತು ಕಾಂಗೋದ (ಜಾಯಿರೆ) ಅರಣ್ಯ ಪ್ರದೇಶಗಳಲ್ಲಿ ಬೆಳೆಯಿತು.

ಇತ್ತೀಚೆಗೆ ಹಳೆಯ ನಂಬಿಕೆಗಳು ಕಡಿಮೆಯಾಗುತ್ತಿದ್ದರೂ ಒಳನಾಡು ಪ್ರದೇಶಗಳಲ್ಲಿ ಇಂತಹ ಪದ್ಧತಿಗಳು ಬೇರೂರಿ ನಿಂತಿವೆ. ಇಸ್ಲಾಮ್ ಅಥವಾ ಕ್ರೈಸ್ತ ಧರ್ಮಗಳ ಪೂರ್ಣ ಪ್ರಭಾವಕ್ಕೆ ಒಳಗಾಗಿಲ್ಲ.

ಕಾಲಕ್ರಮೇಣ ನೀಗ್ರೋ ಬಣಗಳಲ್ಲಿ ಇತರ ದೇವರುಗಳ ಜೊತೆಗೆ ಪರಮ ಪುರುಷನಾದ ಒಬ್ಬನೇ ದೇವರಲ್ಲಿ ನಂಬಿಕೆ ಬೆಳೆಯಿತು. "ದೇವನೊಬ್ಬ, ನಾಮ ಹಲವು" ಎಂಬಂತೆ ಆ ಪರಮ ಪುರುಷನಿಗೆ ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಹೆಸರು. ಪೂರ್ವ ಆಫ್ರಿಕದ ನೂರಾರು ಪಂಗಡಗಳಲ್ಲಿ "ಮುಲುಂಗು" ಎಂಬ ಹೆಸರು ವ್ಯಾಪಕವಾಗಿ ಹರಡಿದೆ. ಅವನು ಆಕಾಶದಲ್ಲಿರುವ ಪ್ರಧಾನ ದೇವರು. ಗುಡುಗು ಅವನ ಶಬ್ದ; ಮಿಂಚು ಅವನ ಶಕ್ತಿ. ಆತ ಒಳ್ಳೆಯವರನ್ನು ರಕ್ಷಿಸಿ ಕೆಟ್ಟವರನ್ನು ಶಿಕ್ಷಿಸುವನು. ಕಲಹರಿಯಿಂದ ಟಾಂಜಾನಿಯ, ಜಾಯಿರೆವರೆಗೂ ಆತನಿಗೆ "ಲೀಸಾ" ಎಂದು ಹೆಸರು. ಅವರ ನಂಬಿಕೆಯಲ್ಲಿ "ಆತ ಜನರ ನಡತೆಯನ್ನು ಸದಾ ಗಮನಿಸುತ್ತಾನೆ; ಅಗತ್ಯವುಳ್ಳವರಿಗೆ ಕೊಡುತ್ತಾನೆ; ದಾರಿ ತೋರುತ್ತಾನೆ. ಮೇಲು ಲೋಕದಲ್ಲಿರುವ ಅವನಿಗೆ ಜನರು ಮಳೆಗಾಗಿ ಪ್ರಾರ್ಥಿಸಬೇಕು". ಬೋಟ್ಸ್‌ವಾನಾದಿಂದ ನೈಜೀರಿಯ ಮಾರ್ಗ ಸಿರಾಲಿಯೋನ್‌ನವರೆಗೂ ಹಲವಾರು ನಾಮಗಳು. ನ್ಯಾಮೆ, ನುಮ್ಮೋ ಎಂದು ಅಂಗೋಲ ಮತ್ತು ನೈಜೀರಿಯಗಳಲ್ಲಿ ಕರೆದರೆ, ನ್ಗೇವೋ (ಸಿರಾಲಿಯೋನ್) ಅಮ್ಮ (ಡೊಗೋನ್) ಮಾವು (ಈವೆ) ಒಲೋರುನ್ (ಯೋರುಬ) ಚುಕ್ವು (ಈಬೋ) ಮತ್ತು ಸೋಕೋ (ನೂಪೆ)ಗಳಲ್ಲಿ ಕರೆಯುತ್ತಾರೆ. ಇದರ ವಿಶಾಲ ವ್ಯಾಪ್ತಿಯನ್ನು ಗಮನಿಸಿದಾಗ ಈ ಏಕದೇವತಾ ಕಲ್ಪನೆಯು ಇಸ್ಲಾಮ್ ಧರ್ಮ ಕಾಲಿಡುವ ಮೊದಲೇ ಇತ್ತೆಂದು ಕೆಲವರು ವಾದಿಸುತ್ತಾರೆ. ಅದೇನೇ ಇರಲಿ, ಪರಮ ಪುರುಷನ ಕರ್ತವ್ಯ ಕಲ್ಪನೆಯಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗಳು ಕಂಡು ಬರುತ್ತವೆ. ಧರ್ಮ ಪ್ರಚಾರದಲ್ಲಿ ಕೇಂದ್ರವ್ಯವಸ್ಥೆ ಇಲ್ಲದಿರೋಣ ಹಾಗೂ ಶ್ರದ್ಧೆಯ ಕೊರತೆಗಳು ಇದಕ್ಕೆ ಕಾರಣವಿರ ಬಹುದು.[9] ಅಧೀನದೇವತೆಗಳ ಬಗ್ಗೆ ವಿವರಣೆಗಳು ಮುಂದೆ ಬರುವ ಪುರಾಣ ಕಥೆಗಳಲ್ಲಿ ದೊರೆಯುತ್ತವೆ.

19ನೇ ಶತಮಾನದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಬರೆದ ಕೆಲವು ಗ್ರಂಥಗಳಿಂದ ತಿಳಿದು ಬರುವುದೇನೆಂದರೆ ಇವರದ್ದು ಪುರುಷ ಪ್ರಧಾನ ಕುಟುಂಬ, ಬಹುಪತ್ನೀತ್ವ ರೂಢಿಯಲ್ಲಿದೆ. ಸರಳ ಜೀವನ. ಜೀವನದಲ್ಲಿ ಸುಖ ಸಂತೋಷಗಳನ್ನು ಅನುಭವಿಸಬೇಕು. ಸ್ತ್ರೀ ಒಂದು ಭೋಗವಸ್ತು. ಮಕ್ಕಳು ದೇವರ ಕೊಡುಗೆ. ಕುಟುಂಬ ದೊಡ್ಡದಿದ್ದಷ್ಟೂ ಒಳ್ಳೆಯದು. ರಕ್ಷಣೆ ಮತ್ತು ಆರೋಗ್ಯಗಳೇ ಪ್ರಾರ್ಥನೆಯ ಉದ್ದೇಶಗಳು. ಆದರೆ ಜ್ಞಾನ ವೃದ್ಧರು ಮತ್ತು ವಯೋ ವೃದ್ಧರ ಪ್ರಕಾರ ದೇವರು ಪರಮಪುರುಷ, ಸರ್ವಶಕ್ತ. ಅವನೇ ಎಲ್ಲ ದೇವತೆಗಳಿಗೂ ಅಧಿಪತಿ. ಆತನೇ ಸೃಷ್ಟಿ ಕರ್ತ. ಅವನಿಂದಲೇ ಎಲ್ಲಾ ಪ್ರಕೃತಿ ದೇವತೆಗಳು (ಸ್ಪಿರಿಟ್ಸ್) ಮೃತಾತ್ಮಗಳೂ, ಮಾನವರೂ, ವೈದ್ಯರೂ ಮಾಂತ್ರಿಕರೂ ರಾಜರುಗಳೂ ತಮ್ಮ ಶಕ್ತಿಯನ್ನು ಪಡೆಯುತ್ತಾರೆ.

9. African Traditional Religions- http: /www. aarone. com/ modrelg/relafri. html.




ಆಫ್ರಿಕದ ಪುರಾತನ ಧರ್ಮವನ್ನು ಒಂದು ತ್ರಿಭುಜಾಕೃತಿಯಲ್ಲಿ ನಿರೂಪಿಸ ಬಹುದೆಂದು ಪರಿಣತರು ಅಭಿಪ್ರಾಯ ಪಡುತ್ತಾರೆ.+ ಅದರ ಪ್ರಕಾರ ತ್ರಿಕೋಣಾಕೃತಿಯ ಮೇಲಿನ ತುದಿಯಲ್ಲಿ ಪರಮ ಪುರುಷನಾದ ದೇವರು ಆಕಾಶ ಲೋಕದಲ್ಲಿ ವಾಸಿಸುತ್ತಿದ್ದಾನೆ. ಎಡಭುಜದಲ್ಲಿ ಅಧೀನ ದೇವತೆಗಳು ಅಥವಾ ವ್ಯಕ್ತಿ ರೂಪದ ಪ್ರಕೃತಿ ಚೈತನ್ಯಗಳು. ಬಲಭುಜದಲ್ಲಿ ಪಿತೃಗಣ ಅಥವಾ ಮೃತಪಟ್ಟ ಪೂರ್ವಜರ ಆತ್ಮಗಳು. ತಳಭುಜದಲ್ಲಿ ವೈದ್ಯರೂ, ಮಾಂತ್ರಿಕರೂ ಇರುತ್ತಾರೆ.

ಮಾಂತ್ರಿಕರಲ್ಲಿ ಉಭಯಶಕ್ತಿಗಳ (ದುಷ್ಟಶಕ್ತಿ, ಶಿಷ್ಟ ಶಕ್ತಿಗಳ) ಆರಾಧಕರುಂಟು. ಮಾನವನು ತ್ರಿಭುಜದ ಕೇಂದ್ರ ಸ್ಥಾನದಲ್ಲಿದ್ದುಕೊಂಡು ತನ್ನ ಸುತ್ತಲೂ ಇರುವ ಶಕ್ತಿಗಳ ನಡುವೆ ಸಂಯಮದಿಂದ ಬಾಳುವೆ ನಡೆಸುತ್ತಾನೆ. ದೈವದತ್ತ ಶಕ್ತಿಗಳು ಮಾನವನಿಗೆ ಸಹಭಾಗಿಯಾಗುತ್ತವೆ. ಭೂಮಿ, ಬೆಟ್ಟ, ನದಿ, ಕಾಡು, ಕಲ್ಲು ಬಂಡೆ ಎಲ್ಲವೂ ಜೀವಂತ ವಸ್ತುಗಳು. ಇವೆಲ್ಲವನ್ನೂ ಅವನ ಸೌಕರ್ಯಕ್ಕಾಗಿಯೇ ದೇವರು ಇಟ್ಟಿರುವುದು–ಎಂದು ನಂಬುತ್ತಾರೆ. ಆದರೆ ಇದು ಮೂಲ ಧರ್ಮದ ಒಂದು ಅಂಶಿಕ ನೋಟವೇ ಹೊರತು ಪೂರ್ಣ ರೂಪವಲ್ಲ.

## ಅಧ್ಯಾತ್ಮ ವಿಚಾರ:

ಮಾನವನೆಂದರೆ ಕೇವಲ ಶರೀರವಲ್ಲ. ಅವನಲ್ಲಿ ಆಧ್ಯಾತ್ಮಿಕವಾದ ಅಂಶವೊಂದಿದೆ. ಅದೇನೆಂದರೆ ದೇವರಿಂದ ಕೊಡಲ್ಪಟ್ಟ ಆತ್ಮ ಅಥವಾ ಚೇತನ. ಶರೀರ ಮತ್ತು ಆತ್ಮಗಳು ಒಂದರಲ್ಲೊಂದು ಹೆಣೆದುಕೊಂಡಿವೆ. ಕೆಲವರಿಗೆ ಇವೆರಡೂ ಒಂದೇ ಎಂದು ಕಾಣುತ್ತದೆ. ಆದರೆ ಸತ್ತಾಗ ಆತ್ಮವು ಶರೀರವನ್ನು ಬಿಟ್ಟು ಹೋಗುತ್ತದೆ ಎಂಬುದರಲ್ಲಿ ಎಲ್ಲರಿಗೂ ನಂಬಿಕೆ ಉಂಟು. ಆತ್ಮವೆಂಬುದು ಕೇವಲ ಪ್ರಾಣ ಅಥವಾ ಉಸಿರಲ್ಲ; ನಮ್ಮ ವ್ಯಕ್ತಿತ್ವವನ್ನೇ ಉಳ್ಳ ಅಗೋಚರ ಚೈತನ್ಯ. ಕಪ್ಪು ಜನರ ನಂಬಿಕೆಯ ಪ್ರಕಾರ ಆತ್ಮ. ನೆರಳು ಮತ್ತು ಚೈತನ್ಯಗಳು ಸೇರಿ (Soul, Shadow, Spirit) ಮಾನವನ ವ್ಯಕ್ತಿತ್ವ ರೂಪಿತವಾಗಿದೆ. ಆದ್ದರಿಂದಲೇ ರೋಗವನ್ನು ಗುಣ ಪಡಿಸುವಾಗ ಔಷಧ ಒಂದೇ ಸಾಲದು, ಆಧ್ಯಾತ್ಮಿಕ ಉಪಚಾರವೂ ಬೇಕು ಎಂದು ನಂಬುತ್ತಾರೆ.*

ಸಾವು ಮಾನವನಿಗೆ ಸಹಜವಾದುದಲ್ಲ. ಮಾನವ ಮೊದಲು ಅಮರನಾಗಿದ್ದ. ಸಾವು ಮಧ್ಯಂತರದಲ್ಲಿ ಬಂದದ್ದು. ಸತ್ತವರ ಆತ್ಮಗಳು ನಮ್ಮ ಜೊತೆಯಲ್ಲೇ ಇರುತ್ತವೆ. ವರ್ಷಕ್ಕೊಮ್ಮೆ ಅಥವಾ ನಾವು ಆಹ್ವಾನಿಸಿದಾಗ ಪಿತೃ ಪಿತಾಮಹರು ವೇಷಮರೆಸಿಕೊಂಡು

\+ ಜೊಫೆರಿ ಪ್ಯಾರಿಂಡರ್. ಆಫ್ರಿಕನ್ ಮೈಥಾಲಜಿ pp15

* ಜೋ.ಪ್ಯಾರಿಂಡರ್, ಆಫ್ರಿಕನ್ ಮೈಥಾಲಜಿ – ಪುಟ 15


ಬರುತ್ತಾರೆ. ಬಂದು ನಮ್ಮನ್ನು ಆಶೀರ್ವದಿಸುತ್ತಾರೆ. ಈ ನಂಬಿಕೆಯೇ ಮಾಸ್ಕ್ ಮತ್ತು ಮಾಸ್ಕರೇಡ್ ಆಚರಣೆಗೆ ನಾಂದಿಯಾಯಿತು. ಇತ್ತೀಚಿನ ಶತಮಾನಗಳಲ್ಲಿ ಕ್ರಿಶ್ಚಿಯನ್ ಮತಗಳು ಆಫ್ರಿಕದ ಎಲ್ಲಾ ಕಡೆಯೂ ಹರಡಿ, ಅವು ತಮ್ಮ ಶಿಕ್ಷಣ ನೀತಿಯಲ್ಲಿ ಇತಿಹಾಸ, ವಿಜ್ಞಾನ, ವೈದ್ಯವಿದ್ಯೆ, ತಾಂತ್ರಿಕ ಶಿಕ್ಷಣ, ಅಧ್ಯಾತ್ಮ (ಬೈಬಲ್ ನಾಲೆಡ್ಜ್) ಇತ್ಯಾದಿಗಳನ್ನು ರೂಢಿಸಿದ್ದರೂ ಜನರಲ್ಲಿದ್ದ ಹಳೆಯ ನಂಬಿಕೆಗಳು, ಆಚಾರಣೆಗಳು ಸಂಪೂರ್ಣವಾಗಿ ಅಳಿಸಿಹೋಗಿಲ್ಲ. ಅವರ ಮೂಲ ಸಂಸ್ಕೃತಿ ಮತ್ತು ಭಾಷೆಗಳು (ಭಾಷೆಯಲ್ಲಿರುವ ನಾಣ್ನುಡಿ, ಸುಭಾಷಿತಗಳು,) ಹೊಸಮತಗಳ ಆಚರಣೆಯ ಮೇಲೆ ಅಗೋಚರ ಪ್ರಭಾವವನ್ನು ಬೀರುತ್ತಲೇ ಇವೆ.

## ತ್ರಿಲೋಕ ಕಲ್ಪನೆ

ಸಾಮಾನ್ಯವಾಗಿ ಆಫ್ರಿಕದ ಎಲ್ಲಾ ಪಂಗಡವೂ ಅನುಮೋದಿಸುವ ಒಂದಂಶ ವೆಂದರೆ– ವಿಶ್ವವು ಕರ್ತನಾದ ದೇವರಿಂದ ಸೃಷ್ಟಿಸಲ್ಪಟ್ಟಿದೆ ಎಂಬುದು. ಆದರೆ ವಿವರಣೆಯಲ್ಲಿ ವ್ಯತ್ಯಾಸವಿದೆ. ಪುರಾಣಕಥೆಗಳು ಮೌಖಿಕವಾದ್ದರಿಂದ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಇರುವುದು ಸಹಜ. ದೇಶೀಯ ಕ್ರಿಶ್ಚಿಯನ್ ಧರ್ಮಗುರುಗಳು ವ್ಯಾಖ್ಯಾನ ಮಾಡಿ ಹೆಚ್ಚಿನ ವಿವರಣೆ ಕೊಟ್ಟಿದ್ದಾರೆ. ರೆ॥ ಡಾ॥ ಜಾನ್ ಮಬೆಯಿತಿ (ನೈಜೀರಿಯ) ಅವರ ವ್ಯಾಖ್ಯಾನ ಪ್ರಕಾರ– "ಕರ್ತನಾದ ದೇವರು ಸೃಷ್ಟಿಸಲ್ಪಟ್ಟವನಲ್ಲ; ಅವನು ಸ್ವಯಂಭು. ಅನಾದಿಕಾಲದಿಂದಲೂ ತಾನೇ ತಾನಾಗಿ ಇರುವವನು ಎಂಬುದನ್ನು ಎಲ್ಲಾ ಸಮಾಜದವರೂ ಒಪ್ಪುತ್ತಾರೆ. ಶರೀರ ದೃಷ್ಟಿಯಿಂದ ದೇವರು ಗಂಡೂ ಅಲ್ಲ, ಹೆಣ್ಣೂ ಅಲ್ಲ ಎಂಬುದು ಕೆಲವರ ಅಭಿಪ್ರಾಯ. ಆತನ ಸೃಷ್ಟಿ ಪುರಾಣದಲ್ಲಿ ಭೌತಿಕ ಜಗತ್ತಿನ ಸಕಲವೂ ಎಂದರೆ ಭೂಮಿ, ಆಕಾಶ, ನಕ್ಷತ್ರ, ಸೂರ್ಯ ಚಂದ್ರರಾದಿಯಾಗಿ ಮೋಡ, ಬಿರುಗಾಳಿ, ಮಳೆ ಮಿಂಚು ಗುಡುಗು ಎಲ್ಲವೂ ಸೇರಿವೆ. ಜಗತ್ತು ಶೂನ್ಯದಿಂದ ಹೊರಬಂದದ್ದು. ಸೃಷ್ಟಿಕರ್ತ ಹಾಗೂ ಆತನ ಸಹಾಯಕರು ಪ್ರಾರಂಭದ ವಸ್ತುಗಳಿಗೆ, ಇಂದು ನಮಗೆ ಗೋಚರಿಸುತ್ತಿರುವ ವಿವಿಧ ರೂಪು, ಆಕಾರಗಳನ್ನು ಕೊಟ್ಟರೆಂದು ಈ ಜನರು ನಂಬುತ್ತಾರೆ. ದೇವರು ಹೊಸ ಹೊಸ ಜೀವಗಳನ್ನು ತುಂಬುವ ಕಾರ್ಯವನ್ನು ಸತತವಾಗಿ ನಡೆಸಿಕೊಂಡು ಬಂದಿದ್ದಾನೆ; ಈಗಲೂ ನಡೆಸುತ್ತಿದ್ದಾನೆ." ಹಾಗೆಯೇ ಅವರು ಮುಂದುವರಿದು ಹೇಳುತ್ತಾರೆ "ಸೃಷ್ಟಿಗೊಂಡ ವಿಶ್ವವಾದದ್ದರಿಂದಲೇ ಇದು ದೇವರ ಜಗತ್ತು; ದೇವರ ಜಗತ್ತಾದುದರಿಂದ ಈ ಪ್ರಪಂಚವು ಒಂದು ಧಾರ್ಮಿಕ ಪ್ರಪಂಚ; ಆದ್ದರಿಂದ ಇಲ್ಲಿ ವಾಸಿಸುವುದೂ ಒಂದು ಧಾರ್ಮಿಕ ಅನುಭವವೆಂದು ಆಫ್ರಿಕನ್ನರು ಪರಿಗಣಿಸುತ್ತಾರೆ. ಇದು ಲೌಕಿಕ ಅದು ಪಾರಮಾರ್ಥಿಕ ಅಥವಾ ಇದು ಭೌತಿಕ ಅದು ಆಧ್ಯಾತ್ಮಿಕಗಳೆಂಬ ದ್ವಂದ್ವಗಳಿಗೆ ಸಿಕ್ಕದೆ ಅವರು ಆಚರಿಸುವ ಮತಾಚಾರಗಳನ್ನು ಗಮನಿಸಿದಾಗ ಈ ಅಂಶವು ಸ್ಪಷ್ಟವಾಗುತ್ತದೆ. ಪ್ರಕೃತಿಯು ತಮಗಾಗಿ ಸೃಷ್ಟಿಸಲ್ಪಟ್ಟದ್ದೆಂದು ನಂಬುತ್ತಾರೆ." ಎಂದು

ಕೆಲವು ಸಮಾಜದವರು ವಿಶ್ವವನ್ನು ಭೂಮಿ ಮತ್ತು ಆಕಾಶ (ದೇವಲೋಕ) ಗಳೆಂದು ಎರಡು ಸ್ತರಗಳಲ್ಲಿ ನೋಡುತ್ತಾರೆ. ಅರ್ಥಾತ್ ಕಾಣುವ ಹಾಗೂ ಕಾಣದೇ ಇರುವ ಪ್ರಪಂಚಗಳು. ಮತ್ತೆ ಕೆಲವು ಸಮಾಜದವರು ಅದನ್ನು ಮೂರು ಸ್ತರಗಳಲ್ಲಿ ಅಂದರೆ ದೇವದೇವತೆಗಳು ವಾಸಿಸುವ ಅಂತರಿಕ್ಷ, ಮಾನವ ವಾಸಿಸುವ ಭೂಲೋಕ ಮತ್ತು ಮಾಟಗಾರರು, ಮಂತ್ರವಾದಿಗಳು, ಭೂತ ಪ್ರೇತಗಳು ವಾಸಿಸುವ ಪಾತಾಳ ಲೋಕವೆಂದು ಬಣ್ಣಿಸುತ್ತಾರೆ.


ಈ ತ್ರಿಲೋಕ ಕಲ್ಪನೆಯನ್ನು ಡಾ॥ ಮ್ಬಯಿತಿಯವರು ಎರಡು ಸರಳ ರೇಖೆಗಳಿಂದ ರಚಿಸಿದ ಶಿಲುಬೆಯಾಕಾರದ ಚಿತ್ರದಲ್ಲಿ ಮಂಡಿಸುತ್ತಾರೆ. ಅವರ ಪ್ರಕಾರ ಜಗತ್ತನ್ನು ಎರಡು ಆಯಾಮಗಳಲ್ಲಿ ಗ್ರಹಿಸಬಹುದು. ಲಂಬರೇಖೆಯ ಮೇಲಿನ ತುದಿಯಲ್ಲಿ ಪರಮಪುರುಷನಿದ್ದಾನೆ. ಅವನಿರುವ ಲೋಕ ಆಕಾಶಲೋಕ ಅಥವಾ ದೇವಲೋಕ. ಲಂಬರೇಖೆಯ ಕೆಳಹದಿಯಲ್ಲಿ ಪಾತಾಳಲೋಕವಿದೆ. ಇದು ಮಂತ್ರವಾದಿಗಳು ಮತ್ತು ಪ್ರೇತಗಳು ವಾಸಿಸುವ ಲೋಕ. ಲಂಬರೇಖೆಯನ್ನು ಸಮಕೋನದಲ್ಲಿ ಛೇದಿಸುವ ಸಪಾಟ ರೇಖೆಯು ಭೂಲೋಕವನ್ನು ಪ್ರತಿನಿಧಿಸುತ್ತದೆ. ಇಲ್ಲಿ ಪ್ರಕೃತಿ ಸಂಪತ್ತು, ಆಹಾರ, ನೀರು ಎಲ್ಲವೂ ಇವೆ. ಇವೆಲ್ಲದರ ನಡುವೆ ಅಂದರೆ ಛೇದಬಿಂದುವಿನಲ್ಲಿ ಮನುಷ್ಯನಿದ್ದಾನೆ, ಪರಮ ಪುರುಷನಾದ ದೇವರು ಮೇಲು ಲೋಕದ (ಆಕಾಶಲೋಕಕ್ಕೆ) ಅಧಿಪತಿ, ಕೆಲವು ಭಾಷೆಗಳಲ್ಲಿ ದೇವರು, ಆಕಾಶ ಲೋಕ ಎರಡಕ್ಕೂ ಒಂದೇ ಹೆಸರು, ಆಕಾಶ ಲೋಕದಲ್ಲಿ ಸೂರ್ಯ, ನಕ್ಷತ್ರ, ಚಂದ್ರ, ಕಾಮನ ಬಿಲ್ಲು, ಮೋಡ, ಮಿಂಚು, ಬಿರುಗಾಳಿ, ಮಳೆ ಇತ್ಯಾದಿಗಳು ಇವೆ. ಅಲ್ಲಿ ದೇವರು ಮಾತ್ರವಲ್ಲದೆ ಅನೇಕ ಪ್ರಕೃತಿ ಚೈತನ್ಯಗಳು (ಸ್ಪಿರಿಟ್ಸ್) ವಾಸವಾಗಿವೆ. ಆ ಚೈತನ್ಯಗಳು ಸೃಷ್ಟಿಯ ಒಂದೊಂದು ಅಂಗಕ್ಕೂ ಒಡೆಯರಾಗಿದ್ದು ಅಭಿಮಾನ ದೇವತೆಗಳೆನಿಸಿಕೊಳ್ಳುತ್ತಾರೆ. ಉದಾ: ಬಿರುಗಾಳಿಯ ದೇವತೆ, ಪರ್ವತಗಳ ದೇವತೆ, ಭೂದೇವಿ, ಜಲದೇವತೆ ಇತ್ಯಾದಿ. ದೇವ ಕಿಂಕರರಾದ ಓತಿಕ್ಯಾತ, ಗೋಸುಂಬೆ, ಜೇಡ, ಮೊಲ, ಬಾವಲಿ, ಹೇನು ಇತ್ಯಾದಿಗಳು ಆಕಾಶಲೋಕದವರೇ ಅಂದಮೇಲೆ ಆಕಾಶವು ಒಂದು ಪಾಳುಜಾಗವಲ್ಲ. ವಿಚಿತ್ರ ರೂಪಗಳನ್ನು ಧರಿಸಿ ನಮ್ಮೊಂದಿಗೆ ಮಾತನಾಡಬಲ್ಲ, ವ್ಯವಹರಿಸಬಲ್ಲ ಸ್ಪಿರಿಟ್ಟುಗಳೂ, ದೇವ ಕಿಂಕರರೂ ವಾಸವಿರುವ ಒಂದು ಭವ್ಯಲೋಕ. ಈ ಕಲ್ಪನೆಯ ಪ್ರಕಾರ ಅಂತರಿಕ್ಷವು ಭೂಮಿಯಂತೆಯೇ ಘನರೂಪವುಳ್ಳ ಒಂದು



ಪ್ರಪಂಚ. ಆ ಕಾರಣದಿಂದಲೇ ದೇವರನ್ನು ಸಂಬೋಧಿಸುವಾಗ ಮೇಲಕ್ಕೆ ಕೈ ತೋರಿಸುವುದು.

ಭೂಮಿಯನ್ನು ತಾಯಿಗೆ ಹೋಲಿಸಿ ಅದರಂತೆ ಪೂಜಾವಿಧಿಗಳನ್ನು ಆಚರಿಸುತ್ತಾರೆ. ಸೃಷ್ಟಿಕಾರ್ಯದಲ್ಲಿ ದೇವರು ದೇವಲೋಕವನ್ನು ಮೊದಲು ಸೃಷ್ಟಿಸಿ ಅನಂತರ ಭೂಲೋಕವನ್ನು ಸೃಷ್ಟಿಸಿದನೆಂದು ಕೆಲವು ಬುಡಕಟ್ಟಿನ ಜನರು ಅಭಿಪ್ರಾಯ ಪಟ್ಟರೆ ಮತ್ತೆ ಕೆಲವರು ಎರಡೂ ಒಟ್ಟಿಗೆ ಮಿಂಚಿನ ವೇಗದಲ್ಲಿ ಸೃಷ್ಟಿಸಲ್ಪಟ್ಟವೆಂದು ಪ್ರತಿಪಾದಿಸುತ್ತಾರೆ. ವಿಶ್ವದಲ್ಲಿ ಮಾನವನು ಕೇಂದ್ರ ಸ್ಥಾನದಲ್ಲಿದ್ದುಕೊಂಡು ಅಲ್ಲಿಂದ ವಿಶ್ವದ ಎಲ್ಲಾ ಲೋಕಗಳನ್ನು ಎಚ್ಚರಿಸುತ್ತಾನೆ. ದೇವತೆಗಳೊಡನೆ ವ್ಯವಹರಿಸುತ್ತಾನೆ. ದೇವವಾಣಿಯನ್ನು ಆಲಿಸುತ್ತಾನೆ. ದೇವರು ಹಾಗೆ ಹೇಳಿದನೆಂದು ಪೂಜಾರಿ- ಮಾಂತ್ರಿಕರು ಹೇಳುತ್ತಾರೆ. ಈ ನಂಬಿಕೆ ಆಫ್ರಿಕಾದ್ಯಂತ ಆಚರಣೆಯಲ್ಲಿದೆ. ಇದನ್ನು ಗ್ರಾಮಾಂತರಗಳಲ್ಲಿ ಈಗಲೂ ನೋಡಬಹುದು.

ಕಾಲಕಲ್ಪನೆಯಲ್ಲಿ ಆಫ್ರಿಕದವರು ಭೂತ ಮತ್ತು ವರ್ತಮಾನಗಳನ್ನು ಗ್ರಹಿಸುವರೇ ವಿನಾ ಭವಿಷ್ಯದ ಮೇಲೆ ಹೆಚ್ಚು ಒತ್ತು ಕೊಡುವುದಿಲ್ಲ. ಅವರ ಗ್ರಹಿಕೆಯಲ್ಲಿ "ಭವಿಷ್ಯ" ಎಂಬುದು ಮಾನವನ ಜೀವಿತ ಕಾಲಕ್ಕೆ ಸೀಮಿತವಾದದ್ದು. ಅಂದರೆ ಜನನ, ಬೆಳವಣಿಗೆ, ವಿವಾಹ, ಸಂತಾನ, ಮರಣ ಮತ್ತು ಮರಣದ ನಂತರ ಪೂರ್ವಜರ ಪ್ರೇತ ಸಮೂಹವನ್ನು ಕೂಡಿಕೊಳ್ಳುವುದಷ್ಟೆ. ಜಗತ್ತಿನ ಭವಿಷ್ಯವು ಇವರ ಕಲ್ಪನೆಯಲ್ಲಿ ಹಗಲು, ರಾತ್ರ, ದಿನ, ವಾರ, ತಿಂಗಳು, ಋತುಮಾನಗಳಿಗಷ್ಟೇ ಸೀಮಿತ. ಆದ್ದರಿಂದಲೇ ಇವರ ಪುರಾಣಗಳಲ್ಲಿ ಭೂತಕಾಲ, ವರ್ತಮಾನಗಳ ಉಲ್ಲೇಖ ಮಾತ್ರ ಇದೆ. ಭವಿಷ್ಯವೆಂಬುದು ದೀರ್ಘಕಾಲಿಕ ವಿಷಯಗಳಿಗೆ ಅನ್ವಯಿಸುವುದಿಲ್ಲ.*



ಸರ್ಪಸಂಕೇತ ಫೇಸೋ ರಾಜನ ಅರಮನೆಯ ಗೋಡೆಯ ಮೇಲಿರುವ ಉಬ್ಬು ಚಿತ್ರ

ಜಗತ್ತಿಗೆ ಪ್ರಾರಂಭವಿದೆ, ಅಂತ್ಯವಿಲ್ಲವೆಂಬ ಕಲ್ಪನೆಯು ಸಂಪ್ರದಾಯಸ್ಥರು ಆಚರಿಸುವ ಧಾರ್ಮಿಕ ಕರ್ಮಗಳಲ್ಲಿ ಹಾಗೂ ಕುಶಲ ಕಲೆಗಳಲ್ಲಿ ವ್ಯಕ್ತಪಡುತ್ತದೆ. ಉದಾ: ದಹೋಮೆ (ಈಗಿನ ಬೆನಿನ್ ದೇಶ) ರಾಜ್ಯದ ಫೇಸೋ ರಾಜನ ಅರಮನೆಯ ಗೋಡೆ ಹಾಗೂ ಬಾಗಿಲ ಮೇಲೆ ಸರ್ಪದ ಉಬ್ಬು ಚಿತ್ರಗಳಿವೆ. ಅದರಲ್ಲಿ ಸರ್ಪವು ಬಾಲದ ತುದಿಯನ್ನು ತನ್ನ ಬಾಯೊಳಗೆ ಇಟ್ಟುಕೊಂಡಿರುವ ಚಿತ್ರವು "ವಿಶ್ವಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ" ಎಂಬ ತತ್ತ್ವವನ್ನು ಬೋಧಿಸುತ್ತದೆ. ವೃತ್ತಾಕಾರದಲ್ಲಿರುವ ಸರ್ಪದ ಚಿತ್ರದಲ್ಲಿ ಪ್ರಾರಂಭ ಯಾವುದು, ಅಂತ್ಯ ಯಾವುದು- ಎಂಬುದನ್ನು ಕಂಡು ಹಿಡಿಯುವುದು ಹೇಗೆ? ಅರ್ಥಾತ್ ಈ

---

* ರೆ॥ ಡಾ॥ ಜಾನ್ ಮ್ಬೆಯಿತಿ- ಆಫ್ರಿಕನ್ ಕಾಸ್ಮಾಲಜಿ- FESTAC-77- ಪುಟ 44.


\+ ಜೋ.ಪ್ಯಾರಿಂಡರ್, ಆಫ್ರಿಕನ್ ಮೈಥಾಲಜಿ. P. 38

ಚಿತ್ರವು "ಹುಟ್ಟು, ಸಾವು, ಪುನರಾಗಮನ (ಪ್ರೇತಗಳ ರೂಪದಲ್ಲಿ)" ಎಂಬ ಸಿದ್ಧಾಂತವನ್ನು ಶ್ರುತಪಡಿಸುತ್ತದೆ. ಈ ನಂಬಿಕೆಯು ಇಡೀ ಆಫ್ರಿಕದಲ್ಲಿ ಬೇರೂರಿದೆ. ಮುಂದುವರಿದ ಸಮಾಜದವರೂ, ಈ ತತ್ತ್ವವನ್ನು ತಮ್ಮ ಸಂಭಾಷಣೆಗಳಲ್ಲಿ ಸಮರ್ಥಿಸುತ್ತಾರೆ. ಒಟ್ಟಾರೆ, ಪುರಾತನ ಧರ್ಮಾಚರಣೆಯಲ್ಲಿ ಮಾನವನ ನಿರ್ದಿಷ್ಟ ಕರ್ತವ್ಯಗಳು, ನಿಷೇಧಗಳು, ಸಮಾಜದ ಅಂಗರಚನೆಗಳು ಇತ್ಯಾದಿ ಎಲ್ಲವೂ ಸೇರಿವೆ. ಪ್ರತಿಯೊಬ್ಬ ಗಂಡಸೂ ಪುಜಾರಿಯಂತೆ ವರ್ತಿಸಬೇಕು. ಅದರಲ್ಲಿ ಪ್ರಾಣಿಬಲಿ, ಅಂತ್ಯ ಸಂಸ್ಕಾರ, ಪುಣ್ಯವಿಧಿ (ಸ್ಥಳ ಅಥವಾ ಹೊಸಮನೆ, ವಸ್ತುಗಳನ್ನು ಮಧ್ಯತರ್ಪಣದಿಂದ ಧರ್ಮ ಸಮ್ಮತಗೊಳಿಸುವುದು), ಕಿರಿಯರಿಗೆ ಬುದ್ಧಿಮಾತು, ಧರ್ಮ ರಹಸ್ಯವನ್ನು ಕಾಪಾಡುವುದು.. ಮುಂತಾದ ಆಚರಣೆಗಳೆಲ್ಲವೂ ಸೇರಿವೆ.

## ಬ್ರಹ್ಮಾಂಡ ಕಲ್ಪನೆ (1)


ಬ್ರಹ್ಮಾಂಡದ ಪರಿಕಲ್ಪನೆಯನ್ನು ಫಾನ್ ಜನರು ಕಲಬಾಷ್‌ನ ಉದಾಹರಣೆ ಯೊಂದಿಗೆ ವಿವರಿಸುತ್ತಾರೆ. ಕಲಬಾಷ್ ಎಂಬುದು ದೊಡ್ಡಗಾತ್ರದ ದುಂಡನೆಯ ಒಂದು ಸೋರೆಕಾಯಿ. ಇದು ಗಿನೀ ಕರಾವಳಿಯ ಅನೇಕ ರಾಷ್ಟ್ರಗಳಲ್ಲಿ ಬೆಳೆಯುತ್ತದೆ. ಹಸಿಯಾಗಿದ್ದಾಗಲೇ ಮಧ್ಯಕ್ಕೆ ಸರಿಯಾಗಿ ಎರಡು ಹೋಳುಗಳಾಗಿ ಕತ್ತರಿಸಿ, ತಿರುಳು ಬೀಜಗಳನ್ನು ತೆಗೆದು ಚಿಪ್ಪನ್ನು ಒಣಗಿಸುತ್ತಾರೆ. ಒಣಗಿದ ಮೇಲೆ ಈ ಚಿಪ್ಪು ಅರ್ಧ ಇಂಚಿನಷ್ಟು ಮಂದವಾಗಿಯೂ ಗಟ್ಟಿಯಾಗಿಯೂ ಆಗುತ್ತದೆ. ಪಶುಪಾಲನೆಯ ಫುಲಾನೀ ಜನರು ಇದರಲ್ಲಿ ಹಾಲು, ಮೊಸರು, ಬೆಣ್ಣೆಗಳನ್ನು ತಂದು ಪಟ್ಟಣಗಳಲ್ಲಿ ಮಾರುತ್ತಾರೆ. ದೇವಾಲಯಗಳಲ್ಲಿ ದೇವರಿಗೆ ನೈವೇದ್ಯವನ್ನು ಇದರಲ್ಲಿ ತುಂಬಿ ಇಡುತ್ತಾರೆ. ನೀರು ಮೊಗೆಯಲು, ತುಂಬಿಡಲು, ಕುಡಿಯಲೂ ಸಹ ಸಣ್ಣ ಪುಟ್ಟ ಕಲಬಾಷ್‌ಗಳನ್ನು ಪಾತ್ರೆಯಂತೆ ಉಪಯೋಗಿಸುತ್ತಾರೆ. ಕೆಲವು ಕಲಬಾಷ್ ಹೋಳುಗಳ ಮೇಲೆ ಗಂಡು, ಹೆಣ್ಣು, ಹೆಬ್ಬಾವು, ಹಕ್ಕಿ, ಗೋಸುಂಬೆ ಇತ್ಯಾದಿ ಚಿತ್ರಗಳನ್ನು ಆಕರ್ಷಣೀಯವಾಗಿ ಬಿಡಿಸಿರುತ್ತಾರೆ.

ಎರಡು ಕಲಬಾಷ್ ಹೋಳುಗಳನ್ನು ಜೋಡಿಸಿದಾಗ ದೊರೆಯುವ ಗೋಳಾಕೃತಿಯ ಸಹಾಯದಿಂದ ಫಾನ್ ಜನರು ವಿಶಾಲ ವಿಶ್ವದ ರಚನೆಯನ್ನು ವಿವರಿಸುತ್ತಾರೆ. ಎರಡು ಹೋಳು ಗಳು ಕೂಡುವ ಸ್ಥಳವೇ ನೀರು ಆಕಾಶಗಳು ಸಂಧಿಸುವ ದಿಗಂತ. ಭೂಮಿಯು ಚಪ್ಪಟೆ ಯಾಗಿದ್ದು ಕೆಳಗಿನ ಹೋಳಿನಲ್ಲಿ ತುಂಬಿರುವ ನೀರಿನ ಮೇಲೆ ತೇಲಾಡುತ್ತಿರುವಂತೆ ಕಾಣ ಬರುತ್ತದೆ. ಭೂಮಿಯು ಸುತ್ತಲೂ ಹಾಗೂ



ತಳಭಾಗದಲ್ಲಿ ನೀರಿದೆ. ಆದ್ದರಿಂದಲೇ ನಾವು ಭೂಮಿಯನ್ನು ಆಳವಾಗಿ ಕೊರೆದಾಗ ಯಾವಾಗಲೂ ನೀರು ಸಿಗುತ್ತದೆ. ಮೃತಾತ್ಮಗಳ ಲೋಕ ಅಂದರೆ ಪಾತಾಳವು ಭೂಮಂಡಲದ ತಳಭಾಗದಲ್ಲಿ ಸೇರಿಕೊಂಡು ಅಗೋ ಚರವಾಗಿದೆ. ಸೂರ್ಯ, ಚಂದ್ರ ನಕ್ಷತ್ರಗಳೆಲ್ಲವೂ ಮೇಲೆ ಮುಚ್ಚಿರುವ ಹೋಳಿನೊಳಗೆ ಚದುರಿದಂತೆ ಹರಡಿ ಕೊಂಡು ಅಲ್ಲಿ ಓಡಾಡುತ್ತವೆ.

ಬ್ರಹ್ಮಾಂಡದ ಸೃಷ್ಟಿ ಕಾರ್ಯವನ್ನು ಸೃಷ್ಟಿ ಕರ್ತನು ಭೂಮಿಯಿಂದ ಪ್ರಾರಂಭಿಸಿದ್ದಾನೆ. ಮೊದಲು ಗಟ್ಟಿಯಾದ ಭೂಭಾಗಳನ್ನು ಒಂದೆಡೆ ಸೇರಿಸಿ, ಭೂಮಿಯ ಪರಿಮಿತಿಯನ್ನು ಹಿಡಿತದಲ್ಲಿರಿಸುವ ಕಾರ್ಯವನ್ನು ದೇವಲೋಕದ ಸರ್ಪದ ಸಹಾಯದಿಂದ ಮಾಡಿಸಿದ್ದಾನೆ. ಆ ಸರ್ಪವು ತನ್ನ 3500 ಸುರುಳಿಗಳಿಂದ ಭೂಮಿಯನ್ನು ಸುತ್ತಿಹಿಡಿದು ಅದರ ಭಾರವನ್ನು ಹೊತ್ತು ಕೊಂಡಿದೆ. ಉಳಿದ 3500 ಸುರುಳಿಗಳಿಂದ ಆಕಾಶಲೋಕವನ್ನು ಸುತ್ತಿಹಿಡಿದಿದೆ. ದೇವಲೋಕವನ್ನು ನಾಲ್ಕು ಕಂಬಗಳ ಮೇಲೆ ಸ್ಥಾಪಿಸಿ ಆಕಂಬಗಳನ್ನು ತನ್ನ ಸುರುಳಿಯಿಂದ ಭದ್ರ ಪಡಿಸಿದೆಯೆಂಬ ಕಲ್ಪನೆಯೂ ಇದರಲ್ಲಿ ಬರುತ್ತದೆ. ಭೂಮಿಯನ್ನು ಸುತ್ತಿರುವ ಸುರುಳಿಗಳು ನೀರಿನೊಳಗೆ ಮುಳುಗಿದ್ದುಕೊಂಡು ಭೂಮಿಯನ್ನು ನಿಯಂತ್ರಣದಲ್ಲಿ ಇಟ್ಟಿರುವಂತೆಯೇ ಮೇಲಿನ ಸುರುಳಿಗಳು ಸೂರ್ಯ, ಚಂದ್ರ, ನಕ್ಷತ್ರಗಳ ಚಲನೆಯನ್ನು ನಿಯಂತ್ರಣದಲ್ಲಿಟ್ಟು ಕೊಂಡಿವೆ. ಭೂಮಿಯ ಮೇಲೆ ಬಿದ್ದ ಮಳೆಯ ನೀರು ಸಮುದ್ರದ ಕಡೆಗೆ ಹರಿದುಹೋಗುವಂತೆ ತನ್ನ ಶರೀರದ ಹೊರಳಾಟದಿಂದ ನದಿ, ಸರೋವರಗಳನ್ನು ಮಾಡಿಕೊಟ್ಟಿದೆ. ಈ ಘಟ ಸರ್ಪವು ದೇವರನ್ನು ತನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ಭೂಮಿಯ ಉದ್ದಗಲಕ್ಕೂ ಶಿಸ್ತುಪಾಲನೆಗಾಗಿ ಸಂಚರಿಸುವಾಗ ವಿಶ್ರಾಂತಿಗಾಗಿ ನಿಂತ ಸ್ಥಳಗಳಲ್ಲಿ ಮಾಡಿದ ಮಲವಿಸರ್ಜನೆಯೇ ಬೆಟ್ಟ ಗುಡ್ಡಗಳಾದುವು. ಮಾನವರು ಈ ಬೆಟ್ಟ ಗುಡ್ಡಗಳನ್ನು ತೋಡಿದಾಗ ಅದರೊಳಗೆ ಬೆಳ್ಳಿ ಬಂಗಾರ, ಮುತ್ತು ರತ್ನಗಳು ದೊರೆಯುತ್ತವೆ. ಈ ರೀತಿ ಸರ್ಪವು ಭೂಮಿಗೆ ಜೀವಕಳೆಯನ್ನು ತಂದುಕೊಟ್ಟಿದೆ. ಹೊಟ್ಟೆ ಹಸಿದಾಗ ಸರ್ಪದ ಸುರುಳಿಯಲ್ಲಿ ಉಂಟಾದ ಚಲನ ವಲನದಿಂದ ಭೂಕಂಪಗಳುಂಟಾಗುತ್ತವೆ. ಆಗ ಅದರ ಆಹಾರವಾದ ಕಬ್ಬಿಣದ ಸಲಾಕೆಗಳನ್ನು ಒದಗಿಸುವಂತೆ ಕೆಂಪು ಮೂತಿಯ ಕೋತಿಗಳಿಗೆ ದೇವರು ಆಜ್ಞೆ ಮಾಡಿದ್ದಾನೆ. ಭೂಮಿಯ ಭಾರ ಹೆಚ್ಚಾದಂತೆಲ್ಲಾ ಅದು ನೀರಿನೊಳಗೆ ಮುಳುಗಿ ಹೋಗದಂತೆ ಸರ್ಪವು ತನ್ನ ಬಾಲದ ತುದಿಯನ್ನು ಬಾಯೊಳಗಿರಿಸಿ ಕಚ್ಚಿಕೊಂಡು ಸುರುಳಿಯ ಸಿಂಬಿಯನ್ನು ಭದ್ರಪಡಿಸುತ್ತಾ ಇರಬೇಕು. ಹಾಗೆ ಮಾಡದಿದ್ದರೆ ಭೂಮಿಯು ನೀರಿನೊಳಗೆ ಮುಳುಗಿ, ಜಲ ಪ್ರಳಯವಾಗಿ, ಸರ್ವವೂ ನಾಶವಾಗುತ್ತದೆಂದು ಸೃಷ್ಟಿಕರ್ತನು ಎಚ್ಚರಿಕೆಯಿತ್ತಿದ್ದಾನೆ.



ಬ್ರಹ್ಮಾಂಡ
ದೊಗೋನ್ ಪುರಾಣದ ಪ್ರಕಾರ

## ಬ್ರಹ್ಮಾಂಡ ಕಲ್ಪನೆ : (2)

ಮಾಲಿ, ವೋಲ್ಟಾ ಮತ್ತು ನೈಜರ್ ದೇಶಗಳಲ್ಲಿ ಹರಡಿರುವ ಡೊಗೋನ್ ಜನರ ನಂಬಿಕೆಯ ಪ್ರಕಾರ ಆದಿ ಪುರುಷನು ಒಂದು ಅಗಲವಾದ ಬಾಯಿಯೂ, ಚೌಕಾಕಾರದ ತಳವೂ ಉಳ್ಳ ಖಾಲಿ ಹೆಡಿಗೆ (ಜೊಂಡಿನ ಬುಟ್ಟಿ) ಯೊಂದನ್ನು ತಂದು, ಅದರ ಒಳಗೂ ಹೊರಗೂ ಜೇಡಿಮಣ್ಣನ್ನು ಲೇಪಿಸಿ, ಒಂದು ನಮೂನೆಯನ್ನು ತಯಾರಿಸುತ್ತಾನೆ. ಆ ನಮೂನೆಯನ್ನು ಬೋರಲಾಗಿ ಇಟ್ಟಾಗ ಅದು ಬ್ರಹ್ಮಾಂಡ ಅಥವಾ ವಿಶ್ವವನ್ನು ಸಂಕೇತಿಸುತ್ತದೆ. ಅದರ ವೃತ್ತಾಕಾರದ ತಳಭಾಗವೇ ಭೂಮಿ. ಚೌಕಾಕಾರದ ಮೇಲ್ಭಾಗವು ಆಕಾಶವನ್ನು ಸೂಚಿಸುತ್ತದೆ. ಆಕಾಶದ ಮಧ್ಯೆಯಿರುವ ಚಿಕ್ಕ ವೃತ್ತಗಳು ಸೂರ್ಯಚಂದ್ರರನ್ನು ಪ್ರತಿನಿಧಿಸುತ್ತದೆ. ಮಧ್ಯೆ ಇರುವ ಕೋಲು ಮತ್ತು ಹಗ್ಗದ ಸುರುಳಿಗಳು ದೇವರ ಲೋಕಕ್ಕೆ ಹೋಗುವ ದಾರಿ. ಆಕಾಶದ ನಾಲ್ಕು ಪಾರ್ಶ್ವಗಳಲ್ಲೂ ಎಂಟು ಮೆಟ್ಟಲುಗಳುಳ್ಳ ಒಂದೊಂದು ಏಣಿ ಇದೆ. ಅವುಗಳಲ್ಲಿ ಎರಡು ಏಣಿಗಳು ಎಂಟು ತಲೆಮಾರಿನ ಗಂಡಸರನ್ನೂ, ಎಂಟು ತಲೆಮಾರಿನ ಹೆಂಗಸರನ್ನೂ, ಒಂದು ಏಣಿಯು ಮಕ್ಕಳನ್ನೂ ನಾಲ್ಕನೇ ಏಣಿಯು ಪ್ರಾಣಿ ಪಕ್ಷಿ ನಕ್ಷತ್ರಗಳನ್ನೂ ಪ್ರತಿನಿಧಿಸುತ್ತವೆ. ಈ ರೀತಿ ಕಾಣುವ ವಿಶ್ವವನ್ನು ಅವನು "ಪವಿತ್ರ ಒಡೆಯನ ಕಣಜ" (ಹಗೇವು) ಎಂದು ಕರೆದನು. ಈ ಕಣಜದೊಳಗೆ ಆ ಎಂಟುಜನ ವಂಶಸ್ಥರಿಗೂ ಎಂಟು ವಿಭಾಗಗಳಿವೆ. ಆದಿ ಪುರುಷನು ವಿಶ್ವಕಣಜದ ಮೇಲ್ಭಾಗದಿಂದ ಹಂತಗಳ ಮಾರ್ಗವಾಗಿ ಇಳಿದು ಬಂದು, ತನ್ನ ವಂಶದ ಎಂಟು ಜನರಿಗೂ ವ್ಯವಸಾಯಕ್ಕಾಗಿ ಭೂಮಿಯನ್ನು ಗುರ್ತಿಸಿ ವಿಂಗಡಿಸಿದನಂತೆ. ಇವರಲ್ಲಿ ಮೊದಲನೆಯವನು ದೇವಲೋಕದ ಕಮ್ಮಾರ "ನುಮ್ಮೊ" ಎಂಬವನ ಬಳಿಯಿಂದ ಬೆಂಕಿಯನ್ನು ಕದ್ದು ತರುವಾಗ ಅಪಘಾತಕ್ಕೆ ಒಳಗಾಗುತ್ತಾನೆ. ತನ್ನ ಬುಟ್ಟಿಯೊಡನೆ ಬೆಂಕಿಯನ್ನು ಹೊತ್ತುಕೊಂಡು ಕಾಮನಬಿಲ್ಲಿನ ಮಾರ್ಗವಾಗಿ ಭೂಮಿಗೆ ಜಾರಿಬರಲು ಪ್ರಯತ್ನಿಸುತ್ತಾನೆ. ಕೋಪಗೊಂಡ ವಿಶ್ವಕರ್ಮನು ಇವನ ಮೇಲೆ ಮಿಂಚೆಂಬ ಆಯುಧವನ್ನು ಎಸೆಯುತ್ತಾನೆ. ಮಿಂಚಿನ ರಭಸಕ್ಕೆ ಅವನು ಭೂಮಿಗೆ ಬಂದು ಅಪ್ಪಳಿಸಿದಾಗ ಅವನ ಬುಟ್ಟಿಯಲ್ಲಿದ್ದ ಪ್ರಾಣಿ, ಪಕ್ಷಿ, ಬೀಜ, ತರಕಾರಿಗಳು ಚೆಲ್ಲಾಪಿಲ್ಲಿಯಾಗಿ ಹರಡಿಹೋದವು. ಮೃದ್ವಂಗದಂತಿದ್ದ ಇವನ ಕೈಕಾಲುಗಳು ಮುರಿದವು. ಅಂದಿನಿಂದ ಮನುಷ್ಯರಿಗೆ ಮಂಡಿ ಮತ್ತು ಮೊಣಕೈಗಳಲ್ಲಿ ಕೀಲುಗಳು ಉಂಟಾದವು– ಎಂದು ಹೇಳುತ್ತಾರೆ. ಕಥೆಯು ಮುಂದುವರಿಯುತ್ತಾ ಈ ಎಂಟುಜನ ಮೂಲ ಪುರುಷರು ಎಂಟು ಕುಟುಂಬಗಳಾಗಿ ವ್ಯವಸ್ಥೆಗೊಂಡು ಅವರ ವಂಶಗಳು ಅಭಿವೃದ್ಧಿಯಾಗುತ್ತಾ ಹೋದವೆಂದು ಹೇಳುತ್ತದೆ. ಎಂಟನೇ ವಂಶದ ಯಜಮಾನನಾದ "ಲೆಬೆ" ಎಂಬವನಿಗೆ ಮಾತು ಬರುತ್ತಿದ್ದುದರಿಂದ ಅವನ ವಂಶವು ಪ್ರಸಿದ್ಧವಾಯಿತು.[10]

---

10. ಜೊಫ್ರಿ ಪ್ಯಾರಿಂಡರ್– ಆಫ್ರಿಕನ್ ಮೈಥಾಲಜಿ–ಪು 16

## ಪುರಾಣ ಸಾಹಿತ್ಯ

ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲೂ ಪೌರಾಣಿಕ ಕಥೆಗಳು ಇದ್ದೇ ಇರುತ್ತವೆ. ಒಂದು ಸಮಾಜದ ಜನರು ನಂಬಿರುವ ಅತಿ ಪ್ರಿಯವಾದ ಮೌಲ್ಯಗಳನ್ನು ಪ್ರತಿಪಾದಿಸುವುದರಿಂದ ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪುರಾತನ ಗ್ರಂಥಸಾಹಿತ್ಯಗಳಿಲ್ಲದ ಆಫ್ರಿಕದ ಸನ್ನಿವೇಶದಲ್ಲಿ ಅವರ ಮೌಖಿಕ ಪುರಾಣಸಾಹಿತ್ಯವನ್ನು ಪರಿಗಣಿಸಬೇಕಾದುದು ಅನಿವಾರ್ಯ. ಅವು ನಮಗೆ ಬೇಕಾದ ವಿಷಯಗಳನ್ನು ಬಾಹ್ಯರೇಖಾ ರೂಪದಲ್ಲಿ ಒದಗಿಸುತ್ತವೆ. ಉದಾಹರಣೆಗೆ– ಜಗತ್ತಿನ ಹಾಗೂ ಮಾನವಕುಲದ ಪ್ರಾರಂಭ ಹೇಗೆ ಉಂಟಾದುವು; ಅನಂತರ ಬಂದ ಘಟನೆಗಳು ಹೇಗೆ ಬದಲಾವಣೆಗಳನ್ನು ತಂದವು; ತತ್ರಾಪಿ ಮಾನವನಿಗೆ ಮರಣವು ಒದಗಿದ ಬಗೆ ಹೇಗೆ? ಇತ್ಯಾದಿ ವಿವರಣೆಗಳನ್ನು ಕಥಾ ರೂಪದಲ್ಲಿ ಶ್ರುತ ಪಡಿಸುತ್ತವೆ.

ದೇವದೇವತೆಗಳು ಜಗತ್ತನ್ನು ಸೃಷ್ಟಿಸಿ ಭೂಮಿಯ ಮೇಲೆಯೇ ವಾಸವಾಗಿದ್ದರೂ ಮುಂದೆ ಒಂದು ದಿನ ಭೂಮಿಯನ್ನು ಬಿಟ್ಟು ದೂರ ಹೋಗಲು ಕಾರಣವೇನು ಎಂಬ ವಿಚಾರವನ್ನು ಸಹ ವಿಶದಪಡಿಸುತ್ತವೆ. ಅಲ್ಲದೆ ಆಫ್ರಿಕದ ಪುರಾಣದ ಕಥೆಗಳಲ್ಲಿ ಬರುವ ಸರ್ವಶಕ್ತನಾದ ಭಗವಂತನ ಮಹಿಮೆ, ವ್ಯಕ್ತಿರೂಪವುಳ್ಳ ಪ್ರಕೃತಿ ಚೇತನಗಳು (ಸ್ಪಿರಿಟ್ಸ್), ಪಿತೃ ಪಿತಾಮಹರ ಪ್ರೇತಾತ್ಮಗಳು ಇವೆಲ್ಲದರ ಸಂಯೋಗವು ಅವರ ನೀತಿ ನಡತೆಗಳಿಗೆ ಆದರ್ಶವನ್ನು ಒದಗಿಸುತ್ತವೆ. ಒಟ್ಟಿನಲ್ಲಿ ಅವರ ಪುರಾಣ ಕಥೆಗಳು ಬಹಳ ಸರಳವಾಗಿದ್ದು, ಕೆಲವು ವೇಳೆ ವಿಲಕ್ಷಣ ಕಲ್ಪನೆಗಳಿಂದ ಕೂಡಿದ್ದರೂ ಅವು ಕೆಲವು ಫಲಗಳನ್ನು ನೀಡುತ್ತಲೇ ಬಂದಿವೆ. ಅವರ ನಿತ್ಯ ಸಂಭಾಷಣೆ, ಆಲೋಚನೆ ಹಾಗೂ ಸಂವೇದನೆಗಳ ಮೇಲೆ ಪುರಾಣ ಕಥೆಗಳು ತಮ್ಮ ಪ್ರಭಾವವನ್ನು ಬೀರಿವೆ. ಈಜಿಪ್ಟ್ ಗ್ರೀಕ್, ರೋಮನ್, ಭಾರತೀಯ ಸಂಸ್ಕೃತಿಗಳೂ ಇದಕ್ಕೆ ಹೊರತಲ್ಲ. ಇದನ್ನೇ ಸೆನೆಗಾಲಿನ ಮಾಜಿ ಅಧ್ಯಕ್ಷ ಲಿಯೊಪಾಲ್ಡ್ ಸೆಂಘೋರ್‌ರವರು "ಆಫ್ರಿಕದ ವ್ಯಕ್ತಿತ್ವ" ಅಥವಾ "ಆಫ್ರಿಕತ್ವ" ಎಂದು ಕರೆದಿದ್ದಾರೆ+. "ಆಫ್ರಿಕದ ಪುರಾಣಗಳಲ್ಲಿ ಬರುವ ಮುಖ್ಯವಾದ ಕೆಲವು ಅಂಶಗಳೆಂದರೆ ಮಾನವನ ಚಿರಂಜೀವಿತ್ವ ಮತ್ತು ಪ್ರೇತಾತ್ಮ ಹಾಗೂ ಪ್ರಕೃತಿದೇವತೆ (ಸ್ಪಿರಿಟ್) ಗಳೊಡನೆ ಮಾನವ ಇರಿಸಿಕೊಂಡಿರುವ ಸಂಬಂಧ"– ಎಂದು ರೆ|| ಡಾ|| ಜಾನ್ ಮ್ಬೆಯಿತಿ ಹೇಳುತ್ತಾರೆ.

## ಸೃಷ್ಟಿಕರ್ತ

ಸರ್ವಶಕ್ತನಾದ ಪರಮಪುರುಷನೇ ಎಲ್ಲ ಸೃಷ್ಟಿಗೂ ಕರ್ತನೆಂಬ ಸನಾತನ ನಂಬಿಕೆ ಹೆಚ್ಚುಕಡಿಮೆ ಆಫ್ರಿಕದ ಎಲ್ಲ ಬುಡಕಟ್ಟಿನ ಪುರಾಣಗಳಲ್ಲೂ ಸರ್ವಸಾಮಾನ್ಯವಾಗಿ ಬರುವಂತಹ ವಿಚಾರ. ಈ ಒಬ್ಬ ಪುರಾಣಪುರುಷನೇ ಪರಮೋಚ್ಚ ದೇವರೆಂಬ

\+ Leopold S. Senghor- Black Culture- FESTAC 77.

ಉಲ್ಲೇಖವು ಕ್ರಿ.ಶ. 1650 ರಲ್ಲಿ ಪ್ರಕಟವಾದ ಬಾಂಟುಭಾಷೆಯ ನಿಘಂಟಿನಲ್ಲೂ, 1705ರಲ್ಲಿ ಪ್ರಕಟವಾದ ಬಾಸ್ಮನ್ನನ "ಪಶ್ಚಿಮ ಆಫ್ರಿಕಾ" ವೆಂಬ ಗ್ರಂಥದಲ್ಲೂ ದೊರೆಯುತ್ತದೆ. "ಪರಮ ಪುರುಷನಾದ ದೇವರು" ಎಂಬ ಪ್ರಥಮ ಪರಿಕಲ್ಪನೆಯು ಇಸ್ಲಾಮ್ ಹಾಗೂ ಕ್ರೈಸ್ತ ಧರ್ಮಗಳು ಆಫ್ರಿಕದಲ್ಲಿ ಕಾಲಿಡುವ ಬಹುಕಾಲದ ಮುನ್ನವೇ ಕರಿಯ ಜನಾಂಗಗಳಲ್ಲಿ ಪ್ರಚಲಿತವಿತ್ತು ಎಂಬ ಅಂಶ ಇಲ್ಲಿ ಮುಖ್ಯ. ಅವರ ಪುರಾಣ ಕಥೆಗಳಲ್ಲಿ ಬರುವ ಆ "ಒಬ್ಬದೇವರ" ಹೆಸರು "ಮುಲುಂಗು". ಬೇರೆ ಬೇರೆ ಪ್ರಾಂತ್ಯಗಳಲ್ಲಿ ಭಾಷಾ ವಿಭಿನ್ನತೆಯಿಂದ ಬೇರೆ ಬೇರೆಯಾಗಿವೆ. ಬೈಬಲಿನ ಸುಮಾರು ಮೂವತ್ತು ಭಾಷಾಂತರಗಳಲ್ಲಿ "ಪ್ರಧಾನದೇವರು" ಎಂದು ಹೇಳುವ ಜಾಗದಲ್ಲೆಲ್ಲಾ "ಮುಲುಂಗು" ಎಂಬ ಹೆಸರು ಕಂಡುಬರುತ್ತದೆ.

## ಅಧೀನ ದೇವತೆಗಳು

ಮುಲುಂಗು ಪರಮಶ್ರೇಷ್ಠ ಪುರುಷ. ಅವನ ವಾಸಸ್ಥಾನವಾದರೋ ಮೇಲಿರುವ ದೇವಲೋಕ. ಆದ್ದರಿಂದಲೇ ನಾವು ಅವನನ್ನು ಸ್ಮರಿಸುವಾಗ ಮೇಲಕ್ಕೆ ನೋಡುತ್ತೇವೆ ಅಥವಾ ಕೈತೋರಿಸುತ್ತೇವೆ. ಅನೇಕ ಬುಡಕಟ್ಟು ಪುರಾಣಗಳ ಪ್ರಕಾರ, ಆತ ಒಮ್ಮೆ ಭೂಮಿಯ ಮೇಲೆ ವಾಸವಾಗಿದ್ದನಂತೆ. ಆದರೆ ಮಾನವನ ದುಷ್ಕೃತ್ಯಗಳಿಂದಾಗಿ ಆತ ಮೇಲು ಲೋಕಕ್ಕೆ ನಿರ್ಗಮಿಸಿದ್ದಾನೆ. ಬಿರುಗಾಳಿಯ ದೇವತೆ, ಮಳೆಯ ದೇವತೆ, ಅರಣ್ಯದೇವತೆ ನದೀ ದೇವತೆ ಇತ್ಯಾದಿ ಅನೇಕ ಪ್ರಕೃತಿರೂಪ ದೇವತೆಗಳು ಇವನಿಗೆ ಅಧೀನರಾಗಿದ್ದಾರೆ. ಪಶ್ಚಿಮ ಆಫ್ರಿಕದಲ್ಲಿ ಇಂತಹ ಅಧೀನ ದೇವತೆಗಳಿಗೆ ದೇವಾಲಯಗಳುಂಟು. ಇತರೆಡೆಗಳಲ್ಲಿ ಅವರನ್ನು ಪೂಜಿಸಿದರೂ ಪ್ರತ್ಯೇಕ ದೇವಾಲಯಗಳಿಲ್ಲ. ದೇವಾಲಯಗಳೆಂದರೆ ಭಾರತೀಯ ಕಲ್ಪನೆಯ ಕಲ್ಲು ಕಂಬಗಳಿಂದ ಕೂಡಿದ, ಶಿಲ್ಪ ಕಲೆಯ ದೇಗುಲವಲ್ಲ. ಒಂದೆರಡು ಅಂಕಣದಳತೆಯ ಮಣ್ಣುಗೋಡೆಯ ಕಟ್ಟಡಕ್ಕೆ ತಾಳೆಮರದ ಗರಿಯನ್ನು ಹೊದ್ದಿಸಿ ನಿರ್ಮಿಸಿದ ಗುಡಿಗಳು. ಇಂದು ಇಂತಹ ಗುಡಿಗಳು ಊರ ಹೊರಗೆ, ಕಾಡಿನ ನಡುವೆ ಅಡಗಿ ಕುಳಿತಿವೆ. ಕಾರಣ ಕ್ರೈಸ್ತ ಪಾದ್ರಿಗಳಿಂದ ತೀವ್ರ ವಿರೋಧ. ಆದರೆ ಪೂರ್ವಜರ ಮೃತಾತ್ಮಗಳ ಪೂಜೆ ಮಾತ್ರ ಎಲ್ಲ ಸಮಾಜಗಳಲ್ಲೂ ಅವಿರತವಾಗಿ ನಡೆದುಕೊಂಡೇ ಬಂದಿದೆ. ಸತ್ತ ನಂತರ ಅವರ ಆತ್ಮಗಳು ನಮ್ಮೊಡನೆ ಜೀವಿಸಿರುತ್ತವೆ ಎಂಬ ನಂಬಿಕೆಯು ಕಪ್ಪು ಆಫ್ರಿಕದ ಎಲ್ಲಾ ಸಮಾಜಗಳಲ್ಲೂ ಉಳಿದುಕೊಂಡು ಬಂದಿದೆ. ಅದನ್ನು ಮಾತ್ರ ಅಳಿಸಲಾಗಿಲ್ಲ. ಗುಪ್ತ ಸಂಘಗಳು ನಡೆಸುವ ಪಿತೃಗಣಾರಾಧನೆಯಲ್ಲಿ (ಮಾಸ್ಕರೇಡ್– ಮುಖವಾಡ ನೃತ್ಯದಲ್ಲಿ) ಕ್ರೈಸ್ತಮತಸ್ಥರು ಭಾಗವಹಿಸುವುದುಂಟು. ಇತ್ತೀಚೆಗೆ ಮಾಸ್ಕರೇಡ್ ಆಚರಣೆಗಳು ಪ್ರಾಮುಖ್ಯತೆ ಪಡೆಯುತ್ತಾ ಇವೆ. ಅನೇಕ ಕಪ್ಪು ಸಮಾಜಗಳು ಮಾಸ್ಕರೇಡ್ ಮೂಲಕ ಹಳೆಯ ಪರಂಪರೆಯನ್ನು ಪುನರುಜ್ಜೀವಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಸೃಷ್ಟಿ ಕರ್ತನು ಮರೆತುಹೋದ ದೇವರೇ? ಅಲ್ಲ. ಈಗಲೂ ಸೃಷ್ಟಿ ಕಾರ್ಯಗಳನ್ನು ನಡೆಸುತ್ತಿರುವವನು ಆತನೇ– ಎಂಬ ವ್ಯಾಖ್ಯಾನ ಕೇಳಿಬರುತ್ತಿದೆ. ಪ್ರಾಗೈತಿಹಾಸಕಾಲದ

ಜನರಲ್ಲಿದ್ದ ಪರಿಕಲ್ಪನೆಗಳು ಕೊಂಚ ಭಿನ್ನವಾಗಿವೆ–ಅವರ ಪ್ರಕಾರ ದೇವರೆಂದರೆ ಗುಡುಗು, ಸಿಡಿಲು, ಮಳೆ, ಬೆಂಕಿಗಳನ್ನು ಕೊಡುವಾತ; ಕಾಮನ ಬಿಲ್ಲು ಆತ ಮೇಲುಲೋಕದಿಂದ ಇಳಿದುಬರುವ ಹೆದ್ದಾರಿ. ಆತನು ನಮಗೆ ಪ್ರಾಣಿಪಕ್ಷಿಗಳನ್ನು, ಗಿಡ ಮರಗಳನ್ನು ಆಹಾರಕ್ಕಾಗಿ ಇರಿಸಿದ್ದಾನೆ. ಆತ ರಾಜರುಗಳನ್ನು ಬಗ್ಗಿಸುವಂತಹ ಶಕ್ತಿವಂತ.

## ಜಗತ್ ಸೃಷ್ಟಿ

ಯೊರುಬಾ ಪುರಾಣದ ಪ್ರಕಾರ ಪ್ರಾರಂಭದಲ್ಲಿ ನಮ್ಮ ಭೂಮಿಯು ಉಪಯೋಗಕ್ಕೆ ಬಾರದ ಜೌಗು ಪ್ರದೇಶವಾಗಿತ್ತು. ಮೇಲೆ ಆಕಾಶದ ಒಡೆಯನಾದ **ಒಲೋರುನ್** ಇತರ ದೇವತೆಗಳೊಡನೆ ವಾಸಿಸುತ್ತಿದ್ದನಂತೆ. ಆಕಾಶದಿಂದ ಇಳಿ ಬಿಟ್ಟಿದ್ದ ಜೇಡರ ಬಲೆಯ ಮೂಲಕ ದೇವತೆಗಳು ಆಗಾಗ್ಗೆ ಈ ಜೌಗಿನಲ್ಲಿ ಆಟವಾಡಲು ಇಳಿದು ಬರುತ್ತಿದ್ದರು. ಆಗ ಇಲ್ಲಿ ಮನುಷ್ಯರು ವಾಸಿಸುತ್ತಿರಲಿಲ್ಲವಂತೆ. ಒಂದು ದಿನ ಪರಮಪುರುಷನಾದ ಒಲೋರುನ್ ತನ್ನ ಅಧೀನ ದೇವತೆಗಳ ಮುಖ್ಯಸ್ಥನಾದ ಒರಿಷಾನ್ಲನನ್ನು ಹತ್ತಿರ ಕರೆದು "ನಾನು ಗಟ್ಟಿ ನೆಲವನ್ನು ನಿರ್ಮಿಸಬೇಕೆಂದಿದ್ದೇನೆ. ಆ ಬಗ್ಗೆ ನೀನು ಕಾರ್ಯನಿರತನಾಗಬೇಕಾಗಿದೆ" ಎಂದು ಹೇಳಿ, ಮಣ್ಣು ತುಂಬಿದ ಒಂದು ಬಸವನ ಹುಳುವಿನ ಚಿಪ್ಪನ್ನೂ ಒಂದು ಪಾರಿವಾಳ ಮತ್ತು ಕೋಳಿಯನ್ನು ಕೊಟ್ಟನು. ಒರಿಷಾನ್ಲನು ಇಳಿದು ಬಂದು ಜೌಗಿನ ಮೇಲೆ ಆ ಮಣ್ಣನ್ನು ಹರಡಿ ಪಾರಿವಾಳ ಮತ್ತು ಕೋಳಿಗಳನ್ನು ಬಿಟ್ಟನು. ಅವು ಮಣ್ಣನ್ನು ಕೆದಕಿ ಸುತ್ತಲೂ ಹರಡಿದವು. ಶ್ರೀಘ್ರದಲ್ಲೇ ಆ ಜೌಗೆಲ್ಲಾ ವಿಶಾಲವಾದ ನೆಲವಾಯಿತು. ಕೆಲಸ ಮುಗಿದ ನಂತರ ಒರಿಷಾನ್ಲನು ಒಲೋರುನ್‌ನ ಹತ್ತಿರ ಹೋಗಿ ವರದಿ ಒಪ್ಪಿಸಿದ. ಆಗ ಸೃಷ್ಟಿಕರ್ತನು ತನ್ನ ಕಿಂಕರನಾದ ಗೋಸುಂಬೆಯನ್ನು ಕಳುಹಿಸಿ ಕೆಲಸವನ್ನು ಪರೀಕ್ಷಿಸಿ ಬರುವಂತೆ ಹೇಳಿದನು. (ಆಫ್ರಿಕದ ಅನೇಕ ಪುರಾಣಗಳಲ್ಲಿ ಗೋಸುಂಬೆ, ಓತಿಕ್ಯಾತ, ಮೊಲ, ಬಾವಲಿ, ಹೇನು, ಆಮೆ ಇತ್ಯಾದಿ ಜಂತುಗಳು ದೈವಕಿಂಕರರು). ಪರೀಕ್ಷೆಯ ನಂತರ ಗೋಸುಂಬೆ ಹೇಳಿತು "ಭೂಮಿಯೇನೋ ವಿಶಾಲವಾಯಿತು; ಆದರೆ ಒಣಗಿ ಗಟ್ಟಿಯಾಗಿಲ್ಲ" ಎಂದು. ಹೀಗೆ ಪ್ರಥಮವಾಗಿ ಗಟ್ಟಿಭೂಮಿ ನಿರ್ಮಾಣಗೊಂಡ ಸ್ಥಳವೇ "ಇಫೆ" ಎಂಬ ಊರು. ಇಫೆ ಎಂದರೆ ವಿಶಾಲ ಎಂದರ್ಥ. ಕ್ರಮೇಣ ಇದಕ್ಕೆ "ಇಲೆ" (ಮನೆ) ಎಂಬ ಶಬ್ದವನ್ನು ಕೂಡಿಸಿ "ಇಲೆ–ಇಫೆ" ಎಂದಾಯಿತು. ವಿಶಾಲವಾದ ಮನೆ ಎಂಬರ್ಥವುಳ್ಳ ನೈಜೀರಿಯದ ಈ ಊರಿನಿಂದಲೇ ವಾಸಕ್ಕೆ ಯೋಗ್ಯವಾದ ಎಲ್ಲಾ ಭೂಮಿಗಳೂ ನಿರ್ಮಾಣವಾದದ್ದು ಎಂದು ಭಾವಿಸುವ ಯೊರುಬಾ ಜನರು ಇಲೇ–ಇಫೆಯನ್ನು ಪವಿತ್ರ ಸ್ಥಳವೆಂದು ಪರಿಗಣಿಸುತ್ತಾರೆ.

ಭೂಮಿಯ ನಿರ್ಮಾಣ ಕಾರ್ಯ ಒಟ್ಟು ನಾಲ್ಕು ದಿವಸ ಹಿಡಿಯಿತು. ವಾರದ ಒಂದೊಂದು ದಿವಸವೂ ಸೃಷ್ಟಿ ಕಾರ್ಯದಲ್ಲಿ ಪಾಲುಗೊಂಡಿದ್ದ ಒಬ್ಬೊಬ್ಬ ಅಧೀನದೇವತೆಯ ಪೂಜೆಗೆ ಮೀಸಲಾಯಿತು. ಐದನೇ ದಿನ ಒರಿಷಾನ್ಲನ ಪೂಜೆ.

ಹೀಗೆ ಅವರ ಒಂದು ವಾರವೆಂದರೆ ಐದು ದಿನ ಮಾತ್ರ. ಅನಂತರ ಜನರಿಗೆ ಆಹಾರ ಮತ್ತು ಪಾನೀಯಗಳನ್ನು ಒದಗಿಸುವಂತಹ ಮರ ಗಿಡಗಳನ್ನು ಬೆಳಸುವಂತೆ ಒರಿಷಾನ್ಲನಿಗೆ ಆಜ್ಞಾಪಿಸಿ, ಅವನ ಕೈಗೆ ತಾಳೆಮರದ ಬೀಜಗಳನ್ನು ಕೊಟ್ಟು ಕಳುಹಿಸಿದನು. ಅದನ್ನು ಎಲ್ಲಾ ಕಡೆಯೂ ಬೆಳೆಸಿ, ಅದರಿಂದ ಎಣ್ಣೆ ಮತ್ತು ತಂಪು ಪಾನೀಯವು (ತಾಳೆ ಹೆಂಡ) ಜನರಿಗೆ ಒದಗುವಂತೆ ಮಾಡಬೇಕೆಂದು ತಿಳಿಸಿದನು.

ಜೊತೆಗೆ ಆಹಾರವನ್ನೊದಗಿಸುವ ಗಿಡ ಬಳ್ಳಿಗಳ ಬೀಜಗಳನ್ನು ಕೊಟ್ಟು ಕಳುಹಿಸಿದನು. ಇವೇ ಮರಗೆಣಸು ಮತ್ತು ಯಾಮ್‌ಗೆಡ್ಡೆಗಳಾದುವು. ಅನಂತರ ಮಳೆ ಬಿದ್ದು ಇವೆಲ್ಲವೂ ಸಮೃದ್ಧವಾಗಿ ಬೆಳೆಯಿತು. ನೈಜೀರಿಯ, ಬೆನಿನ್ ರಿಪಬ್ಲಿಕ್, ಟೋಗೋ, ಘಾನಾ, ಐವೊರಿ ಕೋಸ್ಟ್, ಲೈಬೀರಿಯ ರಾಜ್ಯಗಳಲ್ಲಿ ಬೆಳೆಯುವ ರಫಿಯ ಪಾಮ್ ಎಂಬ ತಳಿಯು ಹೆಂಡಕ್ಕಾಗಿಯೇ ಪ್ರಸಿದ್ಧಿ ಪಡೆದಿದೆ. ಇದೇ ರಾಜ್ಯಗಳು ಆಯಿಲ್ ಪಾಮ್, ಕೋಕೋ, ಯಾಮ್ ಗೆಡ್ಡೆ, ಕಾಫಿ ಮುಂತಾದ ಸಸ್ಯಗಳಿಗೆ ತೌರೂರು. (ಇವು ಇಲ್ಲಿಂದಲೇ ಇತರ ದೇಶಗಳಿಗೆ ಹರಡಿರುವುದು). ಈ ನಡುವೆ ಒಲೋರುನ್ ಮೊದಲ ಮಾನವರನ್ನು ತನ್ನ ಲೋಕದಲ್ಲಿ ಸೃಷ್ಟಿಸಿ ಭೂಮಿಗೆ ಕಳುಹಿಸಿದ ನಂತೆ. ಅನಂತರ ಈ ಕಾರ್ಯದ ಒಂದಶವನ್ನು ಒರಿಷಾನ್ಲನಿಗೆ ವಹಿಸಿದನು. ಅವನ ಕೆಲಸವೇನೆಂದರೆ ಮಣ್ಣಿನಿಂದ ಮನುಷ್ಯಾಕೃತಿಗಳನ್ನು ತಯಾರಿಸಿ, ಅವುಗಳಿಗೆ ಕಣ್ಣು, ಮೂಗು, ಬಾಯಿ, ಕೈಕಾಲು ಇತ್ಯಾದಿ ಅಂಗಾಂಗಗಳನ್ನು ಕೊರೆದು ಸಿದ್ಧಗೊಳಿಸುವುದು. ಆದರೆ ಅವುಗಳಿಗೆ ಜೀವ ಕೊಡುವವನು ಮಾತ್ರ ಒಲೋರುನ್.

ಹೀಗೇ ಸೃಷ್ಟಿ ಕಾರ್ಯ ನಿರಂತರವಾಗಿ ನಡೆಯುತ್ತಿರುವಾಗ ಒಮ್ಮೆ ಒರಿಷಾನ್ಲನಿಗೆ ಕರ್ತನ ಬಗೆಗೆ ಅಸೂಯೆಯುಂಟಾಯಿತು. ತಾನು ಮಾಡಿದ ಮಣ್ಣಿನ ಕಾಯಗಳಿಗೆ ಜೀವ ತುಂಬುವ ಕಾರ್ಯವನ್ನು ಹೇಗೆ ಮಾಡುತ್ತಾನೆಂಬುದನ್ನು ಪರೀಕ್ಷಿಸಲು ನಿರ್ಧರಿಸಿಕೊಂಡ. ಅದೇ ಪ್ರಕಾರ ಒಂದು ರಾತ್ರಿ ಮಣ್ಣು ಗೊಂಬೆಗಳ ನಡುವೆ ಅವಿತು ಕುಳಿತುಕೊಳ್ಳುತ್ತಾನೆ. ಆದರೆ ಕರ್ತನಿಗೆ ಇದು ಗೊತ್ತಿಲ್ಲವೇ? ತಾನು ಬಂದ ಕೂಡಲೇ ಒರಿಷಾನ್ಲನಿಗೆ ಗಾಢವಾದ ನಿದ್ದೆ ಬರುವಂತೆ ಮಾಡುತ್ತಾನೆ. ಅವನಿಗೆ ಎಚ್ಚರವಾದಾಗ ಎಲ್ಲಾ ಗೊಂಬೆಗಳಿಗೂ ಜೀವ ಬಂದಿತ್ತು. ಈಗಲೂ ಸಹ ಗಂಡು ಹೆಣ್ಣುಗಳ ಶರೀರವನ್ನು ತಯಾರಿಸುವವನು ಒರಿಷಾನ್ಲನೇ ಆದರೂ ದೇವರ ಮೇಲಿನ ಅಸಮಾಧಾನವನ್ನು ಒಮ್ಮೊಮ್ಮೆ ಮಣ್ಣಿನ ಆಕೃತಿಗಳ ಮೇಲೆ ತೋರಿಸಿ ಬಿಡುತ್ತಾನೆ. ಅದರಿಂದಲೇ ಕೆಲವರು ಕುಂಟ, ಕುರುಡ, ಹೆಳವ ಹೀಗೆ ಅಂಗ ವಿಕಲರಾಗುತ್ತಾರೆ.

ಜಗತ್ ಸೃಷ್ಟಿಯ ವಿಚಾರವಾಗಿ ಫಾನ್ ಬುಡಕಟ್ಟು ಜನರ ಪರಿಕಲ್ಪನೆಯು ಮೂಲತಃ ಒಂದೇ ಆಗಿದ್ದರೂ ವಿವರಗಳಲ್ಲಿ ವ್ಯತ್ಯಾಸವಿದೆ. ಫಾನ್ ಪುರಾಣದ ಪ್ರಕಾರ ಸೃಷ್ಟಿ ಕಾರ್ಯವನ್ನು ಎಸಗಿದ ಕರ್ತ ಒಬ್ಬನಲ್ಲ; ಮಾವು ಮತ್ತು ಲೀಸಾ ಎಂಬ ಅವಳಿ ದೇವತೆಗಳು. ಇವರಿಬ್ಬರೂ "ನಾನಾ ಬುಲುಕು" ಎಂಬ ಆದಿ ಜಗನ್ಮಾತೆಯ ಮಕ್ಕಳು. ಲೀಸಾ ಎಂಬುದು ಗಂಡು ದೇವತೆಯಾದ ಸೂರ್ಯ. ಅವನ ವಾಸಸ್ಥಾನ ಪೂರ್ವದಿಕ್ಕು.

ಮಾವು ಎಂಬುದು ಹೆಣ್ಣುದೇವತೆಯಾದ ಚಂದ್ರ, ಅವಳ ವಾಸಸ್ಥಾನ ಪಶ್ಚಿಮ ದಿಕ್ಕು. ಗ್ರಹಣ ಕಾಲಗಳಲ್ಲಿ ಇವರಿಬ್ಬರ ಮಿಲನ. ಇವರು ಏಳು ಜೊತೆ ಅವಳಿ ಮಕ್ಕಳಿಗೆ ಜನ್ಮವಿತ್ತರು. ಒಂದು ದಿನ ಮಾವು-ಲೀಸಾ ಎಲ್ಲಾ ಮಕ್ಕಳನ್ನೂ ಬರಮಾಡಿಕೊಂಡು, ಒಂದೊಂದು ಜೋಡಿಗೆ ಒಂದೊಂದು ಆಧಿಪತ್ಯವನ್ನು ವಹಿಸಿಕೊಟ್ಟರು. ಅವರಲ್ಲಿ ಹಿರಿಯ ಜೋಡಿಗೆ ಭೂಮಿಯ ಒಡೆತನವನ್ನು ವಹಿಸಿದರು. ಎರಡನೆಯ ಜೋಡಿಗೆ ಗಾಳಿ, ಮಳೆ, ಗುಡುಗು, ಮಿಂಚುಗಳ ಆಧಿಪತ್ಯವನ್ನು ವಹಿಸಿ, ಅವರು ಆಕಾಶದಲ್ಲಿ ವಾಸಿಸಬೇಕೆಂದು ಅಪ್ಪಣೆಯಿತ್ತರು. ಮೂರನೆಯ ಕಬ್ಬಿಣದ ಅವಳಿಗೆ ನೀವು ಕಾಡನ್ನು ಕತ್ತರಿಸಿ, ಭೂಮಿಯನ್ನು ವ್ಯವಸಾಯಕ್ಕೆ ಸಿದ್ಧಗೊಳಿಸಬೇಕೆಂದೂ, ಜನರಿಗೆ ಆಯುಧೋಪಕರಣಗಳನ್ನು ಒದಗಿಸಬೇಕೆಂದೂ ಅಪ್ಪಣೆಯಿತ್ತರು. ನಾಲ್ಕನೆಯ ಅವಳಿಗೆ ನೀರಿನ ಆಧಿಪತ್ಯವನ್ನು ವಹಿಸಿ, ಅವರು ಸಮುದ್ರದಲ್ಲಿ ವಾಸಮಾಡಿಕೊಂಡು ಎಲ್ಲಾ ಜಲಚರಗಳನ್ನು ಆಳಬೇಕೆಂದು ತಿಳಿಸಿದರು. ಐದನೆಯ ಅವಳಿ ಬೇಟೆಗಾರ ರಾಗಿದ್ದುಕೊಂಡು ಎಲ್ಲಾ ಪ್ರಾಣಿಪಕ್ಷಿಗಳು ಹಾಗೂ ಕಾಡಿಗೆ ಒಡೆಯರಾಗಿರಬೇಕೆಂದು ಆದೇಶವಿತ್ತರು. ಆರನೆಯ ಅವಳಿ ಭೂಮಿಗೂ ಆಕಾಶಕ್ಕೂ ನಡುವೆ ಇರುತ್ತಾ ಮನುಷ್ಯರ ಆಯಸ್ಸನ್ನು ನಿಗದಿ ಪಡಿಸುತ್ತಾ, ಆಗಾಗ್ಗೆ ಮಾವು-ಲೀಸಾರ ಹತ್ತಿರ ಬಂದು ವರದಿ ಹೇಳಬೇಕೆಂದು ಆಜ್ಞೆಯಿತ್ತರು. ಯೆಷು, ಲೆಗ್ಬ ಎಂಬ ಕೊನೆಯ ಅವಳಿಗೆ ಭಾಷೆಗಳ ಮೇಲೆ ಒಡೆತನವನ್ನಿತ್ತರು. ಎಲ್ಲಾ ಅವಳಿ ದೇವತೆಗಳಿಗೆ ಒಂದೊಂದು ವಿಶಿಷ್ಟ ಭಾಷೆಯನ್ನು (ಪೂಜೆ, ಆಚಾರ, ದೇವವಾಣಿಗಾಗಿ) ಕೊಟ್ಟದ್ದಲ್ಲದೆ ಯೆಷು-ಲೆಗ್ಬಗಳು ದೇವಕಿಂಕರರಾಗಿ ಕೆಲಸ ಮಾಡಬೇಕೆಂದೂ, ಅವರಿಗೆ ಎಲ್ಲಾ ದೇವರುಗಳು ಆಡುವ ಭಾಷೆಗಳು ತಿಳಿದಿರುವಂತೆಯೂ ಅನುಗ್ರಹಿಸಿದರು.

ಅಧ್ಯಾಯ 4

# ದೇವರು ಮತ್ತು ಮಾನವ

## ಮಾನವನ ಆಗಮನ[1]

ಭೂಮಿಯ ಮೇಲೆ ಪ್ರಥಮ ಮಾನವಾಗಮನದ ಬಗ್ಗೆ ಆಫ್ರಿಕದ ಪುರಾಣಗಳಲ್ಲಿ ವೈವಿಧ್ಯಮಯ ಕಥೆಗಳುಂಟು. ಕೆಲವು ಪರಸ್ಪರ ವಿರೋಧವಾಗಿರುವುದೂ ಉಂಟು. ಕೆಲವು ಜನಾಂಗದ ಕಥೆಗಳಲ್ಲಿ ಮಾನವನು ದೇವರಿಂದ ದೇವಲೋಕದಲ್ಲಿ ಸೃಷ್ಟಿಸಲ್ಪಟ್ಟು ನಂತರ ಭೂಮಿಗೆ ಕಳುಹಿಸಲ್ಪಟ್ಟವನಾದರೆ ಮತ್ತೆ ಕೆಲವು ಕಥೆಗಳಲ್ಲಿ ಭೂಮಿಯಮೇಲೆ ದಿಢೀರನೆ ಪೂರ್ಣ-ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಕೆಲವು ಕಡೆ ಭೂಮಿಯ ರಂಧ್ರವೊಂದರಿಂದ ಹೊರ ಬಂದವನಾದರೆ ಮತ್ತೆ ಕೆಲವುಕಡೆ ಮರದಕಾಂಡದಿಂದ ಹೊರಬರುತ್ತಾನೆ. ಒಟ್ಟಿನಲ್ಲಿ, ನೂರಾರು ಪಂಗಡಗಳೂ, ಉಪಪಂಗಡಗಳೂ ಇರುವ ಅಖಂಡ ಆಫ್ರಿಕದ ಪುರಾಣಗಳಲ್ಲಿ ವಸ್ತು ವೈವಿಧ್ಯತೆ ಕಂಡುಬರುವುದು ಸಹಜವೇ ಸರಿ. ಕೆಲವು ಕಡೆ ಹೊರ-ಸಂಸ್ಕೃತಿಗಳ ಪ್ರಭಾವ ಆಗಿದ್ದರೂ ಆಗಿರಬಹುದು. ಅಲ್ಲದೇ ಇವುಗಳಲ್ಲಿರುವ ವಿಭಿನ್ನತೆಗಳನ್ನು ನೋಡಿದರೆ, ಅವು ಆಯಾ ಪಂಗಡದವರು ತಮ್ಮ ಮೂಲಪುರುಷರ ಉಗಮದ ಬಗ್ಗೆ ತಳೆದಿರುವ ವಿಶಿಷ್ಟ ಕಲ್ಪನೆಯೋ ಎಂಬಂತೆ ಭಾಸವಾಗುತ್ತದೆ.

(1) ದಕ್ಷಿಣ ಆಫ್ರಿಕದ **ಝೂಲು** ಮತ್ತು ಮೊಸ್ಸಾಂಬಿಕ್‌ನ **ತೊಂಗ** ಜನಾಂಗದವರ ಪ್ರಕಾರ ಪ್ರಥಮ ಮಾನವ ಜೋಡಿಯೊಂದು (ಪುರುಷ ಮತ್ತು ಮಹಿಳೆ) ನೀರಿನ ಕರೆಯಲ್ಲಿರುವ ವಡಕೆಯ ಜೊಂಡಿನಲ್ಲಿ ಒಮ್ಮೆ ಸ್ಫೋಟವುಂಟಾದಾಗ, ಅದರೊಳಗಿಂದ ದಿಢೀರನೆ ಹೊರಬಂದುದಾಗಿ ಹೇಳುತ್ತಾರೆ. ಈ ಜನಾಂಗಗಳಲ್ಲಿ ಇತ್ತೀಚಿನ ವರೆಗೂ ಮನೆಯಲ್ಲಿ ಮಗು ಹುಟ್ಟಿದರೆ ಮನೆಯ ಮುಂದೆ ಒಂದೆರಡು ವಡಕೆಯ ಜೊಂಡನ್ನು ಇರಿಸುವುದು ಸಂಪ್ರದಾಯವಾಗಿತ್ತು.

(2) ದಕ್ಷಿಣ ಸೂಡಾನಿನ ಹುಲ್ಲುಗಾವಲಿನಲ್ಲಿ ವಾಸವಾಗಿರುವ **ನೀಲೋಟಿಕ್** ಬುಡಕಟ್ಟುಗಳ ಮತ್ತು ದಕ್ಷಿಣ ಆಫ್ರಿಕದ ವೆಲ್ಡ್ ಹುಲ್ಲುಗಾವಲಿನ **"ಹೆರೇರೊ"**

---

1. African Mythology-Geoffrey parrinder-paul Hamlyn - Londan - pp 39–48

ಬುಡಕಟ್ಟಿನ ಜನರು ತಮ್ಮ ಮೂಲಪುರುಷರು ಯಾವುದೋ ಒಂದು ದೊಡ್ಡ ಮರದಿಂದ ಹೊರಗೆ ಬಂದರೆಂದೂ, ಆ ಮರವು ಈಗಲೂ ಹುಲ್ಲುಗಾವಲಿನಲ್ಲಿ ಇದೆಯೆಂದೂ ಹೇಳುತ್ತಾರೆ. ಅವರ ದನಕರುಗಳೂ ಸಹ ಆ ಮರದಿಂದಲೇ ಹೊರಬಂದವಾಗಿವೆ. ಆದರೆ ಕುರಿ ಆಡುಗಳು ಮಾತ್ರ ಭೂಮಿಯ ಒಂದು ರಂಧ್ರದಿಂದ ಹೊರ ಬಂದವೆಂದು ಹೇಳುತ್ತಾರೆ.

(3) ಘಾನಾ ದೇಶದ **ಆಶಂತಿ** ಜನರು ತಮ್ಮ ಮೂಲಪುರುಷರು ಭೂಮಿಯೊಳಗಿನ ಒಂದು ರಂಧ್ರದ ಮೂಲಕ ಹೊರಕ್ಕೆ ಬಂದರೆಂದು ಹೇಳುತ್ತಾರೆ. ಏಳು ಜನ ಪುರುಷರು, 7 ಜನ ಸ್ತ್ರೀಯರು, ಒಂದು ನಾಯಿ, ಒಂದು ಚಿರತೆ ಇವಿಷ್ಟೂ ಭೂಮಿಯಿಂದ ಹೊರಬರಲು ಏಳುದಿನ ಹಿಡಿಯಿತೆಂದು ಹೇಳುತ್ತಾರೆ. ಹಳೆಯ ತಲೆಮಾರಿನ ಜನರು ಆ ಮೂಲ ಪುರುಷರ ಹೆಸರನ್ನು ಆಯಾವಾರಗಳಲ್ಲಿ ಮಾತ್ರ ಉಚ್ಚರಿಸುತ್ತಾರೆ. ಆ ಹೆಸರುಗಳೆಲ್ಲವೂ ಅವರಿಗೆ ಪವಿತ್ರ, ಹೊರಬಂದ ಜನರು ಭೂಮಿಯ ಮೇಲಿನ ಪ್ರಜ್ವಲ ಬೆಳಕು ಮತ್ತು ವಿಚಿತ್ರ ದೃಶ್ಯಗಳನ್ನು ಕಂಡು ಭಯಭೀತರಾದರು. ಆದರೆ ಅವರ ಯಜಮಾನ **"ಅಡು ಓಗ್ಯಿನೆ"** ಮಾತ್ರ ಭಯಪಡದೆ ಎಲ್ಲರ ತಲೆಯ ಮೇಲೂ ಕೈಯಿಟ್ಟು ಸಾಂತ್ವನ ಹೇಳಿದನಂತೆ. ಈ ಏಳು ಜನ ಮೂಲಪುರುಷರ ಗೌರವಾರ್ಥವಾಗಿ ಕಾಡಿನಲ್ಲಿ ಏಳು ಕುಂಭಗಳನ್ನು ಇಟ್ಟಿದ್ದಾರಂತೆ. ಅವು ಈಗಲೂ ಇವೆಯೆಂದು ಹೇಳುತ್ತಾರೆ. ವರ್ಷಕ್ಕೊಮ್ಮೆ ಅವರಿಗೆ ತರ್ಪಣ ನೀಡಲು ಬುಡಕಟ್ಟಿನ ಜನರು ಕಾಡಿಗೆ ಹೋಗುತ್ತಾರೆ.

(4) ನೈಜೀರಿಯದ ಯೋರುಬಾ ಪುರಾಣದ ಪ್ರಕಾರ ಮಾನವನು ದೇವಲೋಕದಲ್ಲಿ ಸೃಷ್ಟಿಸಲ್ಪಟ್ಟು, ನಂತರ ಭೂಮಿಗೆ ಕಳುಹಿಸಲ್ಪಟ್ಟವನು. ಆತನೇ ಭೂಮಿಯ ಮೇಲಿರುವ ಮಾನವರ ಮೂಲ ಪುರುಷ ಹಾಗು ನ್ಯಾಯ ನಿಬಂಧಕ. ಅವನು ತನ್ನ ವಂಶಸ್ಥರ ಕುಟುಂಬ ವ್ಯವಸ್ಥೆಯ ನಿರ್ಮಾಪಕನೂ ನೀತಿ ಸಂಹಿತೆಗಳ ಸಿದ್ಧಾಂತಿಯೂ ಆಗಿದ್ದನು. ನಿಷೇಧಗಳನ್ನು ವಿಧಿಸಿ, ಅದನ್ನು ಮುರಿದವರಿಗೆ ಶಿಕ್ಷೆ ಕೊಡುತ್ತಿದ್ದನು.

(5) ದಕ್ಷಿಣ ಸೂದಾನಿನ ನೈಲ್ ಪ್ರದೇಶದ **ಶಿಲ್ಲುಕ್** ಜನರ ಪುರಾಣದಲ್ಲಿ ಮೊದಲ ಮಾನವರು ದೇವಲೋಕದಲ್ಲಿ ಹುಟ್ಟು ಅಲ್ಲೇ ವಾಸಿಸುತ್ತಿದ್ದರು. ಅವರ ಸಂಖ್ಯೆ ಹೆಚ್ಚಿದ ಮೇಲೆ ದೇವರು ಅವರನ್ನು ಭೂಲೋಕಕ್ಕೆ ಕಳುಹಿಸಿದನು. ಅವರು ಭೂಮಿಗೆ ಬಂದು ಪ್ರಾಣಿಗಳೊಟ್ಟಿಗೆ ವಾಸಿಸುತ್ತಿದ್ದರು. ಮಾನವ ಹಾಗೂ ಪ್ರಾಣಿಗಳ ನಡುವೆ ಯಾವ ವ್ಯತ್ಯಾಸವಿರಲಿಲ್ಲ ಮತ್ತು ಆ ಕಾಲದಲ್ಲಿ ಸಾವೆಂಬುದೇ ಇರಲಿಲ್ಲ. ವಯಸ್ಸಾದ ವೃದ್ಧರು ನೆಲದ ಮೇಲೆ ಅಧೋ ಮುಖವಾಗಿ ಮಲಗಿ ಗೋವುಗಳ ಕಾಲಿನಿಂದ ತುಳಿಸಿಕೊಂಡರೆ ಮತ್ತೆ ಚಿಕ್ಕವರಾಗಿ ಬಿಡುತ್ತಿದ್ದರಂತೆ. ನಂತರ ಶಿಲ್ಲುಕ ಪುರಾಣವು ಇತಿಹಾಸ ಪುರುಷರ ಕಡೆ ತಿರುಗುತ್ತದೆ. ಶಿಲ್ಲುಕ ರಾಜವಂಶದ

ಮೂಲ ಪುರುಷನಾದ ನ್ಯೀಕಾಂಗ್ ದೇವಲೋಕದಿಂದ ಬಂದವನ ಮಗ. ಆತ ಮೊಸಳೆ ರೂಪಧಾರಿಯಾದ ಹೆಂಗಸನ್ನು ಅಥವಾ ಮೊಸಳೆಯ ಗುಣಗಳುಳ್ಳ ಜಲ ಕನ್ಯೆಯನ್ನು ಮದುವೆಯಾದನು. ಆಕೆಯೇ ಧರೆಯ ಮೇಲಿನ ಮೊದಲ ಹೆಂಗಸು ಹಾಗೂ ಎಲ್ಲಾ ಜಲಚರಗಳ ಪ್ರತಿನಿಧಿ. ಈಗಿರುವ ಮೊಸಳೆಯು ಪ್ರಥಮ ಸ್ತ್ರೀಯ ಅವತಾರವೆಂದೇ ನಂಬುತ್ತಾರೆ. ಅವಳು ಸಂತಾನದಾತೆ ಹಾಗೂ ಹಸುಳೆಗಳ ರಕ್ಷಕಿಯೂ ಆಗಿರುತ್ತಾಳೆ. ಮೊಸಳೆಗಳು ಕಾಣಿಸಿಕೊಳ್ಳುವ ನದೀದಡದಲ್ಲಿ ಅವಳಿಗಾಗಿ ಕೋಳಿಬಲಿಯನ್ನು ಇಡುತ್ತಾರೆ. ಯಾವುದಾದರೂ ಜಲವಾಸೀ ಪ್ರಾಣಿಗಳು ಅಂದರೆ ಮೀನು, ಮೊಸಳೆ, ಹಾವು, ಹಿಪ್ಪೋ, ಆಮೆ ಇತ್ಯಾದಿ ವಿಚಿತ್ರವಾಗಿ ವರ್ತಿಸಿದ ಸಂದರ್ಭದಲ್ಲಿ ಪ್ರಥಮ ಸ್ತ್ರೀಯು ಅವತರಿಸಿ ಬಂದಿದ್ದಾಳೆಂದು ಜನ ಹೇಳುವುದುಂಟು.

(6) ದಕ್ಷಿಣ ಸೂಡಾನಿನ **ಡಿಂಕಾ** ಪುರಾಣದಲ್ಲಿ ಬರುವ ಆದಿ ಪುರುಷರಾದ **ಗರಾಂಗ್** ಮತ್ತು **ಆಬುಕ್**ರನ್ನು ದೇವರು ಜೇಡಿ ಮಣ್ಣಿನಿಂದ ಮಾಡಿ, ಮಡಕೆಯೊಳಗೆ ಕೊಂಚಕಾಲ ಮುಚ್ಚಿಟ್ಟಿದ್ದನಂತೆ. ಅನಂತರ ದೇವರು ಮಡಕೆಯ ಮುಚ್ಚಳವನ್ನು ತೆಗೆದಾಗ ಆ ಗೊಂಬೆಗಳು ಮಾನವರಾಗಿ ಹೊರಬಂದರು. ಅವರಿಗೆ ಮುಸುಕಿನ ಜೋಳವನ್ನು ಕೊಟ್ಟು, ಮಿತವಾಗಿ ಬಳಸುವಂತೆ ಆದೇಶವಿತ್ತನು. ಗರಾಂಗನ ಹೆಂಡತಿ ಆಬುಕ್ಕಳೇ ಮುಂದೆ ದುರಾಸೆಯಿಂದ ಹೆಚ್ಚು ಜೋಳವನ್ನು ಕುಟ್ಟುತ್ತಿದ್ದಾಗ ಒನಕೆಯ ತುದಿ ಆಕಾಶದಲ್ಲಿದ್ದ ದೇವರ ಕಣ್ಣಿಗೆ ತಗುಲಿ, ದೇವರು ಮತ್ತು ಆಕಾಶಗಳು ದೂರ ಸರಿಯುವಂತೆ ಮಾಡಿದಳು. ಗರಾಂಗನಾದರೋ ದೈವದತ್ತ ಶಕ್ತಿಗಳನ್ನು ಪಡೆದು, ಮಕ್ಕಳ ರೋಗರುಜಿನಗಳನ್ನು ವಾಸಿಮಾಡುವ ಮಂತ್ರ ವೈದ್ಯನಾಗುತ್ತಾನೆ. ದೇವರು ಮೈಮೇಲೆ ಬರುವ ಗರಾಂಗನ ಸಂತತಿಯವರು ಚಿರತೆಯ ಚರ್ಮವನ್ನು ಧರಿಸುತ್ತಾರೆ. ಅವರ ಮೊಣಕೈ ಮತ್ತು ಬೆರಳುಗಳ ತುಂಬಾ ಲೋಹದ ಉಂಗುರ, ಬಳೆಗಳಿರುತ್ತವೆ. ಮಕ್ಕಳ ರೋಗನ್ನು ಗುಣಪಡಿಸಿದ್ದಕ್ಕಾಗಿ ಅವು ತಾಯಂದಿರಿಂದ ಕೊಡಲ್ಪಟ್ಟ ಉಂಗುರ ಬಳೆಗಳು. ಬಿಳಿ ಮತ್ತು ಕಂದು ಬಣ್ಣದ ಹಾವು, ಅಥವಾ ಬಿಳಿ ಮತ್ತು ಕಂದು ಬಣ್ಣದ ಪ್ರಾಣಿ (ಜಿರಾಫೆ, ಎತ್ತು) ಅಥವಾ ಆ ಬಣ್ಣದ ಹೂ ಬಿಡುವ ಗಿಡಮರಗಳು ಇವರ ಮಾಂತ್ರಿಕ ಮಾಧ್ಯಮಗಳು. ಸೂರ್ಯನು ಪ್ರಥಮ ಪುರುಷನ ಸಂಕೇತವಾದರೆ ಹಾವು ಮೊಸಳೆಗಳು ಪ್ರಥಮ ಸ್ತ್ರೀಯ ಸಂಕೇತ. ಆಬುಕ್ಕಳಾದರೋ ಸ್ತ್ರೀಯರು ಮಾಡುವ ಎಲ್ಲಾ ಕಾರ್ಯಗಳಿಗೂ ಪೋಷಕಳೆಂದು ಭಾವಿಸಲಾಗಿದೆ.

(7) ಬುಗಾಂಡಾ ಪುರಾಣದಲ್ಲಿ ಆದಿ ಪುರುಷನ ಬಗ್ಗೆ ಅನೇಕ ಕಥೆಗಳಿವೆ. ಅವುಗಳಲ್ಲಿ ಮುಖ್ಯವಾದುದು ಆದಿಪುರುಷ **ಕಿಂಟು**ವಿನ ಕಥೆ. ಕಿಂಟುವು ದೇವಲೋಕದಿಂದ ಇಲ್ಲಿಗೆ ಬಂದಾಗ ಅವನೊಬ್ಬನೇ ಇರುತ್ತಿದ್ದ. ಅವನ ಹತ್ತಿರ ಒಂದು ಹಸುವಿತ್ತು. ಅದರ ಹಾಲೇ ಕಿಂಟುವಿನ ಆಹಾರ. ಹೀಗೇ ಇರುವಾಗ ಒಮ್ಮೆ ದೇವಲೋಕದ

ರಾಜನಾದ **ಗೂಲು** ಎಂಬವನ ಮಗಳು **ನಂಬಿ** ಭೂಲೋಕದಲ್ಲಿ ವಿಹರಿಸುತ್ತಿರುವ ಕಾಲದಲ್ಲಿ ಕಿಂಟುವನ್ನು ಕಂಡು ಮೋಹಿತಳಾದಳು. ನಂಬಿಯು ತನ್ನ ಇಂಗಿತವನ್ನು ತಾಯಿಯ ಮುಂದೆ ಹೇಳಿದಾಗ ತಾಯಿ ಹಾಗೂ ಇವಳ ಸಹೋದರರು ಕಿಂಟುವನ್ನು ಹೀಗಳೆದರು. "ಅವನಿಗೆ ಹಸುವಿನ ಹಾಲು ಬಿಟ್ಟರೆ ಬೇರೆ ಆಹಾರವೇ ಗೊತ್ತಿಲ್ಲ. ಅಂಥವನನ್ನು ಮದುವೆಯಾಗಬೇಕೇ" ಎಂದು **ಗೇಲಿ ಮಾಡಿದರು.** ಇದನ್ನು ಪರೀಕ್ಷಿಸಲು ಗೂಲು ಕಿಂಟುವಿನ ಹಸುವನ್ನು ಕದ್ದೊಯ್ದನು. ಆಗ ಕಿಂಟುವು ಸೊಪ್ಪು ಹಾಗೂ ಗಿಡಮೂಲಿಕೆಗಳನ್ನು ತಿಂದು ಜೀವಿಸಬೇಕಾಯಿತು. ತನ್ನ ತಂದೆಯ ಕೊಟ್ಟಿಗೆಯಲ್ಲಿದ್ದ ಕಿಂಟುವಿನ ಹಸುವು ನಂಬಿಯ ಕಣ್ಣಿಗೆ ಬಿತ್ತು. ಕೂಡಲೇ ನಂಬಿಯು ಭೂಲೋಕಕ್ಕೆ ಹೋಗಿ ಕಿಂಟುವಿಗೆ ವಿಷಯವನ್ನು ತಿಳಿಸಿ, ಬಂದು ತೆಗೆದುಕೊಂಡು ಹೋಗುವಂತೆ ತಿಳಿಸಿದಳು. ಕಿಂಟುವು ದೇವಲೋಕಕ್ಕೆ ಹೋಗಿ ನೋಡಿದಾಗ ತನ್ನ ಹಸುವಿನಂತೆಯೇ ಇರುವ ಅನೇಕ ಹಸುಗಳನ್ನು ಕಂಡು ಬೆರಗಾದನು. ಅಷ್ಟರಲ್ಲಿ ನಂಬಿಯ ಸಹೋದರರು ತಂದೆಯ ಹತ್ತಿರ ಹೋಗಿ, ಕಿಂಟುವು ಬಂದಿದ್ದಾನೆ ಅವನಿಗೆ ಒಂದು ಪರೀಕ್ಷೆಯನ್ನು ಒಡ್ಡಿದ್ದೇವೆಂದು ಹೇಳಿದರು. ನೂರು ಜನರಿಗಾಗುವಷ್ಟು ಆಹಾರವನ್ನು ತಯಾರಿಸಿ ಒಂದು ಮನೆಯಲ್ಲಿಟ್ಟು, ಅದನ್ನೆಲ್ಲಾ ಬೆಳಗಾಗುವುದರಲ್ಲಿ ತಿಂದು ಮುಗಿಸಬೇಕು; ಮುಗಿಸದಿದ್ದರೆ ಕೊಲ್ಲಲಾಗುತ್ತದೆಂದು ಹೇಳಿ, ಕಿಂಟುವನ್ನು ಮನೆಯೊಳಗೆ ಬಿಟ್ಟು ಬಾಗಿಲು ಹಚ್ಚಿದರು. ಕಿಂಟು ಎಷ್ಟು ತಿನ್ನಲು ಸಾಧ್ಯ! ಹೊಟ್ಟೆ ತುಂಬಾ ತಿಂದಮೇಲೆ ಪಾಪ, ಏನೂ ತೋಚದೆ ಮನೆಯೊಳಗೆ ಓಡಾಡುತ್ತಿದ್ದಾಗ ಅಕಸ್ಮಾತ್ ಒಂದು ಮೂಲೆಯಲ್ಲಿ ತೂತೊಂದನ್ನು ಕಂಡ. ಸರಿ. ಉಳಿದ ಆಹಾರ ಪಾನೀಯಗಳನ್ನು ತೂತಿನೊಳಗೆ ಸುರಿದು ಅದನ್ನು ಮುಚ್ಚಿದ. ನಂತರ ಹೊರಗಿದ್ದ ಕಾವಲುಗಾರರನ್ನು ಕರೆದು, ಖಾಲೀ ಪಾತ್ರೆಗಳನ್ನು ತೆಗೆದುಕೊಂಡು ಹೋಗುವಂತೆ ಹೇಳಿದ. ಗೂಲು ಇದನ್ನು ನಂಬಲಿಲ್ಲ. ಆದ್ದರಿಂದ ಮತ್ತೊಂದು ಪರೀಕ್ಷೆಯನ್ನು ಒಡ್ಡಿದ. ಒಂದು ತಾಮ್ರದ ಕೊಡಲಿಯನ್ನು ಕೊಟ್ಟು ಅದರಿಂದ ಬಂಡೆಯನ್ನು ಸೀಳಿ ಸೌದೆ ಒದಗಿಸಬೇಕೆಂದು ಹೇಳಿ, ಒಂದು ಕಲ್ಲು ಬಂಡೆಯನ್ನು ತೋರಿದ. ಕಿಂಟುವು ಬಂಡೆಯನ್ನು ಹತ್ತಿರದಿಂದ ಪರೀಕ್ಷಿಸಲಾಗಿ ಅದರಲ್ಲಿ ಕೆಲವು ಬಿರುಕುಗಳನ್ನು ಕಂಡನು. ಬಿರುಕಿನ ಜಾಡನ್ನೇ ಅನುಸರಿಸಿ ಬಂಡೆಯನ್ನು ಸೀಳಿಟ್ಟು ಹಿಂತಿರುಗಿದ. ಅನಂತರ ಮತ್ತೊಂದು ಪರೀಕ್ಷೆಯನ್ನೊಡ್ಡಿದರು. ಅದೇನೆಂದರೆ ಒಂದು ಪಾತ್ರೆಯ ತುಂಬಾ ಇಬ್ಬನಿ ನೀರನ್ನು ಹಿಡಿದು ತರಬೇಕೆಂಬುದು ಕಿಂಟು ರಾತ್ರಿಯೆಲ್ಲಾ ಅದರ ಆಲೋಚನೆಯಲ್ಲೇ ಕಾಲ ಕಳೆದ. ಇಬ್ಬನಿಯನ್ನು ಪಾತ್ರೆಯೊಳಗೆ ತುಂಬುವುದು ಹೇಗೆ? ಅದು ಕೈಗೆ ಸಿಕ್ಕುವ ಪದಾರ್ಥವಲ್ಲ. ಪಾತ್ರೆಯೊಳಗೆ ತುಂಬಿದರೆ ಮತ್ತೆ ಮೇಲಕ್ಕೆ ಹೊರಟು ಹೋಗುತ್ತದೆ. ಇರಲಿ ಬೆಳಗ್ಗೆ ನೋಡೋಣ ಎಂದು ಮಲಗಿದ. ಬೆಳಗ್ಗೆ ಪಾತ್ರೆಯೊಡನೆ ಹೊರಗೆ ಹೋಗಿ ನೋಡಿದ. ದಟ್ಟವಾದ ಇಬ್ಬನಿ ಹರಡಿತ್ತು. ಮೋಡದಂತಿದ್ದ ಇಬ್ಬನಿಯೊಳಗೆ ಪಾತ್ರೆಯನ್ನು

ಬೋರಲಾಗಿ ಹಿಡಿದು, ಅದರೊಳಗೆ ಇಬ್ಬನಿ ತುಂಬಿದ ಕೂಡಲೇ ಅದರ ಬಾಯಿ ಮುಚ್ಚಿ ತಂದಿಡುತ್ತಾನೆ ಸ್ವಲ್ಪ ಹೊತ್ತಿನಲ್ಲೇ ಅದು ನೀರಾಗಿ ತಳದಲ್ಲಿ ನಿಂತಿತ್ತು. ಎಲ್ಲಾ ಪರೀಕ್ಷೆಗಳಲ್ಲೂ ಉತ್ತೀರ್ಣನಾದ ಕಿಂಟುವಿಗೆ ಮಗಳನ್ನು ಕೊಡಲು ದೇವರಾಜ ಒಪ್ಪಿದನಾದರೂ ಕೊನೆಯದಾಗಿ ಒಂದು ಸವಾಲೊಡ್ಡುತ್ತಾನೆ. ಅದೇನೆಂದರೆ, ಹಸುಗಳ ಗುಂಪಿನಿಂದ ತನ್ನ ಹಸುವನ್ನು ಬೇರ್ಪಡಿಸಿ ಹೊರಗೆ ತರುವುದು. ಇದು ಸುಲಭವಾಗಿರಲಿಲ್ಲ, ಏಕೆಂದರೆ ಎಲ್ಲಾ ಹಸುಗಳೂ ಒಂದೇ ರೀತಿಯಾಗಿದ್ದವು. ಅಷ್ಟರಲ್ಲಿ ಒಂದು ಜೇನುನೊಣವು ಇವನ ಹತ್ತಿರ ಬಂದು ಉಪಾಯವನ್ನು ಸೂಚಿಸಿ ಹೋಗುತ್ತದೆ. ನಾನು ಯಾವ ಹಸುವಿನ ಕೊಂಬಿನ ಮೇಲೆ ಕೂರುತ್ತೇನೋ ಅದೇ ನಿನ್ನ ಹಸು ಎಂದು. ಬೆಳಗಾದ ಮೇಲೆ ಕಿಂಟುವಿನ ಮುಂದೆ ಹಸುಗಳನ್ನು ತಂದು ನಿಲ್ಲಿಸಿದರು. ಕಿಂಟುವು ಮರದ ಮೇಲಿದ್ದ ಜೇನುನೊಣವನ್ನೇ ನೋಡುತ್ತಿದ್ದ. ಅದು ಬರಲಿಲ್ಲವಾದ ಕಾರಣ ಈ ಗುಂಪಿನಲ್ಲಿ ನನ್ನ ಹಸುವಿಲ್ಲವೆಂದು ಹೇಳಿದ. ನಂತರ ಮತ್ತೊಂದು ಗುಂಪು ಹಸುಗಳನ್ನು ತರಲಾಯಿತು. ಅದರೊಳಗೂ ತನ್ನ ಹಸು ಇಲ್ಲವೆಂದು ಹೇಳಿದ. ಕಡೆಗೆ ಮೂರನೇ ಗುಂಪಿನಲ್ಲಿದ್ದ ಇವನ ಹಸುವಿನ ಕೊಂಬಿನ ಮೇಲೆ ಜೇನು ಬಂದು ಕುಳಿತದ್ದನ್ನು ಕಂಡು, ಅದೇ ತನ್ನ ಹಸುವೆಂದು ಗುರ್ತಿಸಿದನು. ಅಷ್ಟೇ ಅಲ್ಲದೆ ಮೂರು ಕರುಗಳು ತನಗೆ ಸೇರಬೇಕೆಂದೂ ಅವು ಇಲ್ಲಿಗೆ ಬಂದಮೇಲೆ ತನ್ನ ಹಸುವು ಹಾಕಿದ ಕರುಗಳೆಂದು ಹೇಳಿದನು. ಆ ಜೇನು ನೊಣವೇ ಅವುಗಳನ್ನೂ ತೋರಿಸಿದ್ದು. ದೇವಲೋಕದ ಅಧಿಪತಿಯಾದ ಗೂಲುವು ಬಹಳ ಸಂತೋಷದಿಂದ ನಂಬಿಯನ್ನು ಕೊಟ್ಟು ಮದುವೆಮಾಡಿ, ಮಗಳಿಗೆ ಅನೇಕ ದನ-ಕರುಗಳು, ಆಡು, ಕುರಿ, ಕೋಳಿ, ಹಣ್ಣಿನ ಗಿಡಮರಗಳು, ಆಹಾರ ಧಾನ್ಯಗಳನ್ನೂ ಕೊಟ್ಟು ಅವರನ್ನು ಭೂಲೋಕಕ್ಕೆ ಬೀಳ್ಕೊಟ್ಟನು.

(8) ಕೆನ್ಯಾದ **ಲೂಯಿಯ** ಜನರ ಪುರಾಣದಲ್ಲಿ ಸೃಷ್ಟಿಕರ್ತನು ಸೂರ್ಯನನ್ನು ಸೃಷ್ಟಿಸಿದಾಗ "ಯಾರಿಗೋಸ್ಕರ ಇದು ಬೆಳಕನ್ನು ನೀಡಬೇಕಾಗಿದೆ?" ಎಂದು ಆಲೋಚಿಸಿ, ಭೂಮಿಯ ಮೇಲೆ ಮೊದಲ ಮಾನವನನ್ನು ಸೃಷ್ಟಿಗೈಯ್ಯುತ್ತಾನೆ. ಅವನಿಗೆ **ಮ್ವಾಂಬು** ಎಂಬ ಹೆಸರಿಡುತ್ತಾನೆ. ಅವನಿಗೆ ಮಾತು ಬರುತ್ತಿದ್ದ ಕಾರಣ ಒಬ್ಬಳು ಸಂಗಾತಿಯನ್ನು ನಿರ್ಮಿಸಿ ಅವಳಿಗೆ **ಸೇಲಾ** ಎಂಬ ಹೆಸರಿಟ್ಟನು. ಅವರಿಗೆ ನೀರು ಆಹಾರ ಬೇಡವೇ? ಸರಿ. ದೇವಲೋಕದಿಂದ ಅರ್ಥಾತ್ ಆಕಾಶದಿಂದ ನೀರು ಮಳೆಯ ರೂಪದಲ್ಲಿ ಬೀಳುವಂತೆ ಮಾಡಿ ನದಿ, ಕೆರೆ, ಸರೋವರಗಳಲ್ಲಿ ಅವರಿಗೋಸ್ಕರ ನೀರು ನಿಲ್ಲುವಂತೆ ಮಾಡಿದ್ದಾನೆ. ಆಹಾರಕ್ಕಾಗಿ ಮ್ವಾಂಬು ದಂಪತಿಗಳು ಕೆಲವು ಪ್ರಾಣಿಗಳನ್ನು ಮಾತ್ರ ಉಪಯೋಗಿಸುವಂತೆ ಹೇಳಿ, ಕೆಲವನ್ನು ಅಂದರೆ ನೆಲದಲ್ಲಿ ತೆವಳುವ ಗೊದ್ದ, ಹಾವು, ಬಸವನ ಹುಳು ಇತ್ಯಾದಿಗಳನ್ನೂ ಹಾಗೂ ರಣಹದ್ದು, ಗಿಡಗ ಮುಂತಾದ ಮಾಂಸಾಹಾರಿ ಪಕ್ಷಿಗಳನ್ನು ತಿನ್ನಬಾರದೆಂದು ನಿಷೇಧ ವಿಧಿಸುತ್ತಾನೆ. ಅನಂತರ ಒಂದು ಜೋಡಿ

ಹಸುವಿನ ಎಳೆಗರುಗಳನ್ನು ತಂದು ಇವರಿಗೆ ಕೊಟ್ಟು ಅವುಗಳ ಪೋಷಣೆಯ ವಿಧಾನವನ್ನು ಹೇಳಿಕೊಡುತ್ತಾನೆ. ಅದರಂತೆ ಅವರು ಹಸುವಿನ ಕರುಗಳನ್ನು ಹುತ್ತದ ಮೇಲಿಟ್ಟು ಪೋಷಿಸುತ್ತಾರೆ. ಅಂದಿನಿಂದ ಹಸುಗಳು ಹುತ್ತದ ಒಳಗಿಂದ ಬಂದವು ಎಂಬ ಪ್ರತೀತಿ.

ಅಲ್ಲದೆ ಭೂಮಿಯ ಮೇಲಿರುವ ಅಪಾಯಗಳಿಂದ ರಕ್ಷಿಸಿ ಕೊಳ್ಳಲು ಮ್ವಾಂಬು ದಂಪತಿಗಳು ಮರಗಳ ಮೇಲೆ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರಂತೆ. ಮುಂದೆ ಅವರ ಮಕ್ಕಳು ಕೆಳಕ್ಕೆ ಇಳಿದು, ಭೂಮಿಯ ಮೇಲೆ ನೀರಿನ ಹತ್ತಿರ, ಮರದ ಕೊಂಬೆ, ಕಡ್ಡಿ, ಎಲೆ, ಹುಲ್ಲುಗಳಿಂದ ಮನೆ ಕಟ್ಟಿಕೊಂಡು, ತಮ್ಮ ದನಕರುಗಳೊಡನೆ ವಾಸಮಾಡಲು ಪ್ರಾರಂಭಿಸಿದರಂತೆ. ಕ್ರಮೇಣ ಅವರ ಸಂತತಿಯವರು ಮಣ್ಣಿನಿಂದ ಮಡಕೆ ಮಾಡುವುದನ್ನು ಕಲಿತು, ದೇವಲೋಕದಿಂದ ತಂದ ಬೆಂಕಿಯಿಂದ ಆಹಾರವನ್ನು ಬೇಯಿಸಿ ತಿನ್ನುವುದನ್ನು ಕಲಿಯುತ್ತಾರೆ.

## ದೇವರು ಆಹಾರ ಕೊಟ್ಟದ್ದು

"ಹುಟ್ಟಿಸಿದ ದೇವರು ಆಹಾರ ಕೊಡಲೊಲ್ಲನೇ" ಎಂಬ ನಂಬಿಕೆಯು ವಿಶ್ವವ್ಯಾಪಕವಾಗಿ ಎಲ್ಲ ಧರ್ಮೀಯರಲ್ಲೂ ಕಾಣಬರುತ್ತದೆ. "ಓ! ಸ್ವರ್ಗದಲ್ಲಿರುವ ನಮ್ಮ ತಂದೆಯೇ, ದಿನನಿತ್ಯದ ಬ್ರೆಡ್ಡನ್ನು ಇಂದು ನಮಗೆ ಕರುಣಿಸಿರುವುದಕ್ಕಾಗಿ ವಂದನೆಗಳು" ಎಂದು ಕ್ಯಾಥೊಲಿಕ್ ಧರ್ಮೀಯರು ಊಟಕ್ಕೆ ಮುನ್ನ ಪ್ರಾರ್ಥನೆ ಸಲ್ಲಿಸುತ್ತಾರೆ. ಎಲೆಯ ಮೇಲೆ ಬಡಿಸಿದ ಆಹಾರವನ್ನು ಭಕ್ಷಿಸುವ ಮೊದಲು ಬ್ರಹ್ಮನಿಗೆ ಅರ್ಪಿಸುವ ಶ್ಲೋಕವನ್ನು ವೈದಿಕರು ಹೇಳುವುದನ್ನು ಕೇಳಿದ್ದೇವೆ. ಬಡಿಸಿದ ಆಹಾರವನ್ನು ಇಷ್ಟಲಿಂಗಕ್ಕೆ ನೈವೇದ್ಯಮಾಡಿ ಶಿವನ ಪ್ರಸಾದವೆಂದು ಸ್ವೀಕರಿಸುವುದನ್ನು ಕಂಡಿದ್ದೇವೆ. ಏನೂ ಕಲಿಯದ ಅನಕ್ಷರಸ್ಥನೂ ಸಹ, ಹಣೆಗೆ ವಿಭೂತಿ ಹಚ್ಚಿ, ಮೊದಲ ತುತ್ತನ್ನು ಕಣ್ಣಿಗೆ ಒತ್ತಿ ಅನಂತರ ಬಾಯಿಗೆ ಹಾಕುವುದನ್ನು ನೋಡಿದ್ದೇವೆ. ಇವೆಲ್ಲವನ್ನೂ ಏಕೆ ಮಾಡಬೇಕು? ಇದರ ಸಂಕೇತವೇನು? ಇದಕ್ಕೆಲ್ಲಾ ಒಂದು ಆಧ್ಯಾತ್ಮಿಕ ಹಿನ್ನೆಲೆಯುಂಟು. ದೇವರನ್ನು ಸದಾ ಸ್ಮರಿಸುತ್ತಿರಲು ಆಗದಿದ್ದರೂ, ಊಟಕ್ಕೆ ಕುಳಿತಾಗಲಾದರೂ ಸ್ಮರಿಸಿ ಧನ್ಯತೆಯನ್ನು ಅರ್ಪಿಸುವುದರ ಮೂಲಕ, ದೇವರ ಮೇಲಿರುವ ನಂಬಿಕೆಯನ್ನು ಧೃಡಪಡಿಸುವುದೇ ಆಗಿದೆ. ಕನಕದಾಸರು "ತಲ್ಲಣಿಸದಿರು ಕಂಡ್ಯ ತಾಳು ಮನವೇ" ಎಂಬ ಕೀರ್ತನೆಯಲ್ಲಿ– ಫುಲ್ಲ ಲೋಚನ ಶ್ರೀ ಕಾಗಿನೆಲೆ ಯಾದಿಕೇಶವನು ಎಲ್ಲರನು ಸಲಹುವನು, ಇದಕೆ ಸಂಶಯಬೇಡ" ಎಂದು ಹಾಡಿದ್ದಾರೆ. "ಪುಟ್ಟಿಸಿದ ಪ್ರಭುವು। ನಮಗೆ ಹೊಟ್ಟೆಗೆ ಕೊಡದಿಹನೆ। ಬೆಟ್ಟದೊಡಯ ನಮ್ಮ । ಪುರಂಧರ ವಿಠಲನ । ಗಟ್ಟಿಯಾಗಿ ನಂಬಿದ ಭಕುತರಿಗೆ ॥ ಎಂದು ಪುರಂಧರ ದಾಸರು ಹೇಳಿದ್ದಾರೆ.

ರೈತರು ಸುಗ್ಗಿಯ ಕಾಲದಲ್ಲಿ ಆಚರಿಸುವ ಹಬ್ಬದಾಚರಣೆಗಳ ಉದ್ದೇಶವು ನಮ್ಮಲ್ಲಿರುವ ಆಸ್ತಿಕ ಪ್ರಜ್ಞಾವಂತತೆಯನ್ನು ವ್ಯಕ್ತಪಡಿಸುವುದೇ ಆಗಿದೆ. ಹುತ್ರಿಹಬ್ಬ, ಮೇಟಿಪೂಜೆ, ಹೆಚ್ಚುಮಾಡುವುದು, ಸುಗ್ಗಿಯ ಕುಣಿತಗಳಂತೆಯೇ ಪಶ್ಚಿಮ ಆಫ್ರಿಕದ

"ಯಾಮ್ ಫೆಸ್ಟಿವಲ್", ಜ಼ಾಂಬಿಯದ "ಕಾರನ್ ಫೆಸ್ಟಿವಲ್" ಹಬ್ಬಗಳು ದೇವರಿತ್ತ ಬೆಳೆಯನ್ನು- ಅದೆಷ್ಟೇ ಇರಲಿ ಧನ್ಯಭಾವದಿಂದ ಸ್ವೀಕರಿಸುವ ಆಚರಣೆಗಳಾಗಿವೆ. ದೇವರ ಮೇಲೆ ಇಂತಹ ಧೃಡ ನಂಬಿಕೆಗಳನ್ನು ಇಟ್ಟಿರುವ ಆಫ್ರಿಕದ ಬುಡಕಟ್ಟುಗಳ ಪುರಾಣ ಕಥೆಗಳು ಆಸ್ತಿಕ ಪ್ರಜ್ಞೆಯನ್ನು, ಬೆಳೆಯುವ ಮಕ್ಕಳಿಗೆ, ಸರಳವಾದ ಕಥೆಗಳ ಮೂಲಕ ಬೋಧಿಸುತ್ತವೆ.

(1) ಜ಼ಾಂಬಿಯಾದ ಈಲಾ ಜನರ ಪುರಾಣದ ಪ್ರಕಾರ ದೇವರು ಬಹಳ ಹಿಂದೆ ಮನುಷ್ಯರನ್ನು ಭೂಮಿಗೆ ಕಳುಹಿಸಿದಾಗ ಅವರ ಆಹಾರಕ್ಕಾಗಿ ಮುಸುಕಿನ ಜೋಳವನ್ನು ಕೊಟ್ಟು ಅದನ್ನು ಜತನದಿಂದ ಕಾಪಾಡಿಕೊಂಡು ಹೋಗಬೇಕೆಂದು ಹೇಳಿದನಂತೆ. ಅವರು ಭೂಮಿಗೆ ಬಂದಮೇಲೆ, ಜೋಳವನ್ನು ಬಿತ್ತಿ ಸಂಮೃದ್ಧ ಬೆಳೆಯನ್ನು ತೆಗೆದರಂತೆ. ಧಾನ್ಯ ಸಂಗ್ರಹಣೆ ಮಾಡಿ, ಗುಡಾಣಗಳಲ್ಲಿ ಹಾಕಿ, ಅನಂತರ ಅವರೆಲ್ಲರೂ ಊಟಕ್ಕೆ ಕುಳಿತರು. ಹೊಟ್ಟೆಬಾಕ ಗಂಡಸರು ಮುಂಜಾನೆಯಿಂದ ಸಂಜೆಯವರೆಗೂ ತಿಂದರಂತೆ. ಅಷ್ಟು ತಿಂದರೂ ಮುಗಿಯದೆ ಉಳಿದಿದ್ದ ಧಾನ್ಯವನ್ನು ಕಂಡು ಕೆಲವರು ಬೆಂಕಿಯಿಟ್ಟು ಸುಟ್ಟರೆ, ಮತ್ತೆ ಕೆಲವರು ಅದರಿಂದ ಮಧ್ಯವನ್ನು ತಯಾರಿಸಿದರಂತೆ. ಧಾನ್ಯವನ್ನು ಈ ರೀತಿ ಹಾಳು ಮಾಡಿದ್ದರಿಂದ ಕ್ಷಾಮವು ತಲೆದೋರಿತು. ಆಹಾರ ಸಂಪೂರ್ಣವಾಗಿ ಇಲ್ಲದಾಯಿತು. ಆಗ ಜನರೆಲ್ಲರೂ ದೇವರ ಹತ್ತಿರ ಹೋಗಿ ಮತ್ತೆ ಆಹಾರಕ್ಕಾಗಿ ಬೇಡಿದರಂತೆ. ನಡೆದದ್ದನ್ನೆಲ್ಲಾ ಕೇಳಿ ತಿಳಿದುಕೊಂಡು ದೇವರು ಹೇಳಿದನಂತೆ "ನೀವು ಮನುಷ್ಯರು ಮತಿಗೆಟ್ಟವರು, ಸೋಮಾರಿಗಳು, ಮುಂದಿನ ಬೆಳೆಗೆ ಬೀಜವನ್ನಿಟ್ಟುಕೊಳ್ಳದೆ, ಬೆಳೆದದ್ದನ್ನೆಲ್ಲಾ ತಿಂದು, ಸುಟ್ಟು, ದೈವ ಸಮ್ಮತವಲ್ಲದ ರೀತಿಯಲ್ಲಿ ಧಾನ್ಯವನ್ನು ಹಾಳು ಮಾಡಿದ್ದೀರಿ. ನಾನು ಈಗ ಹಣ್ಣು ಕಾಯಿಗಳನ್ನು ಕೊಡುತ್ತೇನೆ. ಕ್ಷಾಮ ಬಂದಾಗ ಅದನ್ನು ತಿಂದು ಬದುಕಿರಿ" ಎಂದು. ಅಂದಿನಿಂದ ಧಾನ್ಯದ ದಾಸ್ತಾನು ಮುಗಿದಾಗಲೆಲ್ಲಾ ಜನರು ಗೆಡ್ಡೆಗೆಣಸು, ಹಣ್ಣು ಕಾಯಿಗಳನ್ನು ತಿಂದು ಬದುಕುತ್ತಾರೆ. ಈ ಕಥೆಯಲ್ಲಿ–ಮನುಷ್ಯನು ದುಂದುವೆಚ್ಚ, ದುರಾಸೆ, ದೈವ ವಿರೋಧೀ ಚಟುವಟಿಕೆಗಳಲ್ಲಿ ತೊಡಗಿದರೆ, ಮುಂದಾಲೋಚನೆಯಿಲ್ಲದೆ, ಇರುವುದನ್ನು ಹಾಳು ಮಾಡಿಕೊಳ್ಳಬೇಕಾಗುತ್ತದೆ; ಹಸಿವು, ರೋಗ ರುಜಿನಗಳಿಗೆ ತುತ್ತಾಗಿ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ; ಮಿತವ್ಯಯ, ದೈವಭೀತಿ, ಮುಂದಾಲೋಚನೆಗಳಿಂದ ಲಾಭವನ್ನು ಕಂಡು ಸುಖವಾಗಿರಬೇಕೆಂಬ ನೀತಿಬೋಧೆ ಎದ್ದುಕಾಣುತ್ತದೆ.

(2) ಆಹಾರ ಮತ್ತು ಜನರ ಉದ್ಯೋಗ ನಿರ್ಣಯದ ಬಗ್ಗೆ (ಮಡಗಾಸ್ಕರ್) ಮಲಗಸೀ ಪುರಾಣ ಕಥೆಯೊಂದು ಹೀಗೆ ಹೇಳುತ್ತದೆ: ಪ್ರಾರಂಭದಲ್ಲಿ ಭೂಮಿಯ ಮೇಲೆ ನಾಲ್ಕು ಜನರಿದ್ದರು. ಅವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಉದ್ಯೋಗವನ್ನು ದೇವರು ನೇಮಿಸಿದ್ದನಂತೆ. ಮೊದಲನೆಯವನು ಭರ್ಜಿಹಿಡಿದು ಪ್ರಾಣಿಬೇಟೆ ಮಾಡುವುದು; ಎರಡನೆಯವನು ಬಲೆ ಒಡ್ಡಿ ಪ್ರಾಣಿಗಳನ್ನೂ ಹಾಗೂ ಮೀನು

ಹಿಡಿಯುವುದು; ಮೂರನೆಯವನು ದನಕರುಗಳನ್ನು ಮೇಯಿಸುತ್ತಾ ಗಿಡಗಳ ಮೇಲಿರುವ ಹಣ್ಣು ಕಾಯಿಗಳನ್ನು ತಿನ್ನುವುದು; ಮತ್ತು ನಾಲ್ಕನೆಯವನು ಭೂಮಿಯ ಮೇಲೆ ವ್ಯವಸಾಯ ಮಾಡಿ ಧಾನ್ಯಗಳನ್ನು ಬೆಳೆಯುವುದು. ಹೀಗೆ ಅವರು ತಮ್ಮ ಆಹಾರ ಸಂಪಾದನೆಗಾಗಿ ಒಂದೊಂದು ಉದ್ಯೋಗ ಮಾಡಿ ಕೊಂಡಿದ್ದರು. ಆದರೆ ಅವರಲ್ಲಿ ಪರಸ್ಪರ ಒಡಂಬಡಿಕೆಯಿರಲಿಲ್ಲ. ಕೆಲವು ಕಾಲದ ಮೇಲೆ ಈ ಉದ್ಯೋಗಗಳಿಂದ ಬೇಸತ್ತು ತಮ್ಮ ಉದ್ಯೋಗಗಳನ್ನು ಬದಲಾಯಿಸಿ ಕೊಡಬೇಕೆಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳಲು ದೇವರ ಹತ್ತಿರ ಹೋದರಂತೆ. ಆದರೆ ದೇವರು ಆಗ ಭತ್ತವನ್ನು ಕುಟ್ಟಿ ಅಕ್ಕಿ ಮಾಡುತ್ತಿದ್ದನು. ಇವರು ಬಂದ ಕಾರಣವನ್ನು ವಿಚಾರಿಸಿದ ನಂತರ ದೇವರು ಹೇಳಿದನಂತೆ– "ಈ ದಿನ ನನಗೆ ಬಿಡುವಿಲ್ಲ, ಎರಡು ದಿನ ಬಿಟ್ಟು ಮೂರನೇ ದಿನ ಬಂದು ನನ್ನನ್ನು ಕಾಣಿರಿ; ಬರುವಾಗ ಈ ಭತ್ತವನ್ನು ವಾಪಸು ತನ್ನಿರಿ" ಎಂದು ಹೇಳಿ ಪ್ರತಿಯೊಬ್ಬರಿಗೂ ಒಂದೊಂದು ಹಿಡಿ ಮುಷ್ಟಿ ಭತ್ತವನ್ನು ಕೊಟ್ಟು ಕಳುಹಿಸುತ್ತಾನೆ. ನಂತರ ನಾಲ್ಕು ಜನರೂ ತಮ್ಮ ತಮ್ಮ ಹಾದಿ ಹಿಡಿದು ಹೋದರು. ಮೊದಲನೆಯವನು ಕೆಲವು ಪ್ರಾಣಿಗಳನ್ನು ಕಂಡು, ಕೈಲಿದ್ದ ಭತ್ತವನ್ನು ಬಿಸಾಡಿ ಪ್ರಾಣಿಯ ಹಿಂದೆ ಓಡಿದನು. ಎರಡನೆಯವನು ಕಾಡುಕೋಳಿಗಳ ಕೂಗನ್ನು ಕೇಳಿದ ಕೂಡಲೇ ಅದನ್ನು ಹುಡುಕುವ ಮೊದಲು ಭತ್ತವನ್ನು ಭೂಮಿಯಮೇಲಿಟ್ಟು ಹೋಗುತ್ತಾನೆ. ಬಂದು ನೋಡಿದಾಗ ಭತ್ತ ಅಲ್ಲಿರಲಿಲ್ಲ. ಮೂರನೆಯವನು ಗಿಡದ ಮೇಲಿರುವ ಒಂದು ಹಣ್ಣನ್ನು ಕಂಡು ಅದನ್ನು ಕೀಳುವುದಕ್ಕೋಸ್ಕರ ಕೈಲಿದ್ದ ಭತ್ತವನ್ನು ನೀರಿನ ಮೇಲೆ ಚಲ್ಲಿದನಂತೆ. ಬಂದು ನೋಡಿದಾಗ ಭತ್ತ ಸಿಗಲಿಲ್ಲ. ನಾಲ್ಕನೆಯವನು ಭತ್ತವನ್ನು ಒಂದು ಕಡೆ ಗುಡ್ಡೆ ಮಾಡಿಟ್ಟು ಭೂಮಿಯನ್ನು ಅಗೆಯಲು ಪ್ರಾರಂಭಿಸಿದ. ಬಂದು ನೋಡಿದಾಗ ಗಾಳಿಯು ಭತ್ತವನ್ನು ಹರಡಿಹೋಗಿತ್ತು. ಆದರೂ ಕೆಲವು ಕಾಳನ್ನು ಆರಿಸಿ ಕೈಯಲ್ಲಿ ಹಿಡಿದು ಕೊಂಡನು. ಮೂರನೇ ದಿವಸ ಎಲ್ಲರೂ ದೇವರನ್ನು ನೋಡಲು ಹೋದಾಗ ದೇವರು ಮೊದಲು ಭತ್ತವನ್ನು ಕೊಡುವಂತೆ ಕೇಳಿದನು. ಆಗ ಎಲ್ಲರೂ, ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ, ನಡೆದ ಸಂಗತಿಯನ್ನು ಹೇಳಿದರಂತೆ. ಆಗ ದೇವರು ಹೇಳಿದ್ದೇನೆಂದರೆ "ನಿಮ್ಮ ಅದೃಷ್ಟಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ನೀವು ಯಾವ ಯಾವ ಉದ್ಯೋಗಗಳನ್ನು ಮಾಡುತ್ತಿದ್ದಿರೋ ಅದನ್ನೇ ಮಾಡುತ್ತಾ ಹೋಗಿ" ಎಂದು. ಅಂದಿನಿಂದ ಜನರು ಉದ್ಯೋಗಮಾಡಿ ಆಹಾರ ಸಂಪಾದಿಸಿಕೊಳ್ಳುತ್ತಿದ್ದಾರೆ. ಇವು ನೀತಿ ಕಥೆಗಳಂತಿದ್ದು ಪ್ರತಿಯೊಂದು ಕಥೆಯಲ್ಲಿಯೂ ದೇವರ ಆಜ್ಞೆ, ದೇವರ ಇಷ್ಟವನ್ನು ಯಾವಾಗಲೂ ಸ್ಮರಿಸುವಂತೆ ಸೂಚಿಸುತ್ತವೆ.

**ಬೆಂಕಿಯ ಆಗಮನ:**

ಬೆಂಕಿಯ ಆಗಮನವು ಮನುಷ್ಯಜೀವನದಲ್ಲಿ ಅತಿ ಮುಖ್ಯವಾದ ಘಟನೆಗಳಲ್ಲೊಂದು. ಭೂಲೋಕಕ್ಕೆ ಪ್ರಥಮವಾಗಿ ಬೆಂಕಿ ಬಂದದ್ದು ದೇವರ ಲೋಕದಿಂದ ಎಂಬುದನ್ನು ಎಲ್ಲಾ ಪುರಾಣ ಕಥೆಗಳೂ ಒಪ್ಪಿಕೊಳ್ಳುತ್ತವೆ. ಇಲಾ ಪುರಾಣಗಳ ಪ್ರಕಾರ ಬೆಂಕಿಯನ್ನು ದೇವಲೋಕದಿಂದ ತಂದವರು ಗೂಡುಕಟ್ಟುವ ಕಡಂಜ (ಕಣಜ, ಕಡಜೀರಿಗೆ). ಪ್ರಾರಂಭದಲ್ಲಿ ಭೂಮಿಯ ಮೇಲೆ ಬೆಂಕಿ ಯಿರಲಿಲ್ಲ. ಚಳಿಗಾಲದಲ್ಲಿ ಪ್ರಾಣಿ-ಪಕ್ಷಿಗಳೆಲ್ಲವೂ ರಾತ್ರಿವೇಳೆ ಬೆಂಕಿಯಿಲ್ಲದೆ ಕಷ್ಟಪಡುತ್ತಿದುವು. ಯಾರೋ ಹೇಳಿದರು ದೇವರ ಹತ್ತಿರ ಬೆಂಕಿಯಿದೆ, ಆದರೆ ಅಲ್ಲಿಗೆ ಹೋಗುವವರಾರು? "ಯಾರಾದರೂ ನನ್ನ ಜೊತೆ ಬಂದರೆ ನಾನು ಹೋಗಿಬರುತ್ತೇನೆ" ಎಂದು ಕಣಜ ಹೇಳಿತು. ಹದ್ದು, ಕಾಗೆ, ರಣಹದ್ದುಗಳು ಸ್ವಸಮ್ಮತಿಯಿಂದ ಹೊರಟವು. ಆಕಾಶದಲ್ಲಿ ಬಹು ಎತ್ತರಕ್ಕೆ ಹಾರಿದವು. ಹತ್ತು ದಿನಗಳ ನಂತರ ಕೆಲವು ಮೂಳೆಗಳು ಭೂಮಿಯ ಮೇಲೆ ಉದುರಿದವು. ಅವು ಕಾಗೆಯದಾಗಿತ್ತು. ನಂತರ ಹದ್ದಿನ ಮೂಳೆಗಳು, ಕೊನೆಗೆ ರಣಹದ್ದಿನ ಮೂಳೆಗಳೂ ಉದುರಿ ಬಿದ್ದವು. ಆದರೆ ಕಣಜವು ಮಾತ್ರ ಮೂವತ್ತು ದಿನಗಳ ಕಾಲ, ಮೋಡಗಳ ಮೇಲೆ ಆಗಾಗ್ಗೆ ವಿಶ್ರಮಿಸುತ್ತಾ ಪ್ರಯಾಣ ಮಾಡಿತು. ಆದರೂ ದೇವರ ಊರನ್ನು ಮುಟ್ಟಲಾಗಲಿಲ್ಲ. ಯಾರೋ ತನ್ನನ್ನು ಕಾಣಲು ಬರುತ್ತಿದ್ದಾರೆಂದು ತಿಳಿದುಕೊಂಡ ದೇವರು, ತಾನೇ ಇಳಿದು ಬಂದು, ಕಣಜವನ್ನು ಕಂಡು ಕಾರಣವನ್ನು ಕೇಳಿದನು. ಕಣಜವು ನಡೆದ ಕಥೆಯನ್ನು ಹೇಳಿ, ಬೆಂಕಿಗಾಗಿ ಬೇಡಿಕೆಯಿತ್ತಿತು. ದೇವರು ಸುಪ್ರೀತನಾಗಿ ಬೆಂಕಿಯನ್ನು ಅನುಗ್ರಹಿಸಿದ್ದಲ್ಲದೆ, ಇನ್ನು ಮುಂದೆ ಎಲ್ಲಾ ಹಕ್ಕಿ ಪಕ್ಷಿ, ಕ್ರಿಮಿ ಕೀಟಗಳಿಗೆ ಕಣಜವನ್ನೇ ಅಧಿಪತಿಯನ್ನಾಗಿ ಘೋಷಿಸಿದನು. ಬೆಂಕಿಯ ಹತ್ತಿರಲೇ ಮಕ್ಕಳಿಗಾಗಿ ಮನೆಕಟ್ಟಿಕೊಂಡು ವಾಸಿಸುವಂತೆ ಆದೇಶವಿತ್ತನು. ಅದೇ ಪ್ರಕಾರ ಈಗಲೂ ಕಣಜವು ಹಸಿಮಣ್ಣನ್ನು ತಂದು ತನ್ನ ಮಕ್ಕಳಿಗಾಗಿ ಮನೆಯನ್ನು ಬೆಂಕಿಯ ಹತ್ತಿರಲೇ ಕಟ್ಟುತ್ತದೆ.

ಬೆಂಕಿಯನ್ನು ತರುವ ಬಗ್ಗೆ ಕಾಂಗೋ ಕಾಡಿನ ಪಿಗ್ಮಿ ಜನರಲ್ಲಿ ಅನೇಕ ಕಥೆಗಳಿವೆ. ಅವುಗಳಲ್ಲೊಂದು ಈ ರೀತಿಯಿದೆ-ಪೂರ್ವಕಾಲದಲ್ಲಿ ದೇವರ ಹತ್ತಿರ ಮಾತ್ರ ಬೆಂಕಿಯಿತ್ತು. ಆತನ ಮನೆಯ ಮುಂದೆ ಇದ್ದ ಬೆಂಕಿಯನ್ನು ವಯಸ್ಸಾದ ಆತನ ತಾಯಿ ಸದಾ ಕಾಯುತ್ತಾ ಕುಳಿತಿರುವಳು. ಬೆಂಕಿಯಿದ್ದ ಕಡೆ ಸಾವಿಲ್ಲ ಎಂಬುದು ಪ್ರತೀತಿ. ಬೆಂಕಿಯು ಪ್ರಾಣದೇವತೆ. ದೇವರು ಲಿಯಾನಾ ಬಳ್ಳಿಯ ಉಯ್ಯಾಲೆ ಮೇಲೆ ಕುಳಿತು ಆಗಾಗ್ಗೆ ಸಂಚಾರ ಹೋಗುತ್ತಿದ್ದನು. ಒಮ್ಮೆ ದೇವರು ಹೊರಗೆ ಹೋಗಿದ್ದಾಗ, ಕಾಡಿನಲ್ಲಿ ದಾರಿ ತಪ್ಪಿಹೋದ ಪಿಗ್ಮಿ (ಗಿಡ್ಡ) ಮಾನವನೊಬ್ಬ ಬೆಂಕಿ ಉರಿಯುತ್ತಿದ್ದ ಜಾಗವನ್ನು ಅಕಸ್ಮಿಕವಾಗಿ ತಲಪಿದ. ದೇವರ ತಾಯಿಗೆ ನಿದ್ದೆ ಬರುವುದರಲ್ಲಿತ್ತು. ಇದೇ ಸಮಯದಲ್ಲಿ ಆ ಗಿಡ್ಡ ಮಾನವ ಬೆಂಕಿಯನ್ನು ಕದ್ದೊಯ್ದು-ತಣ್ಣಗಾದ ಕೂಡಲೇ ತಾಯಿ ಕೂಗಿಕೊಂಡಳು. ದೇವರು ಕೂಡಲೇ ಬಂದು, ತಾಯಿಯನ್ನು ಸಮಾಧಾನ ಪಡಿಸಿ, ಉಯ್ಯಾಲೆ ಹತ್ತಿ ಹೋಗಿ ಆ ಕುಳ್ಳನನ್ನು ಹಿಡಿದು ಬೆಂಕಿಯನ್ನು ಹಿಂದಕ್ಕೆ ತಂದುಕೊಟ್ಟನು. ಕುಳ್ಳನು ಈ

ಕಥೆಯನ್ನು ತನ್ನ ಸ್ನೇಹಿತರಿಗೆ ಹೇಳಿದಾಗ ಅವರು ತಾವುಗಳೂ ಬೆಂಕಿಯನ್ನು ತರಲು ಹೋಗುವುದಾಗಿ ಹೇಳಿದರು. ಅನೇಕರು ಹೋದರು. ಎಲ್ಲರಿಗೂ ಅದೇ ಗತಿಯಾಯಿತು. ಕೊನೆಯಲ್ಲೊಬ್ಬ ಸಾಹಸೀ ಕುಳ್ಳ ರೆಕ್ಕೆಯನ್ನು ಕಟ್ಟಿಕೊಂಡು ದೇವರ ಮನೆಯ ಕಡೆಗೆ ಹಾರಿಹೋದ. ಬೆಂಕಿಯನ್ನು ಎತ್ತಿಕೊಂಡೂ ಹೊರಟ. ಓಡಿಸಿಕೊಂಡು ಹಿಂಬಾಲಿಸಿದ ದೇವರಿಗೆ ಇವನು ಸಿಗಲಿಲ್ಲ. ಕಡೆಗೆ ದೇವರು "ಇವನಿಗೂ ಬೆಂಕಿ ಬೇಕಲ್ಲವೇ? ಆದರೆ ಕದ್ದೊಯ್ಯುವುದೇಕೆ? ಕೇಳಿದ್ದರೆ ನಾನು ಕೊಡುತ್ತಿರಲಿಲ್ಲವೇ" ಎಂದು ಕೊಂಡು ಸುಮ್ಮನಾದ. ಆದರೆ ಮನೆಗೆ ಬಂದು ನೋಡುವಷ್ಟರಲ್ಲಿ ದೇವರ ತಾಯಿ ಚಳಿಯಿಂದ ಸತ್ತು ಹೋಗಿದ್ದಳು. ಆಗ ದೇವರಿಗೆ ಕೋಪ ಬಂದು ಮಾನವರಿಗೆ ಸಾವಿನ ಶಿಕ್ಷೆ ವಿಧಿಸುತ್ತಾನೆ. ಅಂದಿನಿಂದ ಮಾನವರ ಹತ್ತಿರ ಬೆಂಕಿಯಿದ್ದರೂ ಸಹ ಅವರು ಸಾವಿನಿಂದ ತಪ್ಪಿಸಿಕೊಳ್ಳಲಾರರು.

**ಕತ್ತಲೆಯ ಆಗಮನ:**

ಸಿಯೆರಾ ಲಿಯೋನಿನ ಕೋನೋ ಪುರಾಣವು ಇರುಳಿನ ಬಗ್ಗೆ ಹೇಳುವುದೇನೆಂದರೆ ದೇವರು ವಿಶ್ವವನ್ನು ನಿರ್ಮಾಣ ಮಾಡಿದ ಕಾಲದಲ್ಲಿ ರಾತ್ರಿಯ ಕತ್ತಲಾಗಲೀ, ಚಳಿಯಾಗಲೀ ಇರಲಿಲ್ಲ. ದಿನದ ಅರ್ಧಭಾಗದಲ್ಲಿ ಸೂರ್ಯನ ಬಿಸಿಲಿದ್ದರೆ ಉಳಿದರ್ಧದಲ್ಲಿ ಚಂದ್ರನ ಬೆಳಕಿರುತ್ತಿತ್ತು. ನಿಜವಾದ ಕತ್ತಲೆಯೆಂಬುದೇ ಇರಲಿಲ್ಲ. ಒಂದು ದಿನ ದೇವರು ಬಾವಲಿ (ಕಪಟದ ಹಕ್ಕಿ) ಯನ್ನು ಕರೆದು ಒಂದು ಬುಟ್ಟಿಯನ್ನು ಕೊಟ್ಟು ಅದನ್ನು ಚಂದ್ರನಿಗೆ ತಲಪಿಸುವಂತೆ ಹೇಳುತ್ತಾನೆ. ಅದರೊಳಗೇನಿದೆಯೆಂಬುದನ್ನು ಬಾವಲಿಗೆ ಹೇಳದೆ, ಆ ಬಗ್ಗೆ ತಾನೇ ಬಂದು ಚಂದ್ರನಿಗೆ ಹೇಳುವುದಾಗಿ ಹೇಳಿಕಳುಹಿಸಿದನು. ಆದರೆ ಬುಟ್ಟಿಯೊಳಗೆ ಕತ್ತಲೆಯನ್ನು ಹಿಡಿದು ತುಂಬಿದ್ದ. ಸರಿ, ಬುಟ್ಟಿಯನ್ನು ಬೆನ್ನಿನ ಮೇಲೆ ಹೊತ್ತು ಬಾವಲಿ ಹೊರಟಿತು. ಆದರೆ ಮಾರ್ಗಮಧ್ಯೆ ಕೊಂಚವಿಶ್ರಾಂತಿಗಾಗಿ ಬುಟ್ಟಿಯನ್ನಿಳಿಸಿ ಆಹಾರ ಹುಡುಕಲು ಹೊರಟಿತು. ಅದೇ ಸಮಯಕ್ಕೆ ಕೆಲವು ನಾಯಿಗಳು ಬುಟ್ಟಿಯ ಹತ್ತಿರ ಬಂದು, ಅದರೊಳಗೇನೋ ಆಹಾರವಿರಬೇಕೆಂದು ಅದನ್ನು ಉರಿಳಿಸಿ, ಕಚ್ಚಿ ಎಳೆದು, ಬಿಚ್ಚಲು ಪ್ರಯತ್ನಿಸುತ್ತಿದ್ದವು. ಆ ದೃಶ್ಯವನ್ನು ದೂರದಿಂದಲೇ ನೋಡಿದ ಬಾವಲಿ ಓಡಿ ಬಂದು ಬುಟ್ಟಿಯನ್ನು ಮುಚ್ಚಲು ಪ್ರಯತ್ನಿಸಿತು. ಆದರೆ ಅಷ್ಟರೊಳಗಾಗಿ ಕತ್ತಲೆಯು ತಪ್ಪಿಸಿಕೊಂಡು ಹೋಗಿತ್ತು. ಅಂದಿನಿಂದಲೂ ಬಾವಲಿ ಹಗಲೆಲ್ಲಾ ನಿದ್ದೆಮಾಡಿ ಕತ್ತಲಾಗುವ ಸಮಯದಲ್ಲಿ ಕತ್ತಲನ್ನು ಹಿಡಿಯಲು ಎಲ್ಲಾ ಕಡೆಯೂ ಹಾರಾಡುತ್ತದೆ. ಪುನಃ ಕತ್ತಲನ್ನು ಹಿಡಿದು ಬುಟ್ಟಿಗೆ ತುಂಬಿ ಚಂದ್ರನಬಳಿ ಒಯ್ಯಬೇಕೆಂಬ ಉದ್ದೇಶದಿಂದ ರಾತ್ರಿಯೆಲ್ಲಾ ಹಾರಾಡುತ್ತದೆ. ಅಷ್ಟರಲ್ಲಿ ಹಗಲು ಬರುತ್ತದೆ. ಪುನಃ ಹಗಲೆಲ್ಲಾ ನಿದ್ರಿಸಿ, ರಾತ್ರಿ ಕತ್ತಲನ್ನು ಹಿಡಿಯಲು ಹೊರಡುತ್ತದೆ.

## ದೇವರ ನಿರ್ಗಮನ

ದೇವರು ಭೂಮಿಬಿಟ್ಟು ಆಕಾಶ ಲೋಕಕ್ಕೆ ನಿರ್ಗಮಿಸುವ ಘಟನೆಯು ಆಫ್ರಿಕದ ಉದ್ದಗಲಕ್ಕೂ ಹರಡಿರುವ ಪುರಾಣ ಕಥೆಗಳಲ್ಲಿ ಮುಖ್ಯವಾದುದು. ಇದು ಪ್ರಾಚೀನ ಯುಗದಲ್ಲಿ ದೇವರು ಮಾನವರೊಡನೆ ಭೂಮಿಯ ಮೇಲೆಯೇ ವಾಸಮಾಡಿ ಕೊಂಡಿದ್ದಂತಹ ಸುವರ್ಣಯುಗವೊಂದಿತ್ತು ಎಂದು ಪ್ರತಿಪಾದಿಸುತ್ತದೆ. ಮನುಷ್ಯರ ಅತಿಆಸೆ, ದುರ್ವರ್ತನೆಗಳಿಂದಾದ ಅಪಮಾನಗಳನ್ನು ಸಹಿಸಲಾಗದೆ ದೇವರು ಮಾನವರಿಂದ ದೂರ ಸರಿದನೆಂಬ ಅಂಶವು ಆಫ್ರಿಕಾದ್ಯಂತ ಪುರಾಣಸಮ್ಮತ. ಗಿನೀ ಕಡಲಂಚಿನ ರಾಷ್ಟ್ರಗಳಲ್ಲಿ ಅದರಲ್ಲೂ ಐವೊರಿ ಕೋಸ್ಟ್, ಘಾನಾ, ಟೋಗೋ, ಬೆನಿನ್ ರಿಪಬ್ಲಿಕ್, ನೈಜೀರಿಯ, ಕೆಮರೂನ್ ದೇಶಗಳಲ್ಲಿ ದೇವರು ಭೂಮಿಯಿಂದ ನಿರ್ಗಮಿಸಿದ ಕಥನವು ಸರಿಸುಮಾರು ಎಲ್ಲರಲ್ಲೂ ಒಂದೇ ರೀತಿಯಾಗಿದೆ. ಪ್ರಾಚೀನ ಯುಗದಲ್ಲಿ ದೇವರು ಭೂಮಿಯ ಮೇಲೆ ಕೈಗೆಟಕಿಸುವಷ್ಟು ದೂರದಲ್ಲಿ ವಾಸಿಸುತ್ತಿದ್ದನಂತೆ. ಎಲ್ಲರಿಗೂ ಪರಿಚಿತನಾದ ಶಾಂತಚಿತ್ತ ಹಾಗೂ ದಯಾಮೂರ್ತಿಯಾಗಿದ್ದ ಅವನ ಮನೆಯು ಎಷ್ಟು ಹತ್ತಿರವಾಗಿತ್ತೆಂದರೆ ಊಟ ಮಾಡಿದ ಮಕ್ಕಳು ತಮ್ಮ ಕೈ ಜಿಡ್ಡನ್ನು ದೇವರ ಮನೆ ಗೋಡೆಗೆ ಒರಸಿ ಅಂದಗೆಡಿಸುತ್ತಿದ್ದರು. ಹೆಂಗಸರು ಅಡಿಗೆ ಮಾಡುವಾಗ ಏನಾದರೂ ಕೊರತೆ ಕಂಡುಬಂದರೆ ಆಕಾಶದ ಒಂದು ಚೂರನ್ನು ಮುರಿದು ಅಡಿಗೆ ಪಾತ್ರೆಯೊಳಗೆ ಹಾಕುತ್ತಿದ್ದರಂತೆ. ಹೆಂಗಸರು ಜೋಳ ಕುಟ್ಟುವಾಗ ಅಥವಾ ಯಾಮ್ ಹಿಟ್ಟನ್ನು ಕುಟ್ಟುವಾಗ ಅವರ ಒನಕೆಯ ಮೇಲ್ತುದಿಯು ಮೋಡಕ್ಕೆ ತಗಲುತ್ತಿತ್ತಂತೆ. ಅಂದರೆ ದೇವರ ಮನೆಗೆ ಬಡಿಯುತ್ತಿತ್ತು ಎಂದರ್ಥ. ಒಮ್ಮೆ ಹೆಂಗಸೊಬ್ಬಳು ಅತಿ ಉದ್ದವಾದ ಒನಕೆಯಿಂದ ಜೋಳವನ್ನು ಕುಟ್ಟುತ್ತಿದ್ದಾಗ ನೇರವಾಗಿ ಮೇಲೆ ಕುಳಿತಿದ್ದ ದೇವರ ಕಣ್ಣಿಗೆ ಅಕಸ್ಮಾತ್ ಒನಕೆಯ ತುದಿ ತಗಲಿತು. ಅದುವರೆಗೂ ಅನೇಕಸಾರಿ ಒನಕೆಯ ಪ್ರಹಾರಗಳನ್ನು ಸಹಿಸಿಕೊಂಡಿದ್ದ ದೇವರಿಗೆ ಕೋಪಬಂದು, ತನ್ನ ವಾಸದ ಮನೆಯಾದ ಆಕಾಶವನ್ನು ಬಹುದೂರ ಎತ್ತರಕ್ಕೆ ಕೊಂಡೊಯ್ದನಂತೆ. ಇದರಿಂದಾಗಿ ಗಂಡಸರಿಗೆ ಕೋಪಬಂತು. ಆಗ ಆ ಹೆಂಗಸು ತನ್ನ ಮಕ್ಕಳ ಸಹಾಯದಿಂದ ಊರಿನ ಎಲ್ಲರ ಮನೆಯಿಂದಲೂ ಕುಟ್ಟುವ ಒನಕೆ ಮತ್ತು ಮರದ ಕುಂದಣಿಗಳನ್ನು ತರಿಸಿ ಒಂದರ ಮೇಲೊಂದು ಜೋಡಿಸಿದಳು. ಆಕಾಶವನ್ನು ಮುಟ್ಟಲು ಒಂದು ಕುಂದಣಿ ಮಾತ್ರ ಬೇಕಾಗಿತ್ತು. ಆಗ ಆ ಹೆಂಗಸು ಕೆಳಗಿನ ಒಂದು ಕುಂದನಿಯನ್ನು ತೆಗೆದು ಮೇಲಕ್ಕೆ ಒಯ್ದು ಜೋಡಿಸುವಂತೆ ಮಕ್ಕಳಿಗೆ ಹೇಳಿದಳು. ಮಕ್ಕಳು ಪ್ರಯತ್ನ ಪಟ್ಟಾಗ ಕುಂದಣಿಗಳು ಅಲುಗಾಡಿ ಎಲ್ಲವೂ ಡಮ ಡಮ ಶಬ್ದ ಮಾಡುತ್ತಾ ಕೆಳಕ್ಕೆ ಉರುಳಿದುವು. ಅವಳ ಮಕ್ಕಳು ಸತ್ತು ಹೋದರು. ದೇವರಿಗೆ ಹೇಳೋಣವೆಂದರೆ ದೇವರು ಹತ್ತಿರವಿಲ್ಲ. ಈ ರೀತಿ ಸಾವೆಂಬುದು ಭೂಲೋಕಕ್ಕೆ ಕಾಲಿಟ್ಟಿತು.

ಸಿರಾಲಿಯೋನಿನ ಮೆಂಡೆ ಜನರ ಪುರಾಣದ ಪ್ರಕಾರ ದೇವರು ತನ್ನ ಸೃಷ್ಟಿಕಾರ್ಯದಲ್ಲಿ ಎಲ್ಲವನ್ನೂ ಎಂದರೆ ಭೂಮಿ, ಆಕಾಶ, ಬೆಟ್ಟ ಗುಡ್ಡ, ನದಿ, ಮರಗಿಡ,

ಪ್ರಾಣಿಪಕ್ಷಿಗಳು ಎಲ್ಲವನ್ನೂ ನಿರ್ಮಾಣ ಮಾಡಿದನು. ಕೊನೆಯಲ್ಲಿ ಮಾನವ ಪುರುಷ ಸ್ತ್ರೀಯರನ್ನು ತಯಾರಿಸಿ, ತಾನೂ ಸಹ ಅವರ ಪಕ್ಕದಲ್ಲೇ ವಾಸಮಾಡಲು ಪ್ರಾರಂಭಿಸಿದನಂತೆ. ನಿಮಗೆ ಅಗತ್ಯವೆನಿಸಿದ ಮತ್ತೇನಾದರೂ ಬೇಕಿದ್ದರೆ ಕೇಳಿ, ಕೊಡುತ್ತೇನೆಂದು ಆಶ್ವಾಸನೆ ಕೊಟ್ಟನಂತೆ. ಅದೇ ಪ್ರಕಾರ ದಿನವೂ ಒಂದೊಂದು ಪದಾರ್ಥವನ್ನು ಬೇಡುತ್ತಾ ಗಂಡಸರು, ಹೆಂಗಸರು, ಮಕ್ಕಳು ಬರತೊಡಗಿದರು. ದೇವರು ಕೊಡುತ್ತಲೂ ಇದ್ದನು. ಬರುಬರುತ್ತಾ ದೇವರಿಗೆ ಪುರಸತ್ತಿಲ್ಲದಷ್ಟು ಕೆಲಸ ಹೆಚ್ಚಾಯಿತು. ಒಂದರಗಳಿಗೆಯೂ ವಿಶ್ರಾಂತಿ ಇಲ್ಲದಂತಾಯಿತು. ಕಡೆಗೆ ಇವರ ಹಿಂಸೆ ತಾಳಲಾರದೆ, ತಾನೇ ದೂರ ಹೋಗಿ ನೆಲಸಬೇಕೆಂದು ತೀರ್ಮಾನಿಸಿಕೊಂಡನು. ಜನರೆಲ್ಲರೂ ಮಲಗಿ ನಿದ್ರಿಸುತ್ತಿರುವಾಗ ತನ್ನ ಮನೆಯನ್ನು ಅತಿದೂರ ಎತ್ತರಕ್ಕೆ ಒಯ್ದು ಆಕಾಶದ ಮೇಲೆ ಇರಿಸಿಕೊಂಡನು. ಬೆಳಗಾದ ಮೇಲೆ ಜನರು ಎದ್ದು ನೋಡುವಾಗ ದೇವರೂ, ದೇವರ ಮನೆಯೂ ಇರಲಿಲ್ಲ. ಎಲ್ಲಿ ಹೋಯಿತೆಂದು ಮೇಲಕ್ಕೆ ನೋಡುವಾಗ, ದೇವರು ಆಕಾಶದಲ್ಲಿ ವಿಶಾಲವಾಗಿ ಹರಡಿಕೊಂಡಿರುವುದು ಕಾಣಿಸಿತು. ಆಗ ಜನರು, "ಓ ದೇವರೇ ನೀನು ಅತಿ ದೊಡ್ಡವನು, ನಿನಗೆ ನಮ್ಮ ಪ್ರಣಾಮಗಳು" ಎಂದು ಹೇಳಿದರಂತೆ. ಆಗ ದೇವರು ಇವರನ್ನು ಬೀಳ್ಕೊಡುತ್ತಾ ಕೆಲವು ಹಿತವಚನಗಳನ್ನು ಹೇಳಿದನು. "ನೀವು ಕೆಟ್ಟ ಕೆಲಸಗಳನ್ನು ಮಾಡಬಾರದು. ಒಳ್ಳೆಯವರಾಗಿ ಬಾಳಬೇಕೆಂದು ನಿಮ್ಮನ್ನು ಸೃಷ್ಟಿಸಿದ್ದೇನೆ" ಎಂದು ಹೇಳುತ್ತಾ ಪ್ರತಿಯೊಬ್ಬರಿಗೂ ಒಂದೊಂದು ಕೋಳಿಯನ್ನು ಕೊಟ್ಟನು. "ನೀವು ಪರಸ್ಪರರಿಗೆ ತಪ್ಪು ಮಾಡಿದಾಗ ಅಥವಾ ದೇವರಿಗೆ ತಪ್ಪು ಮಾಡಿದ್ದೇನೆಂದು ಅನಿಸಿದಾಗ ಅದರ ನಿವಾರಣೆಗಾಗಿ ಒಂದು ಕೋಳಿಯನ್ನು ನನಗೆ ಅರ್ಪಿಸಿರಿ" ಎಂದು ಹೇಳಿದನಂತೆ. ಅದೇ ಪ್ರಕಾರ ಜನರು ಈಗಲೂ ನಡೆದುಕೊಳ್ಳುತ್ತಿದ್ದಾರೆ.

ಸಾವಿರಾರು ಮೈಲಿ ದೂರವಿರುವ ಪೂರ್ವಾರ್ಧ ಆಫ್ರಿಕದ ಜನಾಂಗಗಳಲ್ಲೂ ಈ ಕಥೆಯು ಸರಿಸುಮಾರು ಒಂದೇ ರೀತಿ ಇರುವುದು ಆಶ್ಚರ್ಯವೇ ಸರಿ. ಉತ್ತರ ಸುಡಾನಿನ ನೂಬಾ ಜನರು ಹೇಳುವ ಕಥೆಗಳಲ್ಲಿ ಆಕಾಶವು ಪ್ರಾರಂಭದಲ್ಲಿ ಭೂಮಿಗೆ ಬಹಳ ಹತ್ತಿರವಿತ್ತಂತೆ. ಎಷ್ಟು ಹತ್ತಿರವೆಂದರೆ ಮನುಷ್ಯನ ಕೈಗೆ ನಿಲುಕುವಷ್ಟು. ಕೆಲವು ಕಡೆ ಹೆಂಗಸರು ನಿಂತು ಅಡಿಗೆ ಮಾಡಲು ಆಗುತ್ತಿರಲಿಲ್ಲವಂತೆ. ಸೌಟಾಡುವಾಗ ಕೈಸುಟ್ಟು ಕೊಳ್ಳುತ್ತಿದ್ದರು. ಇದರಿಂದ ಕೋಪಗೊಂಡ ಹೆಂಗಸರು ಆ ಆಕಾಶ ಮೇಲಕ್ಕೆ ಹೋಗಬಾರದೇ ಎಂದು ಹೇಳುತ್ತಾ ಅಡಿಗೆ ಮಾಡುತ್ತಿದ್ದ ಸೌಟಿನಿಂದ ಚುಚ್ಚುತ್ತಿದ್ದರಂತೆ. ಈ ಅವಮಾನವನ್ನು ಸಹಿಸಲಾರದೆ ಆಕಾಶವು ದೂರ ಸರಿದು ಮೇಲಕ್ಕೆ ಹೊರಟು ಹೋಯಿತೆಂದು ಹೇಳುತ್ತಾರೆ. ಪೂರ್ವ ಸೂಡಾನಿನ ಡಿಂಕಾ ಜನರೂ ಸಹ ಅದೇ ರೀತಿ ಹೇಳುತ್ತಾರೆ. ಆಕಾಶವು ಭೂಮಿಗೆ ಎಷ್ಟು ಹತ್ತಿರವಾಗಿತ್ತೆಂದರೆ ಗಂಡಸರು ವ್ಯವಸಾಯಕ್ಕಾಗಿ ಮಣ್ಣನ್ನು ಕೆತ್ತಲಾಗುತ್ತಿರಲಿಲ್ಲ ಮತ್ತು ಹೆಂಗಸರು ಧಾನ್ಯವನ್ನು ಕುಟ್ಟಲಾಗುತ್ತಿರಲಿಲ್ಲ ಎಂದು.

ಝಾಂಬಿಯ, ಅಂಗೋಲ, ಬೋಟ್‌ಸ್ವಾನಾ, ನಾಮಿಬ್ ಇತ್ಯಾದಿ ಪಂಗಡದವರು ತಮ್ಮ ದೇವರಾದ **ಮುಲುಂಗು** ಮೊದಲು ಭೂಮಿಯ ಮೇಲೆ ಮನುಷ್ಯರಿಗೆ ಹತ್ತಿರದಲ್ಲೇ ವಾಸಿಸುತ್ತಿದ್ದನೆಂದೂ, ಅವರೊಡನೆ ಮಾತನಾಡುತ್ತಿದ್ದನೆಂದೂ ಹೇಳುತ್ತಾರೆ. ಆದರೆ ಮನುಷ್ಯರು ಕಾಡಿಗೆ ಬೆಂಕಿಹಚ್ಚುವುದು, ದೇವರು ಸೃಷ್ಟಿಸಿದ ಕಾಡುಪ್ರಾಣಿಗಳನ್ನೂ ಮನುಷ್ಯರನ್ನೂ ಕೊಲ್ಲುವುದು ಇತ್ಯಾದಿ ದುಷ್ಕೃತ್ಯಗಳನ್ನು ಎಸಗಿದ್ದರಿಂದ ದೇವರು ಬಹುದೂರ ಮೇಲೆ ಹೊರಟು ಹೋದನೆಂದೂ, ಅದಕ್ಕಾಗಿ ಜೇಡರ ಹುಳುವು ಹಗ್ಗವನ್ನು ತಯಾರಿಸಿಕೊಟ್ಟಿತೆಂದೂ ಹೇಳುತ್ತಾರೆ. ಈ ಹಗ್ಗದ ಸಹಾಯದಿಂದ ದೇವರು ಮತ್ತು ಅವನ ಕುಟುಂಬದವರು ಮೇಲೆ ಹತ್ತಿಹೋದವರು, ಅಂದಿನಿಂದಲೂ ಅಲ್ಲೇ ಇದ್ದಾರೆಂದು ಹೇಳುತ್ತಾರೆ. ಬೆಳಗ್ಗೆ ಸೂರ್ಯಉದಯಿಸುವ ವೇಳೆ ಆಕಾಶ ಕಾಣುತ್ತದೆ. ಆಗ ಅಲ್ಲಿರುವ ದೇವರಿಗೆ ವಂದಿಸುತ್ತೇವೆ. ಚಂದ್ರ ಉದಯಿಸಿದಾಗ ಕಾಣಬರುವ ಆಕಾಶಕ್ಕೆ ದೇವರ ಹೆಂಡತಿಗಾಗಿ ವಂದಿಸುತ್ತೇವೆಂದು ಹೇಳುತ್ತಾರೆ ಝಾಂಬೆಸಿ ಪ್ರದೇಶದ ಲೋಜಿ ಜನರು.

**ಹುಟ್ಟಿನ ರಹಸ್ಯ:**

"ಮಕ್ಕಳು ಹೇಗೆ ಹುಟ್ಟುತ್ತವೆ?" ಅಥವಾ "ನಾನು ಎಲ್ಲಿಂದ ಬಂದೆ?" ಎಂಬ ಪ್ರಶ್ನೆಯನ್ನು ಎಳೆಯ ಮಗವೊಂದು ಕೇಳಿದಾಗ, ಉತ್ತರ ಹೇಳಲು ತಾಯಿಯು ಪೇಚಿಗೆ ಸಿಕ್ಕಿಬೀಳುತ್ತಾಳೆ. ಇದು ಎಲ್ಲಾ ನಾಗರೀಕ ಸಮಾಜಗಳಲ್ಲಿ ತಂದೆ ತಾಯಿಗಳು ಒಂದುಗಳಿಗೆ ಎದುರಿಸಬೇಕಾದಂತಹ ಮುಜಗರದ ಸನ್ನಿವೇಶ. "ಬೆಡ್ ಟೈಂ ಕಥೆ" ಹೇಳುವ ರೂಢಿಯಿರುವವರಿಗಂತೂ ಇದು ಕಡ್ಡಾಯ. ಹೇಗೆ ಉತ್ತರ ಹೇಳುವುದು? ನಾಚಿಕೆಯಿಲ್ಲದೆ ಹೇಳುವ ಬಗೆಯಾದರೂ ಯಾವುದು? ಇಂತಹ ಪೇಚಿಗೆ ಸಿಕ್ಕಿದ ತಾಯಂದಿರು ಒಂದು ಕಾಕಮ್ಮನ ಕಥೆ ಕಟ್ಟಲೇಬೇಕು. ಯುರೋಪಿಯನ್ ಸಮಾಜಗಳಲ್ಲಿ ಮಧ್ಯಯುಗದ ಕಾಲದಿಂದಲೂ ಪ್ರಚಲಿತವಿರುವ ಒಂದು ಕಥೆಯೆಂದರೆ "ನಿನ್ನನ್ನು ಒಂದು ಕೊಕ್ಕರೆಯು ಆಕಾಶದಿಂದ ನಮಗೆ ತಂದುಕೊಟ್ಟಿತು. ನೀನು ಮಲಗಿದ್ದ ಬಟ್ಟೆಯ ನೇನೆಯನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಮೋಡಗಳ ಮಧ್ಯದಿಂದ ಹಾರಿ ಬಂದು ನಮಗೆ ಕೊಟ್ಟಿತು. ನಾವು ನಿನಗೆ ಹಾಲು ಕುಡಿಸಿ, ಬೆಚ್ಚಗೆ ಹೊದ್ದಿಸಿ ಮಲಗಿಸುತ್ತೇವೆ"– ಎಂದು ಹೇಳುವಷ್ಟರಲ್ಲಿ ನಿದ್ದೆ ಬಂತೋ ಸರಿ. ಇಲ್ಲವಾದರೆ ಮತ್ತೊಂದು ಪ್ರಶ್ನೆ. "ಹಾಗಾದರೆ ಪಕ್ಕದ ಮನೆಯ ಮಗು ಹೇಗೆ ಬಂತು?" "ಅದು ಹಾಗೆಯೇ, ಎಲ್ಲಾ ಮಕ್ಕಳನ್ನೂ ಕೊಕ್ಕರೆ ತಂದು ಕೊಡುತ್ತದೆ. ಈ ಮಗು ನಮಗೆ ಬೇಕು ಎಂದು ನಾವು ಕೇಳಿ ಪಡೆದುಕೊಳ್ಳುತ್ತೇವೆ" ಎಂದು ಹೇಳುತ್ತಾ, ಒಂದು ಕಥೆಗೆ ಮತ್ತೊಂದು ಕಥೆ ಜೋಡಿಸುತ್ತಾ ಹೋಗುತ್ತಾರೆ.

ತಮ್ಮನೋ, ತಂಗಿಯೋ ಆಸ್ಪತ್ರೆಯಲ್ಲಿ ಹುಟ್ಟಿರುವುದನ್ನು ಕಂಡ ಮಗುವಿಗೆ "ಈ ಮಗು ಎಲ್ಲಿಂದ ಬಂತು?" ಎಂದು ನೀವು ಕೇಳುವಷ್ಟರಲ್ಲಿ "ಆಸ್ಪತ್ರೆಯಿಂದ" ಎಂಬ ರೆಡಿ ಉತ್ತರ ಬರುತ್ತದೆ. ಬುದ್ಧಿ ತಿಳಿಯುತ್ತಿರುವ ಮಗು, ತಾಯಿಯ ಪಕ್ಕದಲ್ಲಿ ಮಲಗಿದ್ದ

ಮಗುವನ್ನು ಕಂಡು "ಈ ಮಗು ಆಂಟಿಯ ಹೊಟ್ಟೆಯಿಂದ ಬಂದದಲ್ಲವೇ? ಎಂದು ಅಮ್ಮನಿಗೆ ಎಲ್ಲರೆದುರಿಗೆ ಕೇಳಿಬಿಟ್ಟಾಗ, ತಾಯಿಯು "ಹುಷ್! ಹಾಗೆಲ್ಲಾ ಕೇಳಬಾರದು" ಎಂದು ಗದರಿಸುವ ಸನ್ನಿವೇಶಗಳೂ ಉಂಟು. ಹೀಗೆ ಹುಟ್ಟಿನ ರಹಸ್ಯದ ಗಂಟು ನಿಧಾನವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಆಫ್ರಿಕ ಸಮಾಜಗಳಲ್ಲಿ ಈ ಸಮಸ್ಯೆಯನ್ನು ಹೇಗೆ ಬಗೆ ಹರಿಸಿಕೊಳ್ಳುತ್ತಾರೆ ನೋಡೋಣ:

(1) ಆಶಂತಿ ಜನರ ಪ್ರಕಾರ, ಬಹಳ ಹಿಂದೆ, ಒಬ್ಬ ಪುರುಷ ಮತ್ತು ಸ್ತ್ರೀಯು ದೇವಲೋಕದಿಂದ ಇಳಿದು ಬರುತ್ತಾರೆ. ಅವರ ಜೊತೆಗೆ ದೇವರು ಒಂದು ಹೆಬ್ಬಾವನ್ನು ಸಹ ಕಳುಹಿಸುತ್ತಾನೆ. ವಿಷ ಜಂತುವಲ್ಲದ ಈ ಹಾವು ನದಿಯಲ್ಲಿ ಮನೆ ಮಾಡಿಕೊಳ್ಳುತ್ತದೆ. ಪ್ರಾರಂಭದಲ್ಲಿ ಈ ಗಂಡು ಹೆಣ್ಣು ಜೋಡಿಗೆ ಮಕ್ಕಳಿರಲಿಲ್ಲ. ಅವರಿಗೆ ಸಂತಾನೋತ್ಪತ್ತಿಯ ವಿಧಾನವೂ ತಿಳಿದಿರಲಿಲ್ಲ. ಅಷ್ಟೇಕೆ, ಅವರಿಬ್ಬರ ನಡುವೆ ಪರಸ್ಪರ ಆಕರ್ಷಣೆಯೂ ಇರಲಿಲ್ಲ. ಅದರ ಅರಿವು ಮೂಡಿಸಿದ್ದು ಈ ಹಾವು. ಒಂದು ದಿನ ಈ ಹೆಬ್ಬಾವು ಹತ್ತಿರಬಂದು ನಿಮಗೆ ಮಕ್ಕಳಿಲ್ಲವೇ ಎಂದು ಕೇಳಿತು. ಅವರಿಗೆ ಮಕ್ಕಳಾಗಿಲ್ಲವೆಂಬ ವಿಷಯ ತಿಳಿದು, ತಾನು ಸಹಾಯ ಮಾಡುವುದಾಗಿ ತಿಳಿಸಿತು. ಇವರಿಬ್ಬರೂ ಎದುರು ಬದರಾಗಿ ನಿಲ್ಲುವಂತೆ ಹೇಳಿ, ತಾನು ನದಿಗೆ ಹೋಗಿ ಬಾಯಿ ತುಂಬ ನೀರು ತುಂಬಿಕೊಂಡು ಬಂದು "ಕಸ್ ಕಸ್"ಎಂಬ ಮಂತ್ರವನ್ನು ಹೇಳುತ್ತಾ ನೀರನ್ನು ಅವರ ಹೊಟ್ಟೆಯ ಮೇಲೆ ಚಿಮುಕಿಸಿತು. (ಈ ಮಂತ್ರವನ್ನು ಈಗಲೂ ಸಾಮಾಜಿಕ ವಿಧಿಗಳಲ್ಲಿ ಉಪಯೋಗಿಸುತ್ತಾರೆ.) ಅನಂತರ ಅವರುಗಳು ಮನೆಗೆ ಹೋಗಿ ಜೊತೆಯಲ್ಲಿ ಮಲಗುವಂತೆ ಹೇಳುತ್ತದೆ. ಕೆಲವೇ ದಿನಗಳಲ್ಲಿ ಆ ಹೆಂಗಸು ಗರ್ಭವತಿಯಾಗಿ ಒಂದು ಮಗುವಿಗೆ ಜನ್ಮವಿತ್ತಳು. ಅನಂತರ ಇನ್ನೂ ಕೆಲವು ಮಕ್ಕಳಾದುವು. ಅವರ ವಂಶಸ್ಥರು ನದೀ ದೇವರಾದ ಹೆಬ್ಬಾವನ್ನು ತಮ್ಮ ಕುಲದೇವತೆಯಾಗಿ ಸ್ವೀಕರಿಸಿದರು. ಈ ಕುಲದ ಸದಸ್ಯರು ಈಗಲೂ ಹೆಬ್ಬಾವನ್ನು ಕಂಡರೆ ಕೊಲ್ಲುವುದಿಲ್ಲ. ಒಂದು ವೇಳೆ ಯಾರಾದರೂ ಕೊಂದರೆ ಅಥವಾ ಸತ್ತ ಹಾವನ್ನು ಕಂಡರೆ ಅದರ ಶವದ ಮೇಲೆ ಬಿಳಿ ಜೇಡಿಯನ್ನು ಉದುರಿಸಿ, ಮನುಷ್ಯರಿಗೆ ಮಾಡುವಂತೆಯೇ ಶವ ಸಂಸ್ಕಾರ ಮಾಡುತ್ತಾರೆ. ಹಾವಿನ ಸಂಕೇತದ ಈ ಪುರಾಣ ಕಥೆಯು ಬಹುಷಃ ಜೆನೆಸಿಸ್ ಗ್ರಂಥದಿಂದ ಬಂದಿರಬಹುದೆಂದು ಹೇಳುವುದೂ ಇದೆ.

(2) ಪಿಗ್ಮಿ ಜನರ ಪುರಾಣದಲ್ಲಿ ಬರುವ ಒಂದು ಕಥೆಯು ಈ ರೀತಿಯಾಗಿದೆ: ಬಹಳ ಕಾಲದ ಹಿಂದೆ ಒಬ್ಬ ಹೆಂಗಸು ಮಿಂಚಿನೊಡನೆ, ಅಣ್ಣ-ತಂಗಿಯರಂತೆ ವಾಸಮಾಡಿಕೊಂಡಿರುತ್ತಾಳೆ. ಅವರಿಗೆ ಸಂತಾನೋತ್ಪತ್ತಿ ಕ್ರಿಯೆಯು ತಿಳಿದಿರಲಿಲ್ಲ. ಒಂದು ದಿನ ಚಂದ್ರನು ಮಿಂಚನ್ನೂ ನೋಡಲು ಬರುತ್ತಾನೆ. ಇವರಿಬ್ಬರೂ

ಮಕ್ಕಳಿಲ್ಲದೆ ವಾಸಿಸುತ್ತಿರುವುದನ್ನು ಕಂಡು, ಮದುವೆಯಾಗುವಂತೆ ಸೂಚಿಸುತ್ತಾನೆ. ಮೊದಲು ಮಿಂಚು ಅದಕ್ಕೆ ಒಪ್ಪಲಿಲ್ಲ. ಆಗ ಚಂದ್ರನು, ಆ ಹೆಂಗಸು ತಿಂಗಳಿಗೊಮ್ಮೆ ಪುಷ್ಪವತಿಯಾಗುವಂತೆ ಮಾಡುತ್ತಾನೆ. ಹೇಗೆ ಮುಂದುವರಿಯಬೇಕೆಂದು ಚಂದ್ರನು ತೋರಿಸುತ್ತಾನೆ. ಅನಂತರ ಮಿಂಚಿಗೆ ಧೈರ್ಯ ಬಂದು ಅಂತೆಯೇ ತಾನೂ ಮಾಡುತ್ತಾನೆ. ಹುಟ್ಟಿದ ಮೊದಲ ಮಗು ಮಿಂಚಿನಂತೆಯೇ ಹೊಳೆಯುತ್ತಾ ಬೆಳ್ಳಗಿರುತ್ತದೆ. ಅನಂತರ ಹುಟ್ಟಿದ ಮಕ್ಕಳೆಲ್ಲರೂ ಕಪ್ಪಗಿರುತ್ತಾರೆ. ಕಾಲಾಂತರದಲ್ಲಿ ಆ ಹೆಂಗಸು ಸತ್ತಾಗ, ಚಂದ್ರನು ಬಂದು ಅವಳನ್ನು ಕರೆದುಕೊಂಡು ಹೋಗುತ್ತಾನೆ.

(3) ಮಲಗಸೀ ಪುರಾಣದ ಪ್ರಕಾರ ಒಂದು ದಿನ ಒಬ್ಬ ಬೆಸ್ತರವನು ಮೀನು ಹಿಡಿಯಲು ನದಿಯೊಳಗೆ ಗಾಳ ಬಿಟ್ಟಿರುತ್ತಾನೆ. ಕೂಡಲೇ ಗಾಳವು ಬಿಗಿಯಾಗಿ ಸೆಳೆಯುವುದು ಗೊತ್ತಾಯಿತು. ಅದೊಂದು ದೊಡ್ಡ ಮೀನೆಂದು ತಿಳಿದು, ನಿಧಾನವಾಗಿ, ಎಚ್ಚರಿಕೆಯಿಂದ ಗಾಳವನ್ನು ಎಳೆಯುತ್ತಿದ್ದಂತೆ ನೀರಿನೊಳಗಿಂದ ಒಬ್ಬ ಹೆಂಗಸು ಬರುತ್ತಿರುವುದನ್ನು ಕಂಡು ಗಾಬರಿಯಿಂದ, ಗಾಳವನ್ನು ಬಿಟ್ಟು ಓಡತೊಡಗಿದ. ಓಡುತ್ತಿದ್ದ ಅವನನ್ನು ಆ ಹೆಂಗಸು ಕೂಗಿ ಕರೆಯುತ್ತಾಳೆ. "ಹೆದರಬೇಡ, ನಾನು ನಿನ್ನನ್ನು ಮದುವೆಯಾಗುತ್ತೇನೆ. ಆದರೆ ಒಂದು ಷರತ್ತು. ಅದೇನೆಂದರೆ ನಾನು ಬೆತ್ತಲೆಯಿದ್ದಾಗ ನೀನು ನನ್ನನ್ನು ನೋಡಕೂಡದು" ಎಂದು ಹೇಳುತ್ತಾಳೆ. ಅವನು ಅದಕ್ಕೆ ಒಪ್ಪಿ ಮದುವೆಯಾಗುತ್ತಾನೆ. ಎರಡು ಮಕ್ಕಳೂ ಆಗುತ್ತವೆ. ಹೀಗೇ ಇದ್ದಾಗ ಒಂದು ದಿನ ಅವಳು ಬಟ್ಟೆ ಬದಲಿಸುವಾಗ ಅವಳ ಬೆತ್ತಲೆ ಶರೀರವನ್ನು ಕಂಡ. ಅದು ಅವಳಿಗೆ ಗೊತ್ತಾಯಿತು. ಮಾರನೇ ದಿನ ಎಲ್ಲರೂ ನದಿಗೆ ಸ್ನಾನಕ್ಕಾಗಿ ಹೋಗುತ್ತಾರೆ. ಗಂಡ ಮಕ್ಕಳನ್ನು ದಡದ ಮೇಲೆ ನಿಲ್ಲಿಸಿ, ತಾನು ನೀರಿನೊಳಗೆ ಇಳಿಯುತ್ತಾ "ನೀನು ನಿನ್ನ ವಾಗ್ದಾನವನ್ನು ಮುರಿದಿರುವ ಕಾರಣ, ನಾನು ಹೋಗುತ್ತಿದ್ದೇನೆ" ಎಂದು ಹೇಳಿ ನೀರಿನೊಳಗೆ ಮುಳುಗಿ ಮಾಯವಾಗುತ್ತಾಳೆ. ಅಂದಿನಿಂದ ಹೆಂಗಸು ಬೆತ್ತಲೆಯಿರುವಾಗ ಗಂಡಸು ನೋಡಕೂಡದೆಂಬ ಕಟ್ಟಳೆ ಬೆಸ್ತ ಸಮಾಜದಲ್ಲಿ ನಡೆದುಕೊಂಡು ಬಂದಿದೆಯಂತೆ. ಬೆಸ್ತರ ಕುಲಕ್ಕೆ ಅವಳೇ ಮೊದಲ ದೇವತೆಯಾದಳು.

(4) ಪಶ್ಚಿಮ ಆಫ್ರಿಕದ ನೀಗ್ರೋ ಸಮಾಜದಲ್ಲಿ ಅವಳಿ ಮಕ್ಕಳು ಹುಟ್ಟುವುದು ಸಾಮಾನ್ಯ ಸಂಗತಿ. ಅವಳಿ ಮಕ್ಕಳು ಹುಟ್ಟಿದಾಗ ಕೆಲವು ಸಮಾಜದವರು ಸಂತೋಷದಿಂದ ಬರಮಾಡಿಕೊಂಡರೆ ಮತ್ತೆ ಕೆಲವು ಸಮಾಜದವರು ಭೀತಿ ಮತ್ತು ಅಸಡ್ಡೆಯಿಂದ ನೋಡುವುದುಂಟು. ಉದಾಹರಣೆಗೆ ಪೂರ್ವ ನೈಜೀರಿಯ ಮತ್ತು ಕೆಮೆರೂನಿನ **ಇಜಾವ್** ಮತ್ತು **ಇಕೊಯಿ** ಜನಾಂಗದವರು ಅದು ಕುಲಕ್ಕೆ ಬರುವ ಕಂಟಕದ ಶಕುನ ವೆಂದಣಿಸಿ, ಅವುಗಳನ್ನು ಮಡಕೆಗಳಲ್ಲಿಟ್ಟು ಕಾಡಿನಲ್ಲಿ ಬಿಟ್ಟು ಬರುತ್ತಿದ್ದರಂತೆ. ಅದೇ ಪಶ್ಚಿಮ ನೈಜೀರಿಯಾ ಮತ್ತು ದಹೋಮೆ ಸಮಾಜಗಳಲ್ಲಿ ಅದು ದೇವರು ಕೊಟ್ಟವರ ಎಂದು ಸಂತೋಷದಿಂದ ಬರಮಾಡಿಕೊಳ್ಳುತ್ತಾರಂತೆ. ಹುಟ್ಟಿದ ಮಕ್ಕಳಲ್ಲಿ

ಒಂದು ಗಂಡು ಒಂದು ಹೆಣ್ಣಾದರಂತೂ ಬಹಳ ಸಂತೋಷ ಪಡುತ್ತಾರೆ. ಕಾರಣ, ದೇವಲೋಕದಿಂದ ಬಂದ ಪ್ರಥಮ ಮಾನವರು ಗಂಡು ಹೆಣ್ಣಿನ ಒಂದು ಜೋಡಿ. ಯೊರುಬಾ ಜನರಲ್ಲಿ ಅವಳಿ ಮಕ್ಕಳು ಒಂದು ವೇಳೆ ಸತ್ತು ಹೋದರೆ, ತಾಯಿಯು ಅವಳಿ ಮಕ್ಕಳ ವಿಗ್ರಹಗಳನ್ನು ಮರದಲ್ಲಿ ಮಾಡಿಸಿ, ಅವಕ್ಕೆ ಜೋಡಿ ಮಡಕೆಯಲ್ಲಿ ಆಹಾರವನ್ನಿಟ್ಟು, ಧಾರ್ಮಿಕ ವಿಧಿಗಳನ್ನು ನಡೆಸಿದ ನಂತರ, ವಿಗ್ರಹಗಳನ್ನು ತಾಯಿಯಾದವಳು ಸೊಂಟದಲ್ಲಿ ಸಿಕ್ಕಿಸಿಕೊಂಡು ಓಡಾಡುತ್ತಾಳೆ. (ಈಗ ಮರದ ಅವಳಿ ವಿಗ್ರಹಗಳನ್ನು ಪ್ರವಾಸಿಗರಿಗಾಗಿ ತಯಾರಿಸಿ ಮಾರುವುದುಂಟು). ಮರದ ಗೊಂಬೆಗಳೇ ಆ ಮಕ್ಕಳ ಆತ್ಮದ ಶಾಶ್ವತಗೃಹವೆಂದು ಭಾವಿಸಿ, ಅವುಗಳನ್ನು ಜೋಪಾನವಾಗಿ ಕಾದಿರಿಸಿ, "ಅವಳೀ ಮಕ್ಕಳ ವಾರ್ಷಿಕೋತ್ಸವ" ದಲ್ಲಿ ಅವು ಭಾಗವಹಿಸುವಂತೆ ಮಾಡುತ್ತಾಳೆ.

ಬುಗಾಂಡದಲ್ಲಿ ಅವಳಿ ಮಕ್ಕಳನ್ನು ಮುಕಾಸಾ ದೇವರೇ ಕಳುಹಿಸಿದ ಮಕ್ಕಳೆಂದು ಪರಿಗಣಿಸುತ್ತಾರೆ. ವೈದ್ಯ-ಪೂಜಾರಿಯು ಅವುಗಳಿಗೆ ಆಯುರಾರೋಗ್ಯ ಅಭಿವೃದ್ಧಿಗಳನ್ನು ಕೊಡುವಂತೆ ಪೂಜಾ ವಿಧಿಗಳನ್ನು ನಡೆಸುತ್ತಾನೆ. ಆದರೆ ಮೊಸಾಂಬೀಕಿನ ತೊಂಗಾ ಸಮಾಜದವರು "ಆಕಾಶದ ಮಕ್ಕಳಾದ" ಅವಳಿಗಳು ಕೆಡಕನ್ನು ತರುತ್ತವೆಂದು ಭಾವಿಸಿ, ಅನೇಕ ಶುದ್ಧೀಕರಣದ ಸಂಸ್ಕಾರಗಳನ್ನು ನಡೆಸುತ್ತಾರೆ. ಅಂತಹ ತಾಯಿಯು ತನ್ನ ಅವಳಿ ಮಕ್ಕಳೊಡನೆ ಊರ ಹೊರಗೆ, ಅವರಿಗಾಗಿ ಕಟ್ಟಿದ ಒಂದು ಗುಡಿಸಲಲ್ಲಿ ಕೆಲವು ಕಾಲ ವಾಸಮಾಡಬೇಕು. ಆದರೆ ಊರಿಗೆ ಅಪಾಯಕಾರೀ ಬಿರುಗಾಳಿ, ಮಳೆ, ಸಿಡಿಲು ಮಿಂಚುಗಳು ಎರಗಿದಾಗ, ಈ ಮಕ್ಕಳು ಗುಡಿಸಲಿಂದ ಹೊರಬಂದು, ಆಕಾಶದ ಕಡೆಗೆ ಕೈಮಾಡಿ, "ಓ, ಸಿಡಿಲು-ಮಿಂಚು ದೇವರುಗಳೇ ದೂರಹೋಗಿರಿ, ಇಲ್ಲಿನ ಜನರು ನಿಮ್ಮಿಂದ ಭಯ ಪಡುತ್ತಾರೆ" ಎಂದು ಕೂಗಿ ಹೇಳಬೇಕೆಂದು ಊರ ಯಜಮಾನರು ಆ ಮಕ್ಕಳಿಗೆ ಹೇಳುತ್ತಾರೆ. ಆಕಾಶವು ತನ್ನ ಮಕ್ಕಳ ಮಾತನ್ನು ನಡೆಸಿ ಕೊಡುತ್ತದೆಂಬ ನಂಬಿಕೆ ಇದರಲ್ಲಡಗಿದೆ. ಒಂದು ವೇಳೆ ಅವಳಿಗಳು ಬದುಕಿಲ್ಲದಿದ್ದರೆ ಅವರ ತಾಯಿಗೆ ಇದೇ ಶಕ್ತಿಯಿರುತ್ತದೆಯಂತೆ, ಏಕೆಂದರೆ ಈ ಮಕ್ಕಳನ್ನು ಪಡೆಯಲು ಅವಳು ಆಕಾಶಕ್ಕೆ ಹೋಗಿದ್ದಳೆಂದೂ, ಅವಳ ಮಾತನ್ನು ಮಕ್ಕಳ ತಂದೆಯಾದ ಆಕಾಶವು ಕೇಳುತ್ತದೆಂದೂ ಅವರ ನಂಬಿಕೆ.

## ಸಾವಿನ ಆಗಮನ

ಹಿಂದೂ ಮಠದ ಸ್ವಾಮಿಗಳು, ಸನ್ಯಾಸಿಗಳು ದೇಹತ್ಯಾಗ ಮಾಡಿದಾಗ ಅವರಿಗೆ ಗದ್ದುಗೆ ಅಥವಾ ವೃಂದಾವನಗಳನ್ನು ಕಟ್ಟಿ, ಪುಷ್ಪಗಳಿಂದ ಅಲಂಕರಿಸಿ, ಧೂಪ ದೀಪಗಳನ್ನು ಹಚ್ಚಿ, ಅವರು ದೇವರೆಂದೇ ಭಾವಿಸಿ ಪೂಜೆ ಸಲ್ಲಿಸುತ್ತಾರೆ. ಇಂತಹ ಅನೇಕ ಗದ್ದುಗೆ ವೃಂದಾವನಗಳಿಗೆ ಸಾವಿರಾರು ಮಂದಿ ತೀರ್ಥಯಾತ್ರೆ ಕೈಗೊಳ್ಳುತ್ತಾರೆ. ಮುಸ್ಲಿಮರ ಸೂಫೀ ಸಂತರ ದರ್ಗಾಗಳನ್ನೂ ಇದೇ ದೃಷ್ಟಿಯಲ್ಲಿ ನೋಡುವುದುಂಟು. ಅವರುಗಳು

ಪವಾಡ ಪುರುಷರೆಂದು ಭಾವಿಸಿ, ನಿತ್ಯಪೂಜೆ ಮತ್ತು ವರ್ಷಕ್ಕೊಮ್ಮೆ ಜಾತ್ರೆ ನಡೆಸುವುದುಂಟು.

ಪುರಾತನ ಈಜಿಪ್ಷಿಯನ್ ಧರ್ಮದಲ್ಲಿ ಸಾವಿಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದರು. ರಾಜರುಗಳು ಪಿರಮಿಡ್ ಇಲ್ಲವೇ ದೇವಾಲಯಗಳನ್ನು ಕಟ್ಟುವಷ್ಟು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಪುರಾತನ ಮಾಯಾ, ಇಂಕಾ, ಆಜ್ಟೆಕ್ ಜನರ ನಾಗರೀಕತೆಯಲ್ಲೂ ಸತ್ತ ರಾಜನಿಗೆ ಭವ್ಯವಾದ ಸಮಾಧಿ ಅಥವಾ ದೇಗುಲವನ್ನು ಕಟ್ಟುತ್ತಿದ್ದರು. ಸಾವಿರಾರು ವರ್ಷಗಳ ಹಿಂದೆ ಕಟ್ಟಿದ ಕಟ್ಟಡ, ಅವಶೇಷಗಳು ಈಗಲೂ ಉಳಿದಿವೆ.

ಪುರಾತನ ನೀಗ್ರೋ ಸಮಾಜಗಳಲ್ಲಿ "ಸಾವು ಅಸ್ವಾಭಾವಿಕ. ಪ್ರಾರಂಭದಲ್ಲಿ ಅದು ಇದ್ದಿರಲಿಲ್ಲ. ಯಾರೋ ಎಸಗಿದ ಅಚಾತುರ್ಯದಿಂದ, ಅಂದರೆ ನಾಯಿ, ಬಾವಲಿ, ಮೊಲ, ಗೋಸುಂಬೆ ಇತ್ಯಾದಿ ದೇವ ದೂತರು ಮಾಡಿದ ತಪ್ಪುಗಳಿಂದ ಸಾವು ಮನುಷ್ಯನಿಗೆ ಬಂದೊದಗಿತು" ಎಂಬ ನಂಬಿಕೆಯು ಆಫ್ರಿಕಾದಾದ್ಯಂತ ಪ್ರಚಲಿತವಿರುವ ಪುರಾಣ ಕಥೆಗಳಿಂದ ವ್ಯಕ್ತಪಡುತ್ತದೆ.

(1) ಸಿಯರಾ ಲಿಯೋನಿನ ಕೋನೋ ಪಂಗಡದವರ ಪುರಾಣದ ಪ್ರಕಾರ ಬಹಳ ಹಿಂದೆ ಗಂಡ, ಹೆಂಡತಿ ಮತ್ತು ಮಗುವೊಂದರ ಪುಟ್ಟ ಸಂಸಾರವೊಂದಿತ್ತು. ಪುರುಷೋತ್ತಮನಾದ ದೇವರು ಹೇಳಿದನಂತೆ "ನೀವು ಯಾರೂ ಸಾಯುವುದಿಲ್ಲ; ಆದರೆ ನೀವು ವೃದ್ಧರಾದಾಗ ಹೊಸ ಚರ್ಮವನ್ನು ಧರಿಸಬೇಕಾಗುತ್ತದೆ" ಎಂದು ಹೇಳಿದನು. ಅದೇ ಪ್ರಕಾರ ಹೊಸ ಚರ್ಮಗಳನ್ನು ಗಂಟು ಕಟ್ಟಿ, ಅದನ್ನು ನಾಯಿಯೊಂದರ ಕೈಗಿತ್ತು, ಇದನ್ನು ಮನುಷ್ಯರಿಗೆ ತಲಪಿಸು ಎಂದು ಹೇಳಿದನಂತೆ, ನಾಯಿಯು ಆ ಗಂಟನ್ನು ಹೊತ್ತು ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ಅನ್ನ ಮತ್ತು ಕುಂಬಳಕಾಯಿಯ ಭೋಜನ ಮಾಡುತ್ತಿದ್ದ ಕೆಲವು ಪ್ರಾಣಿಗಳನ್ನು ಕಂಡಿತು. ಹೊತ್ತಿದ್ದ ಗಂಟನ್ನು ಕೆಳಗಿಳಿಸಿ, ತಾನೂ ಭೋಜನ ಕೂಟದಲ್ಲಿ ಸೇರಿಕೊಂಡಿತು. ಊಟ ಮಾಡುತ್ತಿದ್ದಾಗ ಯಾವುದೋ ಪ್ರಾಣಿಯು "ಆ ಗಂಟಿನಲ್ಲೇನಿದೆ?" ಎಂದು ಕೇಳಿತು. ಹೊಸಚರ್ಮದ ಕಥೆಯನ್ನು ಹೇಳಿ, ದೇವರು ಅದನ್ನು ಮನುಷ್ಯರಿಗಾಗಿ ಕಳುಹಿಸಿದ್ದಾನೆಂದು ನಾಯಿಯು ಹೇಳಿತು. ಅಲ್ಲಿದ್ದ ಹಾವು ಆ ಮಾತನ್ನು ಕೇಳಿಸಿಕೊಂಡು ಸದ್ದಿಲ್ಲದೆ ನುಸುಳಿ ಹೋಗಿ, ಗಂಟಿನೊಳಗಿದ್ದ ಹೊಸ ಚರ್ಮಗಳನ್ನು ಕದ್ದು, ಇತರ ಹಾವುಗಳೊಡನೆ ಹಂಚಿಕೊಂಡಿತು. ನಡೆದು ಹೋದ ಅಚಾತುರ್ಯವನ್ನು ನಾಯಿಯು ಮನುಷ್ಯನಿಗೆ ತಿಳಿಸಿ, ಇಬ್ಬರೂ ದೇವರ ಹತ್ತಿರ ಹೋದರು. ಅಷ್ಟರಲ್ಲಿ ಹಾವುಗಳೆಲ್ಲಾ ಹೊಸ ಚರ್ಮವನ್ನು ಧರಿಸಿಕೊಂಡಾಗಿತ್ತು. ಅಂದಿನಿಂದ ಹಾವನ್ನು ಕಂಡರೆ ಮನುಷ್ಯರು ಅದನ್ನು ಕೊಲ್ಲಲು ಪ್ರಯತ್ನಿಸುತ್ತಾರೆ. ನಾಯಿಗೆ ಮನುಷ್ಯರ ಸೇವಕನಾಗಿರುವಂತೆ ದೇವರು ಆಜ್ಞಾಪಿಸಿದ (ಶಾಪದ ಕಲ್ಪನೆ ಆಫ್ರಿಕದ ಪುರಾಣಗಳಲ್ಲಿಲ್ಲ).

(2) ಪೂರ್ವ ಸೂಡಾನಿನ ನೂಬಾ ಜನರ ಪ್ರಕಾರ–ಪ್ರಾರಂಭದಲ್ಲಿ ಮನುಷ್ಯರಿಗೆ ದೇವರು ಹೇಳಿದ್ದೇನೆಂದರೆ "ಮನುಷ್ಯನೊಬ್ಬ ವಯಸ್ಸಾಗಿ ಸತ್ತಾಗ ಅವನನ್ನು ಹೂಳಬೇಡಿ. ಒಂದು ರಾತ್ರಿ ಹಾಗೆಯೇ ಬಿಟ್ಟಿದ್ದರೆ ಮಾರನೇ ಬೆಳಗ್ಗೆ ನಿದ್ದೆಯಿಂದ ಎದ್ದವನಂತೆ ಎದ್ದು ಬರುತ್ತಾನೆ" ಎಂದು. ಆದರೆ ಒಂದು ದಿನ ಒಬ್ಬಾತನು ಸತ್ತಾಗ, ದೇವರು ಬಂದು ನೋಡುವ ಮೊದಲು, ಮೊಲವೊಂದು ಓಡಿಬಂದು, ಹೆಣವನ್ನು ನೆಲದೊಳಗೆ ಹೂಳಬೇಕಂತೆ, ಇಲ್ಲದಿದ್ದರೆ ದೇವರಿಗೆ ಕೋಪ ಬರುತ್ತದೆಂದು ಅವನ ಬಂಧುಗಳಿಗೆ ಹೇಳಿತು. ಅದರಂತೆ ಬಂಧುಗಳು ಹೆಣವನ್ನು ನೆಲದೊಳಗೆ ಹೂತುಬಿಟ್ಟರು, ಮತ್ತು ದೇವರು ಬಂದಾಗ ನಡೆದದ್ದನ್ನು ಹೇಳಿದರು. ಆಗ ದೇವರಿಗೆ ನಿಜವಾಗಿ ಕೋಪಬಂದು, ನೀವು ನನ್ನ ಮಾತು ಕೇಳದೆ ಮೊಲದ ಮಾತನ್ನು ಕೇಳಿದಿರಿ; ಆದ್ದರಿಂದ ಇನ್ನು ಮುಂದೆ ಎಲ್ಲಾ ಮನುಷ್ಯರೂ ಸಾಯುವಂತಾಗಲಿ ಮತ್ತು ವಾಪಸು ಬಾರದಂತಾಗಲಿ ಎಂದು ಹೇಳಿದನಂತೆ.

(3) ಬುರುಂಡಿ ಜನರ ಪ್ರಕಾರ ಹಿಂದಿನ ಕಾಲದಲ್ಲಿ ಮಾನವರಿಗೆ ಸಾವೆಂಬುದೇ ಇರಲಿಲ್ಲ. ದೇವರು ಭೂಮಿಯ ಮೇಲೆ ಮನುಷ್ಯರ ಹತ್ತಿರದಲ್ಲೇ ವಾಸ ವಾಗಿದ್ದನಂತೆ. ಮೃತ್ಯುವೆಂಬುದು ಸುಳಿದಾಡಿದ ಕೂಡಲೇ ದೇವರು ತನ್ನ ಬೇಟೆ ನಾಯಿಗಳನ್ನು ಬಿಟ್ಟು ಮೃತ್ಯುವನ್ನು ದೂರ ಓಡಿಸಿ ಬಿಡುತ್ತಿದ್ದನಂತೆ. ಒಮ್ಮೆ ಹಾಗೆ ಸಾವನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಅದು ಇಕ್ಕಟ್ಟಿನ ಜಾಗವೊಂದರಲ್ಲಿ ಸಿಕ್ಕಿ ಬಿದ್ದಿತು. ಅಷ್ಟರಲ್ಲಿ ಎದುರುಗಡೆಯಿಂದ ಒಬ್ಬ ಹೆಂಗಸು ಬರುವುದನ್ನು ಕಂಡು ಮೃತ್ಯುವು ಹೇಳಿತು–"ನನ್ನನ್ನು ಹೇಗಾದರೂ ಮಾಡಿ ಬೇಟೆ ನಾಯಿಗಳಿಂದ ರಕ್ಷಿಸಿದರೆ ನೀನು ಮತ್ತು ನಿನ್ನ ಕುಟುಂಬದವರು ಸಾಯದಂತೆ ನೋಡಿ ಕೊಳ್ಳುತ್ತೇನೆ". ಆಗ ಹೆಂಗಸು ದೊಡ್ಡದಾಗಿ ಬಾಯಿ ತೆರೆದಳು– ಮೃತ್ಯುವು ಅವಳ ಬಾಯಿಯೊಳಗೆ ಹಾರಿ ಮರೆಯಾಯಿತು. ಅಷ್ಟರಲ್ಲಿ ದೇವರು ಬಂದು "ಎಲ್ಲಿ ಹೋಯಿತು ಆ ಮೃತ್ಯು?" ಎಂದು ಕೇಳಿದಾಗ ಆ ಹೆಂಗಸು "ನಾನು ಯಾರನ್ನೂ ಕಾಣಲಿಲ್ಲ" ಎಂದು ಹೇಳುತ್ತಾಳೆ. ಆದರೆ ಎಲ್ಲವನ್ನೂ ನೋಡಬಲ್ಲ ದೇವರಿಗೆ ಏನು ನಡೆದಿದೆ ಎಂಬುದು ಗೋಚರವಾಯಿತು. ಆಗ ದೇವರು ಹೇಳಿದ್ದೇನೆಂದರೆ "ನೀನು ಮೃತ್ಯುವನ್ನು ಮರೆ ಮಾಡಿದ್ದೀಯ; ಆದ್ದರಿಂದ ಮುಂದೆ ನೀನು ಮತ್ತು ನಿನ್ನ ವಂಶದವರಿಗೆ ಸಾವು ಬರಲಿ" ಎಂದು ಹೇಳಿ ಕೋಪದಿಂದ ಹಿಂದಿರುಗಿದನಂತೆ. ಅಂದಿನಿಂದ ಸಾವು ಭೂಲೋಕದಲ್ಲೆಲ್ಲಾ ಹರಡಿತು.

(4) ಜ಼ೂಲು ಪುರಾಣದಲ್ಲಿ ಮೃತ್ಯುವಿನ ಆಗಮನಕ್ಕೆ ಗೋಸುಂಬೆಯನ್ನು ಗುರಿ ಮಾಡುತ್ತಾರೆ. ಮನುಷ್ಯರು ಸಾಯುವುದಿಲ್ಲವೆಂಬ ಸಂತೋಷದ ಸುದ್ದಿಯನ್ನು ದೇವರು ತನ್ನ ದೂತರಲ್ಲೊಬ್ಬನಾದ ಗೋಸುಂಬೆಯ ಮೂಲಕ ಹೇಳಿ ಕಳುಹಿಸುತ್ತಾನೆ. ಆದರೆ ಗೋಸುಂಬೆಯ ವೇಗವನ್ನು ನೋಡಿದ್ದೀರಲ್ಲವೇ! ಅದು

ಮೊದಲೇ ನಿಧಾನ. ದಾರಿಯಲ್ಲಿ ಸಿಕ್ಕಿದ ಹಣ್ಣುಗಳನ್ನು, ಕೀಟಗಳನ್ನು ತಿನ್ನುತ್ತಾ ಹೋದದ್ದರಿಂದ ಸುದ್ದಿ ತಲಪುವುದು ಬಹಳ ನಿಧಾನವೇ ಆಯಿತು. ಸಾಯುವುದಿಲ್ಲವೆಂಬ ಸುದ್ದಿಯನ್ನು ಕಳುಹಿಸಿದ್ದರೂ ಮನುಷ್ಯರು ಏಕೆ ಸಾಯುತ್ತಿದ್ದಾರೆ ಎಂಬ ಸಿಟ್ಟಿನಿಂದ ದೇವರು ಮನುಷ್ಯರು ಸಾಯುವಂತೆಯೇ ಆಗಲಿ ಎಂದು ಓತಿಕ್ಯಾತನ ಮೂಲಕ ಹೇಳಿ ಕಳುಹಿಸಿದನಂತೆ. ಓತಿಕ್ಯಾತನು ಓಡಿಹೋಗಿ ತನ್ನ ಕೆಟ್ಟಸುದ್ದಿಯನ್ನು ಜನರಿಗೆ ಬೇಗ ತಿಳಿಸಿ, ಹಿಂತಿರುಗಿ ಬಂದು ದೇವರಿಗೆ ವರದಿ ಒಪ್ಪಿಸುತ್ತದೆ. ಆದರೆ ಗೋಸುಂಬೆಯು ತನ್ನ ಗುರಿಯನ್ನು ಮುಟ್ಟಿ ಸುದ್ಧಿ ತಿಳಿಸುವ ಮೊದಲೇ ಜನರು ಸಾವಿನ ಆಗಮನವನ್ನು ಒಪ್ಪಿಕೊಂಡದ್ದರಿಂದ ಅದನ್ನು ಬದಲಾಯಿಸಲಾಗಲಿಲ್ಲ.

ಈಥಿಯೋಪಿಯದ ಲಾಲಿಬೆಲ್ಲ ಎಂಬಲ್ಲಿ "ಬೇತ್ ಮಾರ್‍ಯಮ್" ದೇವಾಲಯದ ಹೊರಗೋಡೆಯ ಮೇಲೆ ಗೋಸುಂಬೆಯ ಚಿತ್ರವೊಂದಿದೆ. ಉಳಿದೆಡೆ ದಹೋಮೆಯ ಘೇಸೊ ರಾಜನ ಅರಮನೆಯ ಬಾಗಿಲು ಹಾಗೂ ಯಾರುಬಾ ಅರಮನೆಯ ಬಾಗಿಲಿನ ಮೇಲೆ ಗೋಸುಂಬೆ ಮತ್ತು ಒತಿಕ್ಯಾತಗಳ ಮರದ ಉಬ್ಬು ಚಿತ್ರಗಳಿವೆ.

(5) ಅಂಗೋಲದ ಮ್ಬುಂಡು (ಬುಂಡು) ಜನರ ಪುರಾಣದಲ್ಲಿ ಮೃತ್ಯುವಿನ ಬಗ್ಗೆ ಸ್ವಾರಸ್ಯಕರವಾದ ಕಥೆಯೊಂದಿದೆ. ಅದರ ಪ್ರಕಾರ ಇಬ್ಬರು ಅಣ್ಣ ತಮ್ಮಂದಿರಲ್ಲಿ ಒಬ್ಬನಾದ ನ್ಗುನ್‌ಸಾ (ಗುನ್ಸಾ) ಎಂಬವನು ದೂರದ ಊರಿನಲ್ಲಿದ್ದಾಗ ಅವನಿಗೆ ತಮ್ಮನು ಸತ್ತುಹೋದ ಎಂಬ ಕನಸು ಬೀಳುತ್ತದೆ. ಅವನು ಹಿಂತಿರುಗಿ ಬಂದಾಗ ತಮ್ಮನು ತೀರಿಕೊಂಡಿರುವ ಸಮಾಚಾರವು ತಿಳಿದು ಬಂತು. ಅವನನ್ನು ಕೊಂದವರು ಯಾರು ಎಂದು ತಾಯಿಯನ್ನು ಪ್ರಶ್ನೆಮಾಡುತ್ತಾನೆ. ಅದು ಮೃತ್ಯುವೆಂದು ತಾಯಿ ಹೇಳುತ್ತಾಳೆ. ಆ ಮೃತ್ಯುವನ್ನೇ ಹಿಡಿದು ಕೊಲ್ಲುತ್ತೇನೆಂದು ಶಪಥ ಮಾಡಿ, ಕಮ್ಮಾರನನ್ನು ಕರೆದು, ಒಂದು ಬಲವಾದ ಕಬ್ಬಿಣದ ಸಿಡಿಯನ್ನು ತಯಾರಿಸಿಕೊಡಬೇಕೆಂದು ಹೇಳುತ್ತಾನೆ. ನಂತರ ಸಿಡಿಯನ್ನು ಹುಲ್ಲಿನ ನಡುವೆ ಓಡಾಡುವ ದಾರಿಯಲ್ಲಿ ಒಡ್ಡಿ ಎಚ್ಚರಿಕೆಯಿಂದ ಕಾದುಕುಳಿತುಕೊಳ್ಳುತ್ತಾನೆ. ಬಹಳ ದಿನಗಳ ನಂತರ ಮೃತ್ಯುವು ಆ ಮಾರ್ಗಬಂದಾಗ ಸಿಡಿಯಲ್ಲಿ ಸಿಕ್ಕಿಬೀಳುತ್ತಾನೆ. ಮೃತ್ಯುವು ಬಹಳವಾಗಿ ಬೇಡಿಕೊಂಡರೂ ಗುನ್ಸಾ ಬಿಟ್ಟು ಕೊಡಲಿಲ್ಲ. "ನೀನು ಮನುಷ್ಯರನ್ನೆಲ್ಲಾ ಕೊಲ್ಲುತ್ತಿದ್ದೀಯೆ. ನನ್ನ ತಮ್ಮನನ್ನೂ ಕೊಂದಿರುವೆ. ಈಗ ನಾನು ನಿನ್ನನ್ನು ಕೊಲ್ಲುತ್ತೇನೆ" ಎಂದು ಹೇಳಿ ಮಚ್ಚಿನಿಂದ ಹೊಡೆಯಲು ಕೈಯೆತ್ತುತ್ತಾನೆ. ಆದರೆ ಮೃತ್ಯುವು ಅದನ್ನು ನಿರಾಕರಿಸಿ "ಮನುಷ್ಯರು ತಮ್ಮ ತಪ್ಪಿನಿಂದಲೋ, ಅಥವಾ ಇತರರಿಂದಲೋ ಕೊಲ್ಲಲ್ಪಡುತ್ತಾರೆ. ಈಗ ನನ್ನನ್ನು ಸಿಡಿಯಿಂದ ಬಿಡಿಸಿದರೆ ನನ್ನ ಲೋಕಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ನೀನೇ ವಿಚಾರಿಸಿ ನೋಡು" ಎಂದು ಹೇಳುತ್ತದೆ. ಗುನ್ಸಾನು ಅದಕ್ಕೆ ಒಪ್ಪಿ ಮೃತ್ಯುವಿನ ನಾಡಿಗೆ ಹೊರಡುತ್ತಾನೆ. ಅಲ್ಲಿಗೆ ಹೊಸದಾಗಿ ಬಂದವರನ್ನು

ಗಮನಿಸುವಂತೆ ಹೇಳಿ, ಅವರಲ್ಲಿ ಒಬ್ಬೊಬ್ಬರನ್ನೂ–ನಿನ್ನನ್ನು ಕೊಂದವರು ಯಾರು– ಎಂದು ಕೇಳುತ್ತಾನೆ. ನನ್ನ ಶತ್ರುವು ನನ್ನನ್ನು ಕೊಂದ, ನನ್ನ ಅಹಂಕಾರದಿಂದ ನಾನು ಸತ್ತೆ; ನನ್ನ ಗಂಡನ ಹೊಟ್ಟೆ ಕಿಚ್ಚಿನಿಂದ ನಾನು ಸತ್ತೆ ಎಂದು ಅವರುಗಳು ಹೇಳಿದರು. ಆಗ ಮೃತ್ಯವು ಹೇಳಿತು, "ಪ್ರತಿಯೊಬ್ಬರೂ ಬೇರೊಬ್ಬರ ಕಾರಣದಿಂದ ಸತ್ತರೇ ಹೊರತು, ನನ್ನಿಂದಲ್ಲ–ಆದ್ದರಿಂದ ಮೃತ್ಯುವಿನ ಮೇಲೆ ದೋಷ ಹೊರಿಸುವುದು ನ್ಯಾಯವಲ್ಲ" ಎಂದು ಹೇಳಿ, ಇವನ ತಮ್ಮನ ಬಳಿಗೆ ಕರೆದುಕೊಂಡು ಹೋಯಿತು. "ಬರುತ್ತೀಯಾ ನಮ್ಮ ಭೂಲೋಕಕ್ಕೆ ಹೋಗೋಣ?" ಎಂದು ತಮ್ಮನನ್ನು ಗುಂಜ಼ಾ ಕೇಳಿದಾಗ, ಅವನಿಂದ ಬಂದ ಉತ್ತರವನ್ನು ಕೇಳಿ ಆಶ್ಚರ್ಯವಾಯಿತು. ನಾನು ಇಲ್ಲಿ ಸುಖವಾಗಿದ್ದೇನೆ, ಅಲ್ಲಿಗೆ ಬರುವುದಿಲ್ಲ ಎಂದು ತಮ್ಮನು ಹೇಳಿದ ಮೇಲೆ ಗುಂಜ಼ಾ ಒಬ್ಬನೇ ಹಿಂತಿರುಗಿ ಹೋಗಬೇಕಾಯಿತು. ಹೋಗುವಾಗ ಮೃತ್ಯುವು ಎಲ್ಲಾ ಹಣ್ಣು, ತರಕಾರಿ, ಧಾನ್ಯದ ಬೀಜಗಳನ್ನು ಕೊಟ್ಟು ಕಳುಹಿಸುತ್ತಾನೆ. ಗುಂಜ಼ಾ ಅದನ್ನೆಲ್ಲಾ ತನ್ನ ಜನರಿಗೆ ಕೊಟ್ಟು, ತಾನೂ ಒಳ್ಳೆಯ ವ್ಯವಸಾಯ ಮಾಡಿಕೊಂಡು ಸುಖವಾಗಿದ್ದನಂತೆ.

**ಸಾವಿನಾಚೆ**

ಸಾವಿನ ನಂತರದ ಪ್ರಪಂಚ ಮತ್ತು ಅಲ್ಲಿನ ಅನುಭವಗಳ ಬಗ್ಗೆ ಹಿಂದೂ ಮತ್ತು ಈಜಿಪ್ಟ್ ಪುರಾಣಗಳಲ್ಲಿ, ಗ್ರೀಕ್ ಮತ್ತು ರೋಮನ್ ಪುರಾಣಗಳಲ್ಲಿ ವಿಪುಲವಾದ ಕಥೆಗಳಿವೆ. ಸ್ವರ್ಗ ಮತ್ತು ಪಾತಾಳಗಳ ಬಗ್ಗೆ ಈ ಸಂಸ್ಕೃತಿಗಳು ತಮ್ಮದೇ ಆದ ಕಲ್ಪನೆಗಳನ್ನು ಹೊಂದಿವೆ. ಹಿಂದೂ ಪುರಾಣದಲ್ಲಿ ರಾಜಕುಮಾರರು ಪಾತಾಳ ಗುಹೆಯೊಳಗೋ ಅಥವಾ ಸಮುದ್ರ ತಳದ ನಾಗಲೋಕಕ್ಕೋ ಹೋಗಿ, ಸಾಹಸ ಕಾರ್ಯಗಳನ್ನೆಸಗಿ ಅಲ್ಲಿ ಬಂಧಿತರಾಗಿರುವ ತನ್ನವರನ್ನು ಮತ್ತು ಇತರ ರಾಜ ಕುಮಾರರನ್ನು ಬಿಡಿಸಿಕೊಂಡು ಬರುವುದೋ, ಅಥವಾ ಅಲ್ಲಿರುವ ಮಂದಾರ ಪುಷ್ಪವನ್ನು ತರುವುದೋ ಇತ್ಯಾದಿ ಸುದೀರ್ಘವಾದ ಕಥಾವಸ್ತುಗಳು ಹೇರಳವಾಗಿವೆ. ಇಂತಹ ಕಥೆಗಳಿಗೆ "ಅಡುಗೂಲಜ್ಜಿ ಕಥೆ" ಗಳೆಂದು ಹಾಸ್ಯ ಮಾಡುತ್ತೇವೆ. ಇವುಗಳು ವಯಸ್ಕರಿಗೆ ಬೇಜಾರು ತರಬಹುದು ನಿಜ. ಆದರೆ ಪ್ರತಿಯೊಂದು ಪೀಳಿಗೆಯ ಮಕ್ಕಳಿಗೂ ಇವು ಹೊಸದೇ ಅಲ್ಲವೇ! ಮುದ್ರಾಮಂಜೂಷ, ಭಟ್ಟಿ ವಿಕ್ರಮಾದಿತ್ಯದ ಕಥೆಗಳಂತೂ ಸರ್ವಕಾಲಿಕ ಪತ್ತೇದಾರಿ ಕಥೆಗಳೆಂದೇ ಹೇಳಬಹುದು. ಎಂತಲೇ ಅವು ಎಲ್ಲಾ ಭಾರತೀಯ ಭಾಷೆಗಳಲ್ಲೂ ಪ್ರಕಟವಾಗಿವೆ. ಮುಂದೆ ಹುಟ್ಟುವ ಮಕ್ಕಳಿಗಾಗಿ ಅಂತಹ ಸಾಹಿತ್ಯಗಳನ್ನು ಕಲಬೆರಕೆ ಮಾಡದೇ ಕಾಪಾಡುವುದು ನಮ್ಮ ಕರ್ತವ್ಯ.

ಈಗಂತೂ ದೂರದರ್ಶನ ಪೆಟ್ಟಿಗೆಗಳು ಬಂದ ಮೇಲೆ ರಾಮಾಯಣ, ಮಹಾ ಭಾರತದ ಕಥೆಗಳು, ನಾರದರು ಸ್ವರ್ಗಕ್ಕೆ ಹೋಗಿಬರುವ ದೃಷ್ಯಗಳು, ಇಂದ್ರನ ಆಸ್ಥಾನ, ಶ್ರೀಮನ್ನಾರಾಯಣನ ಕ್ಷೀರಸಾಗರ, ಹಿಮಶಿಖರಗಳ ನಡುವೆ ನಡೆಯುತ್ತಿರುವ ಶಿವನ ಒಡ್ಡೋಲಗ, ಭೂಮಿಯ ಮೇಲೆ ನಡೆಯುತ್ತಿರುವ ದೇವದಾನವರ ಕಾಳಗವನ್ನು

ಅಂತರಿಕ್ಷದಲ್ಲಿ ಮೋಡಗಳ ಹಿಂದೆ ನಿಂತು ವೀಕ್ಷಿಸುವ ದೇವದೇವತೆಗಳು ಇತ್ಯಾದಿ ಪುರಾಣದೃಷ್ಯಗಳು ನಮ್ಮ ಕಣ್ಣೆದುರಿಗೇ ನಡೆಯುತ್ತಿರುವಂತೆ ವರ್ಣಮಯ ಚಲನಚಿತ್ರಗಳ ಮೂಲಕ ನಮ್ಮ ಮುಂದೆ ಇಡುತ್ತಾ ಇವೆ. ನಮ್ಮ ಪುರಾಣಗಳಲ್ಲಿ ಸ್ವರ್ಗ ಪಾತಾಳಗಳಿಗೆ ಹೋಗಿ ಬರುವುದಂತೂ (ಶರೀರಸಮೇತ) ವಿದೇಶ ಪ್ರವಾಸ ಮಾಡಿಬರುವಷ್ಟು ಸುಲಭ ಸಾಮಾನ್ಯವೆಂಬ ಭ್ರಮೆ ಹುಟ್ಟಿಸುತ್ತವೆ, ಈ ದೂರದರ್ಶನ ದೃಷ್ಯಗಳು.

ಆಫ್ರಿಕದ ಪುರಾಣಗಳಿಂದ ಆರಿಸಿದ ಕೆಲವನ್ನು ನೋಡೋಣ:

1) ಆಫ್ರಿಕದ ಪುರಾಣಗಳಲ್ಲಿ ದೇವಲೋಕ ಅಥವಾ ಪಾತಾಳಗಳಿಗೆ ಮನುಷ್ಯ ಶರೀರ ಸಮೇತ ಹೋಗಿ ಬರುವ ಕಥೆಗಳು ಬಹಳ ಇವೆ. ಅಂಗೋಲದ (ನಕ್ಷೆ ನೋಡಿ) "ಮ್ಬುಂಡು"ಜನಾಂಗದವರ ಪುರಾಣದಲ್ಲಿ ರಾಜಾ ಕಿಟಾಂಬನ ಕಥೆ ಪ್ರಸಿದ್ಧವಾದುದು. ಕಿಟಾಂಬನು ತನ್ನ ಹಿರಿಯ ರಾಣಿಯನ್ನು ತುಂಬಾ ಪ್ರೀತಿಸುತ್ತಿದ್ದನಂತೆ. ಅಕಸ್ಮಾತ್ ಯಾವುದೋ ರೋಗಕ್ಕೆ ತುತ್ತಾಗಿ ಅವಳು ಸತ್ತು ಹೋದಳು. ಕಿಟಾಂಬನು ಅತಿಯಾದ ದುಃಖದಲ್ಲಿ ಮುಳುಗಿ ಹೋದನು. ಆತ ಎಷ್ಟು ಶೋಕ ಗ್ರಸ್ಥನಾಗಿದ್ದನೆಂದರೆ ತನ್ನ ಪ್ರಜೆಗಳೆಲ್ಲರೂ ತನ್ನಂತೆಯೇ ಶೋಕಾಚರಣೆ ಮಾಡಬೇಕೆಂದು ಆಜ್ಞೆಹೊರಡಿಸಿದನು. ಜನರು ಹಬ್ಬಗಳನ್ನು ಆಚರಿಸುವ ಹಾಗಿಲ್ಲ. ಬೀದಿಯಲ್ಲಿ ಗಟ್ಟಿಯಾಗಿ ಮಾತನಾಡುವಂತಿಲ್ಲ. ನಗುವಂತಿಲ್ಲ. ಹೀಗೇ ಇರುತ್ತಿರಲು, ಕೊಂಚ ಕಾಲದ ನಂತರ ಆಜ್ಞೆಯನ್ನು ಪಾಲಿಸಲಾಗದೆ ಹಳ್ಳಿಗಳ ಮುಖಂಡರು ಪ್ರತಿಭಟಿಸಿದರು. ಆದರೆ ರಾಜನು ಮಾತ್ರ ತನ್ನ ಹೆಂಡತಿಯು ವಾಪಸ್ಸು ಬಂದ ಹೊರತೂ ಈ ಆಜ್ಞೆಯನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಹಟ ಹಿಡಿಯುತ್ತಾನೆ. ಕಡೆಗೆ ಒಂದು ದಿನ ಹಳ್ಳಿಗಳ ಮುಖಂಡರು ಹಾಗೂ ವಯೋವೃದ್ಧರು ಸಮಾಲೋಚನೆ ನಡೆಸಿದರು. ಪ್ರಸಿದ್ಧ ವೈಧ್ಯನೊಬ್ಬನನ್ನು ಕರೆಸಿ ಇದಕ್ಕೆ ಉಪಾಯ ಕಂಡು ಹಿಡಿಯಬೇಕೆಂದು ಮನವಿ ಮಾಡಿಕೊಂಡರು. ಅವನು ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದನು. ತನ್ನ ಮನೆಯೊಳಗೆ ಒಂದು ಗುಂಡಿ ತೋಡಿ, ತಾನೂ ತನ್ನ ಮಗನೂ ಅದರೊಳಗೆ ಹೋಗುವುದಾಗಿಯೂ, ಹೋದ ಮೇಲೆ ಗುಂಡಿಯನ್ನು ಮುಚ್ಚಿ, ದುಃಖದ ಉಡುಪನ್ನು ತೊಟ್ಟು, ದಿನಕ್ಕೊಮ್ಮೆ ತಪ್ಪದೆ ಇಂತಿಷ್ಟು ನೀರನ್ನು ಗುಂಡಿಯೊಳಗೆ ಸುರಿಯಬೇಕೆಂದೂ ಹೆಂಡತಿಗೆ ಆದೇಶಗಳನ್ನಿತ್ತನು. ಅದರಂತೆ ನಡೆದುಕೊಳ್ಳುವುದಾಗಿ ಅವಳಿಂದ ವಾಗ್ದಾನ ಪಡೆದು ತನ್ನ ಮಗನನ್ನು ಕರೆದುಕೊಂಡು ಪಾತಾಳಲೋಕಕ್ಕೆ ಹೊರಟನು. ಅಲ್ಲಿ ಬಹಳ ದೂರ ಕತ್ತಲಲ್ಲಿ ಪ್ರಯಾಣ ಮಾಡಿದ ನಂತರ ರಾಣಿಯಿರುವ ಹಳ್ಳಿಯನ್ನು ತಲಪಿದರು. ರಾಣಿಯನ್ನು ಭೇಟಿಮಾಡಿದಾಗ–ನೀವು ಎಲ್ಲಿಂದ ಬಂದಿದ್ದೀರಿ, ಎಂದು ಅವಳು ಕೇಳುತ್ತಾಳೆ. ನಿನ್ನ ಗಂಡನಾದ ರಾಜಾ ಕಿಟಾಂಬನು ಬಹಳವಾಗಿ ದುಃಖ ತಪ್ತನಾಗಿದ್ದಾನೆ. ಅಷ್ಟೇ ಅಲ್ಲದೆ ಪ್ರಜೆಗಳೂ ಶೋಕವನ್ನಾಚರಿಸಬೇಕೆಂದು ಕಟ್ಟಾಜ್ಞೆ ಮಾಡಿದ್ದಾನೆ– ಎಂದು ಭೂಲೋಕದ ಕಥೆಯನ್ನು ವೈದ್ಯನು ಹೇಳುತ್ತಾನೆ.

ಆಗ ರಾಣಿಯು ಹತ್ತಿರದಲ್ಲೇ ಎತ್ತರವಾದ ಪೀಠದ ಮೇಲೆ ಕುಳಿತಿದ್ದ ಒಬ್ಬ ಮನುಷ್ಯನನ್ನು ತೋರಿಸಿ, ಅವನು ಯಾರು ಗೊತ್ತಾ ಎಂದು ಕೇಳಿದಳು. ವೈದ್ಯನು ಗೊತ್ತಿಲ್ಲವೆಂದು ಹೇಳಿದಾಗ, ಅವನೇ ಮನುಷ್ಯರನ್ನು ಕೊಂಡೊಯ್ಯುವ ಮೃತ್ಯದೇವತೆ. ಮತ್ತೊಂದು ಕಡೆ ಸರಪಳಿಯಿಂದ ಕಟ್ಟಿರುವ ಒಬ್ಬ ಮನುಷ್ಯನನ್ನು ತೋರಿಸಿ, ಅವನಾರೆಂದು ಗುರುತಿಸಬಲ್ಲೆಯಾ ಎಂದು ಕೇಳಿದಳು. ಆ ಮನುಷ್ಯನು ಕಿಟಾಂಬನಂತೆಯೇ ಇರುವುದನ್ನು ನೋಡಿ ವೈದ್ಯನಿಗೆ ಆಶ್ಚರ್ಯವಾಯಿತು. ಕೆಲವೇ ವರ್ಷಗಳಲ್ಲಿ ಅವನೂ ಇಲ್ಲಿಗೆ ಬರುವವನಿದ್ದಾನೆ ಎಂದು ಹೇಳಿ ಒಮ್ಮೆ ಮನುಷ್ಯನು ಸತ್ತು ಇಲ್ಲಿಗೆ ಬಂದಮೇಲೆ ಭೂಮಿಗೆ ಹಿಂತಿರುಗಲಾರ ಎಂಬ ಸತ್ಯವನ್ನು ತಿಳಿಸಿದಳು. ಅನಂತರ ವೈದ್ಯನು ಪಾತಾಳಲೋಕಕ್ಕೆ ಬಂದು ತನ್ನನ್ನು ಭೇಟಿಮಾಡಿದ ಗುರುತಿಗಾಗಿ ತನ್ನ ತೋಳ್ಬಳೆಯೊಂದನ್ನು ಅವನಿಗೆ ಕೊಡುತ್ತಾಳೆ.

ಇತ್ತ ವೈದ್ಯನ ಹೆಂಡತಿ ಪ್ರತಿದಿನವೂ ತಪ್ಪದೆ ಗುಂಡಿಯೊಳಗೆ ನೀರು ಹಾಕುತ್ತಿದ್ದಳು. ಆ ದಿನ ನೀರು ಹಾಕಲು ಹೋದಾಗ, ಮಣ್ಣು ನಿಧಾನವಾಗಿ ಬಿರುಕು ಬಿಡುತ್ತಾ ಇರುವುದನ್ನು ಕಂಡು, ಆಶ್ಚರ್ಯದಿಂದ ನಿಂತುಕೊಂಡಳು. ನೋಡುತ್ತಿದ್ದಂತೆಯೇ ಗಂಡನ ತಲೆಯು ಕಾಣಿಸಿಕೊಂಡಿತು. ಆತ ಕಷ್ಟಪಟ್ಟು ತೆವಳಿ ಹೊರಕ್ಕೆ ಬರುತ್ತಾನೆ. ಬಂದಕೂಡಲೇ ಮಗನನ್ನು ಸಹ ಹೊರಕ್ಕೆ ಎಳೆದುಕೊಳ್ಳುತ್ತಾನೆ. ಸೂರ್ಯನ ಬೆಳಕನ್ನು ಕಂಡಕೂಡಲೇ ಹುಡುಗನಿಗೆ ಮೂರ್ಛೆ ಹೊದಂತಾಗಿ, ವೈದ್ಯನು ಔಷಧಿ ಮಾಡಿದಮೇಲೆ ಗುಣಹೊಂದುತ್ತಾನೆ. ಊರಿನ ಮುಖಂಡರಿಗೆ ವಿಷಯ ಗೊತ್ತಾಗಿ, ಅವರು ರಾಜನಿಗೆ ಸುದ್ದಿ ಮುಟ್ಟಿಸುತ್ತಾರೆ. ರಾಜನು ವೈದ್ಯನನ್ನು ಕರೆಸಿಕೊಂಡು ನಡೆದದ್ದನ್ನೆಲ್ಲಾ ಕೇಳಿ ತಿಳಿದುಕೊಂಡು, ಹೆಂಡತಿ ಕಳುಹಿಸಿದ್ದ ತೋಳ್ಬಳೆಯನ್ನು ಗುರ್ತಿಸಿ, ಹೆಂಡತಿಯ ಸಲಹೆಮೇರೆಗೆ ಶೋಕಾಚರಣೆಯನ್ನು ನಿಲ್ಲಿಸುವಂತೆ ಆಜ್ಞೆ ಹೊರಡಿಸಿದನಂತೆ.

2) ಕೆನ್ಯಾದ ಚಗ್ಗಾ ಬುಡಕಟ್ಟಿನ ಜನರು ಹೇಳುವ ಕಥೆಯೊಂದರಲ್ಲಿ "ಮರ್ವೆ" ಎಂಬ ಹುಡುಗಿ ಮತ್ತು ಅವಳ ತಮ್ಮನನ್ನು ತಂದೆ-ತಾಯಿಗಳು ಅವರೇಕಾಯಿ ಹೊಲವನ್ನು ಕಾಯಲು ಕಳುಹಿಸಿದರಂತೆ. ಸ್ವಲ್ಪ ಹೊತ್ತಿನ ನಂತರ ಬಿಸಿಲು ಹೆಚ್ಚಾದ್ದರಿಂದ ಇವರಿಗೆ ನೀರಡಿಕೆ ಬಂದು, ನೀರು ಕುಡಿದುಬರೋಣವೆಂದು ಹತ್ತಿರದ ಕೆರೆಯೊಂದಕ್ಕೆ ಹೋಗುತ್ತಾರೆ. ಆದರೆ ಅವರು ಹಿಂತಿರುಗಿ ಬರುವಷ್ಟರಲ್ಲಿ ಕೋತಿಗಳು ಬಂದು ಅವರೆಕಾಯಿಯನ್ನು ತಿಂದುಹಾಕಿ, ಗಿಡವನ್ನೆಲ್ಲಾ ಧ್ವಂಸಮಾಡಿದ್ದವು. ತಂದೆತಾಯಿಗಳು ಏನನ್ನುವರೋ, ಯಾವ ಶಿಕ್ಷೆ ಕೊಡುವರೋ ಎಂಬ ಭೀತಿ ಇಬ್ಬರಲ್ಲೂ ಹುಟ್ಟಿತು. ಮರ್ವೆಯು ಹೋಗಿ ನೀರಿಗೆ ಬಿದ್ದಳು. ಕೂಡಲೇ ಅವಳ ತಮ್ಮ ಓಡುತ್ತಾ ಹೋಗಿ, ತಂದೆ ತಾಯಿಗಳಿಗೆ ಸುದ್ದಿ ಮುಟ್ಟಿಸಿದ. ತಂದೆತಾಯಿಗಳು ದುಃಖ ಪಡುತ್ತಾ ಕೆರೆಯ ಹತ್ತಿರ ಹೋಗಿ ನೋಡಲಾಗಿ ಮರ್ವೆಯು ಅಲ್ಲಿರಲಿಲ್ಲ. ಅವಳು ನೀರಿನಲ್ಲಿ ಮುಳುಗುತ್ತಾ ಹೋಗಿ ಪಾತಾಳವನ್ನು

ಮುಟ್ಟಿದ್ದಳು. ಕತ್ತಲೆಯಲ್ಲಿ ಎಡಕಾಡುತ್ತಿರುವಾಗ ದೂರದ ಒಂದು ಗುಡಿಸಲೊಳಗೆ ಬೆಳಕು ಕಾಣಿಸಿತು. ಅಲ್ಲಿ ಒಬ್ಬ ಮುದುಕಿ ಕೆಲವು ಮಕ್ಕಳೊಡನೆ ವಾಸವಾಗಿದ್ದಳು. ಅವಳು ಮರ್ವೆಯನ್ನು ಹತ್ತಿರಕರೆದು ಮನೆಗೆಲಸ ಮಾಡಿಕೊಂಡಿರುವಂತೆ ಹೇಳಿದಳು. ಕೆಲವೇ ದಿನಗಳಲ್ಲಿ ಮರ್ವೆಯು ಪಾತಾಳಲೋಕದ ಜೀವನಕ್ಕೆ ಹೊಂದಿಕೊಂಡಳು. ಕೆಲವು ವರ್ಷಗಳ ಮೇಲೆ ತಂದೆತಾಯಿಗಳ ಜ್ಞಾಪಕಬಂದು, ಊರಿನ ಕಡೆ ಆಸಕ್ತಳಾದಳು. ಊರಿಗೆಹೋಗಿ ತಂದೆತಾಯಿಗಳನ್ನು ನೋಡಿಬರಲು ಅಪ್ಪಣೆಕೇಳಿದಳು. ಆ ಹೆಂಗಸು ಸಂತೋಷದಿಂದ ಒಪ್ಪಿ– "ನಿನಗೆ ಬಿಸಿಯಾದುದು ಇಷ್ಟವ್ರೋ ಅಥವಾ ತಣ್ಣಗಿರುವುದು ಇಷ್ಟವ್ರೋ?" ಎಂದು ಕೇಳಿದಳು. ವಿಚಿತ್ರವಾದ ಈ ಪ್ರಶ್ನೆಯಿಂದ ಕೊಂಚ ಗಾಬರಿಯಾದರೂ ಇಂಗಿತವನ್ನರಿತು, ತನಗೆ ತಣ್ಣಗಿರುವ ಪದಾರ್ಥಗಳು ಇಷ್ಟವೆಂದು ಹೇಳಿದಳು. ಅನಂತರ ಮುದುಕಿಯು ಕತ್ತಲೆಯ ಕಿರು ಕೋಣೆಯೊಳಗೆ ಮರ್ವೆಯನ್ನು ಕರೆದುಕೊಂಡು ಹೋಗಿ, ಅಲ್ಲಿಟ್ಟಿದ್ದ ಎರಡು ಗುಡಾಣಗಳನ್ನು ತೋರಿಸಿ, ಒಂದರಲ್ಲಿ ಬಿಸಿನೀರಿರುವುದಾಗಿಯೂ, ಇನ್ನೊಂದರಲ್ಲಿ ತಣ್ಣೀರಿರುವುದಾಗಿಯೂ ತಿಳಿಸಿ, ತಣ್ಣೀರಿರುವ ಬಲಗಡೆಯ ಗುಡಾಣದೊಳಗೆ ಎರಡು ಕೈಗಳನ್ನೂ ಅದ್ದಿ ತೆಗೆಯಬೇಕೆಂದು ಹೇಳುತ್ತಾಳೆ. ಅದರಂತೆ ಮರ್ವೆಯು ಮಾಡಿದಾಗ ಅವಳ ಎರಡು ಕೈ ತುಂಬ ಹೊಳೆಯುವ ಬಂಗಾರದ ಬಳೆಗಳು ಇರುತ್ತವೆ. ಅಂತೆಯೇ ಕಾಲುಗಳನ್ನು ಅದ್ದಿ ತೆಗೆಯಬೇಕೆಂದು ಹೇಳುತ್ತಾಳೆ. ಅದರಂತೆಯೇ ಮಾಡಿದಾಗ ಕಣಕಾಲುತುಂಬ ಬೆಳ್ಳಿಯ ಕಾಲಂದುಗೆಗಳು ತುಂಬಿ ಬರುತ್ತವೆ. ಅನಂತರ ಮಣಿಖಚಿತವಾದ ಹೊಸ ಉಡುಗೆಯನ್ನು ಕೊಟ್ಟು ಮುದುಕಿ ಹೇಳುತ್ತಾಳೆ "ಈಗ ನೀನು ನಿಮ್ಮೂರಿಗೆ ಹೋಗಬಹುದು. ನಿನ್ನನ್ನು ಕಂಡ ಅನೇಕರು ಮದುವೆ ಆಗುತ್ತೇವೆಂದು ಬರುತ್ತಾರೆ. ಆದರೆ ಒಂದೆಚ್ಚರಿಕೆ! ಸವೋಯೆ ಎಂಬುವನು ಬಂದು ಕೇಳುವವರೆಗೂ ಯಾರನ್ನೂ ಒಪ್ಪಬೇಡ" ಎಂದು ಹೇಳಿ ಬೀಳ್ಕೊಡುತ್ತಾಳೆ. ಮರ್ವೆಯು ನಿಧಾನವಾಗಿ ಕೆರೆಯ ಮೇಲೆದ್ದು, ದಡಸೇರಿ ಅಲ್ಲಿ ಕುಳಿತಿರುತ್ತಾಳೆ. ಯಾರೋ ಒಂದು ಸ್ಫುರದ್ರೂಪಿ ಹುಡುಗಿ, ಮೈತುಂಬಾ ಒಡವೆ ಹಾಕಿಕೊಂಡು, ಕೆರೆಯ ದಡದಮೇಲೆ ಕೂತಿದ್ದಾಳೆಂಬ ಸುದ್ದಿ ಊರೆಲ್ಲಾ ಹರಡಲು ತಡವಾಗಲಿಲ್ಲ. ಸತ್ತುಹೋದಳೆಂದೇ ತಿಳಿದಿದ್ದ ಮರ್ವೆಯ ತಂದೆತಾಯಿಗಳು ಬಂದು ನೋಡಿ, ಅವಳನ್ನು ಗುರುತಿಸಿ ಮನೆಗೆ ಕರೆದುಕೊಂಡು ಹೋದರು. ಸುದ್ದಿ ಅಕ್ಕಪಕ್ಕದ ಹಳ್ಳಿಗಳಿಗೂ ಹರಡಿ, ಅನೇಕ ಗಂಡಸರು ಬಂದು ನೋಡಿ, ತಾವು ಮದುವೆ ಯಾಗುವುದಾಗಿ ಹೇಳುತ್ತಾರೆ. ಮರ್ವೆ ಯಾರನ್ನೂ ಒಪ್ಪುವುದಿಲ್ಲ. ಆ ನಂತರ ಐಶ್ವರ್ಯವಂತರಾದ ಮುಖಂಡರುಗಳು ಬಂದು ಕೇಳುತ್ತಾರೆ. ಅವರನ್ನೂ ಇವಳು ಒಪ್ಪುವುದಿಲ್ಲ. ಕಡೆಗೆ ಒಂದು ದಿನ ಕುರೂಪಿಯಾದ ಯುವಕನೊಬ್ಬ ಬರುತ್ತಾನೆ. ಅವನಿಗೋ ಮೈತುಂಬಾ ಚರ್ಮರೋಗ. ದುರ್ವಾಸನೆ ಬೇರೆ. ಅವನನ್ನು ನೋಡಿ ಹೆಸರೇನೆಂದು ಕೇಳುತ್ತಾಳೆ. ಆತ ಸವೋಯೆ ಎಂದು ಹೇಳಿದ ಕೂಡಲೇ

ಮರ್ವೆಯು ಒಪ್ಪಿಕೊಳ್ಳುತ್ತಾಳೆ. ಎಲ್ಲರಿಗೂ ಆಶ್ಚರ್ಯ . ತಂದೆತಾಯಿಗಳಿಗೆ ಇಷ್ಟವಿಲ್ಲದಿದ್ದರೂ ಒಪ್ಪಿಕೊಂಡು ಮದುವೆ ಮಾಡುತ್ತಾರೆ. ಮದುವೆಯ ನಂತರ ಮರ್ವೆಯು ಅವನನ್ನು ಮುಟ್ಟಿದ ಕೂಡಲೇ ಅವನ ರೋಗವೆಲ್ಲಾ ಮಾಯವಾಗಿ ಸ್ಫುರದ್ರೂಪಿ ಯುವಕನಾಗುತ್ತಾನೆ. ನಂತರ ಕೆಲವು ಒಡವೆಗಳನ್ನು ಮಾರಿ, ಮರ್ವೆಯು ಅನೇಕ ಹಸುಗಳನ್ನು ಕೊಂಡು ತಂದು ಗಂಡನಿಗೆ ಕೊಡುತ್ತಾಳೆ. ಮತ್ತೆರಡು ಆಭರಣಗಳನ್ನು ಮಾರಿ ಸೊಗಸಾದ ಮನೆಯೊಂದನ್ನು ಕಟ್ಟಿಸಿಕೊಂಡು, ಮಕ್ಕಳನ್ನು ಪಡೆದು ಸುಖವಾಗಿ ಬಾಳುತ್ತಾ ಇರುತ್ತಾರೆ.

ಹೀಗಿರುವಾಗ ಹೊಟ್ಟೆಕಿಚ್ಚಿನ ಕೆಲವು ದುಷ್ಕರ್ಮಿಗಳು ಬಂದು ಸವೋಯೆಯನ್ನು ಕೊಂದು ಹೋಗುತ್ತಾರೆ. ಆದರೆ ಮರ್ವೆಯು ಮಂತ್ರ ಶಕ್ತಿಯಿಂದ ಗಂಡನನ್ನು ಬದುಕಿಸಿ, ಮನೆಯೊಳಗೆ ಬಚ್ಚಿಟ್ಟಿರುತ್ತಾಳೆ. ಮಾರನೇ ದಿನವೇ ಶತ್ರುಗಳು ಇವಳ ಆಸ್ತಿಪಾಸ್ತಿ, ದನಕರುಗಳನ್ನು ಹಂಚಿಕೊಳ್ಳಬೇಕೆಂದು ಬಂದಾಗ ಸವೋಯೆಯು ಅವರೊಡನೆ ಹೋರಾಡಿ, ಅವರನ್ನೆಲ್ಲಾ ಕೊಲ್ಲುತ್ತಾನೆ. ಮುಂದೆ ಇವರು ಮಕ್ಕಳೊಡನೆ ಸುಖವಾಗಿ ದೀರ್ಘಕಾಲ ಬಾಳಿಕೊಂಡಿರುತ್ತಾರೆ.

3. ಮೊಸಾಂಬೀಕಿನ ರೋಂಗ ಜನಾಂಗದ ಪುರಾಣದಲ್ಲಿ ಒಂದು ಕಥೆಯಿದೆ. ಒಂದು ಹುಡುಗಿ ನೀರುತರಲು ಹಗ್ಗ ಮತ್ತು ಮಡಕೆಯೊಡನೆ ಬಾವಿಗೆ ಹೋಗುತ್ತಾಳೆ. ಅವಳ ಹೆಸರು ಸಾಂಬಿ. ನೀರು ಸೇದುತ್ತಿರುವಾಗ ಅರ್ಧದಲ್ಲಿ ಹಗ್ಗವು ತುಂಡಾಗಿ ತುಂಬಿದ ಮಡಕೆಯ ಸಮೇತ ಬಾವಿಯೊಳಗೆ ಬಿದ್ದು ಹೋಯಿತು. ಸಾಂಬಿಯು ತುಂಬಾ ದುಃಖದಿಂದ ಅಳತೊಡಗಿದಳು. ಓ ದೇವರೇ, ನನಗೊಂದು ಒಳ್ಳೆಯ ಹಗ್ಗವನ್ನು ಕೊಡು ಎಂದು ಆಕಾಶದ ಕಡೆ ನೋಡುತ್ತಾ ಅತ್ತುಕೊಂಡೇ ಕೂಗಿ ಹೇಳಿದಳು. ಮೇಲೆ ನೋಡುತ್ತಿದ್ದಂತೆ ಒಂದು ಒಳ್ಳೆಯ ಹಗ್ಗವು ಇವಳ ಕಡೆಗೇ ಇಳಿಬಿಟ್ಟು ಬರುತ್ತಾ ಇತ್ತು. ಅದನ್ನು ಹಿಡಿದು ಮೇಲೆ ಹತ್ತಲು ಪ್ರಯತ್ನ ಪಟ್ಟಾಗ ಅದು ನಿಧಾನವಾಗಿ ಇವಳನ್ನು ಮೇಲಕ್ಕೆ ಎಳೆಯುತ್ತಾ ಒಂದು ಮೋಡದ ಮೇಲಿರಿಸಿತು. ಎಲ್ಲೆಲ್ಲೂ ಕಣ್ಣು ಕೋರೈಸುವ ಬೆಳಕು. ಸುತ್ತಲೂ ನೋಡಿದಾಗ ಹತ್ತಿರದಲ್ಲೇ ಒಂದು ಗೋಡೆಗೆ ಆತುಕುಳಿತಿದ್ದ ಮುದುಕಿಯನ್ನು ಕಾಣುತ್ತಾಳೆ. ಅವಳು ಸಾಂಬಿಯನ್ನು ಹತ್ತಿರಕರೆದು ಏಕೆ ಬಂದೆ, ನಿನಗೇನು ಬೇಕು? ಎಂದು ಕೇಳಿದಳು. ಹುಡುಗಿ ತನ್ನ ಕಷ್ಟವನ್ನು ತೋಡಿಕೊಂಡಾಗ ಮುದುಕಿಯು ಕರುಣೆಯಿಂದ "ಇದೇ ಮಾರ್ಗವಾಗಿ ಮುಂದುವರಿಯುತ್ತಾ ಹೋಗು. ದಾರಿಯಲ್ಲಿ ಒಂದು ಇರುವೆ ನಿನ್ನ ಕಿವಿಯೊಳಗೆ ಪ್ರವೇಶಮಾಡುತ್ತದೆ. ಗಾಬರಿಯಿಂದ ಅದನ್ನು ನೂಕಬೇಡ. ಅದು ಹೇಳಿದ ಹಾಗೆ ಮಾಡು. ನಿನಗೆ ಒಳ್ಳೆಯದಾಗುತ್ತದೆ" ಎಂದು ಹೇಳಿದಳು. ಸಾಂಬಿಯು ಅದೇ ರೀತಿ ಮಾಡಿದಳು. ಮುಂದೆ ಹೋಗುತ್ತಾ ಪ್ರಜ್ವಲಿಸುತ್ತಿದ್ದ ಹಳ್ಳಿಯೊಂದಕ್ಕೆ ಬಂದಳು. ಆಗ ಇರುವೆಯು ಕುಳಿತುಕೊಳ್ಳುವಂತೆ ಹೇಳಿತು. ಊರಬಾಗಿಲಲ್ಲಿ ಕುಳಿತಿದ್ದಾಗ, ಝುಗಝುಗಿಸುವ ಬಟ್ಟೆ ಧರಿಸಿದ್ದ ಯಜಮಾನರುಗಳು ಬಂದು, ನೀನು ಯಾರು, ಇಲ್ಲಿಗೇಕೆ ಬಂದೆ? ಎಂದು

ಕೇಳಿದರು. ಗಾಬರಿಯಿಂದ ಬಂದ ಕೆಲಸ ಮರೆತು "ನನಗೆ ಒಂದು ಮಗು ಬೇಕು, ಅದಕ್ಕೋಸ್ಕರ ಬಂದೆ" ಎಂದು ಹೇಳಿದಳು.

ಅನಂತರ ಆ ವೃದ್ಧರು ಇವಳಿಗೆ ಕೆಲವು ಪರೀಕ್ಷೆಗಳನ್ನು ಒಡ್ಡಿದರು. ಅವೇನೆಂದರೆ, ಒಂದು ಮನೆಗೆ ಕರೆದುಕೊಂಡು ಹೋಗಿ, ಇವಳ ಕೈಗೆ ಒಂದು ಬುಟ್ಟಿಯನ್ನು ಕೊಟ್ಟು, ತೋಟದಿಂದ ಕೆಲವು ಜೋಳದ ತೆನೆಗಳನ್ನು ಶೇಖರಿಸಿಕೊಂಡು ಬರುವಂತೆ ಹೇಳಿದರು. ಆಗ ಇರುವೆಯು "ಒಂದೊಂದೇ ತೆನೆಯನ್ನು ಕಿತ್ತು ಬುಟ್ಟಿಯೊಳಗೆ ಅಂದವಾಗಿ ಜೋಡಿಸಿ ಇಡಬೇಕು," ಎಂದು ಪಿಸುಮಾತಿನಲ್ಲಿ ಹೇಳಿಕೊಟ್ಟಿತು. ಅವಳ ಚೊಕ್ಕವಾದ ಕೆಲಸವನ್ನು ಕಂಡು, ಯಜಮಾನರು ಸಂತೋಷಪಟ್ಟು, ಆಜೋಳದಿಂದ ಅಡಿಗೆ ಮಾಡಬೇಕೆಂದು ಅಜ್ಞಾಪಿಸಿದರು. ಇರುವೆಯ ಸಲಹೆ ಪ್ರಕಾರ ಅವಳು ಮಾಡಿದ ಅಡಿಗೆಯು ಯಜಮಾನರಿಗೆ ತುಂಬಾ ಇಷ್ಟವಾಯಿತು. ಮಾರನೇ ಬೆಳಗ್ಗೆ ಕೆಂಪು ಮತ್ತು ಬಿಳಿ ಬಣ್ಣದ ವಸ್ತ್ರಗಳಿಂದ ಸುತ್ತಿ ನೆಲದಮೇಲೆ ಅಂದವಾಗಿ ಜೋಡಿಸಿ ಮಲಗಿಸಿದ್ದ ಕೆಲವು ಮುದ್ದಾದ ಮಕ್ಕಳನ್ನು ತೋರಿಸಿ, ನಿನಗೆ ಯಾವುದು ಬೇಕೋ ಅದನ್ನು ಆರಿಸಿಕೋ ಎಂದು ಹೇಳಿದರು. (ಪೂರ್ವ ಆಫ್ರಿಕದ ಅನೇಕ ಬುಡಕಟ್ಟು ಜನರು ಬಿಳಿ ಮತ್ತು ಕೆಂಪು ವಸ್ತ್ರಗಳನ್ನು ಮಾತ್ರ ಇಷ್ಟ ಪಡುತ್ತಾರೆ) ಇವಳು ಇನ್ನೇನು ಕೆಂಪು ವಸ್ತು ಸುತ್ತಿದ್ದ ಮಗುವಿನತ್ತ ಕೈಹಾಕುವಷ್ಟರಲ್ಲಿ ಇರುವೆಯು "ಬೇಡ ಬೇಡ, ಬಿಳಿಯ ವಸ್ತ್ರದಿಂದ ಸುತ್ತಿರುವ ಮಗುವನ್ನು ಆರಿಸಿಕೊ" ಎಂದು ಕಿವಿಯಲ್ಲಿ ಉಸುರಿತು. ಅದೇ ಪ್ರಕಾರ ಸಾಂಬಿಯು ಬಿಳಿ ವಸ್ತ್ರದಿಂದ ಅಲಂಕೃತವಾದ ಮಗುವನ್ನು ಆರಿಸಿಕೊಂಡಳು. ಇದರಿಂದ ಸುಪ್ರೀತರಾದ ಯಜಮಾನರು ಆ ಮಗುವನ್ನು ಆಶೀರ್ವದಿಸಿ ಅವಳ ಕೈಗೆ ಕೊಟ್ಟು, ಜೊತೆಗೆ ಹೊಸ ವಸ್ತ್ರಗಳು, ಮಣಿಯ ಆಭರಣಗಳನ್ನು ಕೊಟ್ಟು ಕಳುಹಿಸಿದರಂತೆ. ಅನಂತರ ಸಾಂಬಿಯು ತನ್ನ ಮನೆಗೆ ಹಿಂತಿರುಗಿ ಬಂದಾಗ ಅವಳ ಮುದ್ದಾದ ಮಗು ವಸ್ತ್ರಾಭರಣಗಳನ್ನು ಕಂಡು ತಂದೆತಾಯಿ ಸಂತೋಷಭರಿತರಾದರು. ಈಗಲೂ ರೋಂಗಾ ಬುಡಕಟ್ಟಿನ ಹೆಂಗಸರು-ಮುದ್ದಾದ ಮಕ್ಕಳನ್ನು ದೇವಲೋಕದಲ್ಲಿ ತಯಾರಿಸಿ, ಯೋಗ್ಯರಾದ ತಂದೆ ತಾಯಿಗಳಿಗೆ ಬಳುವಳಿಯಾಗಿ ಕಳುಹಿಸುತ್ತಾರೆ-ಎಂದು ನಂಬುತ್ತಾರೆ. ಅಂತಹ ಮಗುವನ್ನು ಕಂಡ ಇತರೇ ತಾಯಂದಿರು ಅಂತಹದೇ ಮಗುವನ್ನು ಪಡೆಯಲು ಹಂಬಲಿಸುತ್ತಾರಂತೆ.

ಅಧ್ಯಾಯ 5

# ದೈವಗಣ (ಸ್ಪಿರಿಟ್‌ಗಳು)

ಸೃಷ್ಟಿ ಕರ್ತನಾದ ಪರಮಪುರುಷನ ತರುವಾಯ ಎರಡನೇ ಮಟ್ಟದಲ್ಲಿ ಅನೇಕ ಉಪದೇವತೆಗಳಿದ್ದಾರೆಂದೂ, ಅವರೆಲ್ಲಾ ಪರಮೇಶ್ವರನ (ಮುಖ್ಯ ದೇವರ) ಅಧೀನದಲ್ಲಿರುವವರೆಂದೂ ಆಫ್ರಿಕದ ಪುರಾಣಗಳು ಹೇಳುತ್ತವೆ. ಕೆಲವು ಅಧೀನ ದೇವತೆಗಳು ಮಾನವರೊಡನೆ ವ್ಯವಹರಿಸಬಲ್ಲ ಅಗೋಚರ ಪ್ರಕೃತಿ ಚೈತನ್ಯ (ಸ್ಪಿರಿಟ್) ಗಳಾದರೆ ಕೆಲವು ವೈಭವೀಕೃತ ಸಾಹಸಪುರುಷರು ಅಥವಾ ಎರಡೂ ಆಗಿದ್ದಿರಬಹುದು. ಸ್ಪಿರಿಟ್‌ಗಳೆಂದರೆ ವ್ಯಕ್ತೀಕರಿಸಲ್ಪಟ್ಟ ಪ್ರಕೃತಿ ಚೇತನಗಳು[1].

ಇವರನ್ನೆಲ್ಲಾ ಒಟ್ಟಾಗಿ "ದೈವ ಗಣ" ವೆಂದು ಕರೆಯೋಣ. ಹಿಂದೂ ಪುರಾಣಗಳಲ್ಲಿ ಬರುವಂತೆಯೇ ಕಪ್ಪು ಜನರ ಪುರಾಣಗಳಲ್ಲೂ ದೈವ ಗಣಗಳ ಹೆಸರುಗಳು ತುಂಬಿ ತುಳುಕುತ್ತಿವೆ. ಅವರ ಪುರಾಣಗಳಲ್ಲಿ ಬರುವ ಸೂರ್ಯನಿಗೆ ಮಾವು, ಚಂದ್ರ(ಳಿ)ಗೆ ಲೀಸಾ ಎಂತಲೂ, ಬಿರುಗಾಳಿ ದೇವರಿಗೆ ಷಾಂಗೋ, ದೇವಕಮ್ಮಾರನಿಗೆ ನುಮ್ಮೋ ಎಂತಲೂ ಭೂದೇವಿಗೆ ಆಲ, ಆಣಿ, ಅಸಾಸೆ-ಯಾ ಎಂತಲೂ, ಜಲದೇವತೆಗೆ 'ಟ್ವೆ" ಹೀಗೆ ಹಲವಾರು ದೈವಗಳ ಹೆಸರುಗಳು ಆಫ್ರಿಕದ ಉದ್ದಗಲಕ್ಕೂ ಇವೆ. ಇಂದಿನ ನಾಗರಿಕ ನೀಗ್ರೋ ಸಮಾಜಗಳಲ್ಲಿ ಅನೇಕ ವಿದ್ಯಾವಂತರು ಯಾವ ಧರ್ಮಿಯರೇ ಆಗಿರಲಿ, ಹಿಂದಿನ ದೈವಗಳಲ್ಲೂ ಕೊಂಚ ನಂಬಿಕೆ ಇಟ್ಟವರಾಗಿದ್ದಾರೆ. ಕೆಲವು ಪ್ರಮುಖ ದೈವಗಳ ವಿವರಣೆಗಳನ್ನು ಈ ಮುಂದೆ ಕೊಡಲಾಗಿದೆ. ಆದರೆ ಒಂದು ಮಾತು- "ಇಷ್ಟೊಂದು ದೇವರುಗಳನ್ನೇಕೆ ನೀವು ಪೂಜಿಸಬೇಕು, ಒಂದೇ ದೇವರು ಸಾಲದೇ ಎಂದು ನೀವು ಪ್ರಶ್ನಿಸಿದರೆ ದೊರೆಯುವ ಉತ್ತರ "ನಮ್ಮ ಜೀವನದ ಮೇಲೆ ಪ್ರಭಾವ ಬೀರುವ ಯಾವ ಶಕ್ತಿಮೂಲಗಳನ್ನೂ ನಾವು ಮರೆಯುವಂತಿಲ್ಲ; ಸರ್ಕಾರೀ ಕಛೇರಿಯಲ್ಲಿರುವ ಯಾವುದೋ ಒಬ್ಬ ವ್ಯಕ್ತಿಗೆ ನಾವು ಗಮನ ಕೊಟ್ಟರೆ ಸಾಲದು; ಎಲ್ಲ ಅಧಿಕಾರಿಗಳೊಡನೆಯೂ ನಾವು ವ್ಯವಹರಿಸಬೇಕಾಗುವಂತೆಯೇ ಎಲ್ಲ ದೇವರುಗಳನ್ನೂ ಪೂಜಿಸಬೇಕು" ಎಂಬುದು.

---

1. African Mythology -geofrey Parrinder- 66-87.

## ಗಿರಿ ದೇವತೆ

ಸಿರಾ ಲಿಯೋನಿನ ಮೆಂಡೆ ಪುರಾಣದ ಪ್ರಕಾರ ಪ್ರಾರಂಭದಲ್ಲಿ ಮನುಷ್ಯರು ದೇವರಿಗೆ ಪ್ರಾರ್ಥಿಸುತ್ತಿರಲಿಲ್ಲವಂತೆ. ತಮ್ಮ ಬೇಡಿಕೆಗಳೊಡನೆ ನೇರವಾಗಿ ಪರಮಪುರುಷನ ಹತ್ತಿರವೇ ಹೋಗುತ್ತಿದ್ದರಂತೆ. ಸಣ್ಣ ಪುಟ್ಟ ಅಗತ್ಯಗಳಿಗೂ ಪ್ರಧಾನ ದೇವರ ಹತ್ತಿರಲೇ ಹೋಗುತ್ತಿದ್ದರು. ಇದು ಅತಿಯಾಗಿ ಮುಂದುವರೆದಿದ್ದರಿಂದ ದೇವರಿಗೆ ಜುಗುಪ್ಸೆ ಹುಟ್ಟಿ, ಇದನ್ನು ತಪ್ಪಿಸುವುದು ಹೇಗೆಂದು ಚಿಂತಿಸುತ್ತಿದ್ದಾಗ ಒಂದು ಉಪಾಯ ಹೊಳೆಯಿತು. ಅದೇನೆಂದರೆ, ಒಂದು ಬೆಟ್ಟವನ್ನು ಸೃಷ್ಟಿಸಿ ಜನರು ತಮ್ಮ ಬೇಡಿಕೆಗಳನ್ನು ಆ ಗಿರಿದೇವತೆಯ ಮುಂದಿಟ್ಟು ಪರಿಹರಿಸಿಕೊಳ್ಳಲಿ ಎಂಬುದು. ಅದೇ ಪ್ರಕಾರ ದೊಡ್ಡ ಬಂಡೆಗಳಿಂದ ಕೂಡಿದ ಬೆಟ್ಟವೊಂದನ್ನು ನಿರ್ಮಿಸಿ, ಅದಕ್ಕೆ ಮನುಷ್ಯರಂತೆ ಮಾತನಾಡುವ ಶಕ್ತಿಯನ್ನು ಕೊಟ್ಟನು. ನಿನ್ನ ಮಾತಿನ ಮೂಲಕ ಅವರು ದೇವವಾಣಿ ಮತ್ತು ದೇವರ ನಿಯಮಗಳನ್ನು ಅರಿತು ಪಾಲಿಸುವಂತಾಗಲಿ ಎಂದು ಬೆಟ್ಟಕ್ಕೆ ಆಶೀರ್ವದಿಸಿದನು. ಮನುಷ್ಯರ ಕನಸಿನಲ್ಲಿ ನೀನು ಕಾಣಿಸಿಕೊಂಡು ಆ ಮೂಲಕ ಅವರ ಇಷ್ಟಾರ್ಥಗಳನ್ನು ನೆರವೇರಿಸಬೇಕು ಎಂದು ಆದೇಶಿಸಿದನು.

ಒಂದು ರಾತ್ರಿ ಹಳ್ಳಿಯ ಮುದುಕನೊಬ್ಬನಿಗೆ ಕನಸುಬಿದ್ದು ಬೆಟ್ಟವು ತನ್ನ ಕಡೆಗೆ ಬರುತ್ತಿರುವಂತೆ ಕಂಡನು. ಬೆಟ್ಟವು ಕೂಡಲೇ ವೃದ್ಧನ ರೂಪವನ್ನು ತಾಳಿ "ಓ ಸ್ನೇಹಿತನೇ, ನಿನ್ನ ಊರಿನ ಯಜಮಾನರಿಗೆ ಹೇಳಿ ಊರ ಜನರು ನನಗೆ ಆಹಾರವನ್ನು ಒದಗಿಸುವಂತೆ ಮಾಡು" ಎಂದು ಹೇಳಿತು. ಆಗ ಮುದುಕನು ಆ ವೃದ್ಧನನ್ನು ಕುರಿತು ನೀನು ಎಲ್ಲಿಂದ ಬಂದೆ ಎಂದು ಕೇಳಲಾಗಿ, ನಾನು ಆ ಬೆಟ್ಟದಿಂದ ಬಂದೆ ಎಂದು ಬೆಟ್ಟದಕಡೆಗೆ ಬೆರಳು ತೋರಿದನು. ಕನಸು ಕಂಡ ಮುದುಕ, ಅಲ್ಲಿ ಬೆಟ್ಟವಿಲ್ಲವಲ್ಲಾ ಎಂದು ಪ್ರಶ್ನಿಸಿದಾಗ, ನಾನೇ ಆ ಬೆಟ್ಟವಾಗಿರುವಾಗ ಅಲ್ಲಿ ಹೇಗೆ ಬೆಟ್ಟವಿರಲು ಸಾಧ್ಯ ಎಂದು ಹೇಳಿದನಂತೆ. ಸಂಭಾಷಣೆ ಮುಗಿದು ವೃದ್ಧ ಹಿಂತಿರುಗಿದ ಮೇಲೆ ಬೆಟ್ಟವು ಅಲ್ಲಿ ಕಾಣಿಸತೊಡಗಿತು. ಬೆಳಗಾದ ಮೇಲೆ ಅವನು ಊರ ಯಜಮಾನರಿಗೆ ಕನಸಿನ ವೃತ್ತಾಂತವನ್ನು ತಿಳಿಸಲಾಗಿ, ಅವರು ಊರ ಜನರನ್ನೆಲ್ಲಾ ಸಭೆಸೇರಿಸಿ, ನಡೆದ ಕಥೆಯನ್ನು ಸಭೆಗೆ ತಿಳಿಸಿದ ಮೇಲೆ, ಅವರು ಬೆಟ್ಟಕ್ಕೆ ಆಹಾರವನ್ನು ಒದಗಿಸಲು ಒಪ್ಪಿದರು. ಅಲ್ಲದೆ ಕನಸುಕಂಡ ಮುದುಕನಿಗೆ ಕೆಲವು ಶರತ್ತುಗಳನ್ನು ಹಾಕಿದರು– "ನಮ್ಮ ಆಹಾರಕ್ಕಾಗಿ ಸದಾ ಪ್ರಾಣಿಗಳು ದೊರೆಯುವಂತೆ ಬೆಟ್ಟವು ಒಪ್ಪಿಕೊಳ್ಳಬೇಕು– ಪರಕೀಯರ ದಾಳಿಯಿಂದ ನಮ್ಮನ್ನು ರಕ್ಷಿಸಬೇಕು– ನಮ್ಮ ಹೆಂಗಸರು ಮಕ್ಕಳಿಗೆ ಕಾಯಿಲೆ, ಮಾಟಕೂಟಗಳ ವಿರುದ್ಧ ರಕ್ಷಣೆ ನೀಡಬೇಕು– ಹಾಗಾದರೆ ಮಾತ್ರ ನಾವು ಬೆಟ್ಟಕ್ಕೆ ಆಹಾರವನ್ನು ಒದಗಿಸುತ್ತೇವೆ" ಎಂದು ಹೇಳಿದರು. ಅದಕ್ಕೆ ಬೆಟ್ಟವು ಒಪ್ಪಿಕೊಂಡು–ನಿಮ್ಮ ಒಂದೊಂದು ಪ್ರಾರ್ಥನೆಯನ್ನು ಬೆಟ್ಟಕ್ಕೆ ಸಲ್ಲಿಸಿ– ಹೆಂಗಸರೂ ಸಹ ಬಂಡೆಯ ಬಳಿ ಬಂದು ಪ್ರಾರ್ಥನೆ ಸಲ್ಲಿಸಬಹುದು ಎಂದು ಗಿರಿ–ದೇವತೆಯು ಆಶ್ವಾಸನೆ ಕೊಟ್ಟನಂತೆ. ಅಂದಿನಿಂದ ಗಂಡಸರು ಹೆಂಗಸರು ಎಲ್ಲರೂ ಬೆಟ್ಟದ ಬಂಡೆಗಳ ಹತ್ತಿರ ಬಂದು ಪ್ರಾರ್ಥನೆ ಮಾಡ

ತೊಡಗಿದರು. ಮತ್ತು ಅಲ್ಲಿರುವ ದೊಡ್ಡ ಮರಗಳಿಗೂ, ಅಲ್ಲಿ ಹರಿಯುವ ನದಿಗಳಿಗೂ ಪ್ರಾರ್ಥನೆ ಸಲ್ಲಿಸುತ್ತಾ ಬಂದಿದ್ದಾರೆ– ಎಂದು ಮೆಂಡೆ ಪುರಾಣ ಹೇಳುತ್ತದೆ.

**ಸೂರ್ಯಚಂದ್ರರು**

ಸೂರ್ಯಚಂದ್ರರಿಗೆ ನೀಗ್ರೋ ಬುಡಕಟ್ಟಿನವರಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ದಕ್ಷಿಣ ಆಫ್ರಿಕದ ಬುಷ್‌ಮೆನ್ ಮತ್ತು ಹೊಟೆಂಟಾಟ್ ಜನರು ಕೊಡುತ್ತಾರೆಂದು ಅವರು ಹೇಳುವ ಕಥೆಗಳಿಂದ ತಿಳಿದುಬರುತ್ತದೆ.

ಮನುಷ್ಯನಿಗೆ ಸಾವು ಬಂದೊದಗಿದ ವಿಚಾರವನ್ನು ಹೊಟೆಂಟಾಟ್ ಪುರಾಣವು ಚಂದ್ರನ ವೃದ್ಧಿ–ಕ್ಷೀಣ–ವೃದ್ಧಿ ಗತಿಗಳಿಗೆ ಹೋಲಿಸುತ್ತದೆ. ಒಮ್ಮೆ ಚಂದ್ರನು ಮನುಷ್ಯರ ಸಾವಿನ ಬಗ್ಗೆ ಅಭಯವನ್ನು ಕೊಡಬಯಸಿ, ಒಂದು ಹೇನನ್ನು ಕರೆದು "ಚಂದ್ರನ ಶರೀರವು ಕ್ಷೀಣಿಸುತ್ತಾ ಹೋಗಿ, ಒಂದು ದಿನ ಕಣ್ಮರೆಯಾದರೂ ಮಾರನೇ ದಿನವೇ ಮತ್ತೆ ಕಾಣಿಸಿಕೊಳ್ಳುವ ಹಾಗೆಯೇ ಮನುಷ್ಯನೂ ಒಂದು ದಿನ ಸತ್ತು ಹೋದಂತೆ ಕಂಡರೂ ದಿನವೇ ಜೀವಂತಗೊಳ್ಳುತ್ತಾನೆ" ಎಂಬ ಈ ಅಭಯಸಂದೇಶವನ್ನು ಮಾನವನಿಗೆ ಮುಟ್ಟಿಸುವಂತೆ ಹೇಳಿಕಳುಹಿಸುತ್ತಾನೆ. ಈ ಸಂದೇಶವನ್ನು ಹೊತ್ತ ಹೇನು ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ಒಂದು ಮೊಲ ಸಿಗುತ್ತದೆ. ಹೇನು ಸಂತೋಷದ ಸುದ್ದಿಯನ್ನು ಮೊಲಕ್ಕೆ ಹೇಳಿದ ಕೂಡಲೇ ಮೊಲವು ಹೇಳುತ್ತದೆ– "ಅಯ್ಯಾ ನೀನು ಬೇಗ ಹೋಗಿ ಸುದ್ದಿಯನ್ನು ಮುಟ್ಟಿಸಬೇಕಾಗಿದೆ, ಆದರೆ ನೀನು ಓಡಲಾರೆ, ನಾನು ಓಡಿಹೋಗಿ ಅವರಿಗೆ ಸುದ್ದಿ ಮುಟ್ಟಿಸುತ್ತೇನೆ– ಎಂದು ಹೇಳಿ ಓಡಿ ಹೋಗುತ್ತದೆ. ಆದರೆ ಸುದ್ದಿ ಮುಟ್ಟಿಸುವಾಗ "ಚಂದ್ರನು ಕ್ಷೀಣಿಸುತ್ತಾ ಹೋಗಿ ಒಂದು ದಿನ ಕಣ್ಮರೆಯಾಗುವಂತೆ ಮನುಷ್ಯರೂ ಒಂದು ದಿನ ಸಾಯುತ್ತಾರೆ" ಎಂದು ಅಷ್ಟು ಮಾತ್ರ ತಿಳಿಸುತ್ತದೆ. ಮೊಲವು ಚಂದ್ರನ ಮುಂದೆ ಇದನ್ನು ಹೇಳಿದಾಗ ಚಂದ್ರನಿಗೆ ಕೋಪ ಬಂದು ಮರದ ತುಂಡೊಂದನ್ನು ಎತ್ತಿ ಮೊಲದ ಮುಖದ ಮೇಲೆ ಒಗೆಯುತ್ತಾನೆ. ಅದು ಮೊಲದ ತುಟಿಯನ್ನು ಸೀಳಿಬಿಡುತ್ತದೆ. ಅಂದು ಹರಿದ ತುಟಿ ಇಂದಿಗೂ ಹಾಗೆಯೇ ಉಳಿದುಕೊಂಡಿದೆ. ಮತ್ತು ಅಂದಿನಿಂದ ಮೊಲದ ಮಾಂಸವನ್ನು ಬುಡಕಟ್ಟಿನವರು ತಿನ್ನುವ ಹಾಗಿಲ್ಲ ಎಂದು ನಿಷೇಧಿಸಲಾಯಿತು.

ಟೋಗೋ ದೇಶದ ಕ್ರಾಚಿ ಜನರ ಪುರಾಣದ ಪ್ರಕಾರ ಸೂರ್ಯಚಂದ್ರರು ವಿವಾಹವಾಗಿ ಸಾವಿರಾರು ನಕ್ಷತ್ರಗಳಿಗೆ ಜನ್ಮವಿತ್ತರು. ಚಂದ್ರಳಿಗೆ ಇದರಿಂದ ಜುಗುಪ್ಸೆ ಹುಟ್ಟಿ ಬೇರೊಬ್ಬ ಪ್ರೇಮಿಯನ್ನು ಆರಿಸಿಕೊಂಡಳು. ಆಗ ಸೂರ್ಯನಿಗೆ ಕೋಪ ಬಂದು ತಮ್ಮ ಆಸ್ತಿಯಾದ ಮಕ್ಕಳನ್ನು (ನಕ್ಷತ್ರಗಳನ್ನು) ವಿಭಾಗಿಸಿಕೊಂಡರು. ಕೆಲವು ಮಕ್ಕಳು ಚಂದ್ರಳೊಡನೆಯೂ ಕೆಲವು ಸೂರ್ಯನೊಡನೆಯೂ ಇರ ಹತ್ತಿದರು. ಸೂರ್ಯನ ಮಕ್ಕಳು ಚಂದ್ರಳ ಮಕ್ಕಳೊಡನೆ ಆಗಾಗ್ಗೆ ಜಗಳವಾಡುತ್ತಿದ್ದರು. ಅವರ ಜಗಳವೇ ಬಿರುಗಾಳಿ ಮತ್ತು ಮಳೆಗೆ ಕಾರಣವಾಯಿತು. ಒಂದೇ ತಾಯಿಯ ಮಕ್ಕಳು

ಪರಸ್ಪರ ಹೋರಾಡುವುದನ್ನು ನೋಡಲಾರದೆ, ಅದನ್ನು ತಡೆಗಟ್ಟಲು ಬಣ್ಣ ಬಣ್ಣದ ಬಟ್ಟೆಯೊಂದನ್ನು ಶಾಂತಿದೂತನನ್ನಾಗಿ ಚಂದ್ರ ಕಳುಹಿಸುತ್ತಾಳೆ. ಉದ್ದವಾದ ಆ ಬಟ್ಟೆಯೇ ಕಾಮನಬಿಲ್ಲು. ಕೆಲವೊಮ್ಮೆ ಸೂರ್ಯನು ಚಂದ್ರಳನ್ನು ಹಿಡಿದು ತಿನ್ನಲು ಹೋಗುತ್ತಾನೆ. ಅದೇ ಚಂದ್ರಗ್ರಹಣಕ್ಕೆ ಕಾರಣ. ಗ್ರಹಣ ಹಿಡಿಯಲು ಪ್ರಾರಂಭವಾದ ಕೂಡಲೇ ಜನರು ತಮಟೆ, ನಗಾರಿಗಳನ್ನು ಬಡಿಯುತ್ತಾ, ಜೋರಾಗಿ ಚೀರಾಡುತ್ತಾ ಸೂರ್ಯನನ್ನು ಓಡಿಸಲು ಪ್ರಯತ್ನಿಸುತ್ತಾರೆ.

### ಭೂದೇವಿ (ಅರ್ತ್ ಸ್ಪಿರಿಟ್)

ಭೂಮಿಯನ್ನು ದೈವಪದಕ್ಕೇರಿಸಿ ಆರಾಧಿಸುವ ನಂಬಿಕೆ ಭಾರತವರ್ಷೇ ಅಲ್ಲ, ಇಡೀ ಆಫ್ರಿಕದಲ್ಲಿ ವ್ಯಾಪಕವಾಗಿ ಹರಡಿದೆ. ಭೂಮಿಯನ್ನು ಒಂದು ಸ್ತ್ರೀದೇವತೆಯೆಂದೂ, ಸೃಷ್ಟಿಕರ್ತನ ಹೆಂಡತಿಯೆಂದೂ, ಪರಿಗಣಿಸುತ್ತಾರೆ. ಘಾನಾದ ಆಶಂತಿ ಬುಡಕಟ್ಟಿನವರು ಭೂಮಿಯನ್ನು "ಅಸಾಸೆ-ಯಾ" ಎಂದು ಸಂಬೋಧಿಸುತ್ತಾರೆ. ಭೂಮಿಗೆ ಗುರುವಾರ ಪ್ರಶಸ್ತ. ವ್ಯವಸಾಯ ಚಟುವಟಿಕೆಗಳಿಗೆ ಗುರುವಾರ ನಿಶಿದ್ಧ, ಮಳೆ ಬಿದ್ದು ವ್ಯವಸಾಯ ಪ್ರಾರಂಭಿಸುವ ಮೊದಲು ಭೂದೇವಿಗೆ ಜಲ ತರ್ಪಣ ನೀಡಿ ಭೂಮಿಯನ್ನು ಅಂಗೈಯಿಂದ ತಟ್ಟುತ್ತಾರೆ. ಇದು ಉಳುಮೆ ಮಾಡಲು ಅಪ್ಪಣೆ ಬೇಡುವುದಲ್ಲದೆ, ಸಮೃದ್ಧ ಬೆಳೆಗಾಗಿ ಪ್ರಾರ್ಥಿಸುವ ರೀತಿ. ಸತ್ತವರನ್ನು ಹೂಳಲು ಭೂಮಿ ತೋಡುವ ಮೊದಲು ತರ್ಪಣವನ್ನು ನೀಡಿ ಪ್ರಾರ್ಥಿಸಿಕೊಂಡು ನಂತರ ಭೂಮಿಯನ್ನು ಅಂಗೈಯಿಂದ ತಟ್ಟಿ ಅಗೆಯಲು ಪ್ರಾರಂಭಿಸುತ್ತಾರೆ. ಈ ಸಂಪ್ರದಾಯವನ್ನು ಅಮೆರಿಕದ ಕಪ್ಪು ಸಂತತಿಯವರಲ್ಲಿ ಕೆಲವರು ಈಗಲೂ ಅನುಸರಿಸುತ್ತಾರೆ.

ನೈಜೀರಿಯದ ಯೊರುಬಾ ಬುಡಕಟ್ಟಿನವರು ಭೂಮಿ ತಾಯಿಯನ್ನು "ಆಲಾ" ಎಂದು ಕರೆಯುತ್ತಾರೆ. ಆಲಾಮಾತೆಯು ನಮ್ಮ ಒಡತಿಯಲ್ಲದೆ ನೀತಿ ಪ್ರವರ್ತಕಿ ಮತ್ತು ಬೆಳೆಗಳ ಸಂರಕ್ಷಕಿ ಎಂದು ಭಾವಿಸುತ್ತಾರೆ. ಅವಳು ತಾಯಿಯಾದುದರಿಂದ ಬೆಳಸಿಗೂ, ಸ್ತ್ರೀಯರಿಗೂ ಫಲಸಂಮೃದ್ಧಿ ಕೊಡುತ್ತಾಳೆ. ಪಾತಾಳಲೋಕದ ಸಾಮ್ರಾಜ್ಞಿಯಾಗಿ ಸತ್ತವರನ್ನು ತನ್ನ ಒಡಲೊಳಗೆ ಸೇರಿಸಿಕೊಳ್ಳುತ್ತಾಳೆ. ಆಲಾಮಾತೆಯ ಮಂದಿರಗಳು ಯೊರುಬಾ ನಾಡಿನಾದ್ಯಂತ ಕಾಣಬರುತ್ತವೆ.

ಆಫ್ರಿಕದ ಪ್ರಸಿದ್ಧ ಪರ್ವತ ಶಿಖರಗಳಾದ ಮೌಂಟ್ ಕೆನ್ಯಾ, ಕೀಲಿಮಾನ್ಜಾರೊ ಮತ್ತು ಕೆಮರೂನ್ ಶಿಖರಗಳನ್ನು ಪವಿತ್ರ ಪರ್ವತಗಳೆಂದು ಭಾವಿಸುವುದಲ್ಲದೆ, ಅವುಗಳ ಮಹಿಮೆ ಹಾಗೂ ನಿಷೇಧಗಳ ಕಥೆಗಳನ್ನು ಹೇಳುತ್ತಾರೆ. ನಿಷೇಧಾಜ್ಞೆಗಳನ್ನು ಉಲ್ಲಂಘಿಸಿದವರು ಕಣ್ಣುಕುರುಡು, ಜ್ವರ, ಮೈಉರಿ, ವ್ರಣ ಮುಂತಾದ ರೋಗಗಳಿಗೆ ತುತ್ತಾಗಿರುವ ದೃಷ್ಟಾಂತಗಳು ಅನೇಕ ಇವೆಯಂತೆ. ಕೆನ್ಯಾ ದೇಶದ ಗಿಕೂಯು ಸಂತತಿಯ ವೃದ್ಧರು ಹೇಳುವ ಪ್ರಕಾರ ಪ್ರಾರಂಭದಲ್ಲಿ ಸೃಷ್ಟಿಕರ್ತನು ಅದ್ಭುತವಾದ ಪರ್ವತವೊಂದನ್ನು ನಿರ್ಮಿಸಿ ಅದನ್ನು ಭೂಮಿಯಮೇಲೆ ತನ್ನ ವಾಸಸ್ಥಾನವಾಗಿ ಮಾಡಿಕೊಂಡನಂತೆ.

ಅದರ ಹೆಸರು "ಕೆರೆ ನ್ಯಾಗ" (ಹೊಳೆಯುವ ಪರ್ವತ) ಎಂದು. ಐರೋಪ್ಯರ ಮಾತಿನಲ್ಲಿ ಇದು ಮೌಂಟ್ ಕೆನ್ಯಾ ಎಂದಾಗಿ, ದೇಶಕ್ಕೂ ಅದೇ ಹೆಸರು ಬಂದಿತು. ಅದರ ಎತ್ತರ 17,058 ಅಡಿ. ವಿಷುವದ್ರೇಖೆಯ ಮೇಲಿದ್ದೂ ಯಾವಾಗಲೂ ಮಂಜುಗಡ್ಡೆಯ ಕಿರೀಟವನ್ನು ಧರಿಸಿರುವ ಏಕೈಕ ಪರ್ವತಶಿಖರ. ಹೊಳೆಯುವ ಆ ಶಿಖರದಲ್ಲಿ ದೇವರು ವಾಸವಾಗಿದ್ದಾನೆಂಬ ನಂಬಿಕೆ ಬಲವಾಗಿದೆ. ಈಗಲೂ ಕಷ್ಟಬಂದಾಗ ಜನರು ಆ ಶಿಖರದ ಕಡೆಗೆ ತಿರುಗಿ, ಕೈಯೆತ್ತಿ ಪ್ರಾರ್ಥನೆ ಮಾಡುವುದಲ್ಲದೆ ಪ್ರಾಣಿ ಬಲಿಯನ್ನೂ ಅರ್ಪಿಸುತ್ತಾರೆ.

ಧಹೋಮೆಯ ಫಾನ್ ಪಂಗಡದವರು ಭೂದೇವಿಗೆ 'ಮಾವು' ಎಂದು ಕರೆಯುತ್ತಾರೆ. ಮಾವು ತನ್ನ ಮಗನಾದ ಲೀಸಾ ಎಂಬವನಿಗೆ ಲೋಹದ ಕತ್ತಿಯೊಂದನ್ನು ಕೊಟ್ಟು ಕಳುಹಿಸಿದಳಂತೆ. ಭೂಮಿಯ ಮೇಲೆ ಬಂದಿಳಿದ ಲೀಸಾ ಇಲ್ಲಿನ ಜನರಿಗೆ ಲೋಹದ (ಕಬ್ಬಿಣದ) ಉಪಯೋಗಗಳನ್ನು ತೋರಿಸಿಕೊಟ್ಟನಂತೆ. ಮರಕಡಿಯುವುದು, ಮನೆ ಕಟ್ಟುವುದು, ಭೂಮಿಯನ್ನು ಉಳುವುದು ಇತ್ಯಾದಿ ಎಲ್ಲಾ ಕಾರ್ಯಗಳಿಗೂ ಕಬ್ಬಿಣವು ಅತಿ ಮುಖ್ಯ, ಇಲ್ಲದಿದ್ದರೆ ಬದುಕುವುದು ಅಸಾಧ್ಯ ಎಂಬುದನ್ನು ತೋರಿಸಿ, ಒಂದು ಹೊಸ ನಾಗರಿಕತೆಯನ್ನೇ ಸೃಷ್ಟಿಸಿದನು. ಈ ಲೋಹಗಳ ಸಂಚಾಲಕ ದೇವತೆಗೆ ಯೊರುಬಾ ಜನರು ಒಗುನ್ ಎಂದು ಕರೆಯುತ್ತಾರೆ. ಈಗಲೂ ಸೈನಿಕರು, ಬೇಟೆಗಾರರು, ಕಮ್ಮಾರರು ಆ ದೇವರ ಮೇಲೆ ಆಣೆಯಿಡುತ್ತಾರೆ. ಆಧುನಿಕ ಯುಗದಲ್ಲಿ ಲಾರಿ, ಕಾರು, ಬೈಸಿಕಲ್, ಚಾಕು, ಜನರೇಟರ್, ಡೀಸೆಲ್ ಎಂಜಿನ್ ಮುಂತಾದ ಲೋಹದ ಯಂತ್ರೋಪಕರಣಗಳ ಮೇಲೆ ಒಗುನ್ ಪೂಜಾರಿಯು ಪೂಜಿಸಿಕೊಟ್ಟ ಹಕ್ಕಿಯಗರಿ ಅಥವಾ ಹೀಚಲ ಗರಿಯನ್ನು ಸಿಕ್ಕಿಸುತ್ತಾರೆ.

## ಜಲ ದೇವತೆ:

ಯೊರುಬಾ ಜನರ ಪ್ರಕಾರ ಎಲ್ಲಾ ಸಮುದ್ರಗಳಲ್ಲೂ, ಜಲಾಶಯಗಳಲ್ಲೂ, ನದಿ ಕೆರೆ ಕಟ್ಟೆಗಳಲ್ಲೂ ಶಕ್ತಿಯುತವಾದ ದೈವವೊಂದಿರುತ್ತದೆ. ಸಮುದ್ರಾಧಿಪತಿಯಾದ ಒಲ್-ಒಕುನ್ (ಓಲೋಕುನ್) ಸಮುದ್ರ ತಳದಲ್ಲಿರುವ ಅರಮನೆಯಲ್ಲಿ ವಾಸಿಸುತ್ತಾನೆ. ಅವನ ಸೈನಿಕರು ಮತ್ತು ಸೇವಕರು ಮಾನವ ಹಾಗೂ ಮೀನಿನ ರೂಪದಲ್ಲಿರುತ್ತಾರೆ. ಸಕಲೈಶ್ವರ್ಯ ಸಂಪನ್ನನಾದ ಓಲೊಕುನ್ ಒಮ್ಮೆ ಸೃಷ್ಟಿಕರ್ತನ ವೈಭವವನ್ನು ಕಂಡು, ಅಸೂಯೆಯಿಂದ ಒಂದು ಉಡುಪಿನ ಸ್ಪರ್ಧೆಯನ್ನು ಏರ್ಪಡಿಸುತ್ತಾನೆ. "ಸೃಷ್ಟಿ ಕರ್ತನು ತನ್ನ ಅತ್ಯುತ್ತಮವಾದ ಉಡುಪುಗಳನ್ನು ಹಾಕಿಕೊಂಡು ಬರಲಿ. ನಾನು ಅದೇ ರೀತಿಯ ಉಡುಪುಗಳನ್ನು ಹಾಕಿಕೊಂಡು ತೋರಿಸುತ್ತೇನೆ. ಯಾರು ಗೆದ್ದರು ಎಂಬುದನ್ನು ಪ್ರೇಕ್ಷಕರೇ ತೀರ್ಮಾನಿಸಲಿ" ಎಂದು ಕರೆ ನೀಡುತ್ತಾನೆ. ಸ್ಪರ್ಧೆಯ ದಿನ ಸೃಷ್ಟಿಕರ್ತನು ಸಮುದ್ರರಾಜನನ್ನು ಸಭಾಂಗಣಕ್ಕೆ ಕರೆತರಲು ತನ್ನ ದೂತನಾದ ಗೋಸುಂಬೆಯನ್ನು ಕಳುಹಿಸುತ್ತಾನೆ. ಆದರೆ ಸಮುದ್ರರಾಜನು ತನ್ನ ಅರಮನೆಯಿಂದ ಹೊರಬರುತ್ತಿದ್ದಂತೆ ಗೋಸುಂಬೆಯು ಹಾಕಿರುವ ಪೋಷಾಕು ತನ್ನ ಪೋಷಾಕಿನಂತೆಯೇ ಇರುವುದನ್ನು

ಕಂಡು ಆಶ್ಚರ್ಯಗೊಂಡು, ಅದಕ್ಕಿಂತಲೂ ಉತ್ತಮವಾದ ಉಡುಪನ್ನು ಧರಿಸಿಕೊಂಡು ಬರಲು ಅರಮನೆಗೆ ಹಿಂತಿರುಗುತ್ತಾನೆ. ಅಪೂರ್ವವಾದ ವಸ್ತುಗಳನ್ನು ಧರಿಸಿ ಅದರ ಮೇಲೆ ಅಮೂಲ್ಯವಾದ ಹವಳದ ಮಣಿಗಳ ಸರವನ್ನು ಹಾಕಿಕೊಂಡು ಹೊರಗೆಬಂದು ನೋಡುತ್ತಾನೆ, ಗೋಸುಂಬೆಯೂ ಅದೇ ತರಹದ ಒಡವೆ ವಸ್ತ್ರಗಳನ್ನು ಹಾಕಿಕೊಂಡಿತ್ತು. ಹೀಗೆ ಗೋಸುಂಬೆಯನ್ನು ಮೀರಿಸಲು ಏಳುಸಾರಿ ಪ್ರಯತ್ನ ಪಟ್ಟಾಗ್ಯೂ ಪ್ರತಿಸಾರಿಯೂ ಅದು ಅವನಿಗೆ ಸರಿಸಮವಾದ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಿತ್ತು. ಕಡೆಗೆ ಓಲೋಕುನ್ ವಿವೇಚಿಸಿದ್ದೇನೆಂದರೆ– ದೇವರ ಸೇವಕನೇ ಇಷ್ಟು ವೈಭವದ ಒಡವೆ ವಸ್ತ್ರಗಳನ್ನು ಧರಿಸಿಕೊಳ್ಳುವಾಗ, ಇನ್ನು ದೇವರು ಎಷ್ಟರ ಮಟ್ಟಿಗೆ ಇರಬೇಡ! ನನಗಿಂತಲೂ ಅಧಿಕತರವಾದ ಐಶ್ವರ್ಯಗಳು ಅವನ ಬಳಿ ಇದ್ದೇ ಇರುತ್ತವೆ. ಎಂದಂದುಕೊಂಡು ತನ್ನ ಸೋಲನ್ನೊಪ್ಪಿ, ಸ್ಪರ್ಧೆಯನ್ನು ಕೈಬಿಡುತ್ತಾನೆ. ಅಂದಿನಿಂದ ಓಲೋಕುನ್ ದೇವರಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿಕೊಂಡನು. ಗೋಸುಂಬೆಯು ಪದೇ ಪದೇ ತನ್ನ ಬಣ್ಣದ ರೂಪನ್ನು ಬದಲಾಯಿಸುತ್ತದೆ. ಕಂಚಿನಿಂದ ಮಾಡಿರುವ ಓಲೋಕುನ್ ವಿಗ್ರಹವು ಬಹಳ ಕುತೂಹಲ ಕಾರಿಯಾಗಿದೆ. ವಿಕೃತಗೊಂಡ ಕಾಲುಗಳುಳ್ಳ ಮನುಷ್ಯಾಕೃತಿ, ಹವಳದ ಉಡುಪುಗಳನ್ನು ಧರಿಸಿ ಎರಡು ಕೈಗಳಲ್ಲೂ ಒಂದೊಂದು ಗೋಸುಂಬೆಯ ವಿಗ್ರಹವನ್ನು ಹಿಡಿದು ತಲೆಗೆ ಲೋಹದ ಕಿರೀಟವನ್ನು ಧರಿಸಿದೆ. ಆದರೆ ಕಾಲುಗಳು ಮಾತ್ರ ಹೊರಕ್ಕೆ ಬಾಗಿರುವ ದುಂಡನೆಯ ಹಾವಿನಂತೆ ಕಾಣುತ್ತವೆ. ಕಾಲುಗಳ ತುದಿಯಲ್ಲಿ ನಕ್ಷತ್ರಾ ಕೃತಿಯ ಈಜು ರೆಕ್ಕೆಗಳುಳ್ಳ ಈ ವಿಗ್ರಹವು ನೈಜೀರಿಯದ ಬೆನಿನ್ ಸಿಟಿಯಲ್ಲಿದೆ.

ಘಾನಾ ಮತ್ತು ಐವೊರಿ ಕೋಸ್ಟ್‌ನಲ್ಲಿ "ತಾನೋ ಸ್ಪಿರಿಟ್" ಒಂದು ಮುಖ್ಯವಾದ ಜಲದೇವತೆ. ಪರಮಪುರುಷನ ಮಗನಾದುದರಿಂದ ಇವನೂ ಸೃಷ್ಟಿಕಾರ್ಯದಲ್ಲಿ ಭಾಗವಹಿಸುತ್ತಾನೆ. ಘಾನಾದಲ್ಲಿರುವ ಬೊಸೊಮ್‌ತ್ವೆ ಸರೋವರದಲ್ಲಿ 'ಟ್ವೆ' ಎಂಬ ದೇವತೆ ವಾಸವಾಗಿದ್ದಾನೆಂದು ಹೇಳುತ್ತಾರೆ. ಇಲ್ಲಿ ಮೀನು ಹಿಡಿಯಲು ಕಬ್ಬಿಣದ ಕೊಕ್ಕೆ ಮತ್ತು ಬಲೆಯನ್ನು ಉಪಯೋಗಿಸುವ ಹಾಗಿಲ್ಲ. ಟ್ವೇಗೆ ಅದು ಇಷ್ಟವಿಲ್ಲ.ಮರದ ದೋಣಿಯ ಮೇಲೆ ಹೋಗಿ ಮಡಕೆಯಿಂದ ಮೀನು ಹಿಡಿಯಬೇಕೆಂದು ಹೇಳುತ್ತಾರೆ. ಈಗಲೂ ಪಶ್ಚಿಮ ಆಫ್ರಿಕದ ಒಳನಾಡು ಪ್ರದೇಶಗಳಲ್ಲಿ ಮೀನುಗಾರಿಕೆ ಹೀಗೆಯೇ, ನಡೆಯುತ್ತಿದೆ.

ಮಲಗಸೀ (ಮಡಗಾಸ್ಕರ್ ದ್ವೀಪ) ಬುಡಕಟ್ಟುಗಳಲ್ಲಿ "ಮೊಸಳೆಯ ಮಕ್ಕಳು" ಎಂಬ ಕುಲವೊಂದಿದೆ. ಈ ವಂಶದ ಮೂಲತಾಯಿಯಾದವಳು ಮೊಸಳೆಯ ಹೆಂಡತಿಯಾಗಿ ನದಿಯೊಳಗೆ ವಾಸಮಾಡಿಕೊಂಡಿದ್ದಳಂತೆ. ಒಂದು ದಿನ ಯಾರೋ ಮೀನಿಗಾಗಿ ಹಾಕಿದ್ದ ಬಲೆಯಲ್ಲಿ ಸಿಕ್ಕಿಕೊಂಡು ಆ ಮೀನುಗಾರನನ್ನು ಮದುವೆಯಾಗ ಬೇಕಾಯಿತು. ಅವನಿಂದ ಎರಡು ಗಂಡುಮಕ್ಕಳನ್ನು ಪಡೆದನಂತರ, ಮಕ್ಕಳನ್ನು ಅಲ್ಲೇ ಬಿಟ್ಟು ನದಿಗೆ ಹಿಂತಿರುಗುತ್ತಾಳೆ. ಅಂದಿನಿಂದ ಭೂಮಿಯ ಮೇಲಿರುವ ಅವಳ ಸಂತತಿಯವರು ಮೊಸಳೆಯ ಮಾಂಸ ತಿನ್ನುವುದಿಲ್ಲ. ಮೊಸಳೆಗೆ ಹಿಂಸೆಕೊಡುವುದಿಲ್ಲ.

ಜಲ ದೇವತೆಗಳಿಗೆ ಪ್ರತ್ಯೇಕ ಗುಡಿಗಳಿಲ್ಲದಿದ್ದರೂ ನೈಜರ್ ದೇವತೆಗಳಾದ ಫರಾನ್ ಮತ್ತು ಟಗರು, ಸಮುದ್ರದೇವತೆಯಾದ ಓಲೊಕುನ್ ಮತ್ತು ಟ್ವೇ ಸ್ಪಿರಿಟ್‌ಗಳ ಮುಖವಾಡಗಳನ್ನು ಧರಿಸಿ, ವಾರ್ಷಿಕ ಮಾಸ್ಕರೇಡ್ ಸಮಾರಂಭದಲ್ಲಿ ಭಾಗವಹಿಸುತ್ತಾರೆ.

## ಮಳೆಯ ದೇವತೆ

ಮಳೆ ಹೆಚ್ಚಾಗಿ ಬೀಳುವ ಉಷ್ಣವಲಯದ ಕಾಡು ಪ್ರದೇಶಗಳಲ್ಲಿ ತತ್ರಾಪಿ ಗಿನೀಸವನ್ನಾ ಹುಲ್ಲುಗಾವಲಿನಲ್ಲಿ ಮಳೆಯು ಗುಡುಗು ಮಿಂಚು, ಸಿಡಿಲುಗಳಿಂದ ಕೂಡಿ ಅತಿ ಭಯಂಕರವಾಗಿರುತ್ತದೆ. ಒಳ್ಳೆಯದರ ಜೊತೆಗೆ ಅಪಾಯವನ್ನೂ ತರುತ್ತದೆ. ಅದರ ರುದ್ರ ಭಯಂಕರವಾದ ಆರ್ಭಟಕ್ಕೆ ಹೆದರಿದ ಜನರು ಶಾಂತಿಗೋಸ್ಕರ ಮಳೆದೇವರಲ್ಲಿ ಪ್ರಾರ್ಥಿಸುತ್ತಾರೆ. ಆದರೆ ಮಳೆಕಡಿಮೆ ಬೀಳುವ ಒಣಹುಲ್ಲುಗಾವಲು ಪ್ರದೇಶಗಳಲ್ಲಿ ಮಳೆಯನ್ನು ಪ್ರೀತಿಯಿಂದ ಆಹ್ವಾನಿಸುತ್ತಾರೆ. ಮಳೆಗಾಗಿ ಪ್ರಾರ್ಥಿಸುತ್ತಾರೆ. ಪ್ರಾಣಿಬಲಿ ಕೊಡುತ್ತಾರೆ. ಹೀಗೆ ಮಳೆಯ ಸ್ಪಿರಿಟ್ಟನ್ನು ಉಭಯಭಾವಗಳಿಂದಲೂ ಸಂಪ್ರೀತಗೊಳಸಬೇಕಾಗಿದೆ. ಹೀಗಿದೆ ಇದರ ವಿಪರ್ಯಾಸ.

ಯೊರುಬಾ ಬುಡಕಟ್ಟಿನ ಮಳೆಯ ದೇವರಾದ 'ಶಾಂಗೊ' ಬಗ್ಗೆ ಕುತೂಹಲಕಾರಿ ಕಥೆಗಳನ್ನು ಹೇಳುತ್ತಾರೆ. ಈ ದೇವರು ಒಮ್ಮೆ ಮನುಷ್ಯನಾಗಿದ್ದನೆಂದು ಸಾಕ್ಷೀಭೂತವಾಗಿ ಹೇಳುತ್ತಾರೆ, ಇವನು ಯೊರುಬಾ ಪಂಗಡದ ನಾಲ್ಕಾನೇ ರಾಜನಾಗಿದ್ದನಂತೆ. ಇವನ ರಾಜ್ಯವು ಅಕ್ಕಪಕ್ಕದ ರಾಜ್ಯಗಳಲ್ಲೂ ಹರಡಿ ವಿಶಾಲವಾಗಿತ್ತಂತೆ. ಶಾಂಗೊರಾಜ ಬಿಗಿ ಆಡಳಿತಗಾರನಲ್ಲದೆ ದೊಡ್ಡ ಮಂತ್ರವಾದಿಯೂ ಹೌದು, ಜೊತೆಗೆ ಕ್ರೂರಿಯಾಗಿದ್ದನು. ತನ್ನ ಬಾಯಿಯಿಂದ ಬೆಂಕಿಯನ್ನು ಉಗುಳಿ ಜನರನ್ನೂ ಕೊಲ್ಲುತ್ತಿದ್ದನಂತೆ. ಇದನ್ನು ಸಹಿಸಲಾರದೆ ಕಡೆಗೆ ಇವನ ಇಬ್ಬರು ಮಂತ್ರಿಗಳು ತಿರುಗಿ ಬಿದ್ದರು. ಇದು ಗೊತ್ತಾಗಿ ರಾಜನು ಅವರಲ್ಲೇ ಒಬ್ಬರ ಮೇಲೊಬ್ಬರು ಹೊಡೆದಾಡುವಂತೆ ಉಪಾಯ ಹೂಡಿದನು. ಇಬ್ಬರೂ ಸಾಯುತ್ತಾರೆಂದು ಶಾಂಗೊ ಎಣಿಸಿದ್ದ. ಆದರೆ ಅವರಲ್ಲಿ ಒಬ್ಬ ಮಾತ್ರ ಸತ್ತು ಉಳಿದವನು ರಾಜನಮೇಲೆ ತಿರುಗಿ ಬಿದ್ದನು. ಇದರ ಸೂಕ್ಷ್ಮವನ್ನರಿತ ಶಾಂಗೋ ಕುದುರೆಯನ್ನೇರಿ, ತನ್ನ ಮೂವರು ಮಡದಿಯರನ್ನು ಕರೆದುಕೊಂಡು, ಕಾಡಿಗೆಹೋಗಿ ಕಣ್ಮರೆಯಾದನು. ಆದರೂ ತನ್ನ ಪ್ರಜೆಗಳ ಮೇಲೆ ಶಾಂಗೊ ಆಗಾಗ್ಗೆ ಆಕಾಶದಿಂದ ಬೆಂಕಿಯನ್ನು ಕಳುಹಿಸುವ ಮೂಲಕ ಕೋಪ ತೋರಿಸುವುದನ್ನು ಬಿಡಲಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರಾಣಿಬಲಿ ಕೊಟ್ಟು, ಅವನನ್ನು ಶಾಂತ ಗೊಳಿಸುವುದಕ್ಕೋಸ್ಕರ 'ಕೋಸೊ' ಎಂಬಲ್ಲಿ (ಇಬದಾನ್ ಹತ್ತಿರ) ಅವನ ದೇವಾಲಯವನ್ನು ಕಟ್ಟಿದ್ದಾರೆ. ಅಲ್ಲಿ ಒಬ್ಬ ಪೂಜಾರಿ ಇದ್ದಾನೆ. ಇವನು ವೈದ್ಯ ಮತ್ತು ಮಂತ್ರವಾದಿಯೂ ಆಗಿರುತ್ತಾನೆ. ·ದೇವಾಲಯದ ಬಾಗಿಲಲ್ಲಿ ನಾಲ್ಕು ಮರದಕಂಬಗಳನ್ನು ನೆಟ್ಟಿದ್ದಾರೆ. ಈ ಕಂಬಗಳ ಮೇಲ್ತುದಿಯಲ್ಲಿ ಬಲಿಯನ್ನಿಡುತ್ತಾರೆ. ಕಂಬಗಳಿಗೆ ಕೆಂಪು ಬಣ್ಣ ಹಚ್ಚಿ, ಅದರಮೇಲೆ ಸಿಡುಬಿನ ಮಚ್ಚೆಗಳಂತೆ ಕಾಣುವ ಬಿಳಿಬಣ್ಣದ ಬಟ್ಟುಗಳನ್ನು ಹಚ್ಚಿದ್ದಾರೆ. ಪುರಾಣ ಸಮ್ಮತ ವಿಗ್ರಹಗಳನ್ನು ಮರದಲ್ಲಿ ಕೊರೆದು ಇಟ್ಟಿದ್ದಾರೆ. ಒಳಗೆ ಪೀಠದ ಮೇಲೆ

"ಸಿಡಿಲಿನ ಕಲ್ಲುಗಳನ್ನು" ಇರಿಸಿದ್ದಾರೆ. ಇವು ಮಳೆಗಾಲದಲ್ಲಿ ಮಳೆಯ ಜೊತೆಬೀಳುವ ಕಲ್ಲುಗಳೆಂದು ಪೂಜಾರಿ ಹೇಳುತ್ತಾನೆ. ಈ ಕಲ್ಲುಗಳನ್ನು ಸಿಡಿಲಿನ ಕೊಡಲಿ ಎಂದೂ ಕರೆಯುತ್ತಾರೆ. ಮರದ ಹಿಡಿಕೆಯನ್ನು ಜೋಡಿಸಿರುವ ಇಂತಹ ಕೊಡಲಿಗಳನ್ನು ಪೂಜಾರಿಯ ಸಹಾಯಕರು, ದೇವರ ಸಂಕೇತವಾಗಿ ಹಿಡಿದುಕೊಳ್ಳುತ್ತಾರೆ. ಯೊರುಬಾ ಜನರು ಗುಡುಗು ಸಿಡಲಿನ ಶಬ್ದವನ್ನು ಟಗರು ಮಾಡುವ ಗರ್ಜನೆಯೆಂದೂ ಶಾಂಗೊ ದೇವರಿಗೆ ಟಗರು ಪ್ರಿಯವೆಂದೂ ಹೇಳುವುದುಂಟು. ಆದ್ದರಿಂದಲೇ ಈಗಲೂ ಟಗರುಗಳು ಸಂತೆ, ಅಂಗಡಿ ಬೀದಿಗಳಲ್ಲಿ ಎಲ್ಲಿ ಬೇಕಾದರೂ ನಿರ್ಭಯವಾಗಿ ಓಡಾಡುತ್ತವೆ.

## ಕಾಮನ ಬಿಲ್ಲು

ಕಾಮನ ಬಿಲ್ಲು ಅದರ ಆಕರ್ಶಕ ಬಣ್ಣಗಳಿಗಿಂತ ಹೆಚ್ಚಾಗಿ ಅದು ತರುವ ಮಂತ್ರಶಕ್ತಿಗಾಗಿ ಪ್ರಸಿದ್ಧಿ ಪಡೆದಿದೆ. ಬಿರುಗಾಳಿ ಮತ್ತು ಮಳೆಯಿಂದಾಗುವ ಅನಾಹುತ ಗಳನ್ನು ತಪ್ಪಿಸುವುದಕ್ಕಾಗಿ ಮತ್ತು ಅಗತ್ಯವಿಲ್ಲದಾಗ ಬೀಳುವ ಮಳೆಯನ್ನು ತಪ್ಪಿಸುವುದಕ್ಕಾಗಿ ದೇವರು ಎರಡುವಿಧವಾದ ಕಾಮನ ಬಿಲ್ಲುಗಳನ್ನು ನಿರ್ಮಿಸಿದ್ದಾನೆ. ಹೆಣ್ಣುಕಾಮನಬಿಲ್ಲು ಹೆಚ್ಚು ಅಗಲವಾಗಿಯೂ ದಟ್ಟವಾದ ಬಣ್ಣಗಳಿಂದಲೂ ಕೂಡಿರುತ್ತದೆ. ಆದರೆ ಗಂಡುಕಾಮನಬಿಲ್ಲು ಕಿರಿದಾಗಿಯೂ, ಬಣ್ಣಗಳು ಮಂಕಾಗಿಯೂ ಇರುತ್ತವೆ. ಗಂಡುಕಾಮನಬಿಲ್ಲಿಗೆ ಮಳೆಯನ್ನು ನಿಲ್ಲಿಸುವ ಶಕ್ತಿಯಿಲ್ಲ. ಆದರೂ ಅದು ಮೊದಲು ಕಾಣಿಸಿಕೊಂಡು ಅನಂತರ ಹೆಣ್ಣು ಕಾಮನಬಿಲ್ಲು ಕಾಣಿಸಿಕೊಂಡರೆ ಆಗ ಮಳೆ ನಿಲ್ಲುತ್ತದೆ ಎಂದು ಹೇಳುತ್ತಾರೆ. ದಕ್ಷಿಣ ಆಫ್ರಿಕದ ಜೂಲು ಪಂಗಡದವರು ಕಾಮನಬಿಲ್ಲು 'ರಾಣಿಯ ಕಮಾನು' ಎಂದು ಹೇಳುತ್ತಾರೆ. ಅದು ದೇವಲೋಕದ ರಾಣಿಯ ಅರಮನೆಯ ಮಹಾದ್ವಾರ. ಅದರಿಂದಲೇ ಅದಕ್ಕೆ ಮನಮೋಹಕ ಬಣ್ಣಗಳ ಅಲಂಕಾರ.

## ಮಂತ್ರದಿಂದ ಮಳೆ

ಭಾರತದಲ್ಲಿ ಕ್ರಿಕೆಟ್ ಹೇಗೋ ಹಾಗೆ ಆಫ್ರಿಕದಲ್ಲಿ ಸಾಕರ್ ಮ್ಯಾಚ್ (ಫುಟ್‌ಬಾಲ್ ಪಂದ್ಯ). ವಿಶ್ವಸಾಕರ್ ಪಂದ್ಯಗಳು ಇರುವಂತೆಯೇ ಪ್ಯಾನ್ ಆಫ್ರಿಕನ್ ಕಪ್‌ಗಾಗಿ ಫುಟ್‌ಬಾಲ್ ಪಂದ್ಯಗಳನ್ನು ಆಗಾಗ್ಗೆ ಏರ್ಪಡಿಸುತ್ತಾರೆ. ಆಫ್ರಿಕದ ಎಲ್ಲ ಪ್ರಮುಖ ದೇಶಗಳೂ ಅದರಲ್ಲಿ ಭಾಗವಹಿಸುತ್ತವೆ. ಆಗ ಯುವಕರು, ಜನರು ಹುಚ್ಚೆದ್ದು ಕುಣಿಯುತ್ತಾರೆ. ನಾವು ಅಡಿಸ್ ಅಬಾಬದಲ್ಲಿದ್ದಾಗ (1972 ಇರಬಹುದು) ಅಂತಹ ಒಂದು ಪಂದ್ಯವು ಅಡಿಸ್ ಅಬಾಬದಲ್ಲಿ ಏರ್ಪಾಡಾಗಿತ್ತು. ಬಲವಾದ ಟೀಮುಗಳು ಆಟ ಇದ್ದ ದಿವಸ ಬೊಬ್ಬೆಯೋ ಬೊಬ್ಬೆ. "ಈ ದಿನ ದಕ್ಷಿಣ ಆಫ್ರಿಕ ಮತ್ತು ರೊಡೀಷಿಯಗಳ ಪಂದ್ಯ ಬಹಳ ಗಂಭೀರವಾಗಿರುತ್ತದೆ. ಏಕೆಂದರೆ ಎರಡೂ ಕಡೆಯವರು ಮಳೆ ಬರಿಸುವ ಹಾಗೂ ಮಳೆ ನಿಲ್ಲಿಸುವ ಮಂತ್ರವಾದಿಗಳೊಡನೆ ಸಿದ್ಧವಾಗಿದ್ದಾರೆ" ಎಂದು ಎಲ್ಲರ ಬಾಯಲ್ಲೂ ಹಾಗೂ ಪತ್ರಿಕೆಗಳಲ್ಲೂ ಅದೇ ಸುದ್ದಿ. ಮಂತ್ರದ ಮಳೆಯಿರಲಿ, ಅಕಸ್ಮಾತ್ ಸ್ವಾಭಾವಿಕವಾಗಿ ಮಳೆ ಬಿದ್ದರೂ, ಎದುರಾಳಿಯ ಟೀಮಿನ ಮೇಲೆ ಪ್ರೇಕ್ಷಕರು ನುಗ್ಗಿ ಹೊಡೆದಾಟ ಮಾಡುವುದು ಖಂಡಿತ. ಅಂದು ನಡೆದದ್ದೂ ಹಾಗೆಯೇ. ಮಳೆಯೂ

ಬಂತು, ಹೊಡೆದಾಟವೂ ನಡೆಯಿತು. ಅಂದಿನ ಆಟವನ್ನು ಮುಂದೂಡಲಾಯಿತು. ನಮ್ಮಂತಹ ಹೊರದೇಶದವರಿಗೆ ಆ ಮಳೆ ಸ್ವಾಭಾವಿಕವಾಗಿಯೇ ಕಾಣುತ್ತಿತ್ತು. ಅವರಿಗೆ ಮಾತ್ರ ಅದು ಮಂತ್ರದ ಮಳೆ.

ಮಂತ್ರವಾದಿಗಳು ಮಳೆಯನ್ನು ಬರಿಸಬಲ್ಲರೇ ಅಥವಾ ಬರುವ ಮಳೆಯನ್ನು ತಡೆಯಬಲ್ಲರೇ ಎಂಬ ಪ್ರಶ್ನೆ ಕೇಳಬೇಡಿ. ನಮ್ಮ ಪರ್ಜನ್ಯ ಜಪದಿಂದ ಮಳೆ ಬರುವುದು ನಿಜವಾದರೆ ದಕ್ಷಿಣ ಆಫ್ರಿಕದ ಮಂತ್ರವಾದಿಗಳಿಂದಲೂ ಮಳೆ ಬರಿಸುವುದು ನಿಜವೇ ಆಗಿರಬೇಕಲ್ಲವೇ! ನಮ್ಮಲ್ಲಿ ಕಾಲಕ್ಕೆ ಸರಿಯಾಗಿ ಬರಬೇಕಾದ ಮಳೆ ಬಾರದೇ ಇದ್ದರೆ, ಬರಗಾಲ ಕಾಣಿಸಿಕೊಂಡರೆ ಅನೇಕ ಊರು ಪಟ್ಟಣಗಳಲ್ಲಿ ಪರ್ಜನ್ಯ ಜಪವನ್ನು ನಡೆಸಿರುವ ಸುದ್ದಿಯನ್ನು ಓದಿ, ಕೇಳಿ ತಿಳಿದಿದ್ದೇವೆಯೇ ಹೊರತು ಅದರ ಪರಿಣಾಮವನ್ನಲ್ಲ. ಸುಸಂಸ್ಕೃತರು ದೇವಾಲಯಗಳಲ್ಲಿ ಪ್ರಾರ್ಥನೆ, ಅಭಿಷೇಕಗಳನ್ನು ಮಾಡಿಸುವುದುಂಟು. ಮಕ್ಕಳು ಬಸವನ ಮೆರವಣಿಗೆ ಮಾಡುವುದುಂಟು. ಹಳ್ಳಿಗಳ ಕಡೆ ಮಳೆಗಾಗಿ ಜನರು ಕಾಡಿನ ಹತ್ತಿರವಿರುವ ಗುಡಿಗೋ, ಗ್ರಾಮದೇವತೆಯ ಗುಡಿಗೋ ಪ್ರಾಣಿಬಲಿ ಕೂಡುವುದನ್ನು ಕೇಳಿದ್ದೇವೆ. ತತ್ಪರಿಣಾಮವಾಗಿ ಮಳೆ ರಾಯನ ಕೃಪೆ ಆದದ್ದೂ ಉಂಟು; ತಡವಾಗಿ ಆದದ್ದೂ ಉಂಟು ಎಂದು ನಮ್ಮ ಗ್ರಾಮಸ್ಥರು ಹೇಳುತ್ತಾರೆ.

ಅಂತಹ ಒಂದು ಪ್ರತ್ಯಕ್ಷ ನಿದರ್ಶನ ಇಲ್ಲಿದೆ. ಅಮಚವಾಡಿಯ ಊರೊಳಗೆ ಒಂದು ಮಣ್ಣುಗುಡ್ಡೆಯ ಮೇಲೆ ಜಗನ್ನಾಥ ದೇವರ ಪುಟ್ಟ ಗುಡಿಯೊಂದಿತ್ತು. ಬರಗಾಲ ಬಂದಾಗ ಈ ಗುಡ್ಡೆಯ ಮೇಲಿನ ಜಗನ್ನಾಥನಿಗೆ ಗುಗ್ಗರಿ ಸೇವೆ ಮಾಡಿಸಿದರೆ ಮಳೆ ಬರುವತ್ತದೆಯೆಂಬುದು ಅಲ್ಲಿನ ಪ್ರತೀತಿ. ಒಮ್ಮೆ, 1935 ಇರಬಹುದು, ಊರ ಪ್ರಮುಖರಲ್ಲೊಬ್ಬರಾದ ಕಲ್ಕೆರೆ ಶಿದ್ದರಾಜೇ ಅರಸಿನವರು ಅವರೇಕಾಳು ಗುಗ್ಗರಿ ಮಾಡಿಸಿ ನೈವೇದ್ಯಕ್ಕಿಟ್ಟು, ಪೂಜೆಯಾದ ನಂತರ ಎಲ್ಲರಿಗೂ ಕೇಳುವಂತೆ "ಸ್ವಾಮಿ ಜಗನ್ನಾಥಾ, ಮಳೆಯಿಲ್ಲದೆ ನಾವೆಲ್ಲಾ ಸಂಕಟ ಪಡುತ್ತಿದ್ದೇವೆ–ಈಗ ನಿನ್ನ ಸೇವೆ ಮಾಡಿ ಪ್ರಸಾದಕ್ಕಾಗಿ ಕಾಯುತ್ತಿದ್ದೇವೆ–ಕರುಣೆ ತೋರು ಜಗನ್ನಾಥಾ, ನಿನ್ನನ್ನೆ ನಂಬಿದ್ದೇವೆ–ಮಳೆ ಕೊಟ್ಟು **ಕಾಪಾಡು**" ಎಂದು ಕೈಯಲ್ಲಿ ಹೂವು ಹಿಡಿದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದ ನಂತರ ಗಂಟೆ ಜಾಗಟೆಯೊಡನೆ ಮಂಗಳಾರತಿ ಬೆಳಗಿತು. ಗುಗ್ಗರಿ ಪ್ರಸಾದವನ್ನು ಹಂಚುತ್ತಿರುವಾಗಲೇ ಗುಡುಗಿನ ಶಬ್ದ ಕೇಳಿಬಂತು. ಅಲ್ಲಿದ್ದ ಹಿರಿಯರೊಬ್ಬರು–"ನೋಡಿ, ಜಗನ್ನಾಥನ ಮಹಿಮೆ–ಗುಡುಗುತ್ತಿದೆ–ಮಳೆ ಬಂದೇ ಬರುತ್ತದೆ" ಎಂದು ಹೇಳಿದರು. ಪ್ರಸಾದ ಸ್ವೀಕರಿಸಿ ಎಲ್ಲರೂ ಮನೆ ಸೇರಿದ ಕೆಲವೇ ಕ್ಷಣಗಳಲ್ಲಿ ಕಾರ್ಮೋಡ ಕವಿದು ಬಂದು ಗಟ್ಟಿ ಮಳೆಯೂ ಆಯಿತು. ಆಗ ನನಗೆ ಎಂಟು ವರ್ಷವಿರಬಹುದು. ಈ ಪ್ರಕರಣದ ನೆನಪು ಚೆನ್ನಾಗಿದೆ. "ಅವರೇಕಾಳು ಗುಗ್ಗರಿ ಮಾಡಿಸಿದರೆ ಅವರೇಕಾಳು ಗಾತ್ರದ ಮಳೆ; ಕಡಲೇಕಾಳು ಗುಗ್ಗರಿ ಮಾಡಿಸಿದರೆ ಕಡಲೆಕಾಳು ಗಾತ್ರದ ಮಳೆ" ಎಂದು ಮತ್ತೊಬ್ಬ ವಯೋವೃದ್ಧರು ಈ ನಂಬಿಕೆಯನ್ನು ಸಮರ್ಥಿಸುತ್ತಾ ಹೇಳಿದರು. ಅನೇಕ ಗ್ರಾಮಗಳಲ್ಲಿ ನಂಬಿದ ದೇವರಿಗೆ ಸಂಪ್ರದಾಯ

ಪ್ರಕಾರ ಸೇವೆ ಮಾಡಿಸುವ ವಾಡಿಕೆಯಿತ್ತು-ಈಗಲೂ ಇದೆ. ಅದೇನೇ ಇರಲಿ, ಅದೇ ದಿನ ಒಂದು ಪವಾಡವನ್ನೇ ನಿರೀಕ್ಷಿಸುವುದು ಹೆಚ್ಚಿನಿಸುತ್ತದೆ. ಅದು ನಂಬಿಕೆ ಹಾಗೂ ದೈವನಿಷ್ಠೆಯ ವಿಚಾರ.

ದಕ್ಷಿಣ ಆಫ್ರಿಕದ ಮಂತ್ರವಾದಿಗಳು ನಿಜವಾಗಿ ಮಳೆಯನ್ನು ನಿಯಂತ್ರಿಸಬಲ್ಲರೇ ಎಂಬ ಪ್ರಶ್ನೆಗೆ ಟೈಮ್ಸ್ ಆಫ್ ಇಂಡಿಯಾ ಬೆಂಗಳೂರು ಶನಿವಾರ 30ನೇ ಜೂನ್ 2001 ರ ವರದಿಯೊಂದಿದೆ ಓದಿನೋಡಿ: **ಶೀರ್ಷಿಕೆ:** ದಕ್ಷಿಣ ಆಫ್ರಿಕದ ಮಳೆ ನಿರ್ಮಾಪಕಿ ಮೂರನೇ ರಾಣಿ ಮೊಜ್ಜಾ ರ್ ಜಿಯ ನಿಧನ, ಪೀಟರ್ಸ್‌ಬರ್ಗ್. ವರದಿ: "ದಕ್ಷಿಣ ಆಫ್ರಿಕದ ಬೊಲೊಬೇಡು ಪಂಗಡಕ್ಕೆ ಸೇರಿದ ರಾಣಿ ಮೂರನೇ ಮೊಜ್ಜಾಜಿಯು ಹೃದಯಾಘಾತದಿಂದ ಉತ್ತರ ಪ್ರಾಂತ್ಯದ ಕ್ಲಿನಿಕ್ ಒಂದರಲ್ಲಿ ಕೊನೆಯುಸಿರೆಳೆದರು. ಗುರುವಾರ 28ನೇ ಜೂನ್‌ನಲ್ಲಿ ನಿಧನ ಹೊಂದಿದ 64 ವಯಸ್ಸಿನ ಈ ಹೆಂಗಸು ಮಳೆಯನ್ನುಂಟು ಮಾಡುವ ಮಾಂತ್ರಿಕ ಶಕ್ತಿಯನ್ನು ಸಿದ್ಧಿಸಿಕೊಂಡಿದ್ದರು. ಇವರು 19ನೇ ಶತಮಾನದ ಡ್ಸುಂಗುಡಿನಿ ಕುಲದ ರಾಜನಾದ ಮುಗೋಡೋ ಎಂಬುವನ ಸಂತತಿಯವರು. ಒಂದನೇ ಮುಜ್ಜಾಜಿಯು ತಂದೆ ಸತ್ತ ಮೇಲೆ ಕುಲದ ರಾಣಿಯಾಗಿ ಸ್ತ್ರೀಮಂತ್ರವಾದಿಗಳ ಸಂತತಿಯೊಂದನ್ನು ಸ್ಥಾಪಿಸಿದಳು. ಇದುವರೆಗೂ ಈ ಸಂತತಿಯ ರಾಣಿಯರು ಮಳೆಯ ನಿಯಂತ್ರಣಕ್ಕೆ ಪ್ರಸಿದ್ಧಿ ಪಡೆದಿದ್ದಾರೆ. ಮೂರನೇ ಮೊಜ್ಜಾಜಿಯು ತನ್ನ ಮೊಮ್ಮಕ್ಕಳು ಅಕಾಲಮರಣಕ್ಕೆ ತುತ್ತಾದ ಮೇಲೆ ದುಃಖಿತಳಾಗಿ ಪತ್ರಕರ್ತರ ಎದುರಿನಲ್ಲಿ, ಬಹಳ ಗೋಪ್ಯವಾಗಿದ್ದ ಈ ವಿದ್ಯೆಯ ಗುಟ್ಟನ್ನು ಬಯಲು ಪಡಿಸಿದಳು. ದಕ್ಷಿಣ ಆಫ್ರಿಕದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ ಸೇರಿದಂತೆ ಅನೇಕ ಗಣ್ಯರು ಅರಮನೆಗೆ ತೆರಳಿ ಗೌರವ ಸೂಚಿಸಿದರು. ದೇಶದ ಹವಾಮಾನ ವರದಿ ಸಂಸ್ಥೆಯು ಮೊಜ್ಜಾಜೀ ವಂಶೀಕರ ಸೇವೆಗೆ ಕೃತಜ್ಞತೆಯ ಸಂಕೇತವಾಗಿ ಅರಮನೆಯ ಹತ್ತಿರವೇ ಇರುವ ಕಾಡುಪ್ರದೇಶಕ್ಕೆ ಇವರ ಹೆಸರಿಡಬೇಕೆಂದು ತೀರ್ಮಾನಿಸಿದೆ."

ಬಾಂಟು ಬುಡಕಟ್ಟಿನಲ್ಲಿ ಲೊವೇಡು ಎಂಬ ಉಪಪಂಗಡವೊಂದಿದೆ. ಇದು ಮಳೆಯ ನಿಯಂತ್ರಣಕ್ಕೆ ಪ್ರಸಿದ್ಧವಾದ ವಂಶ. 16ನೇ ಶತಮಾನದಲ್ಲಿ ಈ ವಂಶದ ರಾಜನ ಮಕ್ಕಳು ಜಗಳಾಡಿಕೊಂಡು ರೊಡೀಷಿಯಾ ಪ್ರಾಂತದಲ್ಲಿ ಬೇರೆ ಬೇರೆ ರಾಜ್ಯಗಳನ್ನು ಕಟ್ಟಿಕೊಂಡರು. ಅವರಲ್ಲಿ ಮಾಂಬೋ ಎಂಬಾತನು ಈಗಿನ ಝಿಂಬಾಬ್ವೆ ಪ್ರಾಂತ್ಯವನ್ನಾಳುತ್ತಿದ್ದನು. ಅವನಿಗೆ ಒಬ್ಬಳೇ ಮಗಳು. ಅವಳು ಮದುವೆಗೆ ಮುನ್ನವೇ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ತಂದೆಯು ಅವಳನ್ನು ಪ್ರಶ್ನಿಸಿದಾಗ ಯಾರು ಕಾರಣರೆಂಬುದನ್ನು ಹೇಳಲಿಲ್ಲ. ಕುಪಿತಗೊಂಡ ತಂದೆಯು ಅವಳನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದನು. ಆಗ ಅವಳು ಗುಟ್ಟಾಗಿ ಮಳೆಯ ತಂತ್ರ ಸಾಮಗ್ರಿಗಳನ್ನು ಎತ್ತಿಕೊಂಡು ಮಗುವಿನೊಡನೆ ಪರಾರಿಯಾದಳು. ಅವಳ ಮಗ ಮುಹಿಲೆಯು ಮುಂದೆ ಲೊವೇಡು ಪಂಗಡದ ರಾಜನಾದ. ಇವನ ವಂಶದವರೇ ಮೇಲೆ ಹೇಳಿದ ಮೂರನೇ ಮೊಜ್ಜಾಜಿ ರಾಣಿ.

ಅ
ಧ್ಯಾ
ಯ
6

# ಕಪ್ಪು ಸಂಸ್ಕೃತಿ

"ಸಂಸ್ಕೃತಿ" ಎಂದರೆ ಒಂದು ನಿರ್ದಿಷ್ಟಕಾಲದಲ್ಲಿ ಒಂದು ಪ್ರದೇಶದಲ್ಲಿ ವಾಸಿಸುವ ಜನಾಂಗದ ಸಾಮಾಜಿಕ ಅಭಿವೃದ್ಧಿಯ ರೂಪಗಳು ಅಥವಾ ಅಭಿವೃದ್ಧಿಗೊಂಡ ನಾಗರಿಕ ಸ್ವರೂಪಗಳು ಎಂದು ಸಂಕ್ಷಿಪ್ತವಾಗಿ ಹೇಳಬಹುದಾದರೂ ಇದರ ಅರ್ಥವ್ಯಾಪ್ತಿ ವಿಶಾಲವಾದದ್ದು. ಅದು ಅವರ ಸಾಮಾಜಿಕ ನಡೆನುಡಿಗಳು, ಕಲೆ, ನೃತ್ಯ, ಸಂಗೀತದ ಭಾವಕಲ್ಪನೆಗಳು; ಮದುವೆ, ಹಬ್ಬ, ಉತ್ಸವದಲ್ಲಿ ಸಂಪ್ರದಾಯಗಳು, ವಿದ್ಯೆ, ವೈದ್ಯ, ಉದ್ಯೋಗ ಕೌಶಲ್ಯಗಳು; ಧಾರ್ಮಿಕ ಸಂಪ್ರದಾಯಗಳು; ಸಂಘಸಂಸ್ಥೆಗಳು ಇತ್ಯಾದಿ ಅನೇಕ ಅಂಶಗಳನ್ನು ಒಳಗೊಂಡ ವಿಶಾಲವಾದ ಅರ್ಥವ್ಯಾಪ್ತಿ ಉಳ್ಳ ಶಬ್ದ.

ಆಫ್ರಿಕದ ಕಪ್ಪು ಜನಾಂಗಗಳ ಸಂಸ್ಕೃತಿಯೊಳಗೆ ಇವೆಲ್ಲಾ ಅಂಶಗಳು ಸೇರಿದ್ದರೂ, ಇಲ್ಲಿ ಅವರ ಧಾರ್ಮಿಕ ಸಂಪ್ರದಾಯಗಳು, ಪಿತೃಗಣಾರಾಧನೆಯ ಉತ್ಸವಗಳು, ಪೂಜಾರಿ-ವೈದ್ಯನ ಸ್ಥಾನಮಾನಗಳು, ಸಾಂಪ್ರದಾಯಿಕ ವೈದ್ಯ ಪದ್ಧತಿ ಇವುಗಳಿಗೆ ಮಾತ್ರ ಗಮನ ಕೊಡಲಾಗಿದೆ. ಉಳಿದ ಅಂಶಗಳು ಇತರೆಡೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಉಲ್ಲೇಖಿತವಾಗಿವೆ.

## ಮಾಸ್ಕ್ ಮತ್ತು ಮಾಸ್ಕರೇಡ್

ಇಂಗ್ಲಿಷ್ ಭಾಷೆಯ ಈ ಶಬ್ದಗಳ ಅರ್ಥ ಮತ್ತು ವ್ಯಾಪ್ತಿಯನ್ನು ಆಫ್ರಿಕದನ್ವಯ ಒಂದು ವಾಕ್ಯದಲ್ಲಿ ನಿರೂಪಿಸುವುದು ಬಹಳ ಕಷ್ಟ. ಮಾಸ್ಕ್ ಎಂದರೆ "ಮುಖವಾಡ" ಅಥವಾ "ಮೋರೆ ಮುಸುಕು" ಎಂತಲೂ, ಮಾಸ್ಕರೇಡ್ ಎಂದರೆ "ವೇಷ ಮರೆಸಿಕೊಂಡವರ ನೃತ್ಯಗೋಷ್ಠಿ" ಅಥವಾ "ವೇಷಧಾರೀ ನರ್ತನ ಕೂಟ" ಎಂಬ ಸಾಮಾನ್ಯ ಕಲ್ಪನೆಗಳನ್ನು ಕೊಡುತ್ತವೆ ಇಂಗ್ಲಿಷ್-ಕನ್ನಡ ನಿಘಂಟುಗಳು. ಆದರೆ ಇದನ್ನು ಆಚರಿಸುವ ಆಫ್ರಿಕದವರ ದೃಷ್ಟಿಯಲ್ಲಿ ಈ ಶಬ್ದಗಳಿಗೆ ಆಳವಾದ ಮತ್ತು ನಿಗೂಢವಾದ ಅರ್ಥಗಳಿವೆ. ಅವರ ಪ್ರಕಾರ ಮಾಸ್ಕ್ ಎಂದರೆ ಮರದ ಹಲಗೆಯ ಮೇಲೆ ಮನುಷ್ಯನಮುಖ ಅಥವಾ ಪ್ರಾಣಿತಲೆಯ ಟೊಳ್ಳು ಆಕೃತಿಯನ್ನು ಬೇಕಾಬಿಟ್ಟಿ ಹಣಕ್ಕಾಗಿ ಕೊರೆಯುವುದಲ್ಲ. ಅವುಗಳನ್ನು ಶಾಸ್ತ್ರ ಪ್ರಕಾರ ಕೊರೆಯುವುದಲ್ಲದೆ ಅವುಗಳಿಗೆ ಆಯಾ ವ್ಯಕ್ತಿಯ ಅಥವಾ ಸ್ಪಿರಿಟ್ಟಿನ ಶಕ್ತಿ ಬರುವಂತೆ ಪೂಜೋಪಚಾರಗಳನ್ನು ನಡೆಸಿ ಗೋಪ್ಯವಾದ

ಸ್ಥಳದಲ್ಲಿರಿಸಿ ಜತನದಿಂದ ದೀರ್ಘ ಕಾಲ ಕಾಪಾಡಲಾಗುತ್ತದೆ.ಹೀಗೆ, ದೈವೀ ಶಕ್ತಿಯನ್ನು ಪಡೆದ ಆ ಸದ್ವಸ್ತುವೇ "ಮಾಸ್ಕ್". ವಿಶಿಷ್ಟ ದಿನಗಳಲ್ಲಿ ಅವುಗಳನ್ನು ಹೊರತೆಗೆದು ಭಯಭಕ್ತಿಗಳಿಂದ ಮೇಳವಿಸುವುದೇ "ಮಾಸ್ಕರೇಡ್" ಉತ್ಸವ.

ಮುಖವಾಡಗಳು ಕೆಲವು ಕಡೆ ಹೋಳಿನಾಕೃತಿಯಲ್ಲಿದ್ದರೆ, ಮತ್ತೆ ಕೆಲವು ಕಡೆ ರುಂಡವನ್ನು ಪೂರ್ತಿ ಮುಚ್ಚುವಂತಹ ಮರದ ಕೊಳಗವಾಗಿರುತ್ತದೆ. ಇವುಗಳಿಗೆ "ಹೆಲ್ಮೆಟ್ ಮಾಸ್ಕ್" ಎಂದು ಹೆಸರು. "ಮಾಸ್ಕ್‌ಗಳನ್ನು ತಯಾರಿಸುವಲ್ಲಿ ಅವರು ಅನುಸರಿಸುವ ಕಟ್ಟು ನಿಟ್ಟಿನ ಪದ್ಧತಿಗಳು ಅಂದರೆ ಮರದ ಆಯ್ಕೆಯಿಂದ ಹಿಡಿದು, ಕೊರೆಯುವ ಕಲೆ, ಕೊರೆದಮೇಲೆ ಅದಕ್ಕೆ ಸಲ್ಲಿಸುವ ಬಲಿಪೂಜೆ, ಔಷಧಗಳ ಲೇಪನಾನಂತರ ಅವುಗಳಿಗೆ ಬರುವ ಶಕ್ತಿ, ಅವುಗಳ ಮೇಲೆ ಜನರು ಇಟ್ಟಿರುವ ಭಕ್ತಿಭಾವಗಳು, ನರ್ತನದ ರೀತಿ ನೀತಿ, ವಾದ್ಯ, ಸಂಗೀತ ಇತ್ಯಾದಿಗಳೆಲ್ಲವೂ ಇದರ ವ್ಯಾಪ್ತಿಯಲ್ಲಿ ಸೇರಿವೆ.

ಹಿಂದೂ ಸಂಸ್ಕೃತಿಯಲ್ಲಿರುವಂತಹ ಕೆಲವು ಪದ್ಧತಿಗಳ ಸಾದೃಶ್ಯವನ್ನು ಆಫ್ರಿಕದ ಸಂಸ್ಕೃತಿಯಲ್ಲೂ ಕಾಣಬಹುದು. ನಮ್ಮ ಶಿಲ್ಪಿಗಳು ಶಾಸ್ತ್ರೋಕ್ತವಾಗಿ ಕಡೆದ ಲೋಹ, ಶಿಲೆ ಅಥವಾ ಕಾಷ್ಠ-ವಿಗ್ರಹಗಳನ್ನು ಶುದ್ಧೀಕರಿಸಿ, (ವಿಧಿವತ್ತಾಗಿ) ಅವುಗಳನ್ನು ದೇವಾಲಯದೊಳಗೆ ಪ್ರಾಣ ಪ್ರತಿಷ್ಠೆ ಮಾಡಿದ ಮೇಲೆ ಅವುಗಳು ಪವಿತ್ರವೆನಿಸಿಕೊಳ್ಳುತ್ತವೆ. ವಿಶೇಷ ದಿನಗಳಲ್ಲಿ ಹಾಗೂ ಜಾತ್ರೆಗಳಲ್ಲಿ ಅವುಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಉತ್ಸವ ಮೂರ್ತಿಯನ್ನು ರಥ, ವಾಹನಗಳ ಮೇಲಿಟ್ಟು ಮೆರವಣಿಗೆ ಮಾಡುತ್ತೇವೆ. ಆದರೆ ಅಷ್ಟು ಮುಂದುವರಿದಿಲ್ಲದ ಆಫ್ರಿಕದ ಸಂಸ್ಕೃತಿಗಳಲ್ಲಿ ಅಂತಹ ಉತ್ಸವಗಳು ಮನುಷ್ಯನ ತಲೆಯ ಮೇಲೆ ಜರಗುತ್ತವೆ. ಏನೇ ಆದರೂ ಈ ಉತ್ಸವಗಳ ಹಿಂದಿರುವ ಭಾವಗಳು ಒಂದೇ ರೀತಿಯಾಗಿರುವುದನ್ನು ಇಲ್ಲಿ ಕಾಣಬಹುದು.

**ಮುಖವಾಡಗಳು ಅನೇಕ ಬಗೆಯಾಗಿವೆ:**

1) ಮನುಷ್ಯನ ಅಥವಾ ಪ್ರಾಣಿಗಳ ಮುಖವನ್ನು ಹೋಲುವ ಮರದ ಟೊಳ್ಳು ಆಕೃತಿಗಳು ಅಥವಾ ಚರ್ಮ ಮತ್ತು ಮಣಿಗಳಿಂದ ಅಲಂಕರಿಸಿದ ಹಂದರಗಳು ತೀರ ಸಾಮಾನ್ಯ. ಆದರೆ ಕೊಕ್ಕುಳ್ಳ ಪಕ್ಷಿಯ ತಲೆ ಮತ್ತು ಕೋಡುಗಳುಳ್ಳ ಪ್ರಾಣಿ ತಲೆಯಾಕೃತಿಗಳಿಗೆ ಅಪಾರವಾದ ಶಕ್ತಿಯಿರುತ್ತದಂತೆ. ಮರದ ಮೇಲೆ ಚರ್ಮವನ್ನು ಹಚ್ಚಿ ತಯಾರಿಸಿದ ಮುಖವಾಡಗಳಿಗೆ ಹೆಚ್ಚಿನ ಪವಿತ್ರತೆ. ಬೆನಿನ್ ರಾಜರು ಧರಿಸುವ ಆನೆಯ ದಂತದಿಂದ ಮಾಡಿದ ಮನುಷ್ಯನ ಮುಖವಾಡ ವಂತೂ ಜಗತ್ಪ್ರಸಿದ್ಧವಾಗಿದೆ.

2) ವೇಷಧಾರಿಯ ತಲೆಯನ್ನು ಸಂಪೂರ್ಣವಾಗಿ ಮರೆಮಾಡುವ ಕೊಳಗದಂತಹ ಮುಖವಾಡಗಳಿಗೆ "ಹೆಲ್ಮೆಟ್ ಮಾಸ್ಕ್" ಎಂದು ಹೆಸರು. ಇವುಗಳಲ್ಲಿ ಪ್ರಸಿದ್ಧವಾದವು

ಬಾಂಗ ಸಮಾಜದ (ಕೆಮರೂನ್) "ರಾತ್ರಿ ಸಂಘ" ದ ಮುಖವಾಡಗಳು. ಕೆಮರೂನ್ ಮತ್ತು ಪೂರ್ವ ನೈಜೀರಿಯದ ಇಕೊಯಿ, ಸಮಾಜದವರಲ್ಲಿರುವ, ಚರ್ಮವನ್ನು ಅಂಟಿಸಿ ತಯಾರಿಸಿದ ಎರಡು ಮುಖಗಳ ಹೆಲ್ಮೆಟ್ ಮಾಸ್ಕ್ ಒಂದು ವಿಶೇಷ. ಪರಸ್ಪರ ವಿರುದ್ಧ ದಿಕ್ಕಿಗೆ ಮುಖಮಾಡಿದ ಈ ಮುಖಗಳಲ್ಲಿ ಒಂದರ ಕಣ್ಣು ಮುಚ್ಚಿದ್ದರೆ ಮತ್ತೊಂದು ತೆರೆದಿದೆ. ಈ ಮುಖಗಳು ಭೂತ-ಭವಿಷ್ಯತ್ತನ್ನು ಮತ್ತು ಸಾವು-ಜೀವಗಳ ಸಮಭಾವವನ್ನು ಪ್ರತಿನಿಧಿಸುತ್ತವೆ. ಸತ್ತ ಮೇಲೂ ಮನುಷ್ಯನು ಜೀವಂತವಾಗಿರುತ್ತಾನೆಂಬುದು ಅವರೆಲ್ಲರ ಧೃಡನಂಬಿಕೆ. ಪೂರ್ಣಸಾವಿನ ಪರಿಕಲ್ಪನೆಯನ್ನು ಆಫ್ರಿಕದ ಮನಸ್ಸು ಸ್ವೀಕರಿಸಲಾರದು. ವ್ಯಕ್ತಿಯು ಸತ್ತ ಮೇಲೆ ಅವನ ಆತ್ಮವು ನಮ್ಮ ಜೊತೆಯಲ್ಲೇ ಇರುತ್ತದೆಂಬುದು ಇದರ ಇಂಗಿತ.

3) ತಲೆಯ ಮೇಲೆ ಇಟ್ಟುಕೊಂಡು ಮುಖ ಮತ್ತು ಶರೀರವನ್ನು ರಫಿಯ ನಾರಿನಿಂದ ಮುಚ್ಚಿಕೊಂಡು ಮೆರೆಸುವ ದೇವರ ವಿಗ್ರಹಗಳು ಮೂರನೇ ವರ್ಗಕ್ಕೆ ಸೇರಿದವು. ಇದರಲ್ಲಿ ಆಯುಧಗಳನ್ನು ಹಿಡಿದುಕೊಂಡಿರುವ ಮಾನವ ರೂಪದ ದೇವತಾ ವಿಗ್ರಹಗಳು ಅಥವಾ ನಿರ್ದಿಷ್ಟ ಆಕಾರವಿಲ್ಲದ (ಆಬ್‌ಸ್ಟ್ರಾಕ್ಟ್) ವಿಗ್ರಹಗಳು ನೋಡಲು ಕುತೂಹಲಕಾರಿಯಾಗಿರುತ್ತವೆ. ಎರಡರಿಂದ ಮೂರು ಅಡಿ ಎತ್ತರವಿದ್ದು ಅತಿಭಾರವಾಗಿರುವುದರಿಂದ ಇದರ ವೇಷ ಹಾಕುವ ವ್ಯಕ್ತಿಯು ಶಕ್ತಿವಂತನೂ ಅನುಭವಸ್ಥನೂ ಆಗಿರಬೇಕು. ಜಾತ್ರೆಯ ದಿನಮಾತ್ರ ಹೊರಕ್ಕೆ ತೆಗೆಯುವ ಈ ಮೂರ್ತಿಗಳನ್ನು ನೋಡಲು ಜನ ಕಾತುರರಾಗಿರುತ್ತಾರೆ. ಇಂತಹ ವಿಗ್ರಹಗಳಿಗೆ "ಡಾನ್ಸ್ ಮಾಸ್ಕ್" ಎಂದು ಹೆಸರು. ಬಂಬಾರಾ (ಮಾಲಿ) ಈಪ (ಯೋರುಬ) ಸೆನೂಫೊ (ಐವರಿ ಕೋಸ್ಟ್) ಸಮಾಜಗಳಲ್ಲಿ ಇದು ವಿಶೇಷ. ಈ ಗುಂಪಿನಲ್ಲಿ ಹೆಚ್ಚು ಸಂಕೀರ್ಣವಾದ ಬಣ್ಣ ಬಣ್ಣದ ವಿಗ್ರಹಗಳಿರುವುದೂ ಉಂಟು. ಬಡಗಿಯ ಚಮತ್ಕಾರವನ್ನು ತೋರಿಸುವ ಇಂತಹ ಭಾರವಾದ ವಿಗ್ರಹಗಳು ಹೊರಗೆ ಬರುವುದು ಅಪರೂಪ.

4) ಇವಲ್ಲದೆ, ಕೋತಿರೂಪದ ಮುಖವಾಡಗಳನ್ನು ತಲೆಯ ಮೇಲಿಟ್ಟು ಮುಖಕ್ಕೆ ಮುಸುಕು ಹಾಕಿಕೊಂಡು, ಮರಗಾಲುಗಳ ಮೇಲೆ ನೃತ್ಯ ಮಾಡುವಂತಹ ಪರಿಣತರ ದಂಡೂ ಸಹ ಇರುತ್ತದೆ. ಮನರಂಜನೆಗಾಗಿ ಕೊನೆಯಲ್ಲಿ ಬರುವ ಇಂತಹ ನೃತ್ಯ ಕೂಟಗಳು ನೈಜೀರಿಯದಲ್ಲಿ ಜನಪ್ರಿಯವಾಗಿವೆ. ಇದಕ್ಕೆ "ಸ್ಟಿಲ್ಟ್ ಮಾಸ್ಕರೇಡ್" ಎಂದು ಹೆಸರು.

ಹೋಳಾಗಲೀ, ಉಂಡೆಯಾಗಲೀ, ಮುಖವಾಡದ ಜೊತೆಗೆ ಶರೀರವನ್ನು ನಾರಿನ ಉಡುಪು ಇಲ್ಲವೇ ಬಣ್ಣದ ಬಟ್ಟೆಯ ಚೂರುಗಳಿಂದ ಮುಚ್ಚಿ ಗುರುತು ತಿಳಿಯದಂತೆ ವೇಷ ಹಾಕುವ ಕಲೆಗೆ "ಮಾಸ್ಕಿಂಗ್"ಎಂದು ಹೆಸರು. ವೇಷವನ್ನು ಧರಿಸಿಕೊಂಡ ಆವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು ದೇವರ ಇಲ್ಲವೇ ಪ್ರೇತಾತ್ಮರ ವ್ಯಕ್ತಿತ್ವವನ್ನು

ಪಡೆಯುತ್ತಾನೆ. ಅಥವಾ ಅದೇ ಆಗಿ ಪರಿವರ್ತಿತನಾಗಿ ಬಿಡುತ್ತಾನೆ. ಛದ್ಮ ವೇಷಗಳು ಆಯಾ ಸ್ಪಿರಿಟ್‌ಗಳ ಪ್ರತಿರೂಪವೇ ಆಗಿರುವುದರಿಂದ ವೇಷಧಾರಿಯು ಮಾನವನಾಗಿ ಉಳಿಯುವುದಿಲ್ಲ. ದೈವತ್ಮಾವು ಅವನ ಮೈಮೇಲೆ ಆವಾಹಿತವಾಗಿರುತ್ತದೆಂಬುದು ಸಂಪ್ರದಾಯಸ್ಥರ ಅಭಿಪ್ರಾಯ.

## ಸಾಮಾಜಿಕ ಔಚಿತ್ಯ:

ಇದೊಂದು ಧಾರ್ಮಿಕ ಆಚರಣೆಯಾದರೂ ಸಾಮಾಜಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಮಾಸ್ಕರೇಡುಗಳು ವಿಧಿವತ್ತಾಗಿ ನಡೆಯುವುದರಿಂದ ಇದೊಂದು ಪವಿತ್ರ ಕಾರ್ಯವೆಂದು ನಂಬಲಾಗಿದೆ. ವರ್ಷಕ್ಕೊಮ್ಮೆ ನಡೆಯುವ ಈ ಆಚರಣೆಗಳು ಮಾನವನಿಗೂ ದೈವಾತ್ಮಗಳಿಗೂ ನಡುವೆ ಒಂದು ಸೇತುವೆಯ ಹಾಗೆ, ಎರಡೂ ಪ್ರಪಂಚಗಳ ನಡುವೆ ಸಂಪರ್ಕವನ್ನೇರ್ಪಡಿಸುತ್ತವೆ ಎಂದು ನಂಬಲಾಗಿದೆ. ಮಾಸ್ಕರೇಡ್ ಕೂಟಗಳು ಸಮಾಜವನ್ನು ಮುಖ್ಯವಾಗಿ ಯುವಕರನ್ನು ಹಿಡಿತದಲ್ಲಿಟ್ಟುಕೊಳ್ಳುವುದಲ್ಲದೆ, ಅತಿ ಮಾನವ ಶಕ್ತಿಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು, ಅವು ದುಷ್ಟಶಕ್ತಿಗಳಾಗಲು ಅವಕಾಶಕೊಡದೆ, ಶಿಷ್ಟ ಶಕ್ತಿಗಳನ್ನಾಗಿ ನಡೆಸಿಕೊಳ್ಳುವುದೇ ಮಾಸ್ಕರೇಡಿನ ಮುಖ್ಯ ಉದ್ದೇಶ. ಆಫ್ರಿಕದ ಸಂಪ್ರದಾಯದಲ್ಲಿ ಇಂತಹ ಪವಿತ್ರ ಕರ್ಮಾನುಷ್ಠಾನಗಳು ಸಮಾಜ ಜೀವನವನ್ನು ಒಂದು ಕ್ರಮಬದ್ಧ ವ್ಯವಸ್ಥೆಗೆ ಒಳಪಡಿಸುತ್ತವೆ.

## ಎಲ್ಲೆಲ್ಲಿ?

ಅನೇಕ ಸಮಾಜಗಳಲ್ಲಿ "ಮಾಸ್ಕಿಂಗ್ ಸೊಸೈಟಿ" ಎಂಬ ಪರಿಣತರ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಈಗಲೂ ಇವೆ. ಭೌಗೋಳಿಕವಾಗಿ ಸಹರಾ ಮರುಭೂಮಿಯಿಂದ ದಕ್ಷಿಣಕ್ಕಿರುವ ಬಹುತೇಕ ರಾಷ್ಟ್ರಗಳು (ನಕ್ಷೆ ನೋಡಿ) ಅಂದರೆ ಪಶ್ಚಿಮದ ಸೆನೆಗಾಲ್-ಗ್ಯಾಂಬಿಯದಿಂದ ಪೂರ್ವದ ಕೆಮೆರೂನ್- ಕಾಂಗೋದವರೆಗೂ ಪರಿಣತ ಮಾಸ್ಕಿಂಗ್ ಸೊಸೈಟಿಗಳು ಇದನ್ನು ವ್ಯವಸ್ಥೆಗೊಳಿಸುತ್ತವೆ. ಈ ಸಂಘಸಂಸ್ಥೆಗಳು ಜನರ ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ಜೀವನದ ಮೇಲೆ ಪ್ರಭಾವ ಬೀರುತ್ತವೆ-ಎಂದು ಹೇಳಲಾಗಿದೆ. ಉಳಿದೆಡೆ ಎಂದರೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಪ್ರಬಲವಾಗಿರುವ ಕಡೆಗಳಲ್ಲಿ ಕೆಲವು ಸಾಂಸ್ಕೃತಿಕ ಸಂಘಗಳು ಇದನ್ನು ನಡೆಸಿಕೊಂಡು ಹೋಗುತ್ತಿವೆ. ಅಲ್ಲಿನ ಕಲಾವಿದರು ವೇಷಧಾರೀ ನೃತ್ಯಗಳನ್ನು ಪ್ರವಾಸಿಗಳಿಗಾಗಿ ಅಭಿನಯಿಸುತ್ತಾರೆ. ವೃತ್ತಿಪರ ಮಾಸ್ಕಿಂಗ್ ಸೊಸೈಟಿಗಳಲ್ಲಿ ಪ್ರಸಿದ್ಧವಾದುದೆಂದರೆ "ಪೋರೋ" ಸಂಘಗಳು. ಸಿರಾಲಿಯೋನ್ ಮತ್ತು ಲೈಬೀರಿಯಗಳಲ್ಲಿ ಇವು ವ್ಯಾಪಕವಾಗಿ ಹರಡಿವೆ. ಸಾಮಾನ್ಯವಾಗಿ ವೇಷಧಾರಣೆ ಮಾಡುವವರು ಪುರುಷರು. ಅಂತಹ ಕಡೆ ಸ್ತ್ರೀಯರು ವೇಷಹಾಕುವುದಿರಲಿ, ನೋಡುವುದೂ ಸಹ ನಿಷಿದ್ಧ. ಅದಕ್ಕೆ ಅವರುಕೊಡುವ ಕಾರಣ ಮುಖವಾಡ ಮತ್ತು ಮುಸುಕುಗಳನ್ನು ತಯಾರಿಸುವಾಗ ಸ್ತ್ರೀಯರಿಗೆ ಕೇಡನ್ನುಂಟು ಮಾಡುವಂತಹ ಕೆಲವು ಔಷಧಿ ಮತ್ತು ಪೂಜೆಗಳನ್ನು ಮಾಡಿರುತ್ತಾರೆ- ಎಂಬುದು. ಆದರೂ ಕೆಲವೆಡೆ ಹೆಂಗಸರೇ

ವೇಷಧರಿಸುವಂತಹ, ಅವರಿಗೇ ಮೀಸಲಾದ ಕೆಲವು ಸಂಘಗಳಿವೆ. ಅಲೆಮಾರೀ ಪಶುಪಾಲಕ ಸಮಾಜಗಳಲ್ಲಿ, ಉದಾಹರಣೆಗೆ "ಫುಲಾನಿ" ಸಮಾಜದಲ್ಲಿ ಮಾಸ್ಕಿಂಗ್ ಸಂಪ್ರದಾಯವಿಲ್ಲ.

**ಸಂದರ್ಭ:**

ಮಾಸ್ಕರೇಡನ್ನು ಯಾವ ಸಂದರ್ಭಗಳಲ್ಲಿ ಏರ್ಪಡಿಸುತ್ತಾರೆಂದರೆ: ಯುವಕರ ದೀಕ್ಷಾವಿಧಿಗಳು, ರಾಜರ (ಛೀಫ್) ಅಂತ್ಯಕ್ರಿಯೆಗಳು, ವಾರ್ಷಿಕ ಪಿತೃಪಕ್ಷಗಳು; ಅಧಿಕಾರ ಬದಲಾವಣೆ ಅಂದರೆ ಪಂಗಡ ಅಥವಾ ಉಪಪಂಗಡದ ಯಜಮಾನ (ಛೀಫ್) ಸತ್ತ ನಂತರ ನಡೆಯುವ ನೂತನ ಅಧಿಕಾರಿವರ್ಗದ ನೇಮಕ; ಸುಗ್ಗಿಯ ಹಬ್ಬಗಳು, ನೂತನ ಕಟ್ಟಡ ಪ್ರಾರಂಭೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ಸಾರ್ವಜನಿಕವಾಗಿ ಏರ್ಪಡಿಸುತ್ತಾರೆ. ಸಂದರ್ಭಕ್ಕೆ ತಕ್ಕಂತೆ ಇವುದೊಡ್ಡದಾಗಿಯೋ ಚಿಕ್ಕದಾಗಿಯೋ ಇರಬಹುದು. ಹಣಕಾಸಿನ ವಿಚಾರದಲ್ಲಿ ಇದೊಂದು ದುಬಾರಿ ವೆಚ್ಚವೇ ಸರಿ.

ಇಲ್ಲಿ ಒಂದು ಮಾತು: ಗಿನೀ ಕಡಲ ತೀರದ ರಾಷ್ಟ್ರಗಳಲ್ಲಿ ಇಂದಿಗೂ ಸಹ ಪಂಗಡ, ಉಪಪಂಗಡಗಳು ಇದ್ದೇ ಇವೆ. ಅಷ್ಟೇಕೆ ಕಪ್ಪು ಆಫ್ರಿಕದ ಎಲ್ಲಾ ರಾಷ್ಟ್ರಗಳಲ್ಲೂ ಈ ಟ್ರೈಬಲ್ ವ್ಯವಸ್ಥೆಯು ಪ್ರಬಲವಾಗಿ ಬೇರೂರಿದೆ. ಪ್ರತಿ ಪಂಗಡಕ್ಕೂ ಒಬ್ಬ ಛೀಫ್ (ಮುಖಂಡ) ಉಪಮುಖಂಡ, ಅರಮನೆ, ಅರಮನೆಯ ಪಾಲಕರು, ಸೇವಕರು ಮುಂತಾಗಿ ಅಧಿಕಾರೀ ವರ್ಗಗಳುಂಟು. 21ನೇ ಶತಮಾನದ ಗಣರಾಜ್ಯಗಳೂ, ಸಹ ಈ ಸಂಸ್ಥೆಯನ್ನು ಮಾನ್ಯ ಮಾಡಿವೆ. ಛೀಫ್‌ಗಳು ರಾಜಕೀಯ ಮುಖಂಡರಲ್ಲ. ಪಂಗಡದ ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರು ಮಾತ್ರ, ವಸಾಹತು ಕಾಲಕ್ಕಿಂತ ಹಿಂದೆ ಇವರಿಗೆ ರಾಜಕೀಯ ಹಾಗೂ ಯುದ್ಧ ಮಾಡುವ ಅಧಿಕಾರಗಳಿದ್ದವು. ಇವರು ಭೂಮಿಯ ಒಡೆಯರೂ ಹೌದು. ಭೂಮಿಯನ್ನು ಜನರಿಗೆ ಹಂಚುವಲ್ಲಿ ಇವರದೇ ಅಂತಿಮ ತೀರ್ಮಾನ. ಅವರು ತಮ್ಮ ಪಂಗಡದ ಶ್ರೇಷ್ಠ ನ್ಯಾಯ ಮೂರ್ತಿಗಳು (ಸಿವಿಲ್ ಮತ್ತು ಧಾರ್ಮಿಕ) ಆಗಿರುತ್ತಾರೆ. ಸ್ವತಂತ್ರಾ ನಂತರ ಬಂದ ಕೆಲವು ಸರ್ಕಾರಗಳು ಇವರ ಅಧಿಕಾರಗಳನ್ನು ಮೊಟಕುಗೊಳಿಸಲು ಪ್ರಯತ್ನಿಸುತ್ತಿವೆ. ಆದರೂ ಇವರು ಪ್ರಭಾವಶಾಲೀ ವ್ಯಕ್ತಿಗಳು. ನೀವು ಒಬ್ಬ ಗಣ್ಯವ್ಯಕ್ತಿಯಾಗಿ ಪ್ರವಾಸ ಮಾಡುತ್ತಿದ್ದರೆ ಇಂತಹ ಛೀಫ್‌ಗಳ ಪರಿಚಯವಾಗಬಹುದು.

ಮಾಸ್ಕರೇಡಿಗೆ ಬರೋಣ– ಮೇಲೆ ಹೇಳಿದಂತಹ ಸಂದರ್ಭಗಳಲ್ಲಿ ಇದನ್ನು ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಜನರು ಹೊಸಬಟ್ಟೆ ಧರಿಸಿಕೊಂಡು ಸಂಭ್ರಮದಿಂದ ಬಂದ ಅತಿಥಿಗಳಿಗೆ ಪಾಮ್‌ವೈನ್ ನೀಡುತ್ತಾರೆ. ಮಾಂಸಾಹಾರದ ಜೊತೆಗೆ ಬೋಂಡ, ಪಕೋಡಗಳಂತಹ ಕರಿದ ಪದಾರ್ಥಗಳನ್ನು ಬಡಿಸುತ್ತಾರೆ. ಅಂದು ಮುಂಜಾನೆ ವೇಷ ಹಾಕುವವರು ಹಾಗೂ ಹಾಕಿಸಿಕೊಳ್ಳುವವರು ಊರ ಹೊರಗಿನ "ಪವಿತ್ರ ವನ" ದಲ್ಲಿ ನೆರೆಯುತ್ತಾರೆ. ಅದು ದೇವಾಲಯವಾಗಿರಬಹುದು. ಅಥವಾ ನೀರಿನ ಹತ್ತಿರ ಇರುವ ಕಾಡು ಪ್ರದೇಶವಾಗಿರಬಹುದು. ಅಲ್ಲಿ ಮುಂಜಾನೆ ಯಿಂದಲೂ

ಪೂಜಾವಿಧಿಗಳು ನಡೆದಿರುತ್ತವೆ. ಮಧ್ಯಾಹ್ನ ಸುಮಾರು ನಾಲ್ಕು ಗಂಟೆಯ ವೇಳೆಗೆ ಒಬ್ಬ ವೇಷಧಾರಿಯು ಸಿದ್ಧವಾದನೆಂದುಕೊಳ್ಳೋಣ. ವಾದ್ಯ, ಮದ್ದಳೆಗಳನ್ನು ಬಾರಿಸುವುದೇ ಅದರ ಕುರುಹು, ಸಂಗೀತ, ನಗಾರಿಗಳು ತೀವ್ರಗತಿಗೆ ಹೋಗುತ್ತಿದ್ದಂತೆ ವೇಷಧಾರಿಗೆ ಆವೇಶ ಬರುತ್ತದೆ. ಆಗ ಒಬ್ಬ ಪರಿಚಾರಕ ಊರಿನ ಅಂಗಳಕ್ಕೆ ಹೋಗಿ, ಇಂತಹ ದೇವರು ಬರುತ್ತಾ ಇದೆ ಎಂದು ಕೂಗಿ ಹೇಳುತ್ತಾನೆ. ಒಡನೆಯೇ ಹೆಂಗಸರು ಮತ್ತು ಹೆಣ್ಣು ಮಕ್ಕಳು ಚೀರಾಡುತ್ತಾ ಮನೆಗಳಿಗೆ ಓಡಿ ಹೋಗಿ ಬಾಗಿಲು ಹಚ್ಚಿಕೊಳ್ಳುತ್ತಾರೆ. ಬಾಗಿಲ ಸಂದು, ಕಿಟಕಿಯ ಸಂದಿನಿಂದ ಮಾತ್ರ ನೋಡಬಹುದು.

ವೇಷದಾರಿಯು ದೇವರ ವಿಗ್ರಹವನ್ನು ತಲೆಯ ಮೇಲೆ ಹೊತ್ತು, ವಾದ್ಯ ತಮಟೆಗಳ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತಾ ಕರಗ ಹೊತ್ತವರಂತೆ ನಿಧಾನಗತಿಯಲ್ಲಿ ಮುಂದುವರಿಯುತ್ತಾನೆ. ಅವನ ಮುಂದೆ ವಾದ್ಯದವರು, ಸಹಾಯಕರು, ಸೇವಕರು, ಅರ್ಥ ಮಾಡುವವರು, ಗುಂಪು ನಿಯಂತ್ರಕರು ಇರುತ್ತಾರೆ. ಅವನ ಹಿಂದೆ ಹಾಡುಗಾರರ ತಂಡವೂ ಇರುತ್ತದೆ. ಆಗ ವೇಷಧಾರಿಯನ್ನು ಜನ ದೇವರೆಂದೇ ಭಾವಿಸುತ್ತಾರೆ. ಅವನನ್ನು ಯಾರೂ ಮುಟ್ಟುವ ಹಾಗಿಲ್ಲ. ಹತ್ತಿರ ಹೋಗುವ ಹಾಗಿಲ್ಲ. ವೇಷಧಾರಿಯು ಆಗ ಏನು ಹೇಳಿದರೂ, ಯಾರನ್ನು ನಿಂದಿಸಿದರೂ ಕೇಳುವ ಹಾಗಿಲ್ಲ. ಕಾರಣ ಅದು ದೈವವಾಣಿ. ಆತ ಸಮಾಜದಲ್ಲಿ ಹೆಚ್ಚುತ್ತಿರುವ ಅನೀತಿಗಳನ್ನಾಗಲೀ, ದೈವಭಕ್ತಿ ಪಿತೃಭಕ್ತಿಗಳಲ್ಲುಂಟಾದ ಕೊರತೆಗಳ ಬಗ್ಗೆ ವ್ಯಾಖ್ಯಾನ, ಊರಿಗೆ ಬಂದ ರೋಗ ರುಜಿನಗಳಿಗೆ ಕಾರಣ, ಪರಿಹಾರ ಇತ್ಯಾದಿ ಎಲ್ಲವನ್ನೂ ಹೇಳುತ್ತಾ ನೃತ್ಯ ಮಾಡಬಹುದು. ನಮ್ಮ "ಕಾಡುಸಿದ್ಧ" ನಂತೆ ಯುವಕರಿಗೆ ಹಿತವಚನ, ಯಜಮಾನರಿಗೆ ಎಚ್ಚರಿಕೆ, ಊರ ಭವಿಷ್ಯ, ನಾಡಭವಿಷ್ಯಗಳನ್ನು ಹೇಳುವುದುಂಟು. ಪರಿಹಾರಗಳನ್ನು ಕೇಳಿ ಎಸೆದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾನೆ. ಒಂದು ದೇವರ ವೇಷ ಹೋದನಂತರ ಗಂಡಸರು, ಹೆಂಗಸರು, ಮಕ್ಕಳು ಅಂಗಳದಲ್ಲಿ ನೆರೆದು ಮಾತನಾಡಿಕೊಳ್ಳುತ್ತಾರೆ, ಚರ್ಚಿಸುತ್ತಾರೆ. ಆಹಾರ ಪಾನೀಯ ಸೇವೆಗಳು ಮತ್ತೆ ನಡೆಯುತ್ತವೆ. ಮತ್ತೊಂದು ದೇವರ ವೇಷ ಬರುತ್ತಾ ಇರುವುದು ಘೋಷಿಸಲ್ಪಟ್ಟ ಕೂಡಲೇ ಹೆಂಗಸರು ಮಕ್ಕಳು ಮನೆಗಳಿಗೆ ಓಡುತ್ತಾರೆ, ಗಂಡಸರು ಪಕ್ಕಕ್ಕೆ ಸರಿಯುತ್ತಾರೆ. ಅವನ ಮೇಳ ಹೋದ ಮೇಲೆ ಮತ್ತೆ ಜನಸಂದಣಿ. ಹೀಗೆ ರಾತ್ರಿಯೆಲ್ಲಾ ನಡೆಯುತ್ತದೆ. ಕೊನೆಯಲ್ಲಿ ಮರಗಾಲಿನ ಮೇಳ ಇರುವುದೂ ಉಂಟು. ಇದು ಮನರಂಜನೆಯ ಮೇಳ. ಮರಗಾಲಿನ ತಂಡದವರು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವುದಂತೂ ಬಹಳ ಅದ್ಭುತವಾದ ದೃಶ್ಯ.

ಇಂತಹ ಮೇಳಕ್ಕೆ ಅಕ್ಕಪಕ್ಕದ ಊರುಗಳಿಂದ, ದೂರದ ಊರಿನಿಂದ ಮಾತ್ರವಲ್ಲದೆ ಯೂರೋಪ್ ಅಮೆರಿಕಗಳಿಂದಲೂ ಬಂಧುಗಳನ್ನು ಆಹ್ವಾನಿಸುತ್ತಾರೆ. ಸಾಮಾನ್ಯವಾಗಿ ವೇಷಧಾರಿಗಳು ಹೆಚ್ಚಿಗೆ ಮಾತನಾಡುವುದಿಲ್ಲ. ಆದರೆ ಅಂತ್ಯದಲ್ಲಿ ಕೆಲವು ವಾಚಾಳಿಗಳು ಕ್ಷುದ್ರವೇಶಧಾರಿಗಳಾಗಿ ಬಂದು ಸರ್ಕಸ್ ಬಫೂನನಂತೆ ಮನರಂಜನೆ ನೀಡುತ್ತಾರೆ. ಅಂತಹವರು ಹೆಂಗಸರ ಬಗ್ಗೆ, ಹೊಟ್ಟೆ ಬಾಕರ ಬಗ್ಗೆ, ಪರಕೀಯರ ರೀತಿ ನೀತಿಗಳ ಬಗ್ಗೆ ಲಘುವಾದ ಹಾಸ್ಯ ಮಾಡುತ್ತಾ ಜನರನ್ನು ರಂಜಿಸುತ್ತಾರೆ.

## ಮಾಸ್ಕರೇಡ್ ಎಷ್ಟು ಹಳೆಯದು?

ಇದರ ಅತ್ಯಂತ ಪುರಾತನ ಆಧಾರ ಸಿಕ್ಕಿರುವುದು ಸಹಾರಾ ಮಧ್ಯದ ಟಿಸಿಲಿ ಬೆಟ್ಟ ಪ್ರದೇಶದಲ್ಲಿ ಕಲ್ಲಿನ ಮೇಲೆ ಕೆತ್ತಿರುವ ಮಾಸ್ಕಿಂಗ್ ಚಿತ್ರಗಳು. ಉಳಿದ ಆಧಾರಗಳು ದೊರೆಯುವುದು ಪ್ರವಾಸಿಗಳ ವರ್ಣನೆಯಿಂದ. 14ನೇ ಶತಮಾನದಲ್ಲಿ "ಮಾಲಿ" ಚಕ್ರಾಧಿಪತ್ಯಕ್ಕೆ ಭೇಟಿ ಕೊಟ್ಟಿದ್ದ ಇಬನ್ ಬತೂತ ಎಂಬ ಅರಬ್ ಪ್ರವಾಸಿಗ ತಾನು ಅಲ್ಲಿನ ಮಾಸ್ಕರೇಡ್ ನೃತ್ಯ ಮೇಳವನ್ನು ನೋಡಿದುದಾಗಿ ಬರೆದಿದ್ದಾನೆ. ಅನಂತರ 1698 ರಲ್ಲಿ ಫ್ರೆಂಚ್ ಎಂಜಿನಿಯರೊಬ್ಬನು ತಾನು ಕಂಡ ಮಾಸ್ಕರೇಡನ್ನು ಚಿತ್ರ ಸಹಿತ ವಿವರಿಸಿದ್ದಾನೆ. 17ನೇ ಶತಮಾನದಲ್ಲಿ ಪ್ರವಾಸ ಮಾಡಿದ ಬಿಳಿಯರು, ಭೂಶೋಧಕರು, ಪ್ರವಾಸಿಗಳು ಹಾಗೂ ಮಿಷನರಿಗಳೂ ಸಹ ಇದರ ಉಲ್ಲೇಖ ಮಾಡಿದ್ದಾರೆ. ಮಾಸ್ಕರೇಡ್ ಮೇಳಗಳು 20ನೇ ಶತಮಾನದ ಮಧ್ಯದವರೆಗೂ ಅನೇಕ ಬುಡಕಟ್ಟು ಸಮಾಜಗಳಲ್ಲಿ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿತ್ತು. ಅಲ್ಲಿಂದೀಚೆಗೆ ಉಂಟಾದ ಜನಜಾಗೃತಿ, ಸ್ವಾತಂತ್ರಕ್ಕಾಗಿ ಹೋರಾಟ, ಪರಸ್ಪರ ಒಳಜಗಳ, ಹೊಡೆದಾಟಗಳ ನಡುವೆ ಸಾಂಸ್ಕೃತಿಕ ಚಟುವಟಿಕೆಗಳು ನಿಂತು ಹೋಗಿದ್ದವು. ಶತಮಾನದ ಅಂತ್ಯದಲ್ಲಿ ಎಲ್ಲಾ ರಾಷ್ಟ್ರಗಳೂ ಬಿಡುಗಡೆ ಹೊಂದಿ ಶಾಂತಿ ನೆಲೆಸಲು ಪ್ರಾರಂಭವಾಯಿತು. ಎಲ್ಲೆಲ್ಲೂ "ಆಫ್ರಿಕತ್ವ" "ಆಫ್ರಿಕದ ಸಂಸ್ಕೃತಿ", "ಕಪ್ಪು ನಾಗರೀಕತೆ," ಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಸಾಂಸ್ಕೃತಿಕ ಪುನರುತ್ಥಾನ ಪ್ರಯತ್ನಗಳು ನಡೆಯುತ್ತಾ ಇವೆ.

ಪ್ರಪಂಚದ ಅನೇಕ ಸ್ಥಳೀಯ ಸಂಸ್ಕೃತಿಗಳು ಪಾಶ್ಚಾತ್ಯ ಸಂಸ್ಕೃತಿ ಎಂಬ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾ ಇವೆ. ಅಂಥ ಅನುಕರಣೆಯಲ್ಲಿ ಸ್ಥಳೀಯ ಉಡುಪು, ಆಹಾರ, ಕೇಶವಿನ್ಯಾಸ, ಆಚರಣೆಗಳು ಮರೆಯಾಗುತ್ತಾ ಬಂದು ಕಡೆಗೆ ಮಾತೃ ಭಾಷೆಯನ್ನೇ ತಿರಸ್ಕರಿಸುವ ಮಟ್ಟಕ್ಕೆ ಹೋಗುತ್ತಿವೆ ಇಂದಿನ ಯುವಕರ ವರ್ತನೆಗಳು. ಈಗಾಗಲೇ 2–3 ಗಂಟೆಗಳ ಕಾಲ ನಡೆಯಬೇಕಾದ ನೃತ್ಯಮೇಳ, ಸಂಗೀತ ಹಾಗೂ ಪ್ರದರ್ಶನಗಳನ್ನು ಟೂರಿಸ್ಟ್‌ಗಳ ಸೌಕರ್ಯಕ್ಕಾಗಿ 10–15 ನಿಮಿಷಗಳ ಅವಧಿಗೆ ಇಳಿಸಿ, ತಮ್ಮ ಸಂಸ್ಕೃತಿಯನ್ನು "ಹಗುರ" ಗೊಳಿಸುತ್ತಿದ್ದಾರೆ. "ಆಧುನೀಕರಿಸಿದ ಪ್ರದರ್ಶನ" ಗಳನ್ನು ನೀಡುತ್ತಿದ್ದಾರೆ.

## ಮ್ಯೂಸಿಯಂ ಸಂಸ್ಕೃತಿ:

ಈಗ ಆಫ್ರಿಕದಲ್ಲಿ ಪ್ರವಾಸಮಾಡುವ ಟೂರಿಸ್ಟ್‌ಗಳಿಗೆ ದೊರೆಯುವುದು ಕಟ್ಟಿಗೆಯಲ್ಲಿ ಕೆತ್ತಿದ ಹೋಳು ಮುಖವಾಡಗಳು. ಕೆನ್ಯಾ, ತಾಂಜಾನಿಯ, ಅಂಗೋಲ, ಕೆಮರೂನ್, ನೈಜೀರಿಯ, ಸಿರಾಲಿಯೋನ್, ಜಿಂಬಾಬ್ವೆ, ದಕ್ಷಿಣ ಆಫ್ರಿಕ ಮುಂತಾದ ರಾಷ್ಟ್ರಗಳಲ್ಲಿ ಪ್ರವಾಸಮಾಡಿದವರು ಅಲ್ಲಿನ ನೆನಪಿಗಾಗಿ ತರುವ ಈ ಹೋಳು ಮೊಗವಾಡಗಳನ್ನು ತಮ್ಮ ಮನೆಯಲ್ಲಿ ಗೋಡೆಯಮೇಲೆ ನೇತುಹಾಕುತ್ತಾರೆ. ಅದೇ ರೀತಿ ಕಟ್ಟಿಗೆಯ ಉಂಡೆಯ ವಿಗ್ರಹಗಳು, ಹೆಚ್ಚಿನ ಬೆಲೆಯಲ್ಲಿ, ದೊರೆಯುತ್ತವೆ. ಆದರೆ ಇವೆಲ್ಲಾ

ಪ್ರವಾಸಿಗಳಿಗಾಗಿ ಮಾಡಿದ ವಿಗ್ರಹಗಳೇ ಹೊರತು ನಿಜವಾದ ಮೂಲ ವಿಗ್ರಹಗಳಲ್ಲ. ನಿಜವಾದ ಮಾಸ್ಕಗಳೆಂದರೆ ಹಿಂದೆ ಹೇಳಿದಂತೆ ಶಾಸ್ತ್ರೋಕ್ತವಾಗಿ ತಯಾರಿಸಿ ಶಕ್ತಿಯ ಆವಾಹನೆ ಮಾಡಿರುವ ಪವಿತ್ರ ದೇವರ ವಿಗ್ರಹಗಳು, ಉದಾ: ಹೆಲ್ಮೆಟ್ ಮಾಸ್ಕ್‌ಗಳು, ಕಾವಲು ವಿಗ್ರಹಗಳು ಮತ್ತು ಪೂರ್ವಜರ ಪ್ರತಿಬಿಂಬಗಳು (ಉಂಡೆ ವಿಗ್ರಹಗಳು).

ಬಾಂಗ್ವ, ಯೋರುಬ, ಇಕ್ವೆ, ಬಮಿಲೆಕೆ, ಇಬಿಬಿಯೋ ಮುಂತಾದ ಸಂಪ್ರದಾಯ ನಿಷ್ಠ ಸಮಾಜಗಳಲ್ಲಿ ಜನರನ್ನು, ರಾಜರನ್ನು, ರಾಜ ಬಂಧುಗಳನ್ನು ಕ್ಯಾಥೊಲಿಕ್ ಮತಕ್ಕೆ ಮತಾಂತರಗೊಳಿಸಿದ ಸಂದರ್ಭದಲ್ಲಿ ಪಾದ್ರಿಗಳು, ಜಿಲ್ಲಾಧಿಕಾರಿಗಳು– "ಪರಿವರ್ತನೆ ಆದ ಮೇಲೆ ಇಂತಹ ಅನಾಗರಿಕ, ಅಸಂಸ್ಕೃತ ವಿಗ್ರಹಗಳನ್ನು ಇಟ್ಟುಕೊಳ್ಳಬಾರದು, ಸುಡಬೇಕು" ಎಂದು ಹೇಳಿ ಅವುಗಳನ್ನು ತರಿಸಿ, ಗುಡ್ಡೆಹಾಕಿ, ಕಲಾತ್ಮಕವಾಗಿ ಕಾಣುವ ವಿಗ್ರಹವನ್ನು ತಮ್ಮ ಊರಿಗೆ ಸಾಗಿಸಿ, ವಸ್ತು ಸಂಗ್ರಹಾಲಯಗಳಲ್ಲಿ ಸೇರಿಸಿಬಿಟ್ಟರು. ಎರಡು ಶತಮಾನಕ್ಕಿಂತಲೂ ಹೆಚ್ಚು ಕಾಲ ಸಂಗ್ರಹಿಸಿದ ಇಂತಹ ವಿಗ್ರಹಗಳು ಎಷ್ಟು ಸಾವಿರವೋ! ಅವೆಲ್ಲಾ ವಸ್ತು ಸಂಗ್ರಹಾಲಯಗಳಲ್ಲಿ ಕೊಳೆಯುತ್ತಾ ಬಿದ್ದಿವೆ. ಅವುಗಳ ಬಗ್ಗೆ ಕ್ಯೂರೇಟರ್ ಬರೆದ ಫಲಕವೇ ಸತ್ಯ. ಅವುಗಳ ಧಾರ್ಮಿಕ, ಸಾಮಾಜಿಕ, ಪ್ರಾಮುಖ್ಯತೆಗಳು ನಗಣ್ಯ. ಇದನ್ನೇ ನೈಜೀರಿಯದ ಮಾಜಿ ಅಧ್ಯಕ್ಷ ಜನರಲ್ ಒಲೂಸಗೆನ್ ಓಬಸಾಂಜೋ ಹೇಳಿದ್ದು– "ಆಫ್ರಿಕದ ಸಂಸ್ಕೃತಿಗಳು ಉಳಿದಿರುವುದು ಯುರೋಪಿನ ಮ್ಯೂಸಿಯಂಗಳಲ್ಲಿ. ನಮ್ಮದು ಒಮ್ಮೆ ನೋಡಿ ಮರೆತು ಬಿಡುವಂತಹ ಹಾಸ್ಯಾಸ್ಪದ ಮ್ಯೂಸಿಯಂ ಸಂಸ್ಕೃತಿಯಾಗಿದೆ. ನಮ್ಮ ಪವಿತ್ರ ವಿಗ್ರಹಗಳು ಇತರ ಮರದ ಶಿಲ್ಪಗಳ ನಡುವೆ, ಪಾವಿತ್ರತೆ, ಶಕ್ತಿಗಳನ್ನು ಕಳೆದುಕೊಂಡು, ಧೂಳು ತಿನ್ನುತ್ತಾ ಬಿದ್ದಿವೆ."

ಇತ್ತೀಚೆಗೆ ಕಣ್ಣು ತೆರೆಯುತ್ತಿರುವ ಕಪ್ಪು ರಾಷ್ಟ್ರಗಳ ನೇತಾರರು ಕೊಚ್ಚಿಹೋಗುತ್ತಿರುವ ತಮ್ಮ ಮೂಲಸಂಸ್ಕೃತಿ ಹಾಗೂ ಪರಂಪರೆಯ ಆಶೋತ್ತರಗಳನ್ನು ಪುನರುತ್ಥಾನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಸಮಗ್ರ ಆಫ್ರಿಕದ ಕಪ್ಪು ಸಂಸ್ಕೃತಿಯನ್ನು ಪ್ರತಿಬಿಂಬಿಸುವ FESTAC (ಫೆಸ್ಟಿವಲ್ ಆಫ್ ಆಫ್ರಿಕನ್ ಕಲ್ಚರ್) ಎಂಬ ಉತ್ಸವವನ್ನು ಮೊದಲು ಘನ ಸರ್ಕಾರದವರು ಏರ್ಪಡಿಸಿದಾಗ ಅದರ ವ್ಯಾಪ್ತಿಯು ಆಫ್ರಿಕಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ 1977ರಲ್ಲಿ ನೈಜೀರಿಯ ಸರ್ಕಾರವು ಪ್ರಾಯೋಜಿಸಿದಾಗ ಅದನ್ನು ಜಾಗತಿಕ ವ್ಯಾಪ್ತಿಗೊಳಪಡಿಸಿದರು. ಭಾರತ, ಬ್ರೆಸಿಲ್, ಅರ್ಜೆಂಟೈನಾ, ಆಸ್ಟ್ರೇಲಿಯ, ಬ್ರಿಟನ್, ಜರ್ಮನಿ, ಸಂಯುಕ್ತ ಸಂಸ್ಥಾನಗಳು, ಕೆನಡಾ ಹಾಗೂ ವೆಸ್ಟ್ಇಂಡೀಸ್, ಟ್ರಿನಿಡಾಡ್ ಸೇರಿದಂತೆ ಅನೇಕ ದ್ವೀಪವಾಸೀ ಕಪ್ಪು ಜನರ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಅಬೂಜ (ಹೊಸ ರಾಜಧಾನಿ) ಮತ್ತು ಕಾನೋ ಪಟ್ಟಣಗಳಲ್ಲಿ ನಡೆಸಿದ "ಫೆಸ್ಟಾಕ್ ದರ್ಬಾರ್"ಗಳಲ್ಲಿ ಆ ಎಲ್ಲಾ ರಾಷ್ಟ್ರಗಳಿಂದಲೂ ಆಹ್ವಾನಿತರಿದ್ದರು. ತತ್ಸಂಬಂಧವಾಗಿ ಪುಸ್ತಕಗಳನ್ನೂ, ಕೈಪಿಡಿಗಳನ್ನೂ ಪ್ರಕಟಿಸಿ ಸಾಕಷ್ಟು ಪ್ರಚಾರ ನೀಡಿದರು. ಅದು ಸಾಲದೇಂಬಂತೆ ನಾವು ಕೆಲಸ ಮಾಡುತ್ತಿದ್ದ ಒಟುಕ್ಪೊ ನಗರದ ಸೆಂಟ್ ಆನ್ಸ್ ಕಾಲೇಜಿನಲ್ಲಿ "ಮಿನಿ ಫೆಸ್ಟಾಕ್" ಎಂಬ ಮೇಳವನ್ನು ಸಿಸ್ಟರ್ ಮಾರ್ಗರೆಟ್ ರಾಜರ್ಸ್‌ರವರು ಏರ್ಪಡಿಸಿದ್ದರು. ಈ ಮೇಳವನ್ನು ಕುರಿತು ಕೆಲವು

ಪಾದ್ರಿಗಳು ಪ್ರಶಂಸೆ ಮಾಡಿದಾಗ್ಯೂ ಅದು ಮೊಸಳೆಯ ಕಣ್ಣೀರೇ ಹೊರತು ಬೇರೆಯಾಗಿರಲಿಲ್ಲ–ಎಂಬುದಕ್ಕೆ ನಿಲ್ಲದ ಪ್ರಚಾರ ಕಾರ್ಯಗಳೇ ಸಾಕ್ಷಿ.

ಇಪ್ಪತ್ತನೆಯ ಶತಮಾನದ ಅಂತ್ಯದಲ್ಲೂ ಸಹ ಗಿನೀ ರಾಷ್ಟ್ರಗಳಲ್ಲಿ ವಾಸಿಸುವ ಜನರೆಲ್ಲರೂ ಕ್ರೈಸ್ತ ಅಥವಾ ಇಸ್ಲಾಮ್ ಮತಾವಲಂಬಿಗಳಾಗಿದ್ದಾರೆಂದು ಹೇಳಲು ಬರುವುದಿಲ್ಲ. ಒಳನಾಡಿನ ಕಾಡುಪ್ರದೇಶಗಳಲ್ಲಿ ಮೂಲಧರ್ಮಾವಲಂಬಿಗಳು ಬಹಳ ಜನರಿದ್ದಾರೆ. ಉಳಿದಿರುವ ಇವರನ್ನು ನೂರಕ್ಕೆ ನೂರು ಪರಿವರ್ತನೆ ಮಾಡಬೇಕೆಂಬ ಛಲವನ್ನು ಹೊತ್ತು ಬಂದಿದ್ದಾರೋ ಎಂಬಂತೆ ಅನೇಕ ಕ್ರೈಸ್ತ ಮಿಷನರಿಗಳು ಮುಖ್ಯವಾಗಿ ಸೂಡಾನ್ ಇಂಟೀರಿಯರ್ ಮಿಷನ್, ಅಡ್ವೆಂಟಿಸ್ಟ್ ಮತ್ತು ಇವ್ಯಾಂಜಲಿಕಲ್ ಮಿಷನರಿಗಳು ಶಾಶ್ವತವಾಗಿ ಇಲ್ಲಿ ಬೇರುಬಿಟ್ಟಿದ್ದಾರೆ. ಅಮೆರಿಕ, ಬ್ರಿಟನ್, ರೋಮ್, ಐರ್ಲೆಂಡುಗಳಿಂದ ಹಣದ ಹೊಳೆ ಹಾಗೂ ಪ್ರಚಾರಕರ ದಂಡು ವರ್ಷ ವರ್ಷವೂ ಅಲೆ ಅಲೆಯಾಗಿ ಹರಿದು ಬರುತ್ತಾ ಇವೆ. ಕೆಳಮಟ್ಟದ ಕಾರ್ಯಕರ್ತರೆಲ್ಲರೂ ಬಿಳಿಯ ಮಹಿಳೆಯರೇ ಆಗಿದ್ದಾರೆ. ತಾಯ್ನಾಡಿನ ಕ್ಯಾಥೊಲಿಕ್ ಜನಾಂಗದಲ್ಲಿ ಜನನ ನಿಯಂತ್ರಣವಿಲ್ಲ. ಪ್ರತಿ ಕುಟುಂಬದಿಂದಲೂ ಹೆಣ್ಣುಮಕ್ಕಳು ಮತ ಪ್ರಚಾರಕ್ಕಾಗಿ ಹರಕೆ ಹೊತ್ತು, ದೀಕ್ಷೆ ಪಡೆದು, ಅವಿವಾಹಿತರಾಗಿ ಉಳಿಯುತ್ತಾರೆ. ಅವರೇ ಈ "ಸಿಸ್ಟರ್ ಮತ್ತು ನನ್"ಗಳೆಂಬ ಪ್ರಚಾರ ಕಾರ್ಯಕರ್ತರು. ಬಿಳಿಯರಾದ ಇವರಿಗೆ ಕರಿಯ ಸ್ತ್ರೀ ಸಮೂಹಗಳಲ್ಲಿ ಅಪಾರ ಗೌರವ. ಅವರ ಕಾರ್ಯನಿಷ್ಠೆ, ಶ್ರದ್ಧೆ, ಸಮರ್ಪಣಾ ಭಾವಗಳ ಜೊತೆಗೆ ಅವರ ಬಣ್ಣವೂ ಒಂದು ಲಾಭಕಾರಕ ಅಂಶವಾಗಿ ಕೆಲಸ ಮಾಡುತ್ತದೆಂಬುದು ಅವ್ಯಕ್ತ ಸತ್ಯ. ಸಾಹಸಪ್ರಿಯರಾದ ಇವರು ರೋಗಪೀಡಿತ ಒಳನಾಡು ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ವ್ಯವಸ್ಥಿತ ಕಾರ್ಯತಂತ್ರ, ನಿರ್ವಹಣಾ ಸಾಮರ್ಥ್ಯಗಳಿಂದ ಇವರು ಹೇಗೆ ಯುದ್ಧವಿಲ್ಲದೇ ಕ್ರೈಸ್ತ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದಾರೆಂಬುದೇ ನಾವು ಗಮನಿಸಬೇಕಾದ ಅಂಶ.

## Sources ಮೂಲಗಳು:


1) Masks and Masquerades in Africa- www zenzibar- trading com/ African mask art.
2) Spirit worship-www. lookand live.com. spirit worship. html.
3) FESTAC- 77 Nigeria- African Journal LTD, Tottenhan court Rd- London W/l
4) Bangwa Funerary Seulpture- R-Brain and A. Polloek- London.


## ಔಷಧಿಮನುಷ್ಯ ಮತ್ತು ಪೂಜಾರಿ:

ಆಫ್ರಿಕದ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ವೈದ್ಯ ಹಾಗೂ ಅರ್ಚಕ ಎರಡೂ ಒಬ್ಬನೇ ಆಗಿರುತ್ತಾನೆ. ಆದ್ದರಿಂದ ಇವನನ್ನು "ಪೂಜಾರಿವೈದ್ಯ" ಎಂದು

ಕರೆಯೋಣ. ಆಧುನಿಕ ಭಾರತ ಅಥವಾ ಎಲ್ಲೇ ಆಗಲೀ ಇವೆರಡೂ ಬೇರೆ ಬೇರೆ ವೃತ್ತಿಗಳಾಗಿದ್ದು ವ್ಯಕ್ತಿಗಳೂ ಸಹ ಬೇರೆ ಬೇರೆ ಆಗಿರುತ್ತಾರೆ. ಆದರೆ ಕಪ್ಪು ಆಫ್ರಿಕದ ಉದ್ದಗಲಕ್ಕೂ ಹಳೆಯ ಬುಡಕಟ್ಟು ಜನಾಂಗಗಳಲ್ಲಿ ಪೂಜಾರಿಯೇ ವೈದ್ಯನೂ ಆಗಿರುತ್ತಾನೆ. ಇವನು ಮೂಲತಃ ಒಂದು ಗುಡಿಯ ಅರ್ಚಕನಾಗಿರುತ್ತಾನೆ.ಇವನು ದೇವರು ಮತ್ತು ಮೃತಾತ್ಮಗಳ ಜೊತೆ ವ್ಯವಹರಿಸಬಲ್ಲವನಾಗಿದ್ದು ಅವರು ಹಾಗೂ ಮನುಷ್ಯನ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಾನೆ. ದೇವರ ವಾಣಿಯನ್ನು ಜನರಿಗೆ ವ್ಯಾಖ್ಯಾನ ಮುಖೇಣ ನಿರೂಪಿಸುತ್ತಾನೆ. ರೋಗಿಯ ಮತ್ತು ಅದೃಷ್ಟ ಹೀನರ ಮೊರೆಯನ್ನು ದೇವರಿಗೆ ಯಾ ಪಿತೃಗಳಿಗೆ ಅರುಹಿ ಅದರ ಉಪಶಮನಕ್ಕಾಗಿ ಸಂಧಾನ ಮಾಡುತ್ತಾನೆ. ಇವನು ತನ್ನ ಬುಡಕಟ್ಟಿನ ಧಾರ್ಮಿಕ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಅತಿ ಮುಖ್ಯ ವ್ಯಕ್ತಿ. ಸಮಾಜದಲ್ಲಿ ಗೌರವ ಸ್ಥಾನ ಪಡೆದು, ವೃತ್ತಿಯಿಂದ ಹಣವನ್ನು ಗಳಿಸಿ, ರಾಜನಿಗೆ/ ಮುಖಂಡನಿಗೆ ಸರಿಸಮನಾಗಿ ನಿಲ್ಲುತ್ತಾನೆ, ಕೆಲವು ಸಮಾಜದಲ್ಲಿ "ಪೂಜಾರಿವೈದ್ಯ" ನೇ "ಪೂಜಾರಿ ರಾಜ" ನಾಗಿದ್ದುದೂ ಉಂಟು. ಉದಾಹರಣೆಗೆ "ಪ್ರೆಸ್ಟರ್ ಜಾನ್". ಪೂಜಾರಿ–ವೈದ್ಯನ ಸ್ಥಾನಮಾನ ಆನುವಂಶಿಕವಾದುದರಿಂದ ಅವನು ಅನೇಕ ಪತ್ನಿಯರೊಡನೆ ಬಾಳುತ್ತಾನೆ. ಕುಲದ ಕಟ್ಟುಪಾಡುಗಳು ಯಾವುವೂ ಇವನಿಗೆ ಅನ್ವಯಿಸುವುದಿಲ್ಲ. ಆದರೂ ಸದಾ ಹೊರಗೆ ಕಾಣಿಸಿಕೊಳ್ಳುವ ಅಗ್ಗದ ಮನುಷ್ಯ ಇವನಲ್ಲ.

ಅಪರೂಪಕ್ಕೆ ಅಲ್ಲಲ್ಲಿ ಸ್ತ್ರೀ ಪೂಜಾರಿ–ವೈದ್ಯರಿರುವುದೂ ಉಂಟು. ಸುಲಭದಲ್ಲಿ ಆವೇಶ ಬರುವ ಹೆಂಗಸೊಬ್ಬಳು ಇದಕ್ಕೆ ಅರ್ಹತೆ ಪಡೆಯುತ್ತಾಳೆ. ಉತ್ತಮ ನರ್ತಕಿಯಾದರೆ ಬೇಗನೆ ಪ್ರಸಿದ್ಧಿ ಪಡೆಯುತ್ತಾಳೆ. ಇವಳು ದೇವರ ಅಥವಾ ಮೃತಾತ್ಮರ ಮಾಧ್ಯಮವೇ ಹೊರತು ಮಾಟಗಾತಿಯಲ್ಲ. ಮೃತಾತ್ಮಗಳನ್ನು ಇವಳು ಮಾತನಾಡಿಸಬಲ್ಲಳು. ಆದರೆ ಯಕ್ಷಿಣಿ ಮತ್ತು ಮಂತ್ರವಾದಿ ಸ್ತ್ರೀಯರನ್ನು ಸಮಾಜದ್ರೋಹಿಗಳೆಂದು ಪರಿಗಣಿಸಿ ದೂರವಿಡುತ್ತಾರೆ.

ಪೂಜಾರೀವೈದ್ಯನಾಗುವುದು ಸುಲಭದ ಮಾತಲ್ಲ. ಎರಡು ವಿದ್ಯೆಯನ್ನು ಕಲಿಯಬೇಕಾಗಿರುವುದರಿಂದ ಹತ್ತಾರು ವರ್ಷಗಳ ಕಾಲ, ಅನೇಕ ಕಷ್ಟಗಳನ್ನು ಅನುಭವಿಸಿ, ಗುರುಸೇವೆ ಮಾಡಿ ಕಲಿಯಬೇಕಾಗುತ್ತದೆ. ಇವನ ಉಡುಪು, ಮಾತು, ನಡವಳಿಕೆಗಳು ವಿಚಿತ್ರವಾಗಿರುತ್ತವೆ. ಪೂರ್ವದಲ್ಲಿ ಪೂಜಾರಿ–ವೈದ್ಯನು ಹಿಡಿದ ಕಾರ್ಯ ಯಶಸ್ವಿಯಾಗದಿದ್ದರೆ ಅವನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದರು. ಅದನ್ನು ತಪ್ಪಿಸಿಕೊಳ್ಳಲು ಜನರಿಗೆ ಅರ್ಥವಾಗದ ರೀತಿಯಲ್ಲಿ ಸಮಜಾಯಿಷಿ ಹೇಳುವುದನ್ನು ಕಲಿತುಕೊಂಡ. ಮಂತ್ರಗಳನ್ನು ಅರ್ಥವಾಗದ ಪುರಾತನ ಭಾಷೆಯಲ್ಲಿ ಹೇಳುವುದಕ್ಕೆ ಇದೇ ಕಾರಣವಿರಬಹುದು.

ಪೂಜಾರಿಯ ಮುಖ್ಯ ಕರ್ತವ್ಯಗಳೆಂದರೆ ಹೊಸದಾಗಿ ಹುಟ್ಟಿದ ಮಗುವಿಗೆ ಪ್ರೋಕ್ಷಣೆ ಮಾಡಿ ಶುದ್ಧೀಕರಿಸುವುದು, ನಾಮಕರಣ, ಗಂಡು ಮಕ್ಕಳ ಸುನತಿ(ಪರಿಕರ್ತನ), ಶಿಶವಸಂಸ್ಕಾರ, ಜಾತ್ರೆ ಇತ್ಯಾದಿ ಮತಾಚರಣೆಯ ವಿಧಿಗಳನ್ನು ನಡೆಸುವುದು, ವೈದ್ಯನಾಗಿ ರೋಗ ಚಿಕಿತ್ಸೆ, ಕಷ್ಟ ಪರಿಹಾರ, ಶಾಸ್ತ್ರ, ಭವಿಷ್ಯ ನೋಡುವುದು ಇತ್ಯಾದಿ. ದಕ್ಷಿಣ ಆಫ್ರಿಕ ಮತ್ತು ಜಿಂಬಾಬ್ವೆ ರಾಷ್ಟ್ರಗಳಲ್ಲಿರುವ ಝೂಲು ಪೂಜಾರಿ ವೈದ್ಯರು ಮಳೆಯ ನಿಯಂತ್ರಣ ಕಾರ್ಯದಲ್ಲಿ ಗಟ್ಟಿಗರಾಗಿದ್ದಾರೆ. ಇವರು ಮಳೆ ಬರಿಸುವುದು, ಮಳೆಯನ್ನು ತಡೆಗಟ್ಟುವುದು, ಈ ವಿದ್ಯೆಯಲ್ಲಿ ಎದುರಾಳಿಯನ್ನು ಸೋಲಿಸುವುದು ಇವುಗಳಲ್ಲಿ ಪರಿಣತರಾಗಿದ್ದು ಅವುಗಳನ್ನು ಮಾತ್ರ ನಡೆಸಿಕೊಂಡು ಹೋಗುತ್ತಾರೆ. ಅಂತರ ರಾಷ್ಟ್ರೀಯ ಕ್ರೀಡಾ ಪಂದ್ಯಗಳ ಸಂದರ್ಭದಲ್ಲಿ ಇವರಿಗೆ ಬಹಳ ಬೇಡಿಕೆಯಿರುತ್ತದೆ. ಕರೆದ ಪಕ್ಷದ ಕಡೆ (ಪರವಾಗಲೀ-ವಿರೋಧವಾಗಲೀ) ಹೋಗುತ್ತಾರೆ.

ಮತಾಚರಣೆ ಮತ್ತು ವೈದ್ಯಾನುಷ್ಠಾನಗಳಲ್ಲಿ ಬಹಳ ಮುಖ್ಯವಾದ ಅಂಶವೆಂದರೆ ಅವುಗಳನ್ನು ಕ್ರಮವಾಗಿ, ವಿಧಿವತ್ತಾಗಿ, ತಪ್ಪಿಲ್ಲದೆ ನಡೆಸುವುದು, ಸರಿಯಾಗಿ ಆಚರಿಸಿದಾಗ ಮಾತ್ರ ಅವು ದೇವರ ಮೇಲೆ ಪ್ರಭಾವ ಬೀರುತ್ತವೆ. ತಪ್ಪಾಗಿ ಆಚರಿಸಿದರೆ ದೇವತೆಗಳಿಗೆ ಕೋಪಬರುತ್ತದೆ. ಮಾಡಿದ ಕಾರ್ಯವೆಲ್ಲಾ ವ್ಯರ್ಥವಾಗುತ್ತದೆ. ತಪ್ಪಿಲ್ಲದ ಆಚರಣೆಗಳು ಅವರ ಮಾತುಗಳಿಗೆ ಗೌರವವನ್ನೂ ಪವಿತ್ರತೆಯನ್ನೂ ತಂದುಕೊಡುತ್ತವೆ.

**ಸಾಂಪ್ರದಾಯಿಕ ವೈದ್ಯ ಪದ್ಧತಿ**

ಐರೋಪ್ಯರು ಆಫ್ರಿಕಾ ನೆಲದಮೇಲೆ ಕಾಲಿಡುವ ಮೊದಲೇ ಶತಮಾನಗಳಷ್ಟು ಹಳತಾದ ಸಾಂಪ್ರದಾಯಿಕ ವೈದ್ಯಪದ್ಧತಿಗಳು ಖಂಡದಾದ್ಯಂತ ಪ್ರಚಲಿತವಾಗಿದ್ದುವು. ಈಗಲೂ ಸಹ ಸ್ಥಳ-ಸನ್ನಿವೇಶಕ್ಕೆ ತಕ್ಕಂತೆ ದೇಶೀಯ ವೈದ್ಯ ಪದ್ಧತಿ ಮತ್ತು ದೇಶೀ ಡಾಕ್ಟರುಗಳು ಇದ್ದಾರೆ. ಅಂತಹವರನ್ನು "ಗಿಡ ಮೂಲಿಕೆಗಳ ವೈದ್ಯರು", "ಬರಿಗಾಲ ವೈದ್ಯರು" ಎಂದೂ ಸ್ವಾಹಿಲಿ ಭಾಷೆಯಲ್ಲಿ "ವಗಾಂಗ" ಎಂದೂ ಕರೆಯುತ್ತಾರೆ. (ಇವರು ಬುಡಕಟ್ಟು ಸಮಾಜದ ಪೂಜಾರೀವೈದ್ಯರಲ್ಲ). ನಮ್ಮ ಬುಡು ಬುಡಿಕೆ, ಹೆಳವ, ಹಕ್ಕಿಪಿಕ್ಕಿಯವರಂತೆ ನಾಟೀ ಔಷಧಿಗಳನ್ನು ಕೊಡುತ್ತಾ ಮುಂದೆಹೋಗುವ ಸಂಚಾರೀ ವೈದ್ಯರು. ಅನೇಕ ಸಂದರ್ಭಗಳಲ್ಲಿ ಇವರ ಚಿಕಿತ್ಸೆಯು ಯಶಸ್ವಿಯಾಗಿರುವುದುಂಟು. ಇವರ ಕಾರ್ಯವ್ಯಾಪ್ತಿ ತೀರಾ ಹಿಂದುಳಿದ ಕಾಡುಪ್ರದೇಶಗಳಲ್ಲಿ ವಾಸಿಸುವ ಹಾಗೂ ಅಲೆಮಾರೀ ಬುಡಕಟ್ಟುಗಳಿಗೆ ಸೀಮಿತ. ಆದರೆ ನೆಲೆನಿಂತ ಬುಡಕಟ್ಟು ಸಮಾಜಗಳಲ್ಲಿ ಕಂಡುಬರುವ ವೈದ್ಯಪದ್ಧತಿಯೇ ಬೇರೆ. ಕಪ್ಪು ಆಫ್ರಿಕದೊಳಗೆ ಸುಮಾರು 3000 ಬುಡಕಟ್ಟು ಜನಾಂಗಗಳಿವೆ. ಇವರದ್ದು ವ್ಯವಸ್ಥಿತ ಸಮಾಜ. ಇವರು ತಮ್ಮದೇ ಆದ ಒಂದು ನಿರ್ದಿಷ್ಟ ವೈದ್ಯ ಪದ್ಧತಿ ಮತ್ತು ಆರೋಗ್ಯ ನೀತಿಯನ್ನು ಹೊಂದಿದ್ದಾರೆ. ಅವು ಧಾರ್ಮಿಕ ಹಾಗೂ ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ಆಧಾರಿತವಾದವು.

ಬಹಳ ಕಾಲದಿಂದಲೂ (ಕ್ರಿಪೂ. ಸುಮಾರು 500) ಮನುಷ್ಯನಿಗೆ ಯಾವುದೇ ಅಸ್ವಸ್ಥತೆ (ದೈಹಿಕ ಮತ್ತು ಮಾನಸಿಕ) ಕಂಡು ಬಂದರೂ ಅದು ದೇವರ ಅಥವಾ ಪಿತೃಗಳ ಅತೃಪ್ತಿ, ಅಸಮಾಧಾನಗಳ ಸಂಕೇತವೆಂದು ಜನ ನಂಬಿದ್ದರು. ಭಯಂಕರವಾದ ಮಲೇರಿಯಾ ಜ್ವರ, ಹಳದೀ ಜ್ವರ (ಕಾಮಾಲೆ), ನಿದ್ದೆ ರೋಗ (ಬಿಲಹಾರ್ಜಿಯಾಸಿಸ್) ಇತ್ಯಾದಿ ರೋಗ ರುಜಿನಗಳಿಂದಾಗಲೀ, ವ್ಯವಸಾಯ ಬೇಟೆಯಲ್ಲಿ ಒದಗಿಬಂದ ಕಷ್ಟ ನಷ್ಟಗಳಾಗಲೀ, ಮಕ್ಕಳು ಸಾಯುವ ಅಥವಾ ಬಂಜೆತನದ ಸಂಕಟಗಳಾಗಲೀ ಎಲ್ಲವೂ ನಾವು ಎಸಗಿದ ದುಷ್ಕೃತ್ಯ-ಅಪರಾಧಗಳಿಗೆ ದೊರೆತ ಪ್ರತಿಫಲ ಅಥವಾ ಶಿಕ್ಷೆ ಎಂದು ಪರಿಗಣಿಸುತ್ತಿದ್ದರು. ಇಂತಹ ಆಧ್ಯಾತ್ಮಿಕ ಚಿಂತನೆಗಳ ಪ್ರಭಾವ ಈಗಲೂ ಹಿರಿಯರ ಮಾತಿನಲ್ಲಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದಲೇ ಆ ದೇವರ ಅಥವಾ ಪ್ರೇತಾತ್ಮಗಳ ಅರ್ಚಕನೇ ನಮ್ಮ ಸಂಕಷ್ಟಗಳನ್ನು ಪರಿಹರಿಸುವ ವೈದ್ಯನೂ ಆಗಬೇಕಾಗಿದೆ ಎಂಬುದು ಅಂದಿನ ಕಾಲಕ್ಕೆ ಸಮಂಜಸವೂ, ತರ್ಕಬದ್ಧವೂ ಆಗಿತ್ತು. ಈಗಲೂ ಸಹ ಆಗಿದೆ. ಹೀಗೆ ಪೂಜಾರಿಯು ವೈದ್ಯನಾದನು. ವೈದ್ಯ ವಿದ್ಯೆಯು ಮತಾಚರಣೆಯ ಒಂದು ಅಂಗವಾಗಿ ಬೆಳೆಯಿತು.

ಮೇಲೆ ಹೇಳಿದಂತಹ ಸಂದರ್ಭಗಳಲ್ಲಿ ಜನರು ತಮ್ಮ ಬುಡಕಟ್ಟು ಪೂಜಾರಿ-ವೈದ್ಯನ ಮೊರೆ ಹೋಗಬೇಕಾಗುತ್ತದೆ. ದೇವರನ್ನು ಅಥವಾ ಭೂತಶಕ್ತಿಯನ್ನು ಸಂಪ್ರೀತಗೊಳಿಸಲು ಒಂದು ಆಡು ಇಲ್ಲವೇ ಹುಂಜವನ್ನು ಬಲಿ ಒಪ್ಪಿಸಬೇಕಾಗುತ್ತದೆ. ಆತ ನಿಮ್ಮ ರೋಗದ ಮತ್ತು ಸಂಕಷ್ಟದ ಕಾರಣಗಳನ್ನು ಕಂಡು ಹಿಡಿಯುವುದರಲ್ಲಿ ಗಟ್ಟಿಗ. ನಿಮಗೆ ಯಾರಾದರೂ "ಜುಜು"(ಮಾಟ) ಮಾಡಿಸಿದ್ದರೆ, ಮಾಟ ಮಾಡಿದ ಅಪರಾಧಿಯನ್ನು ಪತ್ತೆಹಚ್ಚಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾನೆ. ಅವು ಮರುಕೊಳಿಸದಂತೆ ದಿಗ್ಬಂಧನೆ ಮಾಡುತ್ತಾನೆ.

**ಚಿಕಿತ್ಸಾ ವಿಧಾನ:**

ದೇವರಿಗೆ ನಿಮ್ಮ ಕಷ್ಟಗಳನ್ನು ತಿಳಿಸಿದನಂತರ ವೈದ್ಯನು ಸೂಕ್ತ ಔಷಧಗಳ ಸಮೇತ ರೋಗಿಯ ಕೊಠಡಿಗೆ ಬರುತ್ತಾನೆ. ರೋಗಿಯ ಮುಂದೆ ಕುಳಿತು ಮಂತ್ರ ಹೇಳುವುದು, ದುಷ್ಟಶಕ್ತಿಯನ್ನು ಓಡಿಸಲು ಕೂಗಾಟ, ಕಿರಿಚಾಟ, ತಮಟೆ ಶಬ್ದ ಮಾಡಿಸುತ್ತಾನೆ. ಚೂರ್ಣ ಇಲ್ಲವೇ ಎಣ್ಣೆಗಳನ್ನು ಗಾಯದ ಭಾಗಕ್ಕೆ ಹಚ್ಚಿ ಉಜ್ಜುವುದು, ರೋಗಿಯ ಶರೀರದ ಮೇಲೆ ತೂಕಬಿಡುವುದು (ದೆವ್ವವನ್ನು ಓಡಿಸಲು) ಇತ್ಯಾದಿಗಳು ರೋಗಕ್ಕೆ ತಕ್ಕಂತೆ ನಡೆಯುತ್ತವೆ. ಇದರಲ್ಲಿ ರೋಗಿಯ ಬಂಧುಗಳು ಭಾಗವಹಿಸುವು ದುಂಟು. ಪ್ರಬಲವಾದ ತಲೆನೋವಿನಿಂದ ನರಳುತ್ತಿದ್ದರೆ ಅದನ್ನು ಹಿಡಿದ ಭೂತವು ತಪ್ಪಿಸಿಕೊಂಡು ಹೊರಗೆ ಬರಲು ಅನುಕೂಲವಾಗುವಂತೆ "ಕಪಾಲ ಬೈರಿಗೆ" ಯಿಂದ ತೂತು ಮಾಡುತ್ತಿದ್ದರಂತೆ (ರೋಗಿಯ ಒಪ್ಪಿಗೆ ಪಡೆದು).

ಮಕ್ಕಳ ಮೇಲೆ ಬರುವ ಭೀತಿಶಂಕೆಗೆ ಚಿಕಿತ್ಸೆ ಮಾಡುವಾಗ ಶಕುನಗಳಿಗೆ ಮಹತ್ವ ಕೊಡಲಾಗುತ್ತದೆ. ಎತ್ತರವಾದ ದೂದಿಹತ್ತಿಮರದ ತುದಿಕೊಂಬೆಗಳು ಅಲುಗಾಡುವುದು, ಮರದ ಎಲೆಗಳು ಶಬ್ದಮಾಡುವುದು, ಬಾಳೆಗಿಡ ಅಲುಗಾಡುವುದು ಇತ್ಯಾದಿ ಶಕುನ ಸಂಕೇತಗಳು, ಚಿಕಿತ್ಸೆಯು ಯಶಸ್ವಿಯಾಗುತ್ತದೆಯೇ, ಇಲ್ಲವೇ ಎಂಬುದನ್ನು ಹೇಳುತ್ತವಂತೆ.

ಮೂಳೆ ಮುರಿತ, ಕೀಲು ಜಾರುವುದು, ಉಳುಕು ಇತ್ಯಾದಿಗಳಿಗೂ ಈ ಪೂಜಾರಿಯೇ ವೈದ್ಯ. ಮಂತ್ರ ಹಾಕಿದ ತಾಯಿತವನ್ನು ನೋವಿನ ಮೇಲಿಟ್ಟು ಮಂತ್ರಿಸಿ, ನಂತರ ಹೊರಗೆ ಬಿಸಾಡಿದರೆ ಸಾಕು, ಅದನ್ನು ಯಾರು ಮುಟ್ಟುತ್ತಾರೋ ಅವರಿಗೆ ಆಜಾಡ್ಯ ವರ್ಗವಾಗುತ್ತದೆ, ಮತ್ತು ರೋಗಿ ಗುಣಹೊಂದುತ್ತಾನೆ. ಸಂಧಿವಾತ, ವ್ರಣದ ಮೇಲಿನ ಊತ ಇಂತಹ ಕೆಲವು ಉಪದ್ರವಗಳಿಗೆ ರಕ್ತವನ್ನು ಹೊರಹಾಕುವ ಶಸ್ತ್ರಕ್ರಿಯೆ ನಡೆಯುತ್ತದೆ. ಹರಿತವಾದ ಬ್ಲೇಡು ಇಲ್ಲವೇ ಚಾಕುವಿನಿಂದ ಚರ್ಮದ ಮೇಲೆ 3–4 ಗೆರೆ ಹಾಕಿ, ಕೊಂಚರಕ್ತವನ್ನು ಹೊರಗೆ ಹಾಕುವುದೂ ಒಂದು ಚಿಕಿತ್ಸಾಕ್ರಮ. ಈ ಶಸ್ತ್ರ ಚಿಕಿತ್ಸೆಯನ್ನು ನಾಯಿಂದ ಮಾಡುತ್ತಾನೆ. ಮೊಣಕಾಲು, ತೊಡೆ ಇಲ್ಲವೇ ತೋಳಿನ ಮೇಲೆ ಹಾಕಿದ ಗೆರೆಗಳ ಗುರುತುಗಳು ಬಹಳಕಾಲ ಉಳಿಯುತ್ತವೆ. ಅದನ್ನು ನೀವು ನೋಡಬಹುದು. ಊತವನ್ನು ಕರಗಿಸಲು ಕಾದ ಹೆಂಚು, ಅಥವಾ ಕಲ್ಲನ್ನು ಉಪಯೋಗಿಸುವ ಪದ್ಧತಿ ಈಗಲೂ ಉಳಿದುಕೊಂಡು ಬಂದಿದೆ. ಜ್ವರ, ಬೇಧಿ ಹೊಟ್ಟೆ ನೋವುಗಳಿಗೆ ಎಲೆಗಳ ಕಷಾಯ ಮಾಡಿಕೊಡುತ್ತಾನೆ. ಪೂಜಾರಿ ವೈದ್ಯನಿಗೆ ಎಲ್ಲಾ ಔಷಧಿ, ಗಿಡಮೂಲಿಕೆಗಳ ಪರಿಚಯವುಂಟು. ಅರ್ಥಾತ್ ಸರ್ವರೋಗಗಳಿಗೂ ಒಬ್ಬನೇ ವೈದ್ಯ. ಅಷ್ಟೇ ಅಲ್ಲ, ಇವನು ಅರ್ಚಕನೂ ಆದುದರಿಂದ ದೇವರಲ್ಲಿ ಪ್ರಶ್ನೆ ಕೇಳುವುದು, ಭವಿಷ್ಯ ಕೇಳುವುದು, ಶಾಸ್ತ್ರ ನೋಡುವುದು ಇತ್ಯಾದಿಗಳನ್ನೂ ಈತನೇ ಮಾಡುತ್ತಾನೆ.

ಇಷ್ಟೆಲ್ಲಾ ಓದಿದ ಮೇಲೆ ಆಫ್ರಿಕದಲ್ಲಿ ಆಧುನಿಕ ಆಸ್ಪತ್ರೆಗಳೇ ಇಲ್ಲವೇನೋ ಎಂಬ ಸಂಶಯ ಬರಬಾರದು. ಅತ್ಯಾಧುನಿಕವಾದ ಪಾಶ್ಚಾತ್ಯ ವೈದ್ಯಕೀಯ ಸೌಲಭ್ಯಗಳುಳ್ಳ ಸರ್ಕಾರೀ ಆಸ್ಪತ್ರೆಗಳು, ಮುನಿಸಿಪಲ್ ಆರೋಗ್ಯ ಕೇಂದ್ರಗಳು, ಖಾಸಗೀ ಕ್ಲಿನಿಕ್ ಮತ್ತು ನರ್ಸಿಂಗ್ ಹೋಮ್ ಇತ್ಯಾದಿಗಳು ಎಲ್ಲಾ ನಗರ–ಪಟ್ಟಣಗಳಲ್ಲೂ ಕಾಣಬರುತ್ತವೆ. ಅನೇಕ ನಗರ–ಪಟ್ಟಣಗಳಲ್ಲಿ ಭಾರತೀಯ ಡಾಕ್ಟರು, ಸರ್ಜನರು ಕಾಂಟ್ರಾಕ್ಟ್ ಮೇಲೆ ಕೆಲಸಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ, ಮಿಷನರಿ ಶಾಲೆಗಳಿರುವ ಕಡೆಗಳಲ್ಲಿ ಅನೇಕ ಮಿಷನರಿ ಆಸ್ಪತ್ರೆಗಳು, ಡಿಸ್ಪೆನ್ಸರಿಗಳು ಕೆಲಸಮಾಡುತ್ತಿವೆ. ಅಲ್ಲಿ ಐರೋಪ್ಯ ದೇಶೀಯ ಹಾಗೂ ಖಾಸಗಿಯವರು ಈ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೂ ಸಾಮಾನ್ಯ ಜನರು ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆಯುವುದರ ಜೊತೆಗೆ ಪೂಜಾರಿಯ ಚಿಕಿತ್ಸೆಗಳನ್ನೂ ಮಾಡಿಸುತ್ತಾರೆ. ಏಕೆಂದರೆ ರೋಗದ "ಧಾರ್ಮಿಕ ಸ್ವಭಾವ"ಕ್ಕೆ ಬೇಕಾದ ಚಿಕಿತ್ಸೆಗಳು ಆಸ್ಪತ್ರೆಯಲ್ಲಿ ದೊರೆಯುವುದಿಲ್ಲವಂತೆ. ಆದ್ದರಿಂದ ಆಫ್ರಿಕದ ಅನೇಕ ರಾಷ್ಟ್ರಗಳಲ್ಲಿ

ಇಂದು ಪಾಶ್ಚಾತ್ಯ ವೈದ್ಯಕ್ರಮ ಮತ್ತು ಸ್ಥಳೀಯ ಸಾಂಪ್ರದಾಯಿಕ ಚಿಕಿತ್ಸೆಗಳು ಜೊತೆ ಜೊತೆಗೇ ರೂಢಿಯಲ್ಲಿವೆ. ಬೇಕಾದವರು ಯಾವುದಾದರೂ ಒಂದನ್ನೋ ಅಥವಾ ಎರಡೂ ಪದ್ಧತಿಗಳ ಚಿಕಿತ್ಸೆಯನ್ನೋ ಪಡೆಯಬಹುದು. ಅದು ಅವರವರ ನಂಬಿಕೆ, ವಿದ್ಯೆ, ಸನ್ನಿವೇಶಗಳನ್ನು ಅವಲಂಬಿಸುತ್ತದೆ.

**ಮೂಲಗಳು:**

1) African Mythology- geoffrey parrinder paml Hamlyn-London.
2) Shamanism- Medicine men and priests. www-ubook. org/upaper/ ubpaper 090 html.
3) African Healers- www mamiwata com/african health html.
4) African. Healers and Healing systems- zebratl das magazin-
5) African Traditional Medicine- www zebra. or. at/zebratl/99/o-pen 4. htm.
6) Hindu- zulu Traditions by Edward Malinga T.O.I. The speaking Tree-10 Feb 2003. htm: 11 spiritnality. Indiatimes. com.

# ಪಕ್ಷಿನೋಟ

ಪುರಾತನ ಸಂಸ್ಕೃತಿಗಳಲ್ಲಿದ್ದ ಪರಸ್ಪರ ಸಂಬಂಧಗಳ ಮೇಲೆ ವಿಹಂಗಮ ನೋಟ ಹರಿಸಿದಾಗ ಅದು ಮೂರು ಆಯಾಮಗಳಲ್ಲಿ ಗೋಚರವಾಗುತ್ತದೆ,

(1) ಪುರಾತನ ಈಜಿಪ್ಟ್ ಮತ್ತು ಕಪ್ಪು ಜನರ ಸಂಸ್ಕೃತಿ
(2) ಪುರಾತನ ಈಜಿಪ್ಟ್ ಮತ್ತು ಭಾರತದ ವೈದಿಕ ಸಂಸ್ಕೃತಿ
(3) ಹಿಂದೂ ಮತ್ತು ಕಪ್ಪು ಸಂಸ್ಕೃತಿ

## ಪುರಾತನ ಈಜಿಪ್ಟ್ ಮತ್ತು ಕಪ್ಪು ಸಂಸ್ಕೃತಿ

ಆಫ್ರಿಕದ ಕಪ್ಪು ಸಂಸ್ಕೃತಿಯಲ್ಲಿ ಬರುವ ಹಲವಾರು ಪೌರಾಣಿಕ ನಂಬಿಕೆಗಳು ಪುರಾತನ ಐಗುಪ್ತರ ನಂಬಿಕೆಗಳೊಡನೆ ಸರಿಸುಮಾರು ಹೋಲುತ್ತವೆ. ಸೃಷ್ಟಿಕರ್ತ, ಆಕಾಶಲೋಕ, ಸೂರ್ಯ, ಚಂದ್ರ, ನದಿ, ಬೆಟ್ಟ ಮುಂತಾದ ಪ್ರಕೃತಿ ಚೇತನಗಳು, ಪ್ರಥಮ ಮಾನವ ದಂಪತಿಗಳು, ಪ್ರೇತಾರಾಧನೆ ಇತ್ಯಾದಿಗಳು ಎರಡೂ ಕಡೆಗಳಲ್ಲಿ ಕಾಣಬರುತ್ತವೆ. ಒಂದೊಂದಾಗಿ ತಾಳೆನೋಡಿದಾಗ ಕಪ್ಪು ಜನರ ಧರ್ಮಸ್ವರೂಪ ಮತ್ತು ಆಚರಣೆಗಳು ಈಜಿಪ್ಟಿನಿಂದ ಹರಿದುಬಂದಿರಬಹುದೇ ಎಂಬ ಸಂಶಯ ಉದ್ಭವಿಸುತ್ತದೆ. ಈ ಸಂಶಯವು ಇವರಿಬ್ಬರಿಗೂ ಸಂಪರ್ಕವಿದ್ದರೆ ಮಾತ್ರ ಸಾಧ್ಯ ಎಂಬ 'ಆಧಾರ ಕಲ್ಪನೆ' (ಹೈಪಾಥೆಸಿಸ್)ಗೆ ಎಡೆಮಾಡಿಕೊಡುತ್ತದೆ. ಆಧಾರ ಕಲ್ಪನೆಗಳನ್ನು ಸಮರ್ಥಿಸಿ ಸಿದ್ಧಾಂತ ಸ್ಥಾಪನೆ ಮಾಡಲು ಆಯಾ ಸಂಸ್ಕೃತಿಗಳ ಕುರಿತು ಆಳವಾದ ಅಧ್ಯಯನ ನಡೆಸಬೇಕಾಗುತ್ತದೆ. ಅದಕ್ಕೆ ಇಲ್ಲಿ ಸ್ಥಳಾವಕಾಶವಿಲ್ಲದ ಕಾರಣ, ನಿರ್ದಿಷ್ಟವಾಗಿ ಗೊತ್ತಿರುವ ಕೆಲವು ಸಮರ್ಥನೆಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಐಗುಪ್ತರ ಸೃಷ್ಟಿಕರ್ತನನ್ನು–ಆತುಮ್–ಅಧಿದೇವತೆಯೆಂದೂ ಉಳಿದ ಸೂರ್ಯ, ಭೂಮಿ, ಆಕಾಶದೇವಿ ಇತ್ಯಾದಿಗಳನ್ನು ಅಧೀನ ದೇವತೆಗಳೆಂದೂ, ಮೊಸಳೆ, ಕೊಕ್ಕರೆ, ನಾಯಿ, ತೋಳ, ಬೆಕ್ಕು, ದುಂಬಿ, ಕಪ್ಪೆ, ನಾಗರಹಾವು, ರಣಹದ್ದು ಇತ್ಯಾದಿಗಳು ದೇವರ ಸೇವಕರು ಅಥವಾ ರಕ್ಷಕದೇವತೆಗಳೆಂದು ಮೂರು ಸ್ತರಗಳಲ್ಲಿ ವಿಂಗಡಿಸಿ

ಕೊಂಡಿದ್ದರು. ನೀಗ್ರೊ ಸಂಸ್ಕೃತಿಯಲ್ಲೂ ಹೀಗೆಯೇ ಇದೆ. ಸೃಷ್ಟಿ ಕರ್ತನಾದ ಮುಲುಂಗುವನ್ನು ಮುಖ್ಯದೇವರೆಂದೂ ಉಳಿದ ಭೂಮಿ, ಆಕಾಶ, ನದಿ, ಬೆಟ್ಟ, ಕಾಡು, ಬಿರುಗಾಳಿ ಇತ್ಯಾದಿಗಳನ್ನು ಅಧೀನ ದೇವತೆಗಳೆಂದೂ, ಮೊಲ, ನಾಯಿ, ಗೋಸುಂಬೆ, ಜೇಡ, ಬಾವಲಿಗಳನ್ನು ದೈವಕಿಂಕರರೆಂದೂ, ಮೂರು ಸ್ತರಗಳಲ್ಲಿ ವಿಂಗಡಿಸಿದ್ದಾರೆ. ಈ ವಿಭಜನೆಯು ಐಗುಪ್ತರ ವಿಭಜನೆಯನ್ನೆ ಹೋಲುತ್ತದೆ. ದೇವಲೋಕ, ಪಾತಾಳಲೋಕಗಳ ಕಲ್ಪನೆಯು ಐಗುಪ್ತರ ಕಲ್ಪನೆಗೆ ಹೋಲುವಂತಿದ್ದರೂ, ಶರೀರ ಸಮೇತ ಅಲ್ಲಿಗೆ ಹೋಗಿ ಬರುವ ನಿದರ್ಶನಗಳು ಭಾರತದ ಕಡೆಯಿಂದ ಬಂದಿರಬಹುದು. ಐಗುಪ್ತರ ಸಂಸ್ಕೃತಿಯಲ್ಲಿ ಪ್ರಮುಖ ದೇವರುಗಳಿಗೆ ಮತ್ತು ಚಕ್ರವರ್ತಿಗಳ ನೆನಪಿಗೆ ಭವ್ಯವಾದ ಕಲ್ಲಿನ ಕಟ್ಟಡಗಳನ್ನು ಕಟ್ಟಿಸಿ, ಧೂಪ ದೀಪ ಸುಗಂಧ ದ್ರವ್ಯಗಳೊಡನೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಆದರೆ ನೀಗ್ರೋ ನಾಡುಗಳಲ್ಲಿ ಈ ಸಂಸ್ಕೃತಿ ಬೆಳೆಯಲಿಲ್ಲ. ಅರಣ್ಯ ಪರಿಸರಕ್ಕೆ ತಕ್ಕಂತೆ ಮರ ಮತ್ತು ಮಣ್ಣುಗೋಡೆಯ ಗುಡಿಸಲುಗಳು ಇವರ ದೇವಾಲಯಗಳಾದುವು.

ಐಗುಪ್ತ ಪುರಾಣಗಳಲ್ಲಿರುವಂತೆಯೇ ನೀಗ್ರೋ ಪುರಾಣದಲ್ಲಿಯೂ ಪ್ರಥಮ ದಿವ್ಯದಂಪತಿಗಳು ಅಣ್ಣ, ತಂಗಿಯರು, ಅರ್ಥಾತ್ ಒಟ್ಟಿಗೇ ಸೃಷ್ಟಿಸಲ್ಪಟ್ಟವರು. ಈಜಿಪ್ಟ್‌ನ ರಾಜರು, ಚಕ್ರವರ್ತಿಗಳು ಸ್ವಂತ ಸಹೋದರಿಯನ್ನು ಮದುವೆಯಾಗುವ ಸಂಪ್ರದಾಯ ಬಹಳ ಕಾಲದವರೆಗೂ ನಡೆದುಬಂದಿತ್ತು. ಇದೇ ಪರಿಪಾಠವನ್ನು ನೀಗ್ರೋ ಪುರಾಣಪುರುಷರ ಕಥೆಗಳಲ್ಲೂ, ನಾಡದೊರೆಗಳ ಕಥೆಗಳಲ್ಲೂ ಕಾಣುತ್ತೇವೆ. ಈ ವಿಚಾರದಲ್ಲಿ ಎರಡೂ ಸಂಸ್ಕೃತಿಗಳಲ್ಲಿ ತದ್ವತ್ ಸಾಮ್ಯಗಳಿರುವುದನ್ನು ಮನಗಾಣಬಹುದು. ಈಜಿಪ್ಟ್ ಪುರಾಣದ ಕೆಲವು ದಂತ ಕಥೆಗಳು ಕಾಲಕ್ರಮದಲ್ಲಿ ಪಶ್ಚಿಮ ಆಫ್ರಿಕದ ಹುಲ್ಲುಗಾವಲಿನೊಳಗೆ ನುಸುಳಿ, ಕೆಲವು ಮಾರ್ಪಾಡುಗಳೊಂದಿಗೆ ಹರಡಿವೆಯೆಂದು ನಿಸ್ಸಂಶಯವಾಗಿ ಹೇಳಬಹುದು. ದೇವ ದೇವಿಯರ ಹೆಸರನ್ನು ಯದ್ವತ್ತಾಗಿ ಹೇಳುವುದರ ಬದಲಾಗಿ ಆ ದೇವತೆಗಳ ಕಲ್ಪನೆಯನ್ನು ಅನುಕರಿಸಿ, ತಮ್ಮದೇ ಆದ ಹೆಸರುಗಳನ್ನಿಟ್ಟು ಪ್ರಸಾರ ಮಾಡಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹಿಂದುಳಿದ ನೀಗ್ರೋ ಸಮಾಜಗಳಿಗೂ ಮುಂದುವರಿದಿದ್ದ ಐಗುಪ್ತ ಸಮಾಜಗಳಿಗೂ ದೀರ್ಘಕಾಲದ ಸಂಪರ್ಕವಿದ್ದುದರಿಂದ ಇದು ಸಾಧ್ಯವಾಯಿತು ಎಂಬ ಆಧಾರ ಕಲ್ಪನೆಯನ್ನು ಇತಿಹಾಸ ಸಂಶೋಧನೆಗಳ ಬೆಳಕಿನಲ್ಲಿ ಸಮರ್ಥಿಸಬಹುದಾಗಿದೆ.

ಈಜಿಪ್ಟ್ ನಾಗರಿಕತೆಗೆ ಸಮಕಾಲಿಕವಾಗಿ ನೂಬಿಯಾ ಸಾಮ್ರಾಜ್ಯವು ಉತ್ತರ ಸೂಡಾನಿನಲ್ಲಿ ಶೋಭಿಸುತ್ತಿತ್ತು. ನೂಬ್ ಎಂದರೆ ಈಜಿಪ್ಟ್ ಭಾಷೆಯಲ್ಲಿ ಚಿನ್ನ ಎಂದರ್ಥ. ಚಿನ್ನದ ನಾಡಾದ ನೂಬಿಯವು ಈಜಿಪ್ಟ್ ದೊರೆಗಳಿಗೆ ಬೆಳ್ಳಿಬಂಗಾರವನ್ನು ಒದಗಿಸುತ್ತಿತ್ತು.+ ನೂಬಿಯ ನಾಗರಿಕತೆಯು ಈಜಿಪ್ಟ್ ನಾಗರಿಕತೆಗಿಂತಲೂ ಹಳೆಯದೆಂದು ಕೆಲವು

---

\+ Black Kingdoms of the Nile-wysiwyag://10
http :// www.pbs.org/wonders/episode//

ಆಫ್ರಿಕನ್ ಇತಿಹಾಸಕಾರರು ವಾದಿಸುತ್ತಾರೆ. ಈಜಿಪ್ಟಿನ ಐದನೇ ವಂಶದ ದೊರೆಯು ದಕ್ಷಿಣದ ನೆರೆರಾಜ್ಯವಾದ ನೂಬಿಯವನ್ನು ಕ್ರಿ. ಪೂ. 2640 ರಲ್ಲಿ ಗೆದ್ದು ವಶಪಡಿಸಿಕೊಂಡ ಮೇಲೆ ಈಜಿಪ್ಟ್ ರಾಜ್ಯವು ಚಕ್ರಾಧಿಪತ್ಯವಾಯಿತು. ಅನಂತರ ನೈಲ್ ವ್ಯಾಪಾರ ಅಭಿವೃದ್ಧಿಗೊಂಡು ದಕ್ಷಿಣದ 'ಷಂಟರಸೀಮೆ' ಯವರೆಗೆ (ಇಂದಿನ ಉಗಾಂಡ) ವಿಸ್ತರಿಸಿತು. ಆದರೆ ಕ್ರಿ. ಪೂ. 750ರಲ್ಲಿ ನೂಬಿಯದ ರಾಜರು ಈಜಿಪ್ಟಿನ ಫೇರೋ ದೊರೆಯನ್ನು ಸೋಲಿಸಿ, ಅಲ್ಲಿನ ಸಿಂಹಾಸನವನ್ನೇರಿ, ಈಜಿಪ್ಟಿನ 25ನೇ ರಾಜ–ವಂಶವನ್ನು ಸ್ಥಾಪಿಸಿ, ನೂರಾರು ವರ್ಷಕಾಲ ರಾಜ್ಯವಾಳಿದರು. ಅನೇಕ ಶತಮಾನಗಳ ಕಾಲ ನಡೆದುಬಂದ ವ್ಯಾಪಾರ ಸಂಪರ್ಕದಿಂದ ಪರಸ್ಪರ ಭಾಷೆ, ಸಂಸ್ಕೃತಿಗಳು ವಿನಿಮಯವಾಗತೊಡಗಿದುವು. ಈ ರೀತಿ ಐಗುಪ್ತರ ಧರ್ಮ ಸಂಸ್ಕೃತಿಗಳು ನೈಲ್ ಮಾರ್ಗವಾಗಿ ದಕ್ಷಿಣದ ಕಡೆಗೆ ಹರಿದು ಬಂದಿರುವುದಕ್ಕೆ ಇದೊಂದು ಸಾಕ್ಷ್ಯಾಧಾರ.

ಕ್ರಿ. ಪೂ. 2134 ರಿಂದ ಕ್ರಿ. ಪೂ. 884 ರವರೆಗೆ ಸುಮಾರು 1250 ವರ್ಷಗಳ ಕಾಲ ನಡೆದಿತ್ತು ಐಗುಪ್ತರ ನೈಲ್ ವ್ಯಾಪಾರ.# ವ್ಯಾಪಾರಕ್ಕೆ ಬಂದಾಗ ಈಜಿಪ್ಟ್ ಅಧಿಕಾರಿಗಳು, ನಾವಿಕರು, ವ್ಯಾಪಾರಿಗಳು, ಸೈನಿಕರು, ಸೇವಕರು ಅನೇಕ ತಿಂಗಳಕಾಲ ಪಂಟರ ಸೀಮೆ ಮತ್ತು ಸುತ್ತುಮುತ್ತ ಸಂಚಾರ ಮಾಡುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ. ಇಷ್ಟು ದೀರ್ಘಾವಧಿಯಲ್ಲಿ ನಡೆದ ಸಂಪರ್ಕದಲ್ಲಿ ಪರಸ್ಪರರ ಭಾಷೆಯನ್ನು ಕಲಿತಿರಲು ಸಾಧ್ಯ. ಆ ಮೂಲಕ ಐಗುಪ್ತರ ವಿಚಾರಗಳು ಸ್ಥಳೀಯರಿಗೆ ತಿಳಿದುಬಂದು, ಅವರು ಕ್ರಮೇಣ ಆ ಕಥೆಗಳನ್ನು ತಮ್ಮೊಳಗೆ ಪ್ರಚಾರಕ್ಕೆ ತರಲು ಸಾಧ್ಯವಾಯಿತು. ಅಲ್ಲದೆ 'ಮೆರೊ'–(ಖಾರ್ಟೂಮ್)ದಿಂದ ಪಶ್ಚಿಮಕ್ಕಿದ್ದ ಕಾನೆಮ್,ಬೋರ್ನೋ ರಾಜ್ಯಗಳ ಮಾರ್ಗವಾಗಿ ಸೆನೆಗಾಲ್ ವರೆಗೂ ಹೋಗುತ್ತಿದ್ದ ಕಾರವಾನ್ ವ್ಯಾಪಾರ ಮಾರ್ಗಗಳು ಹೊಸ ನಂಬಿಕೆ, ಕಥೆಗಳನ್ನು ಹರಡಲು ಸಹಾಯಕವಾದವು. ಬದಲಾವಣೆಗಳನ್ನು ಕಂಡರಿಯದ ನೀಗ್ರೋ ಸಂಸ್ಕೃತಿಯ ಮೇಲೆ ಐಗುಪ್ತ ಪ್ರಭಾವ ಆಗಿರದೆ ಇಷ್ಟು ಸಮೀಪದ ಸಾಮ್ಯಗಳಿರಲು ಸಾಧ್ಯವಿಲ್ಲ.

## ಈಜಿಪ್ಟ್ ಮತ್ತು ವೈದಿಕ ಸಂಸ್ಕೃತಿಗಳು

ಈಜಿಪ್ಟ್ ಪುರಾಣದಲ್ಲಿ ಬರುವ ದೇವರುಗಳಾದ ಆತುಮ್, ಓಸಿರಿಸ್, ಶೇಷತ್, ಹಾಥೋರ್, ಸೆತ್, ಹರಖ್ತೆ, ರಾ, ಇವುಗಳು ಅನುಕ್ರಮವಾಗಿ ಹಿಂದೂ ಪುರಾಣಗಳಲ್ಲಿ ಬರುವ ಪರಮಪುರುಷ, ಯಮ, ಸರಸ್ವತಿ, ಕಾಮಧೇನು, ಗಂಗೆ, ದಿಕ್ಪಾಲಕರು, ಸೂರ್ಯ ಇವುಗಳನ್ನು ಹೋಲುತ್ತವೆ. ಹೋರಸ್ ಮುಂತಾದ ದ್ವಿರೂಪೀ ದೇವತೆಗಳು ಭಾರತದ ಗರುಡ, ನರಸಿಂಹ, ಗಣೇಶ ಮುಂತಾದ ದೇವತೆಗಳ ಕಲ್ಪನೆಯೇ ಆಗಿದೆ. ಅವರು ಯಾವ ಪ್ರಾಣಿ ಪಕ್ಷಿಗಳ ರೂಪಧರಿಸಿದ್ದರೋ ಆಯಾ ಪ್ರಾಣಿ ಪಕ್ಷಿಗಳನ್ನು ಜೀವಂತ

# The Road to punt-by F.D.P. wieker-Geographical Journal- RGS-London-July 1998.

ರೂಪದಲ್ಲಿ ಎರಡೂ ಸಮಾಜಗಳು ಗೌರವಿಸುತ್ತಿದ್ದವು. ಗರುಡ, ನವಿಲು, ಆನೆ, ಹಸು, ಸರ್ಪಗಳು ಹಿಂದೂಗಳಿಗೆ ಪೂಜನೀಯವಾಗಿವೆ. ದುಂಬಿ, ನಾಗರ ಹಾವು ರಣಹದ್ದು ಈಜಿಪ್ಟ್ ರಾಜರ ಕಿರೀಟ, ಆಭರಣಗಳನ್ನು ಅಲಂಕರಿಸಿದ್ದುವು. ದ್ವಿರೂಪಿ ದೇವರ ಕಲ್ಪನೆಯು ಈಜಿಪ್ಟ್, ಭಾರತಗಳಷ್ಟೇ ಅಲ್ಲ, ಪುರಾತನ ಜೊರೋಸ್ಟ್ರಿಯನ್, ಗ್ರೀಕ್, ಬ್ಯಾಬಿಲೋನಿಯ, ಅಸ್ಸೀರಿಯ ಸಂಸ್ಕೃತಿಗಳಲ್ಲೂ ಕಂಡು ಬರುತ್ತವೆ. ಎರಡೂ ಕಡೆಗಳಲ್ಲಿ ಮುಖ್ಯದೇವರುಗಳಿಗೆ ಕಲ್ಲಿನಲ್ಲಿ ಭವ್ಯವಾದ ದೇವಾಲಯಗಳನ್ನು ಕಟ್ಟಿಸಿ ನಿತ್ಯಪೂಜೆ, ವಿಶೇಷ ಪೂಜೆಗಳನ್ನು ಸಲ್ಲಿಸುತ್ತಿದ್ದರು. ಪ್ರಾಣಿ ಬಲಿ ಕೊಡುತ್ತಿದ್ದರು. ರಾಜ ಮಹಾರಾಜರುಗಳು ದೇವಾಲಯ ಮತ್ತು ಮೂರ್ತಿಪೂಜೆಯ ಸಂಸ್ಕೃತಿಯನ್ನು ಪರಮಾವಧಿಗೇರಿಸಿದರು. ಸತ್ತ ಚಕ್ರವರ್ತಿಗಳನ್ನು ದೇವರ ಮಟ್ಟಕ್ಕೇರಿಸಿ, ಅವರಿಗೆ ದೇವಾಲಯ ಕಟ್ಟಿಸಿ, ಪೂಜೆ ಸಲ್ಲಿಸುವ ಪದ್ಧತಿಯು ಎರಡು ಕಡೆಯಲ್ಲೂ ಬೆಳೆಯಿತು.

ಪುರಾತನ ಐಗುಪ್ತ ಸಂಸ್ಕೃತಿಯಲ್ಲೂ ಅದೇ ಕಾಲದ ಭಾರತೀಯರಲ್ಲಿದ್ದಂತೆಯೇ ಆತ್ಮ, ಪರಲೋಕ ಮತ್ತು ನ್ಯಾಯ ವಿಚಾರಣೆಯ ಬಗ್ಗೆ ಪುರಾಣ ಕಥೆಗಳಿವೆ. ರೂಪ ವಿಧಾನಗಳಲ್ಲಿ ಕೊಂಚ ವ್ಯತ್ಯಾಸವಿದ್ದಾಗ್ಯೂ ಅವುಗಳ ಕಲ್ಪನೆಯಲ್ಲಿ ಅದ್ಭುತವಾದ ಸಾಮ್ಯತೆಯನ್ನು ಕಾಣುತ್ತೇವೆ. ಐಗುಪ್ತ ಪುರಾಣದಪ್ರಕಾರ ಸತ್ತವರ ಆತ್ಮವು ಒಂದು ಪಕ್ಷಿರೂಪ ತಾಳಿ ಹಾರಿ ಹೋಗುತ್ತದೆ. ಇದರ ಮುಖವು ಸತ್ತವನ ಮುಖದಂತೆಯೇ ಇದ್ದು ಶರೀರ ಮಾತ್ರ ಪಕ್ಷಿಯದು, ಅದರ ಹೆಸರು 'ಬಾ'.ಇದೇ ನಾವು ಹೇಳುವ 'ಪ್ರಾಣಪಕ್ಷಿ ಹಾರಿಹೋಯಿತು' ಎಂಬ ಪದಪ್ರಯೋಗಕ್ಕೆ ಆಧಾರವಾಗಿರಬಹುದು. ಹೀಗೆ ಹಾರಿಹೋದ ಆತ್ಮವು ಮೃತ್ಯು ದೇವತೆಯಾದ ಓಸಿರಿಸ್‌ನ ಬಳಿ ಹೋಗುತ್ತದೆ. ಪ್ರಾಯಶಃ ಯಮದೂತರ ಪರಿಕಲ್ಪನೆ ಇಲ್ಲದಿರುವ ಕಾರಣ ಪರಲೋಕಕ್ಕೆ ಸಾಗಲು ಪಕ್ಷಿರೂಪ ಕಲ್ಪಿತವಾಗಿರಬಹುದು. ಓಸಿರಿಸ್‌ನ ಎದುರು ಆತ್ಮವು ಹಾಜರಾದಾಗ, ವ್ಯಕ್ತಿಯು ಬದುಕಿದ್ದ ಕಾಲದಲ್ಲಿ ಮಾಡಿದ ಪಾಪ ಪುಣ್ಯ ಕೃತ್ಯಗಳ ವಿಚಾರಣೆ ನಡೆಯುತ್ತದೆ, ಆತ್ಮದ ಹೇಳಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಸತ್ತವನ ಹೃದಯವನ್ನು ತೂಕಮಾಡಲಾಗುತ್ತದೆ. ತಕ್ಕಡಿಯಲ್ಲಿಡಲಾದ ಹೃದಯವು ಗರಿಯಷ್ಟು ಹಗುರವಾಗಿದ್ದರೆ ವ್ಯಕ್ತಿಯು ಪರಿಶುದ್ಧ ಅಥವಾ ದೋಷರಹಿತನೆಂದು ಪರಿಗಣಿಸಲಾಗುತ್ತದೆ! ದೋಷ ಪೂರಿತ ಆತ್ಮವನ್ನು ಅಮ್ಮಿತ್ ಎಂಬ ದೇವತೆ ಬಾಯಿ ತೆರೆದು ನುಂಗಿ ಬಿಡುತ್ತದೆ.

ಓಸಿರಿಸ್ ದೇವತೆಯ ಸಮ್ಮುಖದಲ್ಲಿ ನಡೆಯುವ ತೂಕದ ಫಲಿತಾಂಶವನ್ನು ತೊತ್ ಎಂಬ ಜ್ಞಾನದೇವತೆ ಬರೆದಿಡುತ್ತಾನೆ. ನ್ಯಾಯ ತೀರ್ಪಿಗೆ ಅನುಕೂಲವಾಗಲೆಂದು ಪೇಪಿರಸ್ ಸುರಳಿಯಲ್ಲಿ ಬರೆದ **'ಬುಕ್ ಆಫ್ ದಿ ಡೆಡ್'** ಎಂಬ ಮೃತರ ಪುಸ್ತಕವನ್ನು ಮಮ್ಮಿಯ ಬಲಪಕ್ಕದಲ್ಲಿ ಇಡಲಾಗುತ್ತಿತ್ತು. ಪರಲೋಕ ಯಾತ್ರೆಯ ಕೈಪಿಡಿಯಂತೆ ಮಾರ್ಗದರ್ಶನ ಮಾಡುವ ವಿಷಯಗಳು ಇದರಲ್ಲಿರುತ್ತವೆ. ನಿರ್ದೋಷಿಯೆಂದು ತೀರ್ಮಾನವಾದ ಬಳಿಕ ಆತ್ಮವು ಭೂಲೋಕಕ್ಕೆ ಮರಳಿಬರಲು ಅನುಮತಿ ದೊರೆಯುತ್ತದೆ. ಆಗ ಆತ್ಮವು ಭೂಮಿಗೆ ಬಂದು ಅದೇ ಶರೀರದೊಳಗೆ ಪ್ರವೇಶಿಸಿ ಸುಖವಾಗಿ ಮುಂದಿನ ಜೀವನ ನಡೆಸಲು ಅವಕಾಶ ದೊರೆಯುತ್ತದೆ. ಆದ್ದರಿಂದಲೇ ಫೇರೋ

ದೊರೆಗಳ ಮೃತಶರೀರವನ್ನು ಕೊಳೆಯದ ಹಾಗೆ ರಕ್ಷಿಸಿ ಇಡುವ ಪದ್ಧತಿ ರೂಢಿಗೆ ಬಂದಿತು. ಇದಕ್ಕೆ 'ಮಮ್ಮಿ' ಎಂದು ಹೆಸರು. ವೈದಿಕ ಹಿಂದೂ ಸಂಪ್ರದಾಯದಲ್ಲಿ ಇದು ನಡೆದು ಬರಲಿಲ್ಲ. ಇದಕ್ಕೆ ಧರ್ಮ-ಸಮ್ಮತಿ ಇರಲಿಲ್ಲ. ಸಾತ್ವಿಕ ಪರಿಶುದ್ಧತೆ ಹಾಗೂ ಆರೋಗ್ಯ ನಿಯಮಗಳು ಕಾರಣವಾಗಿರಬಹುದು.

**ಪಿತೃ ಪೂಜೆ**

ಸಾವಿನಾಚೆಯ ಜೀವನಕ್ಕೆ ಎರಡೂ ಸಂಸ್ಕೃತಿಗಳಲ್ಲಿ ಮಹತ್ವ ಕೊಡಲಾಗುತ್ತಿತ್ತು. ಈಜಿಪ್ಟ್‌ನ ಪ್ರಾಚೀನ ಸಂಸ್ಕೃತಿಯಲ್ಲಿ ದೇವರುಗಳಿಗಾಗಿ ಕಟ್ಟಿದ ದೇವಾಲಯಗಳಲ್ಲದೆ ಮೃತರ ಮಮ್ಮಿಕಾರ್ಯಕ್ಕಾಗಿ ಕಟ್ಟಿದ ಕಟ್ಟಡಗಳಲ್ಲೂ ಪೂಜಾ ವಿಧಿಗಳು ಕಟ್ಟುನಿಟ್ಟಾಗಿ ನಡೆಯುತ್ತಿದ್ದುವು. ಅದಕ್ಕಾಗಿ ಭಾರತ, ಪೂರ್ವ ಆಫ್ರಿಕ, ಮತ್ತು ಪಂಟರ ಸೀಮೆಗಳಿಂದ ಧೂಪ, ಗಂಧದ ಚಕ್ಕೆ, ಸಾಂಮ್ರಾಣಿ, ಎಣ್ಣೆ ಇತ್ಯಾದಿಗಳನ್ನು ಟನ್‌ಗಟ್ಟಲೆ ತರಿಸಿ ದಾಸ್ತಾನು ಮಾಡಿಕೊಳ್ಳುತ್ತಿದ್ದರು. ಶವಪೆಟ್ಟಿಗೆಯ ಮೇಲೆ ಅಂಟಿಸಿದ ಬಂಗಾರದ ತಗಡಿನ ಮೇಲೆ ಹಾಗೂ ಗೋಡೆಗಳ ಮೇಲೆ ಚಿತ್ರಲಿಪಿಯಲ್ಲಿ ಪ್ರಾರ್ಥನೆಗಳನ್ನು ಬರೆಯುತ್ತಿದ್ದರು. ಈಗಲೂ ನೋಡಬಹುದು. ಮೃತನ ಶರೀರದ ಜೊತೆಗೆ ಅವನು ಉಪಯೋಗಿಸುತ್ತಿದ್ದ ನಿತ್ಯಬಳಕೆಯ ವಸ್ತುಗಳು, ಆಯುಧಗಳು, ಒಡವೆ ವಸ್ತ್ರಗಳು, ಸುಗಂಧ ದ್ರವ್ಯಗಳನ್ನು ಇಡಲಾಗುತ್ತಿತ್ತು. ಆತ್ಮವು ಹಿಂತಿರುಗಿ ಬಂದಮೇಲೆ ಗುರುತು ಹಚ್ಚಲು ಇಂತಹ ವಸ್ತುಗಳ ಅಗತ್ಯವಿತ್ತು. ಅವನ ಪ್ರೀತಿಯ ನಾಯಿ, ಬೆಕ್ಕುಗಳನ್ನು ಮಮ್ಮಿ ಮಾಡಿ ಇಡುತ್ತಿದ್ದರಂತೆ. ಇಷ್ಟೆಲ್ಲಾ ಏಕೆಂದರೆ ಸತ್ತ ವ್ಯಕ್ತಿಯ ಆತ್ಮವು ಪುನಃ ಬಂದೇ ಬರುತ್ತದೆಂಬ ನಂಬಿಕೆ ಪ್ರಬಲವಾಗಿತ್ತು. ಪುನರ್ಜನ್ಮಕ್ಕೆ ಬದಲಾಗಿ ಪುನರ್ಜೀವನದಲ್ಲಿ ನಂಬಿಕೆ ಇರಿಸಿದ್ದರು.

ಹಿಂದೂ ವೈದಿಕ ಸಮಾಜಗಳಲ್ಲಿ ಮೃತರ ಶರೀರಕ್ಕೆ ಮಾಡುವ ಶವಸಂಸ್ಕಾರಗಳು ನಮಗೆ ತಿಳಿದೇ ಇವೆ. ಇವು ಋಗ್ವೇದ ಕಾಲದಿಂದಲೂ ನಡೆದುಬಂದಿವೆ. ಕರ್ಮಸಿದ್ಧಾಂತವನ್ನು ಒಪ್ಪುವ ಹಿಂದೂಗಳು ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದಾರೆ. ಪುಣ್ಯ ತಿಥಿಗಳಲ್ಲಿ ಪಿತೃ ಪಿತಾಮಹರಿಗೆ ವಿಧಿವತ್ತಾಗಿ ಮಂತ್ರ ಸಹಿತ ತಿಲತರ್ಪಣ ನೀಡುವ ಸಂಪ್ರದಾಯವಲ್ಲದೆ ಅಮಾವಾಸ್ಯೆ, ಸಂಕ್ರಮಣ, ಗ್ರಹಣಕಾಲ, ಹಾಗೂ ತೀರ್ಥಕ್ಷೇತ್ರಗಳಲ್ಲಿ ತಮ್ಮ ಪೂರ್ವಜರಿಗೆ ತಿಲತರ್ಪಣ ನೀಡುವುದು ನಡೆದುಬಂದ ಸಂಪ್ರದಾಯ. ಪಿತೃಲೋಕದಲ್ಲಿರುವ ಪೂರ್ವಜರನ್ನು ಆಹ್ವಾನಿಸಿ ಸತ್ಕರಿಸುವುದೇ ಇದರ ಉದ್ದೇಶ. ಈ ಸಂಸ್ಕಾರವು ಬಹಳ ಸೌಮ್ಯ ಹಾಗೂ ಶ್ರೇಷ್ಠ ಮಟ್ಟದ್ದಾಗಿದೆ. ನಮ್ಮ ಎಲ್ಲಾ ಪರಿಶಿಷ್ಟ ಸಮಾಜಗಳಲ್ಲಿ ಕೂಡ ಪಿತೃಗಳ ನೆನಪಿನಲ್ಲಿ ಪೂಜಾವಿಧಿಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೆ. ಕಾಡು ಪ್ರದೇಶದಲ್ಲಿ ವಾಸಿಸುವ ಸಂತಾಲರು, ಭಿಲ್ಲರು, ಸೋಲಿಗ ಇತ್ಯಾದಿ ಪಂಗಡಗಳವರು ಪೂರ್ವಜರ ಪ್ರೇತ ಪೂಜೆಯನ್ನು ಖಡ್ಡಾಯವಾಗಿ ನೆರವೇರಿಸುತ್ತಾರೆ. ನೀಗ್ರೋ ಸಂಸ್ಕೃತಿಯಲ್ಲಿ ಇದಕ್ಕೆ ಬಹಳ ಪ್ರಾಮುಖ್ಯತೆ ಉಂಟು.

ಈಜಿಪ್ಟ್, ಬ್ಯಾಬಿಲೋನಿಯ, ಅಸ್ಸೀರಿಯ ಸಂಸ್ಕೃತಿಗಳಲ್ಲಿದ್ದ ಈ ಸಂಪ್ರದಾಯವನ್ನು ನಿಷೇಧಿಸಲಾಗಿದೆ. ಕ್ರಿ.ಶ.7-8ನೇ ಶತಮಾನದಲ್ಲಿ ಪ್ರಚಂಡವಾಗಿ ನಡೆಯುತ್ತಿದ್ದ ಇಸ್ಲಾಂ

ಧರ್ಮ ಪ್ರಚಾರ ಕಾಲದಲ್ಲಿ ಈಜಿಪ್ಟಿನ ದೇವಾಲಯಗಳು, ವಿಗ್ರಹಗಳು ಧ್ವಂಸಗೊಂಡವು. ವಿಗ್ರಹಾರಾಧನೆಯು ಈಜಿಪ್ಟಿನಿಂದ ಸಂಪೂರ್ಣವಾಗಿ ಕಣ್ಮರೆಯಾಯಿತು. ಇತ್ತೀಚೆಗೆ ಈಜಿಪ್ಟಿನಲ್ಲಿ ದೇವಾಲಯಗಳ ಭಗ್ನ ಅವಶೇಷಗಳನ್ನು ಪ್ರವಾಸಿಗಳಿಗೆ ತೋರಿಸುವುದೇ ಮುಖ್ಯ ಉದ್ಯಮವಾಗಿದೆ. ಈಜಿಪ್ಟಾಲಜಿ ಎಂಬ ಹೊಸ ಅಧ್ಯಯನ ಶಾಸ್ತ್ರವನ್ನು ವಿ.ವಿ.ಗಳು ಬೋಧಿಸುತ್ತಿವೆ. ಯುನೆಸ್ಕೋ ಹಾಗೂ ಇತರ ಸಂಸ್ಥೆಗಳು ಇಂತಹ ಅವಶೇಷಗಳ ರಕ್ಷಣಾ ಕಾರ್ಯಕ್ಕೆ ಅಪಾರ ಧನ ಸಹಾಯ ನೀಡುತ್ತಿವೆ. ಒಟ್ಟಿನಲ್ಲಿ ಐಗುಪ್ತರ ಪ್ರಾಚೀನ ಸಂಸ್ಕೃತಿಯ ಆಚಾರ ವಿಚಾರಗಳೆಲ್ಲಾ (ಕೆಲವನ್ನು ಹೊರತು ಪಡಿಸಿ) ಪ್ರಥಮ ನೋಟದಲ್ಲಿ ಅದೊಂದು ಭಾರತದ ವೈದಿಕ ಧರ್ಮದ ವಿಸ್ತರಣೆಯೋ ಎಂಬಂತೆ ಕಾಣುತ್ತವೆ.

## ಪುರಾತನ ವಾಣಿಜ್ಯ ಸಂಪರ್ಕ

ಇತ್ತೀಚೆಗೆ ನಡೆಯುತ್ತಿರುವ ಪ್ರಾಚ್ಯ ಸಂಶೋಧನೆಗಳ ಫಲವಾಗಿ ಸರಸ್ವತೀ ನದಿಯ ಬಯಲಿನ ಅನೇಕ ಹೊಸ ವಿಷಯಗಳು ಬೆಳಕಿಗೆ ಬರುತ್ತಾ ಇವೆ. ಬತ್ತಿ ಹೋದ ಸರಸ್ವತಿ (ಘಗರ್-ಹಕ್ರ) ಬಯಲಿನ ನಾಗರಿಕತೆಯ ಪ್ರಾಚೀನತೆಯು ಕ್ರಿ.ಪೂರ್ವ 3100 ವರ್ಷಗಳಿಗಿಂತಲೂ ಹಿಂದಕ್ಕೆ ಸರಿಯುತ್ತದೆಂದು ನಿರ್ಧರಿಸಲಾಗಿದೆ. ಎರಡು ಸಾವಿರಕ್ಕೂ ಹೆಚ್ಚಿನ ಬಳಪದಕಲ್ಲಿನ ಮುದ್ರೆಗಳು ದೊರೆತಿವೆ. ಈ ಮುದ್ರೆಗಳಲ್ಲಿ ಸುಮಾರು 400 ಚಿತ್ರ ಸಂಕೇತಗಳಿದ್ದು ಪ್ರತಿಯೊಂದು ಒಂದೊಂದು ಶಬ್ದವನ್ನೋ, ಭಾವವನ್ನೋ ಅಥವಾ ವಸ್ತುವನ್ನೋ ಸೂಚಿಸುತ್ತವೆ. ಈ ಲಿಪಿಯು ಈಜಿಪ್ಟಿನ ಚಿತ್ರಲಿಪಿಯ ಕಾಲಕ್ಕಿಂತಲೂ ಹಿಂದಿನದ್ದಾಗಿರಬಹುದು ಅಥವಾ ಅದೇ ಕಾಲಕ್ಕೆ ಸೇರಿದ್ದಾಗಿರಬಹುದು ಎಂದು ತರ್ಕಿಸಲಾಗಿದೆ. ಅಂತೆಯೇ ಗುಜರಾತಿನ ಧೋಲಾವಿರ ಮತ್ತು ಲೋಥಲ್ ಬಂದರುಗಳಲ್ಲಿ ನಡೆದ ಪ್ರಾಚ್ಯ ಶೋಧನೆಗಳಲ್ಲಿ ದೊರಕಿರುವ ಧಾನ್ಯದ ಕಣಜಗಳು, ಅಸಂಖ್ಯಾತ ಮುದ್ರಿಕೆಗಳು, ಅಳತೆ ಮತ್ತು ತೂಕದ ಕಲ್ಲುಗಳು ಅಂದಿನ ಜನಜೀವನದಲ್ಲಿ ವಾಣಿಜ್ಯವು ಅತಿ ಮುಖ್ಯ ಪಾತ್ರ ವಹಿಸಿತ್ತೆಂಬುದನ್ನು ಸೂಚಿಸುತ್ತವೆ. ಲೋಥಲ್ ನಗರವು ಕ್ಯಾಂಬೆ ಕೊಲ್ಲಿಯಲ್ಲಿ ಅರಬ್ಬೀ ಸಮುದ್ರಕ್ಕೆ ಅಂಟಿಕೊಂಡಿದ್ದ ಪ್ರಮುಖವಾದ ಬಂದರಾಗಿತ್ತು. ಅಲ್ಲಿರುವ ಹಡಗು ಕಟ್ಟೆಯು ಸುಟ್ಟ ಇಟ್ಟಿಗೆಗಳಿಂದ ರಚಿಸಲ್ಪಟ್ಟಿತ್ತು. ಹಡಗುಕಟ್ಟಲು ಬೇಕಾದ ಉಪಕರಣಗಳೂ ದೊರೆತಿವೆ. ಇದರಿಂದ ಭಾರತದಲ್ಲಿ ಸಮುದ್ರಯಾನವು ರೂಢಿಯಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಪುರಾತನ ಸುಮೇರಿಯ, ಬ್ಯಾಬಿಲೋನಿಯ, ಅಸ್ಸೀರಿಯ ದೇಶಗಳೊಡನೆ ಭಾರತದ ವ್ಯಾಪಾರ ಸಂಪರ್ಕವಿದ್ದುದಕ್ಕೆ ಸಾಕ್ಷೀಭೂತವಾಗಿ ಆ ರಾಷ್ಟ್ರಗಳಲ್ಲಿ ಹಲವಾರು ಹರಪ್ಪ ಮುದ್ರೆಗಳು, ಒಡವೆ, ಗೊಂಬೆಗಳು ದೊರೆತಿವೆ. ಪ್ರಾಯಶಃ ಈ ಮುದ್ರೆಗಳು ಇವರ ನಾಣ್ಯಗಳಾಗಿದ್ದಿರಬಹುದು. ಮೊದಲೇ ಇದ್ದ ಸಮುದ್ರ ವ್ಯಾಪಾರ ಸಂಪರ್ಕಗಳಿಂದ ಹೊಸ ವೈದಿಕ ಸಂಸ್ಕೃತಿಯು ಪಶ್ಚಿಮ ರಾಷ್ಟ್ರಗಳಲ್ಲಿ ತನ್ನ ಪ್ರಭಾವ ಬೀರಲು ಸಾಧ್ಯವಾಯಿತೆಂದು ಸಮರ್ಥಿಸಬಹುದು.

ಪ್ರಾಚೀನ ಸಮುದ್ರ ಮಾರ್ಗಗಳಲ್ಲಿ ಕೆಂಪು ಸಮುದ್ರ, ಪರ್ಶಿಯಾ ಕೊಲ್ಲಿ ಅರಬ್ಬೀ ಸಮುದ್ರಗಳ ಮೇಲೆ ಕ್ರಿ.ಪೂರ್ವ 2500 ರಷ್ಟು ಹಿಂದೆಯೇ ಸುಪರಿಚಿತ ಮಾರ್ಗಗಳಿದ್ದುವು.

ಕ್ರಿಪೂ. ಏಳನೇ ಶತಮಾನದಲ್ಲಿ ಆಕ್ಸುಮ್ ಮತ್ತು ಅರಬ್ಬೀ ವ್ಯಾಪಾರೀ ಹಡಗುಗಳು ಈಜಿಪ್ಟ್, ಜೊರ್ಡಾನ್, ಪರ್ಶಿಯ, ಇಂಡಿಯ, ಶ್ರೀಲಂಕಾ, ಚೈನಾ ದೇಶಗಳವರೆಗೂ ಹೋಗಿ ಬರುತ್ತಿದ್ದುವು ಎಂಬ ಅಂಶವನ್ನು 'ಪೆರಿಪ್ಲಸ್ ಆಫ್ ದಿ ಎರಿಟ್ರಿಯನ್ ಸೀ" ಎಂಬ ಗ್ರಂಥವು ದಾಖಲಿಸಿದೆ. ಅವು ಹೋಗುತ್ತಿದ್ದ ಊರುಗಳು, ವಿನಿಮಯಗೊಳ್ಳುತ್ತಿದ್ದ ವಸ್ತುಗಳು, ವ್ಯಾಪಾರದ ಪ್ರಮಾಣ, ಆ ಊರಿನ ರಾಜ, ಅವನ ಆಡಳಿತ ಕ್ರಮ, ಜನಜೀವನ, ವಿಚಿತ್ರ ಪ್ರಾಣಿಪಕ್ಷಿಗಳು ಇತ್ಯಾದಿ ವಿವರಗಳನ್ನೊಳಗೊಂಡ ಈ ಗ್ರಂಥವು ಗ್ರೀಕ್ ಕಪ್ತಾನನೊಬ್ಬ ಕ್ರಿಪೂ. ಮೂರನೇ ಶತಮಾನದಲ್ಲಿ ಗ್ರೀಕ್ ಭಾಷೆಯಲ್ಲಿ ಬರೆದದ್ದಾಗಿದೆ.

ಭಾರತದಿಂದ ಪಶ್ಚಿಮಕ್ಕೆ ಯೂರೋಪಿನ ವರೆಗೂ ಹೋಗುತ್ತಿದ್ದ ಪುರಾತನ ಭೂಮಾರ್ಗವೊಂದಿತ್ತು. ಬೆಟ್ಟ ಕಣಿವೆಗಳನ್ನು ದಾಟಿ ನದಿ ಸರೋವರಗಳ ಪಕ್ಕದಲ್ಲೇ ಹಾದುಹೋಗುತ್ತಿದ್ದ ಕಾಲು ದಾರಿಗಳು ಸವೆದು ಹೆದ್ದಾರಿಗಳಾದುವು. ಕಾಲಕ್ರಮದಲ್ಲಿ ಇದೇ ಹೆದ್ದಾರಿಯನ್ನು ಅಲೆಗ್ಸಾಂಡರ್, ಮಹಮದ್ ಘಜ್ನಿ, ಘೋರಿ, ನಾದಿರ್ ಷಾ, ಮುಂತಾದ ದಂಡಯಾತ್ರಿಗಳು, ಇಬನ್ ಬತೂತ, ಅಬ್ದುಲ್ ರಜಾಕ್ ಮುಂತಾದ ಇತಿಹಾಸಕಾರರು ಉಪಯೋಗಿಸಿದ್ದರು.

ನಿಕಟವಾದ ವಾಣಿಜ್ಯ ಸಂಪರ್ಕಗಳು ಸಂಸ್ಕೃತಿ ವಿಕಾಸಕ್ಕೆ, ಅಭಿಪ್ರಾಯ ವಿನಿಮಯಕ್ಕೆ ಅವಕಾಶ ಮಾಡಿಕೊಡಬಲ್ಲವು. ಆದ್ದರಿಂದಲೇ ಅವುಗಳನ್ನು 'ಸಂಸ್ಕೃತಿ ವಾಹಕ' ಗಳೆಂದು ಸಂಬೋಧಿಸಬಹುದು. ದೀರ್ಘಕಾಲಿಕ ಸಂಪರ್ಕಗಳು ವಿಚಾರ ವಿನಿಮಯಗಳಿಗೆ, ಬುದ್ಧಿ ವಿಕಾಸಕ್ಕೆ, ವಿದ್ಯಾಪ್ರಗತಿಗೆ, ಹಾಗೂ ಧರ್ಮ ಸಂಸ್ಕೃತಿಗಳ ಪ್ರಸಾರಕ್ಕೆ ವಿಫಲವಾದ ಅವಕಾಶಗಳನ್ನು ನೀಡುತ್ತವೆಂಬದರಲ್ಲಿ ಸಂದೇಹವಿಲ್ಲ.

### ಹಿಂದೂ ಮತ್ತು ಕಪ್ಪು ಸಂಸ್ಕೃತಿಗಳು


ಆಫ್ರಿಕದ ಕೆಲವು ಪಂಗಡದಲ್ಲಿರುವ ಸಂಸ್ಕಾರಗಳು ಹಿಂದೂ ಸಂಸ್ಕೃತಿಯಲ್ಲಿರುವ ಸಂಸ್ಕಾರಗಳನ್ನು ಹೋಲುತ್ತವೆ. ಸಂಪ್ರದಾಯ ಬದ್ಧ ಹಿಂದೂ ಸಮಾಜದಲ್ಲಿ ಒಬ್ಬ ವ್ಯಕ್ತಿಯು ತನ್ನ ಜೀವಿತ ಕಾಲದಲ್ಲಿ ಹದಿನಾರು ಸಂಸ್ಕಾರಗಳಿಗೆ ಗುರಿಯಾಗುತ್ತಾನೆ. ಒಂದೊಂದು ಘಟ್ಟದಲ್ಲೂ ಬರುವ ಈ ಸಂಸ್ಕಾರಗಳು ಆ ವ್ಯಕ್ತಿಯು ಯಾವ ದಿಕ್ಕಿನಲ್ಲಿ ಹೋಗಬೇಕಾಗಿದೆ ಎಂಬುದನ್ನು ನಿರ್ಧರಿಸುತ್ತವೆ. ಇಂತಹ ಸಂಪ್ರದಾಯಗಳು ಜ಼ೂಲು ಮತ್ತು ಮಸಾಯಿ ಪಂಗಡಗಳಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಮಸಾಯಿ ಪಂಗಡದವರು ಕೊಂಚ ಅಲೆಮಾರೀ ಜನರಾದರೂ ಅವರ ಬಿಡಾರ (ಕ್ಯಾಂಪು)ಗಳಲ್ಲಿ ಆಗಾಗ್ಗೆ ನಡೆಯುವ ಸಂಸ್ಕಾರ ವಿಧಿಗಳು ಅವರಲ್ಲಿರುವ ಆಶ್ರಮ ವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತವೆ. ಅವರಲ್ಲಿ ಗಂಡು ಮಕ್ಕಳಿಗೆ-ಬಾಲ್ಯಾವಸ್ಥೆಯಲ್ಲಿ ಪರಿಕರ್ತನ (ಸರ್ಕಮ್‌ಸಿಷನ್) ಆದ ಮೇಲೆ ಪ್ರೌಢಾವಸ್ಥೆಯಲ್ಲಿ ಪಂಗಡದ ಮುದ್ರೆ ಪಡೆದು ಕಿರಿಯ ಯೋಧ (ಮೊರಾನ್) ಆಗುತ್ತಾನೆ; ಮಧ್ಯ ವಯಸ್ಸಿನಲ್ಲಿ ಮದುವೆಮಾಡಿಕೊಂಡು ಹಿರಿಯ ಯೋಧನಾಗುತ್ತಾನೆ; ಅನಂತರ ಕೇಶಮುಂಡನ ಮಾಡಿಸಿಕೊಂಡು ಯಜಮಾನ ಪಟ್ಟ ಪಡೆಯುತ್ತಾನೆ ಮತ್ತು ಕೊನೆಯದಾಗಿ "ವಯೋವೃದ್ಧ"ನಾಗಿ ಕ್ಯಾಂಪಿನ ಕಾವಲಿರುತ್ತಾನೆ. ಹೀಗೆ ಐದು ಆಶ್ರಮ ಸಂಸ್ಕಾರಗಳುಂಟು. ಒಂದೊಂದಕ್ಕೂ ನಡೆಯುವ ಸಂಸ್ಕಾರಗಳು ಸಮೂಹಿಕವಾಗಿ ನಡೆಯುತ್ತವೆ. ಅಂತೆಯೇ

ಜ಼ೂಲು, ಗಿಕುಯು, ಆಶಂತಿ ಇತ್ಯಾದಿ ಪಂಗಡಗಳಲ್ಲೂ ಕಟ್ಟು ನಿಟ್ಟಾದ ಸಂಸ್ಕಾರ ನಿಯಮಗಳಿವೆ. ಹುಟ್ಟಿದ ಊರಿನಲ್ಲಿರು ವವರೆಗೂ ಅವುಗಳನ್ನು ಪಾಲಿಸುತ್ತಾರೆ.

ಎಡ್ವರ್ಡ್ ಮಲಿಂಗ ಎಂಬ ದಕ್ಷಿಣ ಆಫ್ರಿಕದ ವಿದ್ವಾಂಸರೊಬ್ಬರು "ಭಾರತೀಯ ಮತ್ತು ಜ಼ೂಲು ಸಂಪ್ರದಾಯಗಳಲ್ಲಿ ಪರಸ್ಪರ ಹೋಲಿಕೆಗಳುಳ್ಳ ಅನೇಕ ಸಂಸ್ಕಾರಗಳಿವೆ. ಇವು ಮಾನವನ ಜೀವನದಲ್ಲಿ ಹುಟ್ಟಿದಾರಭ್ಯ ಸಾಯುವವರೆಗೂ ಹರಡಿರುತ್ತವೆ. ಬಾಳಿನುದ್ದಕ್ಕೂ ದಾರಿಫಲಕಗಳಂತೆ ಕೆಲಸ ಮಾಡಿ, ಬೆಳೆಯುತ್ತಿರುವ ವ್ಯಕ್ತಿಯು ಸುಸಂಸ್ಕೃತಿ, ಸಚ್ಚಾರಿತ್ರ್ಯಗಳನ್ನು ಪಡೆಯಲು ಸಹಾಯಕವಾಗುತ್ತವೆ. ಅಲ್ಲದೆ ಸಮಾಜದ ಆರೋಗ್ಯ, ಧರ್ಮ, ಸಂಸ್ಕೃತಿಗಳನ್ನು ಕಾಪಾಡಲು ಬಹಳ ಸಹಕಾರಿಯಾಗಿವೆ. ಹಿಂದೂ ಮತ್ತು ಜ಼ೂಲು ಸಂಪ್ರದಾಯಗಳೆರಡರಲ್ಲೂ ಧರ್ಮ ಮತ್ತು ಸಂಸ್ಕೃತಿಗಳು ಅವಿಭಾಜ್ಯ ಅಂಗವಾಗಿವೆ" ಎಂದು ಹೇಳುತ್ತಾರೆ. "ವೇದಗಳು ಮಾನವನನ್ನು ಸಮಗ್ರವಾಗಿ ಪರಿಶೀಲಿಸಿ ಅವನ ಆರೋಗ್ಯಕ್ಕಾಗಿ ಆಯುರ್ವೇದ ವೈದ್ಯಪದ್ಧತಿಯನ್ನು ಮೊದಲಬಾರಿಗೆ ಸೂತ್ರೀಕರಿಸಿವೆ. ಅಂತೆಯೇ, ಆಫ್ರಿಕದ ಎಲ್ಲ ಸಮಾಜಗಳಲ್ಲೂ ಕಂಡುಬರುವ ಸಾಂಪ್ರದಾಯಿಕ ವೈದ್ಯಪದ್ಧತಿಯು ಆಯುರ್ವೇದವನ್ನೇ ಹೋಲುತ್ತವೆ, ಮತ್ತು ಅಷ್ಟೇ ಪುರಾತನವಾಗಿವೆ. ಮಾನವ ಶರೀರವು ಪಂಚಭೂತಗಳಿಂದ ಮಾಡಲ್ಪಟ್ಟಿದೆ ಎಂಬುದನ್ನು ನಮ್ಮ ಸಂಸ್ಕೃತಿಯು ಒಪ್ಪುವುದಲ್ಲದೆ, ಪಂಚಭೂತಗಳು ನಮ್ಮ ಮತಾಚಾರಗಳಲ್ಲಿ ಮುಖ್ಯ ಪಾತ್ರ ವಹಿಸುತ್ತವೆ" ಎನ್ನುತ್ತಾರೆ ಮಲಿಂಗರವರು.

ಹಿಂದೂಗಳು ಗೋವುಗಳನ್ನು ಗೌರವಿಸುತ್ತಾರೆ. ಅಂತೆಯೇ ಗೋವಿಗೂ ಮಾನವಿನಿಗೂ ಇರುವ ರಹಸ್ಯಮಯವಾದ ಸಂಬಂಧವನ್ನು ಜ಼ೂಲು ಜನಾಂಗ ದಲ್ಲಿಯೂ ಕಾಣಬಹುದು. ಮಸಾಯಿ, ಫುಲಾನಿ, ಗಾಲ್ಲಾ, ಮುಂತಾದ ಪಶುಪಾಲಕನ ಜನಾಂಗದವರೂ ಗೋವುಗಳನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ. ಪಶುಪಾಲಕನ ಸಂಪತ್ತನ್ನು ಗೋವುಗಳ ಸಂಖ್ಯೆಯಿಂದ ಅಳೆಯುತ್ತಾರೆ. ಆದರೆ ಮಸಾಯಿಗಳು ಮಾತ್ರ ತಾವಾಗಿ ಗೋವುಗಳನ್ನು ಕೊಲ್ಲುವುದಿಲ್ಲ. ಮಾರುವುದೂ ಇಲ್ಲ. ಭೂಮಿಯನ್ನು ಬಗೆದು ವ್ಯವಸಾಯ ಮಾಡುವುದಿಲ್ಲ. ಏಕೆಂದರೆ ಭೂಮಿಯು ತಾಯಿಗೆ ಸಮಾನ. ಉಳಿದವರು ಹಣಕ್ಕಾಗಿ ಗೋವುಗಳನ್ನು ಮಾರುತ್ತಾರೆ.

"ಆಫ್ರಿಕದ ಅನೇಕ ಮುಖಂಡರುಗಳು ಉನ್ನತ ಮಾನವ ಮೌಲ್ಯಗಳಾದ ಒಗ್ಗಟ್ಟು, ಭ್ರಾತೃತ್ವ, ಸಹಿಷ್ಣುತೆಗಳನ್ನು ಪ್ರತಿಪಾದಿಸುತ್ತಾರೆ. ನಾವೆಲ್ಲಾ ಒಂದೇ ಭೂಮಿಯ ಮಕ್ಕಳು ಎಂದರು ಜ಼ೂಲಿಯಸ್ ನೈರೇರೆ. "ವಸುಧೈವ ಕುಟುಂಬಕಂ" ಎಂಬ ಆರ್ಯೋಕ್ತಿಯೂ ಸಹ ಪ್ರಪಂಚವೆಲ್ಲಾ ಒಂದೇ ಕುಟುಂಬ ಎಂದು ಹೇಳುತ್ತದೆ. ಇದೇ ಭಾವವನ್ನು ಜ಼ೂಲು ಭಾಷೆಯಲ್ಲಿ "ಉಬುಂಟು" ಎಂದು ಕರೆಯುತ್ತೇವೆ" ಎಂದು ಹೇಳಿದ್ದಾರೆ ಮಲಿಂಗರವರು. ಅವರ ಈ ಬರಹದ ಮೂಲ ಉದ್ದೇಶ ಭಾರತೀಯರ ಹಾಗು ಆಫ್ರಿಕದವರ ಧಾರ್ಮಿಕ ಆಚಾರ ವ್ಯವಹಾರಗಳಲ್ಲಿ ಅನೇಕ ಕಡೆ ಸಾದೃಶ್ಯವನ್ನು ಕಾಣಬಹುದು ಎಂಬುದೇ ಆಗಿದೆ.



ಭೂಗೋಳ ವಿಜ್ಞಾನವನ್ನು ಬೋಧನೆ ಮಾಡುವ ಅಧ್ಯಾಪಕರಾಗಿ ಆಫ್ರಿಕದ ಹಲವು ಸಮುದಾಯಗಳ ನಡುವೆ ತಮ್ಮ ಜೀವನದ ಹದಿನೈದು ವರ್ಷಗಳನ್ನು ಸಮರ್ಪಿಸಿಕೊಂಡ ಅಮಚವಾಡಿ ಅರಸು ಅವರು ಆ ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ಆಪ್ತಭಾವದಲ್ಲಿ ಗ್ರಹಿಸಿದ್ದಾರೆ. ಕಗ್ಗತ್ತಲು ಖಂಡವೆಂಬ ಹೇರಿಕೆಯ ವಸಾಹತು ಇತಿಹಾಸದ ಮಿಥ್ಯವನ್ನು ಅಲ್ಲಗಳೆದು ವಾಸ್ತವ ಸತ್ಯದ ಬೆಳಕಿನಲ್ಲಿ ಆಫ್ರಿಕದ ಧರ್ಮ ಮತ್ತು ಸಂಸ್ಕೃತಿಯ ಸ್ವರೂಪವನ್ನು ಮನಗಾಣಿಸಿದ್ದಾರೆ. ನೇರವಾದ ಜೀವನಾನುಭವದ ಜೊತೆಗೆ ಅಧ್ಯಯನ ಸಂಪನ್ನ ಆಕರ ಮೂಲಗಳ ಸಹಾಯದಿಂದ ಈ ಮೌಲಿಕ ಕೃತಿ ರಚನೆ ಮಾಡಿದ್ದಾರೆ. ನೆಲಮೂಲಕ್ಕೆ ನಿಷ್ಠವಾಗಿ ಬದುಕನ್ನು ಕಟ್ಟಿಕೊಂಡ ಇಂಥ ಸಮುದಾಯಗಳ ಸಾಂಸ್ಕೃತಿಕ ಶೋಧವೇ ನಿಜವಾದ ಇತಿಹಾಸ ರಚನೆ. ವರ್ಣನೀತಿಯ ಇತಿಹಾಸ ಕಾಣಿಸಲಾರದ ಮಾನವೀಯ ಜೀವನ ಮೌಲ್ಯಗಳು ಇಂಥ ಶೋಧದಲ್ಲಿ ಅರಿವಿಗೆ ಬರುತ್ತವೆ.

ಕುತೂಹಲದಿಂದ ಓದಿಸಿಕೊಳ್ಳುವ ಈ ಪುಸ್ತಕ ಆಫ್ರಿಕದ ಬಗ್ಗೆ ಹೊಸ ತಿಳಿವಳಿಕೆಯನ್ನು ನೀಡುತ್ತದೆ.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ISBN-81-7713-205-9